ISSN 2321 - 3590
ಪುಸ್ತಕ - ೨೮

ಜನವರಿ - ಮಾರ್ಚ್: ೨೦೧೬

ಇತಿಹಾಸ ದರ್ಪಣ

(ತ್ರೈಮಾಸಿಕ)

ಕನ್ನಡದ ಹೆಮ್ಮೆಯ ಇತಿಹಾಸ ಸಂಶೋಧನ ನಿಯತಕಾಲಿಕೆ

ITIHASA DARPANA (Quarterly)

A Peer Reviewed Journal of Historical Research in Kannada

BOOK - 28
JANUARY - MARCH : 2016

ವಿಶೇಷ ಸಂಚಿಕೆಗಳ ಮಾರಾಟ

'ಇತಿಹಾಸ ದರ್ಪಣ'ವು ಈವರೆಗೆ ಮೂರು ಸಂಗ್ರಹ ಯೋಗ್ಯವಾದ ವಿಶೇಷ ಸಂಚಿಕೆಗಳನ್ನು ಹೊರತಂದಿದೆ. ಆಯಾ ಕ್ಷೇತ್ರದ ತಜ್ಞರಿಂದಲೇ ಬರೆಸಿ ಹೊರತಂದ ಈ ಕೃತಿಗಳು ನಮ್ಮಲ್ಲಿ ಲಭ್ಯವಿವೆ.

೧. ಕೃಷ್ಣ(ದೇವ)ರಾಯ ಮತ್ತು ವಿಜಯನಗರ ಸಾಮ್ರಾಜ್ಯ.

ಒಟ್ಟು ಪುಟಗಳು: ೧೨೦, ಬೆಲೆ: ರೂ. ೬೦/-

ಈ ಕೃತಿಯು ನಾಡಿನ ಮತ್ತು ಹೊರನಾಡಿನ ಹಿರಿಯ ಹಾಗೂ ಯುವ ಸಂಶೋಧಕರುಗಳಾದ ಎಂ.ವಿ.ಶ್ರೀನಿವಾಸ್, ಎಸ್.ಕೆ.ಅರುಣಿ, ಫಾದರ್ ಹೆರಾಸ್, ಶ್ರೀನಿವಾಸ ಶಿಸ್ತಲ, ಕೆ.ಜಿ.ಗೋಪಾಲಕೃಷ್ಣರಾವ್, ಸಿ.ಬಿ.ಪಾಟೀಲ, ಪಿ.ವಿ.ಕೃಷ್ಣಮೂರ್ತಿ, ಎನ್.ವೆಂಕಟರಮಣಯ್ಯ, ಎಚ್.ಎಸ್.ಗೋಪಾಲ್ ರಾವ್, ಮನು ವಿ. ದೇವದೇವನ್, ಹರಿಹರ ಶ್ರೀನಿವಾಸರಾವ್, ಕೆ.ವಸಂತಲಕ್ಷ್ಮಿ, ಕೂ.ಸ.ಅಪರ್ಣ, ಗಿರಿಜಾಪತಿ, ಆರ್.ಶೇಷಶಾಸ್ತ್ರಿ, ಅ.ಲ.ನರಸಿಂಹನ್ ಹಾಗೂ ಸುಂಕಂ ಗೋವರ್ಧನ ಅವರುಗಳ ವಿದ್ವತ್ಪೂರ್ಣ ಲೇಖನಗಳನ್ನು ಒಳಗೊಂಡಿದೆ.

೨. ನಮ್ಮ ಬೆಂಗಳೂರು.

ಒಟ್ಟು ಪುಟಗಳು: ೧೧೨, ಬೆಲೆ: ರೂ. ೧೦೦/-

ಈ ಕೃತಿಯು ಎಚ್.ಎಸ್.ದೊರೆಸ್ವಾಮಿ, ಸುಂಕಂ.ಗೋವರ್ಧನ, ಪಿ.ವಿ.ಕೃಷ್ಣಮೂರ್ತಿ, ಎಸ್.ಕೆ.ಅರುಣಿ, ಎಂ.ಜಮುನ, ಸುರೇಶ್ ಮೂನ, ಎಸ್.ಎಲ್.ಶ್ರೀನಿವಾಸಮೂರ್ತಿ, ವೇಮಗಲ್ ಸೋಮಶೇಖರ್, ರಶ್ಮಿ.ಎಸ್, ಆರ್.ಡಿ.ಪವಮಾನ, ಅ.ಲ.ನರಸಿಂಹನ್, ಹಂ.ಗು.ರಾಜೇಶ್, ಎಂ.ಎನ್.ಉಮೇಶ್ ಅವರ ಅಮೂಲ್ಯ ಲೇಖನಗಳ ಜೊತೆಗೆ ಬೆಂಗಳೂರು ಕುರಿತು ಈವರೆಗೂ ಪ್ರಕಟವಾಗಿರುವ ಕೃತಿಗಳ ವಿವರ ಮತ್ತು ಐತಿಹಾಸಿಕ ಚಿತ್ರಗಳ ಸಂಗ್ರಹವನ್ನು ಒಳಗೊಂಡಿದೆ. ಈ ಕೃತಿಯನ್ನು ಎಸ್.ಕೆ.ಅರುಣಿ ಅವರು ಸಂಪಾದಿಸಿದ್ದಾರೆ.

೩. ಕರ್ನಾಟಕದಲ್ಲಿ ಪುರಾತತ್ವ ಅಧ್ಯಯನಗಳು.

ಒಟ್ಟು ಪುಟಗಳು: ೧೭೬, ಬೆಲೆ: ರೂ. ೧೧೦/-

ಇದು ಕರ್ನಾಟಕದ ಪುರಾತತ್ವ ಅಧ್ಯಯನಗಳನ್ನು ಕುರಿತು ಸಂಕ್ಷಿಪ್ತ ಚಿತ್ರಣವನ್ನು ಕಟ್ಟಿಕೊಡುವ ಅಪರೂಪದ ಕೃತಿಯಾಗಿದೆ. ಈ ಕೃತಿಗೆ ನಾಡಿನ ಹಿರಿಯ ಮತ್ತು ಯುವ ಪುರಾತತ್ವ ತಜ್ಞರುಗಳಾದ– ಎಂ.ಎಸ್.ಕೃಷ್ಣಮೂರ್ತಿ, ಎಸ್.ನಾಗರಾಜು, ವಿ.ಶೋಭಾ, ಕೆ.ಬಿ.ಶಿವತಾರಕ್, ಎಚ್.ಎಂ.ಅನಿತಾ, ಲ.ನ.ಸ್ವಾಮಿ, ಸಿ.ಎಸ್.ವಾಸುದೇವನ್, ಜಗದೀಶ್ ಅವರುಗಳು ಕೊಡುಗೆ ನೀಡಿದ್ದಾರೆ. ಅಪೂರ್ವ ಛಾಯಾಚಿತ್ರಗಳನ್ನು ಒಂದೆಡೆ ಪ್ರತ್ಯೇಕವಾಗಿಯೇ ನೀಡಲಾಗಿದೆ. ಈ ಕೃತಿಯನ್ನು ಎಸ್.ಕೆ.ಅರುಣಿ ಮತ್ತು ಹಂ.ಗು.ರಾಜೇಶ್ ಸಂಪಾದಿಸಿದ್ದಾರೆ.

ಈ ಮೇಲಿನ ಬಿಡಿ ಕೃತಿಗಳು ಬೇಕಾದಲ್ಲಿ ಈ ಕೆಳಕಂಡ ವಿಳಾಸಕ್ಕೆ ಕೃತಿಯ ಮೊತ್ತದ ಜೊತೆಗೆ ರೂ.೨೦/- ಅಂಚೆವೆಚ್ಚ ಸೇರಿಸಿ, ಎಂ.ಓ /ಡಿ.ಡಿ ಯನ್ನು ತಮ್ಮ ವಿಳಾಸದ ಜೊತೆಗೆ ಕಳುಹಿಸಿಕೊಡಿ.

ವಿಶೇಷ ಕೊಡುಗೆ: ರೂ.೨೫೦/- ಗಳಿಗೆ ಮೂರೂ ಕೃತಿಗಳನ್ನು ಕಳುಹಿಸಿಕೊಡಲಾಗುವುದು.

ವಿಳಾಸ: ಸಂಪಾದಕರು, 'ಇತಿಹಾಸ ದರ್ಪಣ', #೩೩ ಎ, ಐ.ಟಿ.ಐ ಕಾಲೇಜು ಹತ್ತಿರ, ಕೆಂಪೇಗೌಡನಗರ, ವಿಶ್ವನೀಡಂ – ಅಂಚೆ, ಬೆಂಗಳೂರು–೫೬೦೦೯೧. ಮೊ– ೭೮೨೯೪೦೪೦೬೩.

ಕನ್ನಡದ ಹೆಮ್ಮೆಯ ಇತಿಹಾಸ ಸಂಶೋಧನ ನಿಯತಕಾಲಿಕೆ

ISSN 2321 - 3590

ಇತಿಹಾಸ ದರ್ಪಣ

(ತ್ರೈಮಾಸಿಕ)

A Peer Reviewed Journal of
Historical Research in Kannada

ಇತಿಹಾಸ ದರ್ಪಣ
(ತ್ರೈಮಾಸಿಕ)

Itihasa Darpana
(Quarterly)

ಪುಸ್ತಕ : ೨೮

Book : 28

ಜನವರಿ–ಮಾರ್ಚ್ : ೨೦೧೬

January-March : 2016

ಸಂಪಾದಕರು
ಹಂ.ಗು. ರಾಜೇಶ್
ಸಂ.ದೂ. : ೭೮೨೯೪೦೪೦೬೩

ಉಪ ಸಂಪಾದಕರು
ಸುಂಕಂ ಗೋವರ್ಧನ
ರಶ್ಮಿ ಎಸ್.
ಶಿವಕುಮಾರಿ ಎಂ.ಎಸ್.

ಅಕ್ಷರ ಜೋಡಣೆ
ಮಹೇಶ್ ಎಂ.
ಸಂ.ದೂ. : ೯೬೩೨೨೬೫೧೮೧

ಮುಖಪುಟ ವಿನ್ಯಾಸ
ಸುರೇಶ್‌ಕುಮಾರ್ ಎಚ್.
ಸಂ.ದೂ. : ೮೯೭೦೬೬೬೮೦೯

ಮುದ್ರಕರು
ಶ್ರೀ ರಂಗನಾಥ ಪ್ರಿಂಟರ್ಸ್
ಸಂ.ದೂ. : ೯೬೩೨೫೧೭೭೫೫

Editor
H.G Rajesh
Mob : 7829404063

Sub Editors
Sunkam Govardhan
Rashmi S.
Shivakumari M.S.

DTP
Mahesh M.
Mob : 9632265181

Cover Design
Sureshkumar H.
Mob : 8970666809

Printed at
Sri Ranganatha Printers
Mob : 9632517755

ಓದುಗರ ಸಲಹೆ–ಸೂಚನೆಗಳನ್ನು 'ಇತಿಹಾಸ ದರ್ಪಣ'ವು ಮುಕ್ತವಾಗಿ ಸ್ವಾಗತಿಸುತ್ತದೆ.

E-mail : ***itihasadarpana@gmail.com***

ಈ ಪತ್ರಿಕೆಯ ಲೇಖನಗಳಲ್ಲಿ ವ್ಯಕ್ತವಾಗಿರುವ ಅಭಿಪ್ರಾಯಗಳು ಲೇಖಕರ ಅಭಿಪ್ರಾಯಗಳೇ ವಿನಃ ಪತ್ರಿಕೆಯ ಅಭಿಪ್ರಾಯವಲ್ಲ. –ಸಂ.

"THE PUBLICATION OF THIS JOURNAL HAS BEEN FINANCIALLY SUPPORTED BY THE INDIAN COUNCIL OF HISTORICAL RESEARCH. THE RESPONSIBILITY FOR THE FACTS STATED ON OPINIONS EXPRESSED IS ENTIRELY OF THE AUTHOR AND NOT OF THE ICHR."

ಪರಿವಿಡಿ. . .

'ಇತಿಹಾಸ ದರ್ಪಣ'ಕ್ಕೆ
ಪ್ರಬಂಧವನ್ನು ಕಳುಹಿಸುವ ಮುನ್ನ...

'ಇತಿಹಾಸ ದರ್ಪಣ'ಕ್ಕೆ ಸಂಶೋಧನ ಪ್ರಬಂಧವನ್ನು ಕಳುಹಿಸುವವರು ಈ ಕೆಳಕಂಡ ಕ್ರಮಗಳನ್ನು ಪಾಲಿಸಬೇಕು.

- ಪ್ರಬಂಧವು ಅಪ್ರಕಟಿತವಾಗಿರಬೇಕು ಮತ್ತು ನವ ಶೋಧನೆ, ವಿನೂತನ ವಿಶ್ಲೇಷಣೆ, ಆಲೋಚನೆ ಹಾಗೂ ಸಂಶೋಧನಾ ವಿಧಾನಗಳಿಂದಾಗಿ ಹೊಸತನದಿಂದ ಕೂಡಿದ ಮತ್ತು ಚರಿತ್ರೆಯ ಅಧ್ಯಯನದ ಮೇಲೆ ಹೊಸ ಬೆಳಕು ಚೆಲ್ಲುವ ಪ್ರಬಂಧವಾಗಿರಬೇಕು.
- ಪ್ರಬಂಧವನ್ನು 'ನುಡಿ' ತಂತ್ರಾಂಶದಲ್ಲಿ ಬೆರಳಚ್ಚು ಮಾಡಿ ಇ-ಮೇಲ್ ಮಾಡುವುದು ಹೆಚ್ಚು ಸೂಕ್ತವಾಗಿರುತ್ತದೆ. ಉಲ್ಲೇಖದ ಟಿಪ್ಪಣಿಗಳನ್ನು ಉಲ್ಲೇಖ, ಹೆಚ್ಚಿನ ಮಾಹಿತಿ ಹಾಗೂ ಅಗತ್ಯ ವಿವರಣೆಗಳನ್ನು ಕೊನೆ ಟಿಪ್ಪಣಿಗಳ ರೂಪದಲ್ಲಿ ನೀಡಬೇಕು.
- ಕೊನೆ ಟಿಪ್ಪಣಿಗಳನ್ನು ನೀಡುವಾಗ ಲೇಖಕರ ಹೆಸರು, ಪ್ರಕಟಣಾ ವರ್ಷ, ಕೃತಿಯ ಶೀರ್ಷಿಕೆ (ಇಟ್ಯಾಲಿಕ್‌ನಲ್ಲಿ), ಸ್ಥಳ, ಪ್ರಕಾಶಕರು ಮತ್ತು ಪುಟಗಳ ವಿವರಗಳನ್ನು ಮೊದಲ ಬಾರಿ ನೀಡಬೇಕು. ಪುನರುಕ್ತಗೊಳ್ಳುವಾಗ ಲೇಖಕರ ಹೆಸರು, ವರ್ಷ ಬರೆದು 'ಪೂರ್ವೋಕ್ತ' ಎಂದು ಕೃತಿಯ ಹೆಸರ ಸ್ಥಳದಲ್ಲಿ ನಮೂದಿಸಿ ಪುಟಗಳ ಸಂಖ್ಯೆ ಸೂಚಿಸಬೇಕು. ತತ್ಕೂಡಲೇ ಉಲ್ಲೇಖಿಸುವ ಸಂದರ್ಭದಲ್ಲಿ 'ಇಲ್ಲೇ' ಎಂದು ನಮೂದಿಸಿ ಪುಟಗಳ ಸಂಖ್ಯೆ ಸೂಚಿಸಬೇಕು.
- ಲೇಖನಗಳನ್ನು ಉಲ್ಲೇಖಿಸುವಾಗ- ಲೇಖಕನ ಹೆಸರು, ಪ್ರಕಟಣಾ ವರ್ಷ, ಲೇಖನದ ಶೀರ್ಷಿಕೆ (' ' ಈ ಚಿಹ್ನೆಯಲ್ಲಿ ಕೊಡುವುದು), ಈ ಲೇಖನ ಪ್ರಕಟವಾದ ನಿಯತಕಾಲಿಕೆ ಹೆಸರು (ಇಟ್ಯಾಲಿಕ್‌ನಲ್ಲಿ), ಸಂಚಿಕೆ, ಸಂಪುಟ, ವರ್ಷ, ಪ್ರಕಟವಾಗುತ್ತಿರುವ ಸ್ಥಳ ಮತ್ತು ಪುಟಗಳ ವಿವರ ಸೂಚಿಸುವುದು.
- ಸಂಪಾದಿತ ಕೃತಿಯಲ್ಲಿನ ಲೇಖನವನ್ನು ಉಲ್ಲೇಖಿಸುವಾಗ- ಲೇಖಕನ ಹೆಸರು, ಪ್ರಕಟಣಾ ವರ್ಷ, ಲೇಖನದ ಶೀರ್ಷಿಕೆ (' '), ಸಂಪಾದಕರ ಹೆಸರು, ಕೃತಿಯ ಶೀರ್ಷಿಕೆ (ಇಟ್ಯಾಲಿಕ್‌ನಲ್ಲಿ), ಸ್ಥಳ, ಪ್ರಕಾಶಕರು, ಪುಟಗಳ ವಿವರ ಸೂಚಿಸುವುದು.
- ಪ್ರಬಂಧಕ್ಕೆ ಪೂರಕವಾದ ಚಿತ್ರಗಳನ್ನು ಕಳುಹಿಸಿಕೊಡಬಹುದು. ಅವುಗಳಿಗೆ ಕಡ್ಡಾಯವಾಗಿ ಚಿತ್ರ ಶೀರ್ಷಿಕೆಗಳನ್ನು ನೀಡಿರಬೇಕು.
- *ಇತಿಹಾಸ ದರ್ಪಣ* ಚಂದಾದಾರರಾಗಿರುವವರಿಗೆ ಮೊದಲ ಆದ್ಯತೆ.
- ಪ್ರಕಟಣೆಗೆ ಬರುವ ಪ್ರಬಂಧಗಳನ್ನು ಪೂರ್ವಾವಲೋಕನಕ್ಕಾಗಿ ತಜ್ಞರಿಗೆ ಕಳುಹಿಸಿ ಕೊಡಲಾಗುವುದು. ಆಯ್ಕೆಯಾದ ಪ್ರಬಂಧಗಳನ್ನು ಪ್ರಕಟಣಾ ಪೂರ್ವದಲ್ಲಿಯೇ ಲೇಖಕರಿಗೆ ತಿಳಿಸಲಾಗುವುದು.
- ಪ್ರಕಟವಾದ ಪ್ರಬಂಧಗಳಿಗೆ ಯಾವುದೇ ಸಂಭಾವನೆಯನ್ನು ನೀಡಲಾಗುವುದಿಲ್ಲ ಮತ್ತು ತಾವು ಕಳುಹಿಸಿಕೊಟ್ಟ ಲೇಖನ ಸಂಬಂಧ ಯಾವುದೇ ಪತ್ರ ವ್ಯವಹಾರ ಮತ್ತು ದೂರವಾಣಿ ಸಂಭಾಷಣೆಗೆ ಅವಕಾಶವಿರುವುದಿಲ್ಲ.
- ಪ್ರಬಂಧಗಳನ್ನು **'itihasadarpana@gmail.com'**ಗೆ ಇ-ಮೇಲ್ ಮಾಡುವುದು.

–ಸಂಪಾದಕರು

ನುಡಿಗನ್ನಡಿ

ಮತ್ತೆ ಮತ್ತೇ ಅನ್ಯಾಯ

ನಮ್ಮ ಉನ್ನತ ಶೈಕ್ಷಣಿಕ ವಲಯವು ಬೌದ್ಧಿಕ ದಾರಿದ್ರ್ಯದಿಂದ ಬಳಲುತ್ತಿರುವುದು ಹಲವಾರು ಸಂದರ್ಭಗಳಲ್ಲಿ ಜಗಜ್ಜಾಹೀರಾಗಿದೆ. ಆದ್ದರಿಂದ ಈ ವಲಯಕ್ಕೆ ಬರುವವರನ್ನು ಸಾಮಾಜಿಕ ನ್ಯಾಯದ ಅಡಿಯಲ್ಲಿಯೇ ಕಠಿಣ ಪರೀಕ್ಷೆಗಳನ್ನು ಒಡ್ಡಿ ಅರ್ಹರನ್ನು, ಸಮರ್ಥರನ್ನು ಆಯ್ಕೆ ಮಾಡಬೇಕೆಂಬ ಚರ್ಚೆಗಳೂ ನಡೆದಿವೆ. ಆದರೆ ಅಂತಹ ಸಂದರ್ಭಗಳು ಬಂದಾಗ ಆಯ್ಕೆ ಸಂಸ್ಥೆಗಳು ತನ್ನ ಸೊಗಲಾಡಿತನವನ್ನು ಮೆರೆಯುವ ಮೂಲಕ ಉನ್ನತ ಶೈಕ್ಷಣಿಕ ವಲಯದ ಕೊಳಕನ್ನೆ ಮತ್ತೆ ಪೋಷಿಸಲೊರಟಿರುವುದು ಈ ದೇಶದ ದೌರ್ಭಾಗ್ಯವೇ ಸರಿ.

ಇಲ್ಲಿ ಹೇಳಲೊರಟಿರುವ ಸಂಗತಿ ದಿನಾಂಕ: 06.03.2016ರಂದು ಕರ್ನಾಟಕದಲ್ಲಿ ಮುಕ್ತಾಯವಾದ ಸರ್ಕಾರಿ ಪದವಿ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ನಡೆದ ಪರೀಕ್ಷೆಯ ಲೋಪದೋಷಗಳನ್ನು ಕುರಿತು. ಇದೇ ಹುದ್ದೆಗಳಿಗೆ 2008ರಲ್ಲಿ ನಡೆದ ನೇರನೇಮಕಾತಿಯಲ್ಲಿ ಸಮರ್ಥರಿಗಿಂತಲೂ ಸಾಕಷ್ಟು ಮಂದಿ ಅನರ್ಹರೇ ಆಯ್ಕೆಯಾಗಿ ವಿವಾದವು ಸುಪ್ರೀಂಕೋರ್ಟ್ ಮೆಟ್ಟಿಲೇರಿದೆ. ಅನೇಕ ಪ್ರತಿಭಾವಂತರು ಅಂದಿನಿಂದಲೂ ಚಾತಕ ಪಕ್ಷಿಯಂತೆ ಸಹಾಯಕ ಪ್ರಾಧ್ಯಾಪಕ ಹುದ್ದೆಯ ನೇಮಕಾತಿ ನಿರೀಕ್ಷೆಯಲ್ಲಿ ಪ್ರಕಟಣೆಗಾಗಿ ಕಾಯುತ್ತಿದ್ದರು. ಕಳೆದ ವರ್ಷ ಫೆಬ್ರವರಿಯಲ್ಲಿ 2160 ಹುದ್ದೆಗಳಿಗೆ ಪ್ರಕಟಣೆ ಹೊರಬಿದ್ದಿತು. ಪರೀಕ್ಷೆ ನಡೆಸುವ ಜವಾಬ್ದಾರಿಯನ್ನು ಕರ್ನಾಟಕ ಸರ್ಕಾರವು 'ಕರ್ನಾಟಕ ಪರೀಕ್ಷಾ ಪ್ರಾಧಿಕಾರ'(ಕ.ಪ.ಪ್ರಾ)ಕ್ಕೆ ವಹಿಸಿತು. ಸ್ಲೆಟ್, ನೆಟ್‌ನಂತಹ ಕಠಿಣ ಪರೀಕ್ಷೆಗಳಲ್ಲಿ ಅರ್ಹರಾದವರು

ಮತ್ತು ಪಿ.ಎಚ್‌ಡಿ ಪದವೀಧರರು ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅರ್ಹರಾಗಿದ್ದು, ಸುಮಾರು 16,000ಕ್ಕೂ ಹೆಚ್ಚಿನ ಅಭ್ಯರ್ಥಿಗಳು ಪರೀಕ್ಷೆ ತೆಗೆದುಕೊಂಡರು.

ಮೂರು-ನಾಲ್ಕು ತಿಂಗಳಲ್ಲಿ ಆಯ್ಕೆ ಪ್ರಕ್ರಿಯೆಯನ್ನು ಪೂರೈಸುವುದಾಗಿ ರಾಜ್ಯ ಸರ್ಕಾರ ಹೇಳಿಕೊಂಡಿತ್ತಾದರೂ ತಾಂತ್ರಿಕ ಸಮಸ್ಯೆಗಳಿಂದ ಒಂದು ವರ್ಷದ ನಂತರ ಇದೇ ಮಾರ್ಚ್ 2-6ನೇ ತಾರೀಖ್‌ವರೆಗೆ ಪರೀಕ್ಷೆಗಳು ನಡೆದವು. ಕಳೆದ ಒಂದು ವರ್ಷದಿಂದಲೂ ತಮ್ಮ ಎಲ್ಲಾ ಕೆಲಸಕಾರ್ಯಗಳನ್ನು ಬಿಟ್ಟು ತಪಸ್ಸಿನಂತೆ ಅಧ್ಯಯನದಲ್ಲಿ ತೊಡಗಿದ್ದ ಸಾವಿರಾರು ಮಹತ್ವಾಕಾಂಕ್ಷಿ ಅಭ್ಯರ್ಥಿಗಳಿಗೆ ಪರೀಕ್ಷೆ ಭಾರಿ ನಿರಾಸೆ ಮೂಡಿಸಿದೆ. ಎಲ್ಲಾ ವಿಷಯಗಳ ಅಭ್ಯರ್ಥಿಗಳಿಗೂ ಸಾಮಾನ್ಯವಾಗಿದ್ದ 'ಸಾಮಾನ್ಯ ಅಧ್ಯಯನ'ದ ಪ್ರಶ್ನೆ ಪತ್ರಿಕೆಯು ಪದವಿ ತರಗತಿಗೆ ಬೋಧಿಸುವ ಪ್ರಾಧ್ಯಾಪಕರ ಬೌದ್ಧಿಕಮಟ್ಟ ಪರೀಕ್ಷಿಸುವಂತಹ ಯಾವುದೇ ಅನ್ವಯಿಕಮಟ್ಟದ ಪ್ರಶ್ನೆಗಳನ್ನಾಗಲಿ, ಅಧ್ಯಯನವನ್ನು ಬೇಡುವಂತಹ ಉತ್ಕೃಷ್ಟ ಜ್ಞಾನಪ್ರದಾಯಕ ಪ್ರಶ್ನೆಗಳನ್ನಾಗಲಿ ಒಳಗೊಂಡಿರದೆ ಪೊಲೀಸ್ ಕಾನ್‌ಸ್ಟೆಬಲ್, ಎಸ್.ಡಿ.ಎ, ಎಫ್.ಡಿ.ಎ ಹುದ್ದೆಗಳ ಆಯ್ಕೆ ಪರೀಕ್ಷೆಗಳಿಗೆ ನಡೆಯುವ ಸಾಧಾರಣ ಪ್ರಶ್ನೆಪತ್ರಿಕೆಗಳ ಮಾದರಿಯಲ್ಲಿದ್ದಿತು. ಇಷ್ಟು ಮಾತ್ರವಲ್ಲ ಇಲ್ಲಿನ ಬಹುತೇಕ ಪ್ರಶ್ನೆಗಳನ್ನು ಅಂತರ್ಜಾಲ ತಾಣಗಳಿಂದ ಯಥಾವತ್ತಾಗಿ ನಕಲು ಮಾಡಲಾಗಿರುವುದು ಕಂಡುಬಂದಿದೆ. ರೂ. 2000 (ಎಸ್.ಸಿ, ಎಸ್.ಟಿ, ಪ್ರವರ್ಗ-1ಕ್ಕೆ) ದಿಂದ 2500 (ಇತರ ಎಲ್ಲರಿಗೂ) ಗಳನ್ನು ಪರೀಕ್ಷಾ ಶುಲ್ಕವನ್ನಾಗಿ ಪಡೆದಿರುವ ಕ.ಪ.ಪ್ರಾ ಸ್ವತಂತ್ರವಾಗಿ ಸಾಮಾನ್ಯ ಜ್ಞಾನದ ಪ್ರಶ್ನೆಪತ್ರಿಕೆಗಳನ್ನು ಸಿದ್ಧಪಡಿಸಲಾಗದಂತಹ ಕದೀಮ ತಜ್ಞರಿಗೆ ವಹಿಸಿಕೊಟ್ಟಿರುವುದು ನಮ್ಮ ದುರಾದೃಷ್ಟವೇ ಸರಿ.

ಇದು ಒಂದು ಕಡೆಯಾದರೆ, ನಮ್ಮ ವಿಷಯವಾದ ಇತಿಹಾಸ ಪ್ರಶ್ನೆಪತ್ರಿಕೆಯದು ಇನ್ನೂ ಘೋರ ದುರಂತ. ಇಲ್ಲಿನ 98 ಪ್ರಶ್ನೆಗಳು ಅಂತರ್ಜಾಲದ ಒಂದೆರಡು ತಾಣಗಳಲ್ಲಿಯೇ ಅಡಗಿವೆ. ಸರ್ಚ್ ಎಂಜಿನ್‌ನಲ್ಲಿ ಪ್ರಶ್ನೆಗಳನ್ನು ಟೈಪಿಸುತ್ತಿದ್ದಂತೆಯೇ ಮೂಲ ತಾಣದಿಂದ ಎದ್ದುಬರುತ್ತವೆ. ಈ ಪ್ರಶ್ನೆ ಪತ್ರಿಕೆಯನ್ನು ಸಿದ್ಧಪಡಿಸಿದ ತ(ಅ)ಜ್ಞ ಮಹಾ ಕದೀಮನೇ ಸರಿ. ಸ್ವತಂತ್ರವಾಗಿ ಒಂದೇ ಒಂದು ಶಬ್ದವನ್ನೂ ಸೇರಿಸದೆ ಪ್ರಶ್ನೆಗಳನ್ನು ಆಯ್ಕೆಸಹಿತ ಯಥಾವತ್ತಾಗಿ ಕದ್ದಿರುತ್ತಾರೆ. ಅದಕ್ಕೂ ಮಿಗಿಲಾಗಿ ಜಾಲತಾಣದಲ್ಲಿರುವ ಪ್ರಶ್ನೆಗಳನ್ನೂ ಪರೀಕ್ಷಿಸದೆ ಎರಡು ತಪ್ಪು ಪ್ರಶ್ನೆಗಳನ್ನು ಹಾಗೆಯೇ ತೆಗೆದು ಕೊಟ್ಟವರ ದಾರ್ಷ್ಟ್ಯವನ್ನು ಮೆಚ್ಚಲೇಬೇಕು. ಆರಂಭದಲ್ಲಿಯೇ ಹೇಳಿದಂತೆ ಉನ್ನತ ಶೈಕ್ಷಣಿಕ ವಲಯದಲ್ಲಿನ ಬೌದ್ಧಿಕ ದಾರಿದ್ರ್ಯವನ್ನು ತೊಲಗಿಸಲು ಉತ್ಕೃಷ್ಟ ಪ್ರಶ್ನೆಗಳನ್ನು ಸಿದ್ಧಪಡಿಸುವ ಜವಾಬ್ದಾರಿಯನ್ನು ಅದೇ ಬೌದ್ಧಿಕ ದರಿದ್ರರಿಗೆ ಕೊಟ್ಟಂತಿದೆ. ಏಕೆಂದರೆ ಯು.ಜಿ.ಸಿ ವೇತನ ಪಡೆಯುತ್ತಿರುವ ಹಲವು ಮಂದಿ ವಿದ್ವಾ(ಧ್ವ)ಂಸರು ಅಂತರ್ಜಾಲದ ತಾಣಗಳಿಂದ ಕದ್ದ ಲೇಖನಗಳನ್ನೇ ತಮ್ಮ ಲೇಖನಗಳೆಂದು ಮುಜುಗರವಿಲ್ಲದೆ ವಿಚಾರ ಸಂಕಿರಣಗಳಲ್ಲಿ ಪ್ರಬಂಧ ಮಂಡಿಸಿರುವುದನ್ನು ಕಂಡಿದ್ದೇವೆ. ಈ ರೀತಿಯ 'ಗೂಗಲೀಕರಣ'ದಲ್ಲಿ ನಿಸ್ಸೀಮರಾದ ಪ್ರಭೃತಿಗಳಿಂದಲೇ ಇತಿಹಾಸ ಪ್ರಶ್ನೆಪತ್ರಿಕೆಗಳನ್ನು ಮಾಡಿಸಿರುವುದಂತೂ ಸುಸ್ಪಷ್ಟ.

ಈ ಕಥೆ ಇಷ್ಟಕ್ಕೆ ಮುಗಿಯುವುದಿಲ್ಲ. ಕ.ಪ.ಪ್ರಾ ನೀಡಿದ ಪಠ್ಯಕ್ರಮದ ಎಲ್ಲಾ ವಿಭಾಗಗಳಿಗೂ ನ್ಯಾಯ ಕಲ್ಪಿಸದೇ ಕೇವಲ ಭಾರತದ ಚರಿತ್ರೆಗಷ್ಟೇ ಸೀಮಿತಗೊಳಿಸಲಾದಂತಿದೆ ಎಂಬುದು ಒಂದು ಕಡೆಗಿರಲಿ. ಸಾಮಾನ್ಯವಾಗಿ ಇತಿಹಾಸ ಓದುವವರು ಗ್ರಾಮೀಣ ಭಾಗದ ಅಭ್ಯರ್ಥಿಗಳಾಗಿದ್ದು, ಶೇ.85ರಷ್ಟು ಮಂದಿ ಕನ್ನಡ ಮಾಧ್ಯಮದವರೇ ಆಗಿದ್ದಾರೆ. ಅಧ್ಯಯನಕ್ಕೆ ಅವಲಂಬಿಸುವ ಕೃತಿಗಳು ಕೂಡ ಕನ್ನಡ ಕೃತಿಗಳೇ ಆಗಿರುತ್ತವೆ. ಹೀಗಿರುವಾಗ ಸಹಾಯಕ ಪ್ರಾಧ್ಯಾಪಕ ಹುದ್ದೆ ಪರೀಕ್ಷೆಯ ಪ್ರಶ್ನೆ ಪತ್ರಿಕೆಯಲ್ಲಿನ ಕನ್ನಡವನ್ನು ಕಂಡರೆ ಎಂತವರೂ ಕೂಡ ಹೌಹಾರಿ ಹೋಗುತ್ತಾರೆ. ಭಾರತದ ವೃದ್ಧಪಿತಾಮಹ ದಾದಾಬಾಯ್ ನವರೋಜಿ ಅವರು ಕೊಟ್ಟ Drain theory ಯನ್ನು 'ಚರಂಡಿ ನೀತಿ' ಎಂತಲೂ, ಹರಪ್ಪ ನಾಗರೀಕತೆಯಲ್ಲಿ ಆರಾಧಿಸುತ್ತಿದ್ದ ಮಾತೃದೇವತೆಯನ್ನು 'ದೇವತೆ ಚಾಮುಂಡಿ' ಎಂತಲೂ, ಮಾರ್ಟಿಮರ್ ವ್ಹೀಲರ್ ಅವರ ಹೆಸರನ್ನು 'ಮೋರ್ ಟೈಮರ್ ವೀಲರ್' ಎಂತಲೂ, ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬುದಕ್ಕೆ ಬದಲಾಗಿ 'ಮರೆವಿನ ಸಿದ್ಧಾಂತ' ಎಂಬುದಾಗಿಯೂ, ನವಶಿಲಾಯುಗದ ಕ್ರಾಂತಿಯನ್ನು 'ನವಯುಗದ ಕ್ರಾಂತಿಕಾರಿ' ಎಂಬುದಾಗಿಯೂ, ಸಹಾಯಕ ಸೈನ್ಯಪದ್ಧತಿಗೆ ಬದಲಾಗಿ 'ರಿಯಾಯಿತಿ ಅನುಕೂಲ' ಮೊದಲಾದ ಹೊಸ ಹೊಸ ಪರಿಭಾಷೆಗಳನ್ನೆ ಸೃಷ್ಟಿಸಿ ನವೀನ ಚರಿತ್ರೆಯನ್ನೇ ನಿರ್ಮಿಸಿದ್ದಾರೆ! ವರ್ಷಗಟ್ಟಲೆ ಕುಳಿತು ಅಧ್ಯಯನ ನಡೆಸಿದ ಎಂತವರಿಗೂ ಈ ಕೀಳುಮಟ್ಟದ ಅನುವಾದವನ್ನು ನೋಡಿದೊಡನೆಯೇ ಆಘಾತವಾಗಿದ್ದುಂಟು. ಕ.ಪ.ಪ್ರಾ.ವು ಸಮರ್ಥನೆಗಾಗಿ ಇಂಗ್ಲಿಷ್ ಅನುವಾದವನ್ನು ಅಂತಿಮವೆಂದು ಪರಿಗಣಿಸಬೇಕೆಂಬ ಸೂಚನೆ ನೀಡಿರುವುದಾಗಿ ಹೇಳಬಹುದು. ಹಾಗಿದ್ದರೆ, ಸಂಪೂರ್ಣವಾಗಿ ಇಂಗ್ಲಿಷ್‌ನಲ್ಲಿಯೇ ಪ್ರಶ್ನೆಪತ್ರಿಕೆ ಕೊಡಬಹುದಿತ್ತು. ಕನ್ನಡಕ್ಕೂ ಅವಮಾನವಾಗುತ್ತಿರಲಿಲ್ಲ, ನಮಗೂ ಆಘಾತವಾಗುತ್ತಿರಲಿಲ್ಲ ಅಲ್ಲವೇ?

ಸ್ಲೆಟ್, ನೆಟ್ ಪರೀಕ್ಷೆಗಳಲ್ಲಿ ಅರ್ಹರಾದವರಿಗೆ ಅದಕ್ಕಿಂತಲೂ ಕಠಿಣವಾದ ಪ್ರಶ್ನೆ ಪತ್ರಿಕೆಗಳನ್ನು ರೂಪಿಸಬೇಕೇ ವಿನಃ ಕಳಪೆ ಪ್ರಶ್ನೆಪತ್ರಿಕೆಯನ್ನಲ್ಲ. ಈ ಹಿಂದೆ ಹಿರಿಯ ಅಧಿಕಾರಿಗಳಾದ ಭರತ್‌ಲಾಲ್ ಮೀನಾ ಅವರು ಜೆ.ಎನ್.ಯು ಅಂತಹ ಉನ್ನತ ಶೈಕ್ಷಣಿಕ ಸಂಸ್ಥೆಗಳಲ್ಲಿನ ತಜ್ಞರಿಂದ ಪ್ರಶ್ನೆ ಪತ್ರಿಕೆಗಳನ್ನು ಸಿದ್ಧಪಡಿಸುವುದಾಗಿ ಹೇಳಿಕೆ ನೀಡಿದ್ದನ್ನು ಪತ್ರಿಕೆಗಳಲ್ಲಿ ಓದಿದ ನೆನಪು. ಆ ಹಿನ್ನೆಲೆಯಲ್ಲಿ ಗಂಭೀರವಾಗಿ ಅಧ್ಯಯನ ನಡೆಸಿದ ನೂರಾರು ಮಂದಿ ಅಭ್ಯರ್ಥಿಗಳನ್ನು ಅಣಕಿಸುವಂತಿದೆ ಇತಿಹಾಸ ಪ್ರಶ್ನೆಪತ್ರಿಕೆ! ಅಂತರ್ಜಾಲ ತಾಣಗಳಿಂದ ಈ ರೀತಿಯ ಪ್ರಶ್ನೆಪತ್ರಿಕೆಗಳನ್ನು ಸಿದ್ಧಪಡಿಸುವಿಕೆಯ ಹಿಂದೆ ವಂಚನೆಯ ಮನಸ್ಸುಗಳು ಕೆಲಸಮಾಡಿರುವುದು ಸುಸ್ಪಷ್ಟ. ಪ್ರಶ್ನೆಪತ್ರಿಕೆಗಳು ಬಹಿರಂಗಗೊಂಡರೆ ಸುದ್ದಿಯಾಗುತ್ತದೆ, ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳಲಾಗುತ್ತದೆ. ಅದಕ್ಕಾಗಿ ವಿನೂತನ ನಮೂನೆಯ ಅಕ್ರಮ ಮಾರ್ಗಗಳನ್ನು ಕದೀಮರು ಕಂಡುಕೊಂಡಿದ್ದಾರೆ. ಆ ಮಾರ್ಗವೇ ಜಾಲತಾಣಗಳಿಂದ ಪ್ರಶ್ನೆಗಳನ್ನೆತ್ತುವುದು. ಈ ಜಾಲತಾಣಗಳನ್ನು ಬೇಕಾದವರಿಗಷ್ಟೇ ತಿಳಿಸುವ ಮೂಲಕ ಅಕ್ರಮವನ್ನು ಸಕ್ರಮವಾಗಿ ನಡೆಸುವ ತಂತ್ರ ಇದರ ಹಿಂದಿರುವಂತಿದೆ. ಈ ಹಿನ್ನೆಲೆಯಲ್ಲಿ ತಾರ್ಕಿಕವಾಗಿ ನೋಡಿದಾಗ ಅಂತರ್ಜಾಲ ತಾಣಗಳಿಂದ ಪ್ರಶ್ನೆಗಳನ್ನೆತ್ತಿ ಪ್ರಶ್ನೆಪತ್ರಿಕೆ ಸಿದ್ಧಪಡಿಸಿದವರನ್ನೇ ಪ್ರಶ್ನೆಪತ್ರಿಕೆ ಬಹಿರಂಗ ಪಡಿಸಿದ ಆರೋಪಿಗಳೆಂದು

ಪರಿಗಣಿಸಿ, ಶಿಕ್ಷೆಗೆ ಗುರಿಪಡಿಸಬೇಕು. ಇಲ್ಲವಾದಲ್ಲಿ ಪ್ರಾಮಾಣಿಕ ಮತ್ತು ಪ್ರತಿಭಾವಂತ ಅಭ್ಯರ್ಥಿಗಳಿಗೆ ಮತ್ತೆ ಮತ್ತೆ ಅನ್ಯಾಯವಾಗುತ್ತದೆ. ಅನ್ಯಾಯಕ್ಕೊಳಗಾದವರು ದುರ್ಬಲ ಮನಸ್ಕರಾದರೆ ಆತ್ಮಹತ್ಯೆಗೆ ಶರಣಾಗಬಹುದು. ದೃಢ ಮನಸ್ಕರಾದರೆ ಭ್ರಮನಿರಸನಗೊಂಡು ಸಮಾಜಘಾತುಕರಾಗಬಹುದು ಇಲ್ಲವೆ ವ್ಯವಸ್ಥೆಯ ವಿರುದ್ಧ ನಕ್ಸಲೈಟ್ ಆಗಬಹುದು ಅಥವಾ ಬೇರೇನಾದರೂ ಆಗಬಹುದು. ಅವರನ್ನು ಸೃಷ್ಟಿಸಿದ ಕೀರ್ತಿ ಮಾತ್ರ ಈ ವ್ಯವಸ್ಥೆಗೇ ಸಲ್ಲುತ್ತದೆ. ಅಂತಹ ಯಾವ ಭೀಕರತೆಗೂ ಸರ್ಕಾರ ಎಡೆಕೊಡದೆ ಸಾಮಾನ್ಯ ಅಧ್ಯಯನ ಮತ್ತು ಇತಿಹಾಸ ವಿಷಯಗಳ ಮರುಪರೀಕ್ಷೆಗೆ ಆದೇಶಿಸಬೇಕು ಎಂಬುದು ನೊಂದ ಸಾವಿರಾರು ಅಭ್ಯರ್ಥಿಗಳ ಒಕ್ಕೊರಲಿನ ಧ್ವನಿಯಾಗಿದೆ.

–ಹಂ.ಗು.ರಾಜೇಶ್

ಕನ್ನೇರ್‌ಗವಿ ಗುಡ್ಡ : ಶಿಲಾಯುಗ ಚಿತ್ರಕಲೆಯ ನೆಲೆ

❑ ಮೋಹನ ಆರ್.
ಪೋಸ್ಟ್ ಡಾಕ್ಟರಲ್
ಸಂಶೋಧನಾರ್ಥಿ,
ಡೆಕ್ಕನ್ ಕಾಲೇಜ್,
ಸ್ನಾತಕೋತ್ತರ ಮತ್ತು
ಸಂಶೋಧನ ಸಂಸ್ಥೆ
ಸ್ವಾಯತ್ತ ವಿಶ್ವವಿದ್ಯಾಲಯ,
ಪುಣೆ – 411006
mohangulya@gmail.com

ಮಲಪ್ರಭ ನದಿ ತೀರದಲ್ಲಿ ಕಂಡುಬಂದಿರುವ 36 ವರ್ಣ / ರೇಖಾಚಿತ್ರ / ಕಲ್ಗುಳಿ ನೆಲೆ[1]ಗಳಲ್ಲಿ ಕನ್ನೇರ್‌ಗವಿ ಗುಡ್ಡ(ಚಿತ್ರ–1)ವು ಒಂದಾಗಿದ್ದು ಪುರಾತಾತ್ವಿಕ ಅಧ್ಯಯನದ ದೃಷ್ಟಿಯಿಂದ ಹೆಚ್ಚಿನ ಮಹತ್ವವನ್ನು ಪಡೆದುಕೊಂಡಿದೆ. ಈ ನೆಲೆಯು ನಾಗರಾಳ್ ಹಳ್ಳಿಯ ಸರಹದ್ದಿಗೆ ಸೇರಿದ್ದು, ಬನಶಂಕರಿಯಿಂದ ಸು. 2 ಕಿ. ಮೀ. ಉತ್ತರಕ್ಕೆ ಹಾಗೂ ಬಾದಾಮಿಯಿಂದ ಸು. 5 ಕಿ. ಮೀ. ಆಗ್ನೇಯ ದಿಕ್ಕಿಗಿದೆ. ಈ ಕಣಿವೆಯಲ್ಲಿ ಕಂಡುಬಂದಿರುವ ಕಲ್ಲಾಸರೆಗಳು ಐದು ಚಿತ್ರಕಲೆಯನ್ನೊಳಗೊಂಡಿದ್ದು ಇತಿಹಾಸದ ಮೇಲೆ ಹೆಚ್ಚು ಬೆಳಕನ್ನು ಬೀರಿವೆ. ಈ ಕಲ್ಲಾಸರೆಗಳಲ್ಲಿ ಎರಡನ್ನು ಮೊದಲಿಗೆ ಆಸ್ಟ್ರೀಯ ದೇಶದ ನ್ಯೂಮಯರ್[2]ರವರು 1990ರ ದಶಕದಲ್ಲಿ ಶೋಧಿಸಿದರೆ ಪ್ರಸ್ತುತ ಲೇಖಕರು ಉಳಿದ ಮೂರು ಕಲ್ಲಾಸರೆಗಳನ್ನು, 2013ರಲ್ಲಿ ಬೆಳಕಿಗೆ ತಂದಿರುತ್ತಾರೆ.



ಚಿತ್ರ 1: ಕನ್ನೇರ್‌ಗವಿ ಗುಡ್ಡದ ವಿಹಂಗಮ ನೋಟ

ಕಲ್ಲಾಸರೆಗಳು ಹಾಗೂ ಅದರಲ್ಲಿನ ಚಿತ್ರಕಲೆಯ ವಿವರಣೆಯನ್ನು ಇಲ್ಲಿ ಚಿತ್ರಿಸಲಾಗಿದೆ.

ಕಲ್ಲಾಸರೆ – 1 (15° 54' 831"N – 75° 41' 873"E)



ಸ್ಥಳ ವಿವರಣೆ : ಈ ಮೇಲೆ ವಿವರಿಸಿರುವಂತೆ 5 ಕಲ್ಲಾಸರೆಗಳಿದ್ದು ಅವುಗಳಲ್ಲಿ ಇದು ಪ್ರಮುಖವಾದದು ಯಾಕೆಂದರೆ ಸ್ಥಳೀಯವಾಗಿ ಕನ್ನೇರ್‌ಗವಿ (ಕಲ್ಲಾಸರೆಯ ಒಳಗೆ ಸುರಂಗವಿರುವುದರಿಂದ ಗವಿಯೆಂದು, ಹಾಗೂ ಇದರೊಳಗಿರುವ ಉಬ್ಬುಶಿಲ್ಪಗಳನ್ನು ಕನ್ಯಾಶಿಲ್ಪಗಳೆಂದು ಪೂಜಿಸುವುದರಿಂದ ಈ ಹೆಸರು ಬಂದಿತು) ಎಂದು ಕರೆಯಲ್ಪಡುತ್ತದೆ. ಇದರಿಂದಲೇ ಈ ಪ್ರದೇಶವು ಕನ್ನೇರ್‌ಗವಿ ಗುಡ್ಡವೆಂದು ಲೋಕ–ರೂಢಿಯಾಗಿದೆ.

ಸ್ಥಳೀಯ ನಾಮ : ಕನ್ನೇರ್‌ಗವಿ ಗುಡ್ಡ

ಸಮುದ್ರ ಮಟ್ಟದಿಂದ ಇರುವ ಎತ್ತರ : 598 ಮೀಟರ್

ವಿಸ್ತರಣೆ : 7.5 x 5.1 x 3.2 ಮೀ.

ದಿಕ್ಕು : ದಕ್ಷಿಣ

ವಿಧಾನ : ಉರುಗಂಜಿ ಬಣ್ಣದ ಚಿತ್ರ ಹಾಗೂ ಕಲ್ಲುಗುಳಿ

ಪ್ರಸ್ತುತ ಸ್ಥಿತಿ : ನೈಸರ್ಗಿಕ ವಿಕೋಪಗಳಿಗೆ ಅಂದರೆ ಗಾಳಿ, ಮಳೆ, ಬಿಸಿಲಿಗೆ ತುತ್ತಾದರೂ ತನ್ನ ನೈಜತೆಯನ್ನು ಉಳಿಸಿಕೊಂಡಿರುವುದು ವಿಶೇಷ.

ಪರಿಸರ : ಕಲ್ಲಾಸರೆಯ ನೆಲವು ಕಲ್ಲುಹಾಸಿನಿಂದ ಕೂಡಿದ್ದು, ಭೂಮಟ್ಟದಿಂದ ಸು. 50 ಮೀ. ಎತ್ತರದಲ್ಲಿದೆ. ಇದರ ಸುತ್ತ–ಮುತ್ತಲಿನ ಪ್ರದೇಶವು ಗಿಡ–ಮರಗಳಿಂದ ಆವೃತವಾಗಿದೆ.

ಸ್ವಾಭಾವಿಕ ನೀರಿನ ಲಭ್ಯತೆ : ವಿಶೇಷವಾಗಿ ಮಳೆಗಾಲದಲ್ಲಿ ನೀರು ಈ ಕಲ್ಲಾಸರೆಯಲ್ಲಿ ನೈಸರ್ಗಿಕವಾಗಿ ರೂಪಿತಗೊಂಡಿರುವ ಗವಿಯ ಮುಖಾಂತರವಾಗಿ ಹರಿದು ಹೊರಬರುವುದರಿಂದ ಹಾಗೂ ನೈಸರ್ಗಿಕವಾಗಿಯೂ ಇದು ಆದಿ ಮಾನವ ವಾಸಿಸಲು ಹೆಚ್ಚು ಸೂಕ್ತವಾಗಿತ್ತೆಂಬುದನ್ನು ಈ ಮೂಲಕ ಅರ್ಥೈಸಬಹುದು.


ಕಾಲಮಾನ : ಅಂತ್ಯ ಹಳೇ ಶಿಲಾಯುಗ/ಸೂಕ್ಷ್ಮಶಿಲಾಯುಗ, ನವ ಶಿಲಾಯುಗ ಮತ್ತು ಇತಿಹಾಸ ಯುಗ

ಪುರಾತತ್ವಿಕ ಅವಶೇಷಗಳು : ಲಭ್ಯವಿಲ್ಲ

ಚಿತ್ರ ವಿವರಣೆ

ಚಿತ್ರ 2ಅ. – ಕಲ್ಲಾಸರೆಯ ಮೇಲ್ಭಾಗದಲ್ಲಿ ಅಂದರೆ ಇದರ ಕೆಳಸ್ಥರದಿಂದ ಸು. 25 ಮೀ. ಎತ್ತರದಲ್ಲಿರುವ ಸಮತಟ್ಟಾದ ಲಂಬ ಭಾಗದಲ್ಲಿ ಬಿಡಿಸಿದ್ದು ಜಾನುವಾರು, ಕತ್ತೆ (?), ಸಹಸ್ರಪದಿ ಹಾಗೂ ಮಾನವನ ಚಿತ್ರಗಳು ಉರಗಂಜಿ ಬಣ್ಣದಲ್ಲಿವೆ.


ಈ ಚಿತ್ರಗಳಲ್ಲಿ ಕತ್ತೆ(?)/ಜಾನುವಾರು ಚಿತ್ರಗಳು ವಿಶೇಷವಾಗಿದ್ದು ವಿಭಿನ್ನ ವಾಗಿವೆ. ಈ ಪ್ರಾಣಿಗಳ ಕೊಂಬುಗಳು ನಿಮ್ನ (ಒಳಬಾಗಿದ) ರೂಪದಲಿದ್ದು ಮುಖ ಹಾಗೂ ಕುತ್ತಿಗೆ ಭಾಗವು ಬಣ್ಣದಿಂದ ತುಂಬಿದ್ದು ದೇಹ ಭಾಗವು ರೇಖಾ ಚಿಹ್ನೆಗಳಿಂದ ಕೂಡಿದೆ. ದೇಹದ ಮಧ್ಯಭಾಗದಲ್ಲಿ ದೊಡ್ಡ ಬಿಂದುವಿದ್ದು ಬಾಣದ ಗುರುತನ್ನು ಅದರ ಕುತ್ತಿಗೆಯ ಕಡೆ ತೋರಿಸಲಾಗಿದೆ. ಇವೆರಡು ಪ್ರಾಣಿಗಳನ್ನು ಒಂದರ ಹಿಂದೆ ಒಂದು ಸಾಗುವಂತೆ ಬಿಡಿಸಲಾಗಿದೆ. ವಿಶೇಷವೆಂದರೆ ಈ ಪ್ರಾಣಿಗಳ ಮೇಲೆ ಬಹುಶಃ ಸರಕುಗಳನ್ನು ಸಾಗಿಸಲು ಕಲ್ಲಿ(ಲೋಡಿಂಗ್ ಬೇಸ್)ಯನ್ನು ಹಾಕಲಾಗಿದೆ. ಇಂತಹ ಚಿತ್ರಗಳು ಪ್ರಾಯಶಃ ಭಾರತದ ಉಪಖಂಡದಲ್ಲಿ ಕಂಡುಬಂದಿರುವ ಉದಾಹರಣೆಗಳಿಲ್ಲ. ಹಾಗೆಯೇ ದೊಡ್ಡ ಪ್ರಾಣಿಯ ಮೇಲ್ಭಾಗದಲ್ಲಿ ಬಾದಾಮಿ ಚಾಲುಕ್ಯರ



ಚಿತ್ರ ೨ಅ.


ಕಾಲದ ಲಿಪಿಯಿದ್ದು ಪ್ರಾಣಿಯ ಬಲ ಕೊಂಬಿನ ಮೇಲೆ ಚಾಚಿದೆ. ಕಾಲಮಾನ ದೃಷ್ಟಿಯಿಂದ ಇದು ಹೆಚ್ಚು ಉಪಯುಕ್ತವಾಗಬಲ್ಲದು. ಈ ಪ್ರಾಣಿಗಳ ಕೆಳಭಾಗದಲ್ಲಿ ಎರಡು ಜಾನುವಾರುಗಳ ಜೊತೆಗೆ ಮನುಷ್ಯನ ಚಿತ್ರವಿದೆ. ಹಾಗೆಯೇ ಇವುಗಳ ಕೆಳಅಂಚಿನಲ್ಲಿ ಸಹಸ್ರಪದಿ (ಝರಿ) ವರ್ಣಚಿತ್ರವು ಅಪರೂಪವಾಗಿದ್ದು ಇಂತಹ ಸರಿಸೃಪದ ಚಿತ್ರಣ ಬೇರೆಡೆ ದಾಖಲಾಗಿರುವ ಉದಾಹರಣೆಗಳಿಲ್ಲ.

ಚಿತ್ರ 2ಆ. – ಕಲ್ಲಾಸರೆಯ ಛಾವಣಿಯಲ್ಲಿವೆ. ಅದರಲ್ಲಿ ಗೂಳಿಯ ಕೊಂಬುಗಳು ಮುಂಚಾಚಿದ್ದು ಬಹುಶಃ ಆಕ್ರಮಣ ಭಂಗಿಯಲ್ಲಿ ತೋರಿಸಲಾಗಿದೆ. ಇದರ ಕೆಳಭಾಗದಲ್ಲಿ ಮನುಷ್ಯನ ಚಿತ್ರವಿದ್ದು ಅದು ಕೈಗಳನ್ನು ಚಾಚಿರುವಂತೆ ಹಾಗೂ ಕಾಲುಗಳನ್ನು ಅಗಲಿಸಿರುವಂತೆ ಬಿಡಿಸಲಾಗಿದೆ.



ಚಿತ್ರ ೨ಆ.

ಚಿತ್ರ 2ಇ. – ಕಲ್ಲಾಸರೆಯಲ್ಲಿನ ಹುಟ್ಟು ಬಂಡೆಯ ಮೇಲೆ ಒಂದು ಕಲ್ಗುಳಿಯಿದ್ದು ಚೌಕಾಕಾರ ವಿನ್ಯಾಸದಲ್ಲಿದೆ. ಇದರ ರಚನೆಯ ಉದ್ದೇಶ ಇನ್ನೂ ತಿಳಿದುಬಂದಿಲ್ಲ.


ಚಿತ್ರ ೨ಇ.

ಕಲ್ಲಾಸರೆ – 2 (15° 54' 350"N – 75° 42' 210"E)



ಸ್ಥಳ ವಿವರಣೆ : ಕನ್ನೇರ್‌ಗವಿ ಗುಡ್ಡದಿಂದ 300 ಮೀ. ಆಗ್ನೇಯ ದಿಕ್ಕಿಗಿದೆ.

ಸ್ಥಳೀಯ ನಾಮ : ಲಭ್ಯವಿಲ್ಲ

ಸಮುದ್ರ ಮಟ್ಟದಿಂದ ಇರುವ ಎತ್ತರ : 581 ಮೀಟರ್

ವಿಸ್ತರಣೆ : 3.5 x 2.2 x 4.5 ಮೀ.

ದಿಕ್ಕು : ದಕ್ಷಿಣ

ವಿಧಾನ : ಕುಟ್ಟಿ ಬಿಡಿಸಿದ ಚಿತ್ರಗಳು

ಪ್ರಸ್ತುತ ಸ್ಥಿತಿ : ಉತ್ತಮ ಸ್ಥಿತಿಯಲ್ಲಿದ್ದು ಕೆಲವೊಂದು ಮನುಷ್ಯರ ಇತ್ತೀಚೀನ ಚಟುವಟಿಕೆಗಳಿಂದ ಹಾಳಾಗಿವೆ.

ಪರಿಸರ : ಕಲ್ಲಾಸರೆಯ ನೆಲವು ಮಣ್ಣು ಹಾಗೂ ಕಲ್ಲಿನ ಚೂರುಗಳಿಂದ ಕೂಡಿದ್ದು, ಭೂ ಮಟ್ಟದಿಂದ ಸು. 25 ಮೀ. ಎತ್ತರದಲ್ಲಿದೆ. ಇದರ ಸುತ್ತ–ಮುತ್ತಲಿನ ಪ್ರದೇಶವು ಗಿಡ–ಗಂಟೆಗಳಿಂದ ಕೂಡಿದೆ.

ಸ್ವಾಭಾವಿಕ ನೀರಿನ ಲಭ್ಯತೆ : ಕನ್ನೇರ್‌ಗವಿ ಹಳ್ಳ, ಅಂತರ 300 ಮೀ.

ಕಾಲಮಾನ : ನವ ಶಿಲಾಯುಗ


ಪುರಾತತ್ವಿಕ ಅವಶೇಷಗಳು : ಸೂಕ್ಷ್ಮಶಿಲಾಯುಗಕ್ಕೆ ಸೇರಿದ ಕೆಲವು ಚಕಮಕ್ಕಿ ಕಲ್ಲಿನ ಆಯುಧಗಳು ದೊರೆತಿವೆ.

ಚಿತ್ರ ವಿವರಣೆ


ಚಿತ್ರ ೩ಅ.

ಚಿತ್ರ 3ಅ. – ಕುಟ್ಟಿ (ಬ್ರೂಸಿಂಗ್ಸ್) ಬಿಡಿಸಿದ ಚಿತ್ರವಾಗಿದ್ದು ಅಪರೂಪವೆನ್ನಬಹುದು. ಯಾಕೆಂದರೆ ಇಂತಹ ಚಿತ್ರಗಳು ಈ ಪ್ರದೇಶದಲ್ಲಿ ಅತೀ ವಿರಳ. ಇದು ನಾಲ್ಕು ಜಾನುವಾರು, ನಾಯಿ ಮತ್ತು ಮನುಷ್ಯ ಬಹುಶಃ ದನ ಕಾಯುವವನ ಚಿತ್ರಗಳನ್ನು ಒಳಗೊಂಡಿದೆ. ಜಾನುವಾರುಗಳ ಗುಣ ಲಕ್ಷಣಗಳನ್ನು ಗಮನಿಸಿದರೆ ಪ್ರಾಯಶಃ ಮೂರು ಹಸುಗಳಾಗಿದ್ದು ಮತ್ತೊಂದು ಎತ್ತು ಆಗಿದೆ. ಹಾಗೆಯೇ ನಾಯಿ ಮತ್ತು ನಗ್ನ ಮನುಷ್ಯನ ಚಿತ್ರವನ್ನು ಇಲ್ಲಿ ಕಾಣಬಹುದು. ನಾಯಿಯನ್ನು ತೋರಿಸಿರುವುದು ವಿಶೇಷ ಯಾಕೆಂದರೆ ಇಂದಿಗೂ ಈ ಪ್ರವೃತಿಯನ್ನು ದನಕಾಯುವವರಲ್ಲಿ ನೋಡಬಹುದು. ಈ ಚಿತ್ರವು ಪಿಕ್ಲಿಹಾಳ್ ನೆಲೆಯಲ್ಲಿ ಆಲ್ಚಿನ್[3] ರವರು ಬೆಳಕಿಗೆ ತಂದ ನವ ಶಿಲಾಯುಗದ ಕಾಲಘಟ್ಟಕ್ಕೆ ಸೇರಿದ ಕುಟ್ಟು ಚಿತ್ರಗಳಿಗೆ ಹೋಲಿಸಿದರೆ ಹೆಚ್ಚು ಸಾಮ್ಯತೆಯನ್ನು ಹೊಂದಿದೆ. ಈ ದೃಷ್ಟಿಯಿಂದ ನೋಡುವುದಾದರೆ ಇದು ಸಹ ಅದೇ ಕಾಲಘಟ್ಟಕ್ಕೆ ಸೇರಿರುವುದರಲ್ಲಿ ಎರಡು ಮಾತಿಲ್ಲ.

ಚಿತ್ರ 3ಆ. – ಇದು ಈ ಮೇಲೆ ವಿವರಿಸಿದ ಮನುಷ್ಯ ಚಿತ್ರದ ಅನುಕರಣೆಯಂತಿದೆ. ನಿಂತ ಮನುಷ್ಯ ಅವನ ದೇಹವು ಬಳ್ಳಿಯಂತಿದ್ದು, ಕೈಗಳು ಚಾಚಿಕೊಂಡಿದ್ದು, ಹಸ್ತಗಳು ಕೆಳಮುಖವಾಗಿವೆ ಹಾಗೂ ಜನನಾಂಗ ನಿಮಿರಿದ ಭಂಗಿಯಲ್ಲಿದೆ.




ಚಿತ್ರ ೩ಆ.

ಚಿತ್ರ 3ಇ. – ಅಸ್ಪಷ್ಟ ತಲೆ ರಹಿತ ನಾಲ್ಕು ಕಾಲುಗಳುಳ್ಳ ಪ್ರಾಣಿ.



ಚಿತ್ರ ೩ಇ.

ಚಿತ್ರ 3ಈ. – ಹಸುವಿನ ಚಿತ್ರವು ಸರಳ ರೇಖೆಗಳಿಂದ ಕೂಡಿದ್ದರೂ ಸುಂದರವಾಗಿ ಚಿತ್ರಿಸಲಾಗಿದೆ. ಇದರ ಕೊಂಬುಗಳು ಒಳ ಮುಖವಾಗಿ ಬಾಗಿವೆ. ಶೈಲಿಯಲ್ಲಿ ನವ ಶಿಲಾಯುಗ/ತಾಮ್ರ ಶಿಲಾಯುಗ ಕಾಲ ಘಟ್ಟದಲ್ಲಿ ಕಂಡುಬಂದಿರುವ ವರ್ಣಚಿತ್ರ ಹಾಗೂ ಮಡಕೆ ಮೇಲಿನ ಚಿತ್ರಗಳೊಂದಿಗೆ ಹೆಚ್ಚು ಸಾಮ್ಯವಿರುವುದರಿಂದ ಇದು ಆ ಕಾಲಘಟ್ಟಕ್ಕೆ ಸೇರಿದ್ದೆನ್ನಬಹುದು.



ಚಿತ್ರ ೩ಈ.

ಕಲ್ಲಾಸರೆ – 3 (15° 54' 981"N – 75° 41' 876"E)

ಸ್ಥಳ ವಿವರಣೆ : ವಿಸ್ತರಣೆಯಲ್ಲಿ ಅತೀ ದೊಡ್ಡದ್ದಾಗಿದ್ದು, ಕನ್ನೇರ್‌ಗವಿ ಗುಡ್ಡದಿಂದ 300 ಮೀ. ವಾಯವ್ಯ ದಿಕ್ಕಿಗಿದೆ.

ಸ್ಥಳೀಯ ನಾಮ : ನರಿ ಬಿದ್ದ ಡೊಣೆ (ಇದರ ಸಮೀಪ)

ಸಮುದ್ರ ಮಟ್ಟದಿಂದ ಇರುವ ಎತ್ತರ : 606 ಮೀಟರ್

ವಿಸ್ತರಣೆ : 105 x 6.0 x 5.0 ಮೀ.

ದಿಕ್ಕು : ದಕ್ಷಿಣ



ವಿಧಾನ : ಉರುಗಂಜಿ ಬಣ್ಣದ ಚಿತ್ರ ಹಾಗೂ ಕಲ್ಗುಳಿಗಳು

ಪ್ರಸ್ತುತ ಸ್ಥಿತಿ : ಉತ್ತಮ ಸ್ಥಿತಿಯಲ್ಲಿವೆ.

ಪರಿಸರ : ಕಲ್ಲಾಸರೆಯ ನೆಲವು ಮಣ್ಣಿನಿಂದ ಕೂಡಿದ್ದು, ಕಲ್ಲು-ಗುಂಡುಗಳಿಂದ ನೀರು ಒಳನುಗ್ಗದಂತೆ ಕಟ್ಟಡವನ್ನು ನಿರ್ಮಿಸಲಾಗಿದೆ. ಭೂ ಮಟ್ಟದಿಂದ ಸು. 120 ಮೀ. ಎತ್ತರದಲ್ಲಿದ್ದು ಸಸ್ಯ-ಜನ್ಯಗಳಿಂದ ಆವೃತವಾಗಿದೆ.

ಸ್ವಾಭಾವಿಕ ನೀರಿನ ಲಭ್ಯತೆ : ನರಿ ಜಿದ್ದ ಡೊಣೆಯಿಂದ 50 ಮೀ. ಮತ್ತು ಕನ್ನೇರ್‌ಗವಿ ಹಳ್ಳದಿಂದ 300 ಮೀ. ಅಂತರವಿದೆ.


ಕಾಲಮಾನ : ಅಂತ್ಯ ಹಳೇ ಶಿಲಾಯುಗ/ಸೂಕ್ಷ್ಮ ಶಿಲಾಯುಗ

ಪುರಾತತ್ವಿಕ ಅವಶೇಷಗಳು : ಬೃಹತ್ ಶಿಲಾಯುಗ ಕಾಲದ ಮಡಕೆ ಚೂರುಗಳು ದೊರೆತಿವೆ.


ಚಿತ್ರ ವಿವರಣೆ

ಚಿತ್ರ 4ಅ. – ಕಾಡು ಹಂದಿ ವರ್ಣಚಿತ್ರವು ಮಲಪ್ರಭ ನದಿ ತೀರದಲ್ಲಿ ಸರ್ವೆಸಾಮಾನ್ಯ. ಈ ಪ್ರಾಣಿಯ ಸಂತತಿಯು ಪ್ರಧಾನವಾಗಿದ್ದು ಅದರ ಬೇಟೆಗಾರಿಕೆ ಇಂದಿಗೂ ಮುಂದುವರೆದಿದೆ. ಅನಾದಿಕಾಲದಿಂದಲೂ ಈ ಪ್ರವೃತಿ ಬೆಳೆದುಕೊಂಡು ಬಂದಿರುವುದನ್ನು ನೋಡಿದರೆ ಅಂದಿನ ಜನರ ನೆಚ್ಚಿನ ಆಹಾರ ವಾಗಿತ್ತೆಂಬುದರಲ್ಲಿ ಅನುಮಾನವಿಲ್ಲ.

ಈ ಪ್ರಾಣಿಯ ದೇಹ ನೀಳವಾಗಿದ್ದು 'ಎಕ್ಸ್-ರೇ' ವಿಧಾನದಿಂದ ಅದರ ಒಳಭಾಗವನ್ನು ತೋರಿಸುವ ಪ್ರಯತ್ನವಿರಬಹುದು. ದೇಹದ ಆಕಾರ ಹಾಗೂ ಕಾಲಿನ ಗೊರ್ಸೆಯು ಇದರ ಸ್ಪಷ್ಟತೆಯನ್ನು ಹೆಚ್ಚಿಸಿವೆ.




ಚಿತ್ರ 4ಅ



ಚಿತ್ರ 4ಆ

ಚಿತ್ರ 4ಆ. – ಕೆಲವು ಅಸ್ಪಷ್ಟ ಉರುಗಂಜಿ ಬಣ್ಣದ ಚಿತ್ರಗಳಿದ್ದು ಅವು ಹೆಚ್ಚಾಗಿ ಮಾನವ ವಿನ್ಯಾಸವನ್ನು ಹೋಲುತ್ತವೆ.

ಚಿತ್ರ 4ಇ. – ಎರಡು ಕಲ್ಲುಗುಳಿಗಳು ಪ್ರತೇಕ ಕಲ್ಲು ಚಪ್ಪಟೆಗಳ ಮೇಲಿದ್ದು ಅವುಗಳನ್ನು ಒಂದೆಡೆಯಿಂದ ಮತ್ತೊಂದೆಡೆಗೆ ರವಾನಿಸ ಬಹುದು. ಈ ಕಲ್ಲುಗುಳಿಗಳು ಕಲ್ಲಾಸರೆಯ ಮುಂಭಾಗದಲ್ಲಿ ಅಂದರೆ ಈ ಮೇಲೆ ವಿವರಿಸಿದ ವರ್ಣಚಿತ್ರಗಳ ಬಳಿಯೇ ಕಂಡುಬಂದಿರು ವುದರಿಂದ ಹಾಗೂ ಅವು ಹೆಚ್ಚಾಗಿ ಸ್ಥಳದಿಂದ ಸ್ಥಳಕ್ಕೆ ಕೊಂಡೊಯ್ಯುವ ಕಲ್ಲುಗುಳಿಗಳಾಗಿರುವುದರಿಂದ ಇವುಗಳನ್ನು ವರ್ಣದ್ರವ್ಯವನ್ನು ತಯಾರಿಸಲು ಮಾಡಿರಬಹುದು. ಕಲ್ಲುಗುಳಿಗಳ ನಿರ್ಮಿತಿ ಇಂದಿಗೂ ಗೌಪ್ಯತೆಯಿಂದ ಕೂಡಿರುವುದರಿಂದ ಹೆಚ್ಚಿನ ಸಂಶೋಧನೆಗೆ ಇಂತಹ ಕುಳಿಗಳು ಅಣಿ ಮಾಡಿಕೊಡುತ್ತವೆ.



ಚಿತ್ರ 4ಇ

ಕಲ್ಲಾಸರೆ – 4 (15° 54' 830"N – 75° 41' 874"E)

ಸ್ಥಳ ವಿವರಣೆ : ಇದು 3ನೇ ಕಲ್ಲಾಸರೆಯಿಂದ 100 ಮೀ. ಈಶಾನ್ಯಕ್ಕಿದೆ.

ಸ್ಥಳೀಯ ನಾಮ : ಲಭ್ಯವಿಲ್ಲ

ಸಮುದ್ರ ಮಟ್ಟದಿಂದ : 608 ಮೀಟರ್



ಇರುವ ಎತ್ತರ

ವಿಸ್ತರಣೆ : 9.6 x 3.6 x 2.0 ಮೀ.

ದಿಕ್ಕು : ದಕ್ಷಿಣ

ವಿಧಾನ : ಬಿಳಿ ವರ್ಣಚಿತ್ರ

ಪ್ರಸ್ತುತ ಸ್ಥಿತಿ : ಉತ್ತಮ ಸ್ಥಿತಿಯಲ್ಲಿವೆ.

ಪರಿಸರ : ಕಲ್ಲಾಸರೆಯ ನೆಲವು ಹುತ್ತ ಹಾಗೂ ಮಣ್ಣಿನಿಂದ ಕೂಡಿದ್ದು, ಭೂ ಮಟ್ಟದಿಂದ ಸು. 110 ಮೀ. ಎತ್ತರದಲ್ಲಿದೆ.


ಸ್ವಾಭಾವಿಕ ನೀರಿನ ಲಭ್ಯತೆ : ಸಾರ್ವಕಾಲಿಕ ಡೊಣೆ (ನೀರಿನ ಬುಗೆ) ಯಿಂದ 50 ಮೀ. ಅಂತರದಲ್ಲಿದೆ.

ಕಾಲಮಾನ : ನವ ಶಿಲಾಯುಗ

ಪುರಾತತ್ವಿಕ ಅವಶೇಷಗಳು : ಲಭ್ಯವಿಲ್ಲ

ಚಿತ್ರ ವಿವರಣೆ

ಚಿತ್ರ 5ಅ. – ಬಿಲ್ಲುಗಾರನ ಚಿತ್ರವು ಬಿಳಿ ವರ್ಣದಲ್ಲಿರುವುದು ವಿಶೇಷ. ಯಾಕೆಂದರೆ ಈ ಚಿತ್ರದ ಹೊರತಾಗಿ ಬೇರೆ ಯಾವ ಚಿತ್ರಗಳು ಬಿಳಿ ಬಣ್ಣದಲ್ಲಿಲ್ಲ. ಬಿಲ್ಲುಗಾರ ಗಾಂಭಿರ್ಯತೆ/ಏಕಾಗ್ರತೆಯಿಂದ ಗುರಿಯತ್ತ ಗಮನಹಾಯಿಸಿರುವುದನ್ನು ಕಾಣಬಹುದಾಗಿದೆ. ಆದರೆ ಈ ಚಿತ್ರದ ಹೊರತಾಗಿ ಬೇರೆ ಚಿತ್ರಗಳಿಲ್ಲ. ಪ್ರಾಯಶಃ ಇಲ್ಲಿ ಬೃಹತ್ ಹುತ್ತ ಬೆಳೆದಿರುವುದರಿಂದ ಅದರ ಹಿಂದೆ ಬೇರೆ ಚಿತ್ರಗಳು ಮರೆಯಾಗಿರಬಹುದು.



ಚಿತ್ರ 5ಅ

ಕಲ್ಲಾಸರೆ – 5 (15° 54' 831"N– 75° 41' 873"E)

ಸ್ಥಳ ವಿವರಣೆ : ಕನ್ನೇರ್‌ಗವಿ ಗುಡ್ಡದಿಂದ 300 ಮೀ. ನೈರುತ್ಯ ದಿಕ್ಕಿಗಿದೆ.

ಸ್ಥಳೀಯ ನಾಮ : ಲಭ್ಯವಿಲ್ಲ

ಸಮುದ್ರ ಮಟ್ಟದಿಂದ ಇರುವ ಎತ್ತರ : 608 ಮೀಟರ್

ವಿಸ್ತರಣೆ : 14.9 x 4.1 x 3.2 ಮೀ.

ದಿಕ್ಕು : ಉತ್ತರ

ವಿಧಾನ : ಉರುಗಂಜಿ ಬಣ್ಣದ ಚಿತ್ರ ಹಾಗೂ ಕಲ್ಗುಳಿ



ಪ್ರಸ್ತುತ ಸ್ಥಿತಿ : ನೈಸರ್ಗಿಕ ವಿಕೋಪಗಳಿಗೆ ಒಳಗಾಗಿದೆ.

ಪರಿಸರ : ಕಲ್ಲಾಸರೆಯ ನೆಲವು ಮಣ್ಣಿನಿಂದ ಕೂಡಿದ್ದು, ಭೂ ಮಟ್ಟದಿಂದ ಸು. 100 ಮೀ. ಎತ್ತರದಲ್ಲಿದ್ದು ಸಸ್ಯ ಸಂಪತ್ತಿನಿಂದ ಕೂಡಿದೆ.


ಸ್ವಾಭಾವಿಕ ನೀರಿನ ಲಭ್ಯತೆ : ಋತುಕಾಲಿಕ ಡೊಣೆ, 50 ಮೀ. ಅಂತರದಲ್ಲಿದೆ.

ಕಾಲಮಾನ : ಸೂಕ್ಷ್ಮ ಶಿಲಾಯುಗ

ಪುರಾತತ್ವಿಕ ಅವಶೇಷಗಳು : ಲಭ್ಯವಿಲ್ಲ

ಚಿತ್ರ ವಿವರಣೆ -

ಚಿತ್ರ 6ಅ. – ಮನುಷ್ಯನ ಚಿತ್ರ ಅಪರೂಪದ ಶೈಲಿಯಲ್ಲಿದೆ. ದೇಹದ ಅಂಗಾಂಗಗಳನ್ನು ತೋರಿಸದೆ ಕೇವಲ ತಲೆ ಹಾಗೂ ದೇಹದ ಒಳಗೆ ಗೆರೆಗಳನ್ನು ತುಂಬಲಾಗಿದೆ.



ಚಿತ್ರ 6ಅ

ಚಿತ್ರ 6ಆ. – ಒಂಟ ಕುಳಿಯು ಮುಳುಗಲ್ಲು ಹುಟ್ಟು ಬಂಡೆ ಮೇಲಿದ್ದು ವೃತ್ತಾಕಾರವಾಗಿದೆ.



ಚಿತ್ರ 6ಆ

ಸಮಾರೋಪ

ಮನುಷ್ಯ ತನ್ನೊಳಗಿನ ಭಾವನೆಗಳನ್ನು ವ್ಯಕ್ತಪಡಿಸುವ ಸಲುವಾಗಿ ಈ ವಿಧಾನವನ್ನು ಅನುಸರಿಸಿದನು. ಇದರಿಂದ ಅವನ ಜೀವನ ಕ್ರಮ, ಧಾರ್ಮಿಕ ವಿಧಿ–ವಿಧಾನ, ಸಂಪ್ರದಾಯ, ಬೇಟೆಗಾರಿಕೆ ಮತ್ತು ನೈಪುಣ್ಯತೆ, ಮನೋರಂಜನೆ ಹೀಗೆ ಹಲವಾರು ವಿಷಯಗಳ ಮೇಲೆ ಬೆಳಕನ್ನು ಚೆಲ್ಲುತ್ತವೆ. ಈ ಹಿನ್ನಲೆಯಲ್ಲಿ ಪ್ರಸ್ತುತ ನೆಲೆಯು ಪ್ರಮುಖವಾಗಿದ್ದು, ಅದರ ಮಹತ್ವವೇನೆಂಬುದನ್ನು ಈ ಮೇಲೆ ವಿವರಿಸಲಾಗಿದೆ. ಈ ನೆಲೆಯಲ್ಲಿ ಕೆಲವು ಅಪರೂಪದ ಚಿತ್ರಗಳು ಕಂಡುಬಂದಿರುವುದು ವಿಶೇಷ. ಮನುಷ್ಯ–ಪ್ರಾಣಿ–ಪರಿಸರದೊಂದಿಗಿನ ಸಂಬಂಧ ಹೆಚ್ಚು ಅನ್ಯೋನ್ಯತೆಯಿತೆಂಬುದನ್ನು ಇಲ್ಲಿ ತಿಳಿಯಬಹುದು. ಕಾಲಮಾನ ದೃಷ್ಟಿಯಿಂದಲೂ ಇತಿಹಾಸದ ಮೇಲೆ ಹೆಚ್ಚು ಬೆಳಕನ್ನು ಚೆಲ್ಲುತ್ತದೆ.

ಕೃತಜ್ಞತೆ

ಕ್ಷೇತ್ರಕಾರ್ಯ ಅನ್ವೇಷಣೆ ಹಾಗೂ ತಾಂತ್ರಿಕತೆಯಲ್ಲಿ ಸಹಕರಿಸಿದ ನನ್ನ ಸ್ನೇಹಿತರಾದ ಹೇಮಂತ್ ದಳವಿ, ಚಂದ್ರಕಾಂತ್ ಕಲ್‌ವಾಂಕರ್, ಆರ್. ಅರ್ಜುನ್, ಡಿ. ವಿನಯ್ ಕುಮಾರ್, ಅಶೋಕ್ ಪೂಜಾರ, ಎನ್.ಟಿ. ಜೋರಯ್ಯ, ಮತ್ತು ಈ ವೇಳೆಯಲ್ಲಿ ತಂಗಲು ವ್ಯವಸ್ಥೆ ಮಾಡಿಕೊಟ್ಟ ಇಷ್ಟಲಿಂಗ ಸಿರಿಸಿ ಹಾಗೂ ವಿದ್ವಾಂಸರಾದ ಅ. ಸುಂದರ ಹಾಗೂ ಜಿ.ಎಲ್. ಬಾದಮ್ ರವರಿಗೂ ಹೃತ್ಪೂರ್ವಕ ಕೃತಜ್ಞತೆಗಳು.

ಆಧಾರ ಗ್ರಂಥಗಳು

1. Mohana, R. 2015. *Reading Rock Art: Interpreting Temporal and Geographic Variability in the Lower Malaprabha Basin, Karnataka*. Ph.D. thesis submitted to the Deccan College, Post Graduate and Research Institute, Pune.
2. Neumayer, E. 1993. *Lines on Stone: The Prehistoric Rock Art of India*. New Delhi: Manohar Publishers and Distributors.
3. Allchin, F.R. and B. Allchin 1994-95. 'Rock art of North Karnataka', Pune: *Bulletin of the Deccan College Post-Graduate and Research Institute* 54-55: 313-39.

■

ಕರ್ನಾಟಕದ ಪ್ರಭುತ್ವಗಳು ಮತ್ತು ಶಕ್ತಿದೇವತೆಗಳು

▫ ರಹಮತ್ ತರೀಕೆರೆ
1425, 'ಸೂಫಿ'
ಎಂ.ಪಿ. ಪ್ರಕಾಶನಗರ,
ಹೊಸಪೇಟೆ-583201
rtarikere@gmail.com

– 1 –

ಕರ್ನಾಟಕದ ರಾಜಪ್ರಭುತ್ವಗಳು, ಜೈನ, ಶೈವ, ಶ್ರೀವೈಷ್ಣವ, ಇಸ್ಲಾಂ ಮುಂತಾದ ಪ್ರಧಾನ ಮತಧರ್ಮಗಳಿಗೆ ಹೋಲಿಸಿದರೆ, ಶರಣ, ಶಾಕ್ತ, ಆರೂಢ, ತಂತ್ರ, ನಾಥ, ಸೂಫಿ, ಕಾಪಾಲಿಕ ಮುಂತಾದ ಪಂಥಗಳ ಜತೆ ಇರಿಸಿ ಕೊಂಡಿದ್ದ ಸಂಬಂಧ ಕ್ಷೀಣ ಅಥವಾ ಪ್ರಾಸಂಗಿಕವೆನ್ನಬಹುದು. ಇದಕ್ಕೆ ಎರಡು ಕಾರಣಗಳನ್ನು ಊಹಿಸಬಹುದು. ಅ) ಈ ಪಂಥಗಳು ಆಳುವ ವ್ಯವಸ್ಥೆಯ ಭಾಗವಾಗಿದ್ದ ವರ್ಣಾಶ್ರಮ, ಜಾತಿಪದ್ಧತಿ, ಪುರೋಹಿತಶಾಹಿ, ಪುರುಷವಾದಗಳ ವಿಷಯಗಳಲ್ಲಿ ಹೊಂದಾಣಿಕೆಯ ನಿಲುವನ್ನು ತಾಳದೇ ಇದ್ದುದು. ಆ) ಪ್ರಭುತ್ವದ ಜತೆಗಿಂತ ದೈಹಿಕ ದುಡಿಮೆಯ, ಕುಶಲಕರ್ಮಿಗಳ ಹಾಗೂ ಮಹಿಳಾ ಸಮುದಾಯಗಳ ಬದುಕಿನ ಜತೆ ಆಪ್ತ ಸಂಬಂಧ ಇರಿಸಿಕೊಂಡಿದ್ದುದು. ಆದರೂ ಚರಿತ್ರೆಯ ವಿಭಿನ್ನ ಘಟ್ಟಗಳಲ್ಲಿ ಈ ಪಂಥಗಳು ನಾನಾ ಬಗೆಯಲ್ಲಿ ಪ್ರಭುತ್ವೀಕರಣಗೊಂಡವು. ಇವು ಪ್ರಭುತ್ವದ ಜತೆಗೆ ಮಾಡಿದ ಸಂಘರ್ಷ ಮತ್ತು ಹೊಂದಾಣಿಕೆಯ ಚರಿತ್ರೆ ಸಂಕೀರ್ಣ ವಾಗಿದೆ. ಇಲ್ಲಿ ಪ್ರಭುತ್ವವೆಂದರೆ, ರಾಜಕೀಯ ಮಾತ್ರವಲ್ಲ, ಸಮಾಜ ಮತ್ತು ಸಂಪತ್ತುಗಳ ಮೇಲೆ ಯಜಮಾನಿಕೆಯಿದ್ದ ಎಲ್ಲ ಧಾರ್ಮಿಕ, ದಾರ್ಶನಿಕ ಮತ್ತು ಸಾಮಾಜಿಕ ಸಂಸ್ಥೆಗಳು ಕೂಡ.

ಕರ್ನಾಟಕದ ಆಧುನಿಕಪೂರ್ವ ಪ್ರಭುತ್ವಗಳನ್ನು ಮುಖ್ಯವಾಗಿ ಯುದ್ಧ, ಆರ್ಥಿಕ ವ್ಯವಸ್ಥೆ, ವಾಸ್ತು ಮತ್ತು ಶಿಲ್ಪಕಲೆ, ಸಾಮಾಜಿಕ ವ್ಯವಸ್ಥೆ ಹಾಗೂ ಪ್ರಧಾನ ಮತಧರ್ಮಗಳ ಮೂಲಕ ವಿಶ್ಲೇಷಿಸಲಾಗಿದೆ. ಆದರೆ ದಾರ್ಶನಿಕ ಪಂಥಗಳ ಮೂಲಕ ನೋಡಿರುವ ಯತ್ನಗಳು ತೀರ ಕಡಿಮೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ವಿವಿಧ

ಕಾಲಘಟ್ಟದ ಪ್ರಭುತ್ವಗಳನ್ನು ಶಾಕ್ತಪಂಥದ ಮೂಲಕ ನೋಡುವುದು ಈ ಲೇಖನದ ಉದ್ದೇಶವಾಗಿದೆ. ಇಲ್ಲಿ 'ಶಾಕ್ತ'ವೆಂದರೆ, ಲೌಕಿಕವಾಗಿ ಸ್ತ್ರೀಮಹತ್ವವನ್ನು ಮತ್ತು ಧಾರ್ಮಿಕವಾಗಿ ಸ್ತ್ರೀದೇವತೆಗಳನ್ನು ಕೇಂದ್ರವಾಗಿರಿಸಿಕೊಂಡಿರುವ ದರ್ಶನ ಮತ್ತು ಆಚರಣೆಗಳ ಲೋಕವೆಂದು ಸರಳವಾಗಿ ವ್ಯಾಖ್ಯಾನಿಸಿಕೊಳ್ಳಲಾಗಿದೆ. ವಾಸ್ತವವಾಗಿ ಶಾಕ್ತವು ತನ್ನದೇ ಆದ ಲೋಕದೃಷ್ಟಿಯುಳ್ಳ ದರ್ಶನವಾಗಿದೆ. ಆದರೆ ಇಲ್ಲಿ ಅದನ್ನು ಶಕ್ತಿದೇವತೆಗಳ ಆರಾಧನೆ ಎಂಬ ಸೀಮಿತ ನೆಲೆಯಲ್ಲಿ ಗ್ರಹಿಸಲಾಗಿದೆ. ಲೇಖನವು ಮುಖ್ಯವಾಗಿ ಶಾಸನ, ಮೂರ್ತಿಶಿಲ್ಪ, ಸಾಹಿತ್ಯ ಪಠ್ಯ ಹಾಗೂ ಜನಪದ ಮಿತ್‌ಗಳನ್ನು ಆಕರವಾಗಿ ಬಳಸಿಕೊಂಡಿದೆ. ಈ ಆಕರಗಳು ವಿಭಿನ್ನ ನೆಲೆಗಳಿಂದ ಸೃಷ್ಟಿಯಾದವು ಮತ್ತು ನಿಲುವುಳ್ಳವು. ಇವುಗಳ ಮೂಲಕ ಶಾಕ್ತಪಂಥ ಮತ್ತು ಪ್ರಭುತ್ವಗಳ ಸಂಬಂಧಗಳ ವಿವಿಧ ಆಯಾಮಗಳನ್ನು ಹುಡುಕುವುದಕ್ಕೆ ಇಲ್ಲಿ ಯತ್ನಿಸಿದೆ. ಈ ಲೇಖನದಲ್ಲಿ 'ದೇವತೆ' ಶಬ್ದವನ್ನು ಪುರಾಣೋಕ್ತ ಶಿಷ್ಟವರ್ಗಕ್ಕೆ ಸೇರಿದ ಚಾಮುಂಡಿ, ಮಹಿಷಾಸುರ ಮರ್ದಿನಿಯರನ್ನು ಸೂಚಿಸಲು, 'ದೈವ' ಶಬ್ದವನ್ನು ಜನಪದರು ಆರಾಧಿಸುವ ಬಾದುಬ್ಬೆ, ಬಳರಿ, ಹುಲಿಗೆಮ್ಮ, ಎಲ್ಲಮ್ಮರನ್ನು ಸೂಚಿಸಲು ಪರಿಭಾಷೆಗಳಂತೆ ಬಳಸಲಾಗಿದೆ.

– 2 –

ಕರ್ನಾಟಕದ ಮೊದಲ ಘಟ್ಟದ ದೊರೆಗಳಲ್ಲಿ ಒಬ್ಬರಾದ ಕದಂಬರು ಶಿವ ಮತ್ತು ವಿಷ್ಣುವಿನ ಆರಾಧಕರಾಗಿದ್ದರೂ ಅವರ ಕುಲದೇವತೆ ಬನವಾಸಿಯ ಮಧುಕೇಶ್ವರವಾಗಿತ್ತು. ವೈಷ್ಣವರಿಗೆ ಹೋಲಿಸಿದರೆ, ಶೈವಾರಾಧಕರಿಗೆ ಶಕ್ತಿದೇವತೆಗಳತ್ತ ಹೊರಳಿಕೊಳ್ಳುವುದು ಸುಲಭ. ಕದಂಬರು ಸಪ್ತಮಾತೃಕೆಯರನ್ನು ಆರಾಧಿಸುತ್ತಿದ್ದರು. ಅವರಲ್ಲಿ ಕೆಲವರು ತಮ್ಮನ್ನು 'ಮಾತೃಗಣಾನುಧ್ಯಾತಾಭಿಷಿಕ್ತ'ರೆಂದು ಕರೆದುಕೊಂಡಿರುವರು. ಅವರ ಕಾಲದಲ್ಲಿ ಪ್ರತಿಷ್ಠಾಪನೆಗೊಂಡ ಜಂಬೆಹಳ್ಳಿಯ (ಸೊರಬ) ದುರ್ಗಾದೇವಿಯ ಮೂರ್ತಿಯು, ಮಹಿಷಾಸುರನನ್ನು ಶೋಚನೀಯವಾಗಿ ತುಳಿದು ಕೊಲ್ಲುತ್ತಿರುವ ಭಂಗಿಯಲ್ಲಿದ್ದು, ಶಾಕ್ತಶಿಲ್ಪದಲ್ಲಿಯೇ ವಿಶಿಷ್ಟವಾಗಿದೆ. ಪ್ರಭುತ್ವಗಳು ಸ್ಥಾಪಿಸಿದ ದೇವಾಲಯಗಳ ಮೂರ್ತಿಗಳ ಆಧಾರದಲ್ಲಿ ಪ್ರಭುತ್ವಗಳ ಪಾಂಥಿಕ ಒಲವನ್ನು ಹೇಳುವುದು ಕಷ್ಟ. ಯಾಕೆಂದರೆ ರಾಜಧರ್ಮದ ಭಾಗವಾಗಿ ಹಲವಾರು ಮತಪಂಥಗಳನ್ನು ಅವು ಉತ್ತೇಜಿಸುತ್ತಿದ್ದವು. ಪ್ರತಿಕೂಲ ಸನ್ನಿವೇಶದಲ್ಲಿ ನಿರುತ್ತೇಜಿಸುತ್ತಿದ್ದವು.

ಬಾದಾಮಿಯ ಚಾಲುಕ್ಯರಿಗೆ ಹೋಲಿಸಿದರೆ, ಕದಂಬರಿಗೆ ಶಕ್ತಿದೇವತೆಗಳೊಂದಿಗೆ ಸಂಬಂಧ ಕಡಿಮೆಯೆನ್ನಬಹುದು. ಚಾಲುಕ್ಯರ ಐಹೊಳೆಯ ದುರ್ಗಾಗುಡಿ ಹಾಗೂ ಬಾದಾಮಿ ಗುಹೆಯಲ್ಲಿರುವ ಮಹಿಷಾಸುರ ಮರ್ದಿನಿ ಮೂರ್ತಿಗಳು ಅವರ ಶಕ್ತಿದೇವತೆಗಳ ಸೆಳೆತಕ್ಕೆ ಸಾಕ್ಷಿ. ಐಹೊಳೆ ಶಾಸನದಲ್ಲಿ 500 ಮಹಾಜನರು, 8 ನಗರಗಳು ಹಾಗೂ 129 ಊರಾಳಿಗರು ದುರ್ಗಾಭಗವತಿಗೆ ಭೂದಾನ ಮಾಡಿದ (*ಕವಿಶಾಸಂ 9;* ಹುನಗುಂದ 15: ಕ್ರಿಶ.625) ಉಲ್ಲೇಖವಿದೆ. ಅಲ್ಲಿ ದುರ್ಗಿಯನ್ನು 'ಶ್ರೀ ಧೂರ್ತ್ತಘಟೇದ್ಯುತ ಮಣ್ಡಲಮೆಲ್ಲ ನಿವಡ್ಡಮಾನ್' ಎಂದು ಸ್ತುತಿಸಲಾಗಿದೆ. ಪ್ರಭುತ್ವದ ಹಾಗೂ ರಾಜ್ಯದ ಪ್ರತಿಷ್ಠಿತ ವರ್ಗಗಳ ಧಾರ್ಮಿಕ ನಿಲುವುಗಳು ಸಾಮಾನ್ಯವಾಗಿ ಏಕೀಭವಿಸುತ್ತವೆ. ಮುಖ್ಯ ಸಂಗತಿಯೆಂದರೆ, ದುರ್ಗೆ ಹಾಗೂ ಮಹಿಷಾಸುರ ಮರ್ದಿನಿಯರ ಹಿನ್ನೆಲೆಯಲ್ಲಿ ದೇವಿಯು, ದೇವಲೋಕದವರ

ಹಿತಕಾಯಲು ರಾಕ್ಷಸರನ್ನು ಕೊಲ್ಲುವ ಪೌರಾಣಿಕ ಕಥೆಯಿರುವುದು. ವೈದಿಕ ಸಂಸ್ಕೃತಿಯ ಕದಂಬ ಮತ್ತು ಚಾಲುಕ್ಯರಿಗೆ ಈ ಶಾಕ್ತದೇವತೆಗಳ ಹಿನ್ನೆಲೆಯಲ್ಲಿದ್ದ ದೇವ-ದಾನವ ಸಂಘರ್ಷದ ಪೌರಾಣಿಕ ಹಿನ್ನೆಲೆ ಪ್ರಿಯವೂ ಆಗಿತ್ತು. ಯಾಕೆಂದರೆ, ಈ ಪೌರಾಣಿಕ ಕಥನವು ಪರೋಕ್ಷವಾಗಿ ಪ್ರಭುತ್ವಗಳು ರಾಜಕೀಯ ಎದುರಾಳಿಗಳನ್ನು ರಾಕ್ಷಸೀಕರಿಸಲು ಮತ್ತು ನಾಶಮಾಡುವುದಕ್ಕೆ ಹೂಡುವ ಕಾಳಗವನ್ನು ಧರ್ಮಯುದ್ಧವೆಂದು ಕರೆಯಲು ಪೂರಕವಾಗಿತ್ತು. ಆದರೆ ದುರ್ಗೆ-ಮಹಿಷಾಸುರ ಮರ್ದಿನಿಯರ ಹಾಗೆ, ಆ ಭಾಗದ ಜನಪ್ರಿಯ ಶಕ್ತಿದೈವಗಳಾದ ಚಂದ್ರಗುತ್ತೆಮ್ಮ, ಶಿರಸಿ ಮಾರೆಮ್ಮ, ಬಾದಾಮಿಯ ಬನಶಂಕರಿಯ ಪ್ರಸ್ತಾಪಗಳು ಇವರ ಶಾಸನಗಳಲ್ಲಿ ಕಾಣುವುದಿಲ್ಲ. ಇದಕ್ಕೆ ಕಾರಣ, ಇವು ಸುರಾಸುರ ಸಂಘರ್ಷಕ್ಕೆ ನೇರವಾಗಿ ಸಂಬಂಧಿಸದೆ ಇರುವುದು ಹಾಗೂ ಸಮುದಾಯಗಳ ದೈವಗಳಾದ ಇವು ಚರಿತ್ರೆಯಲ್ಲಿ ನಂತರದ ಕಾಲಘಟ್ಟದಲ್ಲಿ ಜನಪ್ರಿಯವಾಗಿದ್ದು.

ರಾಜಪ್ರಭುತ್ವಗಳಿಂದ ಮನ್ನಣೆ ಪಡೆದ ದೇವತೆಗಳಲ್ಲಿ ಆಂಧ್ರದ ಆಲಂಪುರದ ಜೋಗುಳಾಂಬೆ ಹಾಗೂ ಕುಕನೂರಿನ ಮಹಾಮಾಯೆ ಮುಖ್ಯರು. ಜೋಗುಳಾಂಬೆಯು ಚಾಲುಕ್ಯ ಮೊದಲುಗೊಂಡು, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ವಿಜಯನಗರ ತನಕ, ನಾಲ್ಕು ರಾಜವಂಶಗಳಿಂದ ಸಹಸ್ರಮಾನದಷ್ಟು ದೀರ್ಘಕಾಲ ಪೋಷಣೆ ಪಡೆದ ದೇವತೆ. ಆಕೆಯ ಗುಡಿಗೆ ಕಲ್ಯಾಣ ಚಾಲುಕ್ಯರ ಆಹವಮಲ್ಲ ಮೂರು ಗ್ರಾಮಗಳ ಸುಂಕವನ್ನು ಕೊಡುಗೆಯಾಗಿ ನೀಡುತ್ತಾನೆ. ಜೋಗುಳಾಂಬೆಗೆ ಹೋಲಿಸಿದರೆ, ಕುಕನೂರಿನ ಮಹಾಮಾಯೆಯು ಅಗ್ರಹಾರದ ದೇವತೆಯಾಗಿ ಸೀಮಿತವಾದವಳು. ಕುಕನೂರಿನ ಶಾಸನವು (*ಕವಿಶಾಸಂ 2;* ಯಲಬುರ್ಗ 52; ಕ್ರಿ.ಶ.1128) ಶಾಕ್ತಲೋಕದ ಅತಿದೀರ್ಘ ಕಲ್ಬರಹವಾಗಿದ್ದು ಇದರಲ್ಲಿ ನಾಲ್ಕು ಅಂಶಗಳಿವೆ. ಅ. ಕುಕನೂರನ್ನು 'ಶಿವಶಕ್ತಿಸ್ಫುರತ್ಸಂಪುಟ ಕ್ಷೇತ್ರ' ಎಂದು ಕರೆಯಲಾಗಿದೆ. ಆ. ಅಲ್ಲಿ "ಆದಿಯ ಪೀಠದಂಬಿಕೆ ಪುರಾಣೀದೇವಿ ಚಾಮುಂಡಿದೇವಿ ಮಹಾಮಾಯೆ ತಡಾಗದಂಬಿಕೆ ವಂಸಾದೇವಿ ಕಾಳ್ಯಂಬೆ ವಿಶ್ವಮಹೀ ವಂದಿತೆ ಶಾಂತಿಕಾರಿ ವಿಳಸತ್ ಶ್ರೀ ಗುಪ್ತಚಾಮುಂಡಿಯೆಂಬ ಮಹಾದೇವಿ"ಯರಿದ್ದರು; ಅವರಲ್ಲಿ ಜ್ಯೇಷ್ಠಾದೇವಿ ಎನಿಸಿಕೊಂಡ ಕಾಳಿಯು "ಸೊರ್ಕ್ಕಿ ಮಾಕರಿಸುತ್ತಿರ್ಪ್ಪ ಮದ್ದಾನ್ಧನಪ್ಪ ಖಳನಾಯುದ್ದೀರ್ಪಮಂ ತಂನ ಚಾಮರದಿಂ ತೊಟ್ಟೆನೆ ನಂದೆ ಬೀಸಿ ಕಳೆ"ವವಳೂ ಒಲಿದರೆ ಒಳಿತೆಸಗುವವಳೂ ಆಗಿದ್ದಳು ಎಂಬ ಚಿತ್ರವಿದೆ. ಇ. ಯರಂಬರವಿಯ ಮಹಾಮಂಡಲೇಶ್ವರನ ರಾಜಗುರುವೂ ಕಾಳಿಯಾರಾಧಕನೂ "ಸಕಲಲೋಕ ಮೆಚ್ಚಲು ಮಾಂತ್ರಿಕನೆನೆ ತಾಂತ್ರಿಕನೆನೆ ಯಾಂತ್ರಿಕನೆನೆ" ಆಗಿದ್ದ ಸಿದ್ಧಯೋಗಿ ಕಳೇಶ್ವರ ಮುನಿಯು ಅಲ್ಲಿದ್ದನು ಎಂದು ಹೇಳಲಾಗಿದೆ. ಈ. ಬೆಳ್ವಲನಾಡಿನ ಮಹಾಪ್ರಧಾನ ಧನುಂಗಿ ದಂಡನಾಯಕನು ಕುಕನೂರಿಗೆ ಬಂದು, ಕಾಳಿಯನ್ನರ್ಚಿಸಿ, ಕಳೇಶ್ವರಮುನಿಯ ಕಾಲ್ತೊಳೆದು, ಕಳಚುರಿ ದೊರೆ ವೀರಸಂಕಮದೇವನ ಅನುಮತಿಯಿಂದ ಬೆನತೂರು ಗ್ರಾಮವನ್ನು ಕಾಳಿ ಹಾಗೂ ಸೋಮೇಶ್ವರದೇವರ "ನಿತ್ಯ ನೈಮಿತ್ತಿಕ ಪೂಜೆಗಂ ತಪೋಧನರಾಹಾರ ದಾನಕ್ಕವಾದೇವಾಯತನಂಗಳ ಖಂಡಸ್ಫುಟಿತ ಜೀರ್ಣ್ನೋದ್ಧಾರಕ್ಕೆ' ಎಂದು ದಾನ ಮಾಡಿದನು ಎಂಬ ಮಾಹಿತಿಯಿದೆ. ಇಲ್ಲಿನ ಶಾಕ್ತವು ಉಚ್ಚಜಾತಿ ಮತ್ತು ವರ್ಗಗಳಿಗೆ ಸೇರಿದ್ದು, ಪ್ರಭುತ್ವಕ್ಕೆ ಸಮೀಪವಾಗುವುದು ಸುಲಭವಾಗಿತ್ತು. ಎಂತಲೇ ಮಹಾಮಾಯೆಗೆ

ಸಮೀಪದ ಹುಲಿಗೆಮ್ಮನಿಗಿರುವ ಜನಪದ ಹಾಡು ಮತ್ತು ಜಾತ್ರೆಗಳ ಪರಂಪರೆಯಿಲ್ಲ. ಹಾಗೆ ಕಂಡರೆ ಪ್ರಭುತ್ವ ಪೋಷಣೆ ಹಾಗೂ ಸಮುದಾಯ ನಿಷ್ಠೆ ಎರಡನ್ನೂ ಅನುಭವಿಸಿದವರೆಂದರೆ, ಬದಾಮಿಯ ಬನಶಂಕರಿ ಹಾಗೂ ಮೈಸೂರಿನ ಚಾಮುಂಡಿಯರು.

ವಿಜಯನಗರದ ಮೊದಲ ಘಟ್ಟದ ಸಂಗಮ ವಂಶದ ಅರಸರು ಶೈವರಾಗಿದ್ದರಿಂದ ಶಾಕ್ತಾರಾಧನೆಗೆ ಸಹಜವಾಗಿಯೇ ಪೂರಕವಾಗಿದ್ದರು. ಅವರ ಆಳ್ವಿಕೆಯಲ್ಲಿ ಮಾಂಡಲಿಕರು ಮತ್ತು ಅಧಿಕಾರಿಗಳು ತಮ್ಮ ಆಳ್ವಿಕೆಯ ಸೀಮೆಯಲ್ಲಿದ್ದ ಶಾಕ್ತದೈವಗಳಿಗೆ ವೈಯಕ್ತಿಕ ನೆಲೆಯಲ್ಲಿ ಉತ್ತೇಜನ ಕೊಟ್ಟರು. ಇಮ್ಮಡಿ ಹರಿಹರನ (1377–1404) ಕಾಲದಲ್ಲಿ ಕೋಲಾರದ ಕೋಲಾರಮ್ಮನ ಗುಡಿಗೆ ದೀಪಣ್ಣ ಒಡೆಯರ್ ಎಂಬ ಅಧಿಕಾರಿ ಕೈಸಾಲೆ ಕಟ್ಟಿಸಿದನೆಂದು ಊಹೆಯಿದೆ.[1] ವಿಜಯನಗರದ ಕೊನೆಯ ಮೂರು ಘಟ್ಟಕ್ಕೆ ಸೇರಿದ ಸಾಳುವ, ತುಳುವ ಹಾಗೂ ಅರವೀಡು ವಂಶದ ದೊರೆಗಳು ಹೆಚ್ಚಾಗಿ ಶ್ರೀವೈಷ್ಣವರಾಗಿದ್ದರಿಂದ ಬಹುಶಃ, ಶಾಕ್ತಸಾಧಕರಿಗಾಗಲಿ ಶಾಕ್ತಗುಡಿಗಳಿಗಾಗಲಿ ಪ್ರೋತ್ಸಾಹಿಸಿದ ನಿದರ್ಶನ ಕಡಿಮೆ. ಆದರೂ 'ಶ್ರೀ ಬನದ ಮಹಾಂಮಾಯಿ' ಎಂದೇ ಕರೆಯಲ್ಪಡುವ ಬನಶಂಕರಿ ಗುಡಿಗೆ ಅಚ್ಯುತರಾಯನು (1529–42) ಸೇನಾಧಿಪತಿ ಚಿನ್ನಪ್ಪನಾಯಕನಿಗೆ ಬನದ ಮಹಾಮಾಯಿ ಗುಡಿಯ ಜೀರ್ಣೋದ್ಧಾರ ಮಾಡಲು ಆಜ್ಞೆ ಮಾಡುವ (*ಕವಿಶಾಸಂ 9*, ಬನಶಂಕರಿ ಬಾದಾಮಿ 384; ಕ್ರಿ.ಶ.1532) ಹಾಗೂ ಸದಾಶಿವರಾಯನ (1542–70) ಕಾಲದಲ್ಲಿ ಹಡಪದ ಯರಕೃಷ್ಣನಾಯಕನು ಅಮೃತಪಡಿಗೂ ಅಂಗರಂಗ ವೈಭವಕ್ಕೂ ಮಲಪಹಾರಿ ನದಿತೀರದ ದಾಣಕ ಸಿರವೂರನ್ನು ದಾನ ಮಾಡುವ (*ಕವಿಶಾಸಂ 9*, ಬನಶಂಕರಿ ಬಾದಾಮಿ 388; ಕ್ರಿಶ. 1554) ಶಾಸನಗಳನ್ನು ಕಾಣುತ್ತೇವೆ. ಇದು ಪ್ರಭುತ್ವಗಳ ಧಾರ್ಮಿಕ ಉದಾರ ನೀತಿಯ ಜತೆಗೆ ಕುಶಲಕರ್ಮಿ ಸಮುದಾಯಗಳನ್ನು ಉತ್ತೇಜಿಸುವ ವಿಧಾನವೂ ಆಗಿತ್ತೆಂದು ಊಹಿಸಬಹುದು. ವಿಜಯನಗರದ ಆರ್ಥಿಕತೆಯ ಒಂದು ಮೂಲವು ಅರೇಬಿಯ, ಪರ್ಶಿಯಾ, ಚೀನ ಪೋರ್ಚುಗಲ್ ದೇಶಗಳಿಗೆ ರಫ್ತುಮಾಡುವ ವಸ್ತುಗಳಲ್ಲಿ ಜವಳಿ ಮತ್ತು ಕಬ್ಬಿಣದ ಉತ್ಪನ್ನಗಳು ಸೇರಿದ್ದು, ಅದು ನೇಕಾರಿಕೆ ಮತ್ತು ಕಮ್ಮಾರಿಕೆಗಳ ಮೇಲೆ ಅವಲಂಬನೆ ಪಡೆದಿತ್ತು. ಹೀಗಾಗಿ ಶಾಕ್ತೇಯ ಸಮುದಾಯಗಳಾದ ನೇಕಾರ ಮತ್ತು ಕಮ್ಮಾರ ಸಮುದಾಯಗಳ ಕುಲದೇವತೆಗಳಾದ ಬನಶಂಕರಿ ಹಾಗೂ ಕಾಳಿ–ಕಮಠೇಶ್ವರ ಗುಡಿಗಳು ಪ್ರಭುತ್ವದಿಂದ ವಿಶೇಷ ಉತ್ತೇಜನ ಪಡೆದಂತಿದೆ. ಸಮುದಾಯಗಳಿಗೂ ಅವುಗಳ ದೈವಗಳಿಗೂ ನೀಡುವ ಪ್ರಭುತ್ವ ಕೊಡುವ ಈ ಉತ್ತೇಜನವು ಅದರ ಆರ್ಥಿಕ ನೀತಿ ಮತ್ತು ಸನ್ನಿವೇಶ ಬದಲಾದಂತೆ ಏರುಪೇರಾಗುವುದು. ಈ ಹಿನ್ನೆಲೆಯಲ್ಲಿ, ಹಂಪಿಯ ಸುತ್ತಮುತ್ತ ಗುಡಿಯಿಂದ ಹೊರಗೆ ಬಿದ್ದ ಭಗ್ನರೂಪಿ ಭೈರವ ಹಾಗೂ ಶಕ್ತಿದೇವತೆಗಳ ಮೂರ್ತಿಗಳೇಕೆ ಚೆಲ್ಲಾಡಿವೆ, ವೈಷ್ಣವ ಮತಾವಲಂಬಿ ದೊರೆಗಳ ಕಾಲದಲ್ಲಿ ಸಂಭವಿಸಿದ ಶೈವ–ವೈಷ್ಣವರ ಪಂಥೀಯ ಘರ್ಷಣೆಯ ಫಲವೇ, ಈ ಪಂಥಗಳು ಪಡೆದುಕೊಂಡ ಅವನತಿಯೇ ಅಥವಾ 1565ರ ಯುದ್ಧದ ಪರಿಣಾಮವೇ, ಎಂಬ ಪ್ರಶ್ನೆಗಳನ್ನು ಬಿಡಿಸಬೇಕಿದೆ.

ಸಾಮಾನ್ಯವಾಗಿ ಯುದ್ಧದಲ್ಲಿ ಸೋತ ಪ್ರಭುತ್ವಗಳು ಗೆದ್ದ ಪ್ರಭುತ್ವಗಳ ಧರ್ಮವನ್ನು ಅನುಸರಿಸುವ ಒತ್ತಡ ಏರ್ಪಡುತ್ತಿತ್ತು. ಇದಕ್ಕೆ ರಟ್ಟರ ಪಂಥಾಂತರವು ಸಾಕ್ಷಿ. ಪದ್ಮಾವತಿ ಯಕ್ಷಿಯ ಆರಾಧಕರಾಗಿದ್ದ ಸವದತ್ತಿಯ ರಟ್ಟರು ಮೂಲತಃ ಜೈನರು. ಜೈನವು ಸವಣ

ಪ್ರಧಾನವಾದರೂ ಪದ್ಮಾವತಿಯ ಕಾರಣದಿಂದ ಶಾಕ್ತತನ ಪಡೆದಿತ್ತು. ರಟ್ಟರ ಮುಮ್ಮಡಿ ಕಾರ್ತವೀರ್ಯನು (1120–88) ಶೈವರಾದ ಕಲ್ಯಾಣ ಚಾಲುಕ್ಯರ ಮುಮ್ಮಡಿ ಸೋಮೇಶ್ವರನಿಗೆ ಸೋತಬಳಿಕ, ಪದ್ಮಾವತಿ ಬಸದಿಯು ರೇಣುಕೆ ಎಲ್ಲಮ್ಮನ ಗುಡಿಯಾಗಿ ರೂಪಾಂತರ ಪಡೆಯಿತು. (ಈಗಲೂ ಅದರ ಅರ್ಚಕರು ಲಿಂಗಾಯತರು.) ಇತಿಹಾಸಕಾರರ ಪ್ರಕಾರ, ಕಾರ್ತವೀರ್ಯ ಎಂಬುದು ರಟ್ಟರ ಕುಲನಾಮ. ಸೋತ ರಟ್ಟರು ಎಲ್ಲಮ್ಮನನ್ನು ದೈವವಾಗಿ ಒಪ್ಪಿಕೊಂಡರು. ಇದರ ಪರಿಣಾಮವೇ ಉತ್ತರ ಕರ್ನಾಟಕದಲ್ಲಿರುವ ಕಾರ್ತವೀರ್ಯಾರ್ಜುನನ ಆರಾಧನೆ ಮಾಡುವ ಭಾವಸಾರ ಕ್ಷತ್ರಿಯ ಸಮುದಾಯ. ಈ ಪಲ್ಲಟವೇ ಜಮದಗ್ನಿಯನ್ನು ಕಾರ್ತವೀರ್ಯಾರ್ಜುನ ಕೊಲ್ಲುವ ಮತ್ತು ಪರಶುರಾಮನು ಅಪ್ಪನ ಕೊಲೆ ಸೇಡನ್ನು ತೀರಿಸಿಕೊಳ್ಳುವ ಮಿತ್ ಹುಟ್ಟಲು ಕಾರಣವಾಯಿತು.[2] ಪ್ರಭುತ್ವವೊಂದರ ರಾಜಕೀಯ ಸೋಲುಗೆಲುವುಗಳು ಗುಡಿಯ ಮೂರ್ತಿಪಲ್ಲಟವನ್ನು ಮಾತ್ರವಲ್ಲ, ದೊರೆ ಮತ್ತು ಸಮುದಾಯಗಳ ಧಾರ್ಮಿಕ ಚಹರೆಯನ್ನೂ ಬದಲಿಸಬಲ್ಲವು.

ತಾತ್ವಿಕವಾಗಿ ವಿಭಿನ್ನವಾಗಿರುವ ಪಂಥಗಳನ್ನು ಪ್ರಭುತ್ವವು ಏಕಕಾಲಕ್ಕೆ ಮನ್ನಿಸುವ ನಿದರ್ಶನಗಳು ಕದಂಬ, ಚಾಲುಕ್ಯ ಹಾಗೂ ವಿಜಯನಗರಗಳ ಆಳ್ವಿಕೆಯಲ್ಲಿ ಸಾಕಷ್ಟು ಸಿಗುತ್ತವೆ. ಪ್ರಭುತ್ವವು ಜನಪ್ರಿಯ ಸ್ಥಳೀಯ ದೈವಗಳನ್ನು ಪುರಸ್ಕರಿಸುವ ಮತ್ತು ಪಾಲಿಸುವ 'ರಾಜಧರ್ಮ' ಅನುಸರಿಸುತ್ತಿತ್ತು. ಈ ಹಿನ್ನೆಲೆಯಲ್ಲಿ ಶ್ರೀವೈಷ್ಣವರಾದ (ಅವರ 'ಕೃಷ್ಣ' 'ನರಸ'ಪ್ರಧಾನ ಹೆಸರುಗಳು ಗಮನಾರ್ಹ) ಮೈಸೂರಿನ ಒಡೆಯರು ಶಾಕ್ತರಾಗಿ ಪಂಥಾಂತರ ಮಾಡಿದಂತಿದೆ. ಅದರಲ್ಲೂ 19ನೇ ಶತಮಾನದ ಬಳಿಕ ಅವರು ಸ್ಥಳೀಯ ದೈವವಾಗಿದ್ದ ಚಾಮುಂಡಿ ಗುಡಿಗೆ ನಿರಂತರವಾಗಿ ಗೋಪುರ ನಿರ್ಮಾಣ, ಜೀರ್ಣೋದ್ಧಾರ, ಆಭರಣ ಅರ್ಪಣೆ, ವಾರ್ಷಿಕ ಪೊಗದಿ ನಿಶ್ಚಯಿಸುವಿಕೆ, ಭೂದಾನ –ಮುಂತಾದ ಸೇವೆ ಮಾಡುತ್ತ ಬಂದುದಕ್ಕೆ ದಾಖಲೆಗಳು (*ಎಕ–5;* ಮೈಸೂರು 135–156; ಕ್ರಿ.ಶ 18–19) ಸಿಗುತ್ತವೆ. ಇದು ಟಿಪ್ಪುವಿನಿಂದ ರಾಜ್ಯ ವಶಪಡಿಸಿಕೊಂಡ ಬ್ರಿಟಿಶರು ಒಡೆಯರಿಗೆ ಹಸ್ತಾಂತರಿಸದೆ ತಮ್ಮ ವಶದಲ್ಲಿಟ್ಟುಕೊಂಡ ಕಾಲಘಟ್ಟವಾಗಿದ್ದು, ಒಡೆಯರ ರಾಜಕೀಯ ಅಸ್ಥಿರತೆಗೂ ಈ ಹರಕೆ–ಸೇವೆಗಳಿಗೂ ಸಂಬಂಧವಿರಬಹುದು. ಮುಮ್ಮಡಿ ಕೃಷ್ಣರಾಜ ಒಡೆಯರ್ (1799–1831) ವೈಯಕ್ತಿಕವಾಗಿ ದೇವೀ ಆರಾಧಕರಾಗಿದ್ದು, 'ದೇವೀಮಹಾತ್ಮ್ಯ' 'ದೇವೀಸಾಯುಜ್ಯ ಸೀಸಮಾಲಿಕೆ' ರಚಿಸಿದರು; ಕೊನೆಯ ದೊರೆ ಚಾಮರಾಜ ಒಡೆಯರ್ (1940–50) ತಂತ್ರಸಾಧಕರಾಗಿದ್ದು, ದೇವೀಸ್ತೋತ್ರಗಳನ್ನು ರಚಿಸಿದರು. ಈ ಹಿನ್ನೆಲೆಯಲ್ಲಿ ಆಸ್ಥಾನ ವಿದ್ವಾಂಸರಾದ ಬಸವಪ್ಪ ಶಾಸ್ತ್ರಿಗಳು 'ಕಾಯೌ ಶ್ರೀಗೌರಿ' ಎಂದು ಆರಂಭವಾಗುವ ಮೈಸೂರು ರಾಜ್ಯದ ನಾಡಗೀತೆ ರಚಿಸಿದ್ದನ್ನು ಅರ್ಥಮಾಡಿಕೊಳ್ಳಬೇಕಿದೆ. ಅದೊಂದು ಶಾಕ್ತಗೀತೆಯೂ ಆಗಿತ್ತು.

ಪ್ರಭುತ್ವದ ಪಾಂಥಿಕ ಒಲವುಗಳನ್ನು ದೊರೆ ಸಾಮಂತ ದಂಡನಾಯಕರ ಬಿರುದಾವಳಿಗಳೂ ಕೆಲಮಟ್ಟಿಗೆ ಸೂಚಿಸಬಲ್ಲವು. ರಾಜಪ್ರಭುತ್ವದಲ್ಲಿ ದೊರೆಗಳು ನಿರ್ದಿಷ್ಟ ದೇವತೆಗೆ ಅಥವಾ ಪಂಥಕ್ಕೆ ನಿಷ್ಠೆ ಘೋಷಿಸಿಕೊಳ್ಳುವುದು ಸಾಮಾನ್ಯವಾಗಿತ್ತು. ಈ ಹಿನ್ನೆಲೆಯಲ್ಲಿ ಚಾಲುಕ್ಯರು ತಮ್ಮನ್ನು ಕಲ್ಯಾಣ ಚಾಲುಕ್ಯರು 'ಭಗವತಿ ಪ್ರಸಾದ ಲಬ್ಧರ್' (*ಕವಿಶಾಸಂ 1;* ಹೊಳಲು: ಹಡಗಲಿ 39; ಕ್ರಿ.ಶ. 1178) ಎಂದು ಕರೆದುಕೊಂಡರು.

ಮುಂದೆ ರಾಜರು ತಮ್ಮ ಪ್ರದೇಶದ ಇಲ್ಲವೇ ಕುಲದೇವತೆಯ 'ಲಬ್ಧವರ ಪ್ರಸಾದ'ರೆಂದು ಕರೆದುಕೊಳ್ಳುತ್ತ ಹೋದುದನ್ನು ಕಾಣುತ್ತದೆ. ಕೆಲವು 'ಲಬ್ಧಪ್ರಸಾದ' ಬಿರುದುಗಳು ಹೀಗಿವೆ: 'ಕಾತ್ಯಾಯನೀದೇವಿ ಲಬ್ಧವರಪ್ರಸಾದ' (ಮಲ್ಲುಗಿದೇವನ ಮಾಂಡಲಿಕ ಚಾಮುಂಡರಸ, ಕ್ರಿ.ಶ.12ನೇ ಶತಮಾನ); 'ಚಾಮುಂಡಿದೇವಿ ಲಬ್ಧ ವರಪ್ರಸಾದ' (ವಿಕ್ರಮಾದಿತ್ಯನ ಸಾಮಂತ ಡಾಕರಸ, ಕ್ರಿ.ಶ.12ನೇ ಶತಮಾನ); 'ಪದ್ಮಾವತೀದೇವಿ ಲಬ್ಧವರಪ್ರಸಾದ' (ಕಲ್ಯಾಣಿ ಚಾಲುಕ್ಯರ ಕಲಿಯಮ್ಮರಸ, ಕ್ರಿ.ಶ.11ನೇ ಶತಮಾನ; ಪಾಂಡ್ಯರ ಮಹಾಮಂಡಲೇಶ್ವರ ಗಂಗರಸ, ಕ್ರಿ.ಶ.12ನೇ ಶತಮಾನ); 'ಕೇದಾರದೇವಿ ದಿವ್ಯಶ್ರೀಪಾದಾರಾಧಕ' (ಕಲ್ಯಾಣ ಚಾಲುಕ್ಯರ ಮಹದೇವ ದಂಡನಾಯಕ, ಕ್ರಿ.ಶ.13ನೇ ಶತಮಾನ); 'ಉಚ್ಚಂಗಿದೇವಿ ಲಬ್ಧವರಪ್ರಸಾದಿ' (ಅಸಗೋಡಿನ ಪಲ್ಲವ ಸಾವಂತ ಕ್ರಿ.ಶ.13ನೇ ಶತಮಾನ); "ಮಾಳತೀದೇವಿ ಲಬ್ಧವರ ಪ್ರಸಾದರ್" (ಕುರಗೋಡಿನ ಸಿಂಧರು 12ನೇ ಶತಮಾನ); 'ಪದ್ಮಾವತೀ ಚರಣ ಸರೋಜಭೃಂಗ' (ಸೇನವಾರರು).[3] ಈ ಪಾಂಥಿಕ ಬಿರುದುಗಳನ್ನು ಗಮನಿಸಿದರೆ, ತಮ್ಮನ್ನು ವೇದಮತಾಚಾರ್ಯ, ಪರಮಭಾಗವತ, ವೈದಿಕಮಾರ್ಗ ಪ್ರವರ್ತಕ, ಶೈವಾಗಮ ಸಾರಸಂಪನ್ನ, ಶ್ರೀವೈಷ್ಣವಮತ ಪ್ರತಿಷ್ಠಾಪಕ, ವೇದಶಾಸ್ತ್ರಪುರಾಣಾಗಮಾದಿ ಪ್ರವರ್ತಕ, ಅದ್ವೈತಮತ ಪ್ರತಿಷ್ಠಾಪಕ ಎಂದು ಹೆಮ್ಮೆಯಿಂದ ಸಾರಿಕೊಂಡ ದೊರೆಗಳಿರುವಷ್ಟು ಪ್ರಮಾಣದಲ್ಲಿ, ಶಾಕ್ತಪರವೆಂದು ಘೋಷಿಸಿಕೊಂಡವರು ಕಾಣುವುದಿಲ್ಲ. ದೇವತೆಗೆ ಭಕ್ತಿತೋರುವುದು ಬೇರೆ, ಒಂದು ಪಂಥಕ್ಕೆ ನಿಷ್ಠೆ ತೋರುವುದು ಬೇರೆ.

– 3 –

ಆಡಳಿತ ಮಾಡುವ ದೊರೆಗಳಿಗೆ ಪರ್ಯಾಯವಾಗಿ ರಾಣಿಯರ ಅನಧಿಕೃತ ಧಾರ್ಮಿಕ ನೀತಿಯೂ ಇರುತ್ತಿತ್ತು. ರಾಣಿಯರು ನಿರ್ದಿಷ್ಟ ದೈವ-ದೇವತೆ ಮತ್ತು ಮತಪಂಥಗಳನ್ನು ವೈಯಕ್ತಿಕ ವರ್ಚಸ್ಸು ಮತ್ತು ಪ್ರಭಾವದ ನೆಲೆಯಲ್ಲಿ ಪೋಷಿಸುತ್ತಿದ್ದರು. ಸ್ವತಃ ಶಕ್ತಿದೇವತೆಗಳ ಹೆಸರಿನ ಬಿರುದನ್ನು ಹೊಂದಿದ್ದರು. ನಿದರ್ಶನಕ್ಕೆ- ಪರಮೇಶ್ವರಿ (ರಾಷ್ಟ್ರಕೂಟರ ರಾಣಿ ಶೀಲಮಹಾದೇವಿ, ಕ್ರಿ.ಶ.8ನೇ ಶತಮಾನ); ಕಲಿಕಾಲಗೌರಿ (ಪದ್ಮಬ್ಬರಸಿ, 2ನೇ ಬೂತುಗನರಾಣಿ, ಕ್ರಿ.ಶ.10ನೇ ಶತಮಾನ); ಪರಮಮಹೇಶ್ವರಿ (ಕಂಚಳಬ್ಬೆ, ಕ್ರಿ.ಶ.10ನೇ ಶತಮಾನ; ಸುಗ್ಗಲೆ ಕ್ರಿ.ಶ. 12ನೇ ಶತಮಾನ); ಗೌರೀಪದಾಂಬುಜಾರಾಧಕಿ (6ನೇ ವಿಕ್ರಮಾದಿತ್ಯನ ಮಡದಿ ಚಂದಲದೇವಿ, ಕ್ರಿ.ಶ.11ನೇ ಶತಮಾನ); ಕಲಿಕಾಲಪಾರ್ವತಿ (ವಿಕ್ರಮಾದಿತ್ಯನ ರಾಣಿ ಜಾಕಲದೇವಿ, ಕ್ರಿ.ಶ.11ನೇ ಶತಮಾನ). ಗಮನಿಸಬೇಕಾದ ಅಂಶವೆಂದರೆ, ರಾಜರು ದೇವತೆಗಳ ಲಬ್ಧಪ್ರಸಾದರಾದರೆ, ರಾಣಿಯರು ತಮ್ಮನ್ನು ಶಕ್ತಿದೇವತೆಗಳ ಜತೆಗೆ ಸಮೀಕರಿಸಿಕೊಂಡಿರುವುದು. ಈ ಬಿರುದುಗಳನ್ನು ಅವರು ಶಾಕ್ತಮತಕ್ಕೆ ಉತ್ತೇಜನ ನೀಡಿದ್ದರ ಪುರಾವೆ ಎಂದು ಪರಿಗಣಿಸುವುದು ಕಷ್ಟ. ಆದರೆ ಹೆಚ್ಚಿನ ರಾಣಿಯರು ಶಕ್ತಿ ದೈವ-ದೇವತೆಗಳಿಗೆ ಭಕ್ತಿ ಸಲ್ಲಿಸುತ್ತಿದ್ದವರು. ಉತ್ತನಹಳ್ಳಿ ಮಾರಮ್ಮನಿಗೆ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಪತ್ನಿ ಮುದ್ದಲಿಂಗಮ್ಮನವರು 'ಶ್ಯಾವೆ' ಸಲ್ಲಿಸಿದ (*ಎಕ-5*: ಮೈಸೂರು 145; ಕ್ರಿಶ. 1857); ದೇವಾಜಮ್ಮಣ್ಣಿ ಸೀತಾವಿಲಾಸ ಸನ್ನಿಧಾನದಿಂದ ಮೂಗೂರು ತ್ರಿಪುರಸುಂದರಿ ಅಮ್ಮನಿಗೆ ಬೆಳ್ಳಿಕುಂಭದ ಅರ್ಪಣೆ ಮಾಡಿದ (*ಎಕ-5*: ಮೈಸೂರು 90: 19ನೇ ಶತಮಾನ) ದಾಖಲೆಗಳನ್ನು ಗಮನಿಸಬಹುದು. ರಾಣಿಯರ ಜತೆ ಧನಿಕ

ಕುಟುಂಬಗಳಿಂದ ಬಂದ ಮಹಿಳೆಯರೂ ಸೇವೆ ಸಲ್ಲಿಸುತ್ತಿದ್ದರು. ಕಲ್ಯಾಣಿ ಚಾಲುಕ್ಯ ಆಹವಮಲ್ಲನ ಆಳ್ವಿಕೆಯಲ್ಲಿ ಕಂಚಗಾರ ಬೆಳಗಲ್ಲು ಗ್ರಾಮದ ರೇವಲದೇವಿಯು ಬಳಾರಿಗೆ ಆರು ಮತ್ತರಷ್ಟು ಭೂಮಿಯನ್ನು ದಾನಮಾಡಿದ (*ಕಪಿಶಾಸಂ 1;* ಸಿರುಗುಪ್ಪ 38; ಕ್ರಿ.ಶ. 981); ಮೂಗೂರು ದುಬ್ಬಮ್ಮನಿಗೆ ಮಾಳಕ್ಕ ಎಂಬುವಳು ಸೇವೆ ಸಲ್ಲಿಸಿದ (*ಎಕ 5;* ಮೈಸೂರು 283; ಕ್ರಿ.ಶ. 10ನೇ ಶತಮಾನ) ಶಾಸನಗಳಿವೆ. ವಿಶೇಷವೆಂದರೆ, ಚಿಕ್ಕೆರೂರಿನ ಶಾಸನದಲ್ಲಿ (ಕ್ರಿ.ಶ.995) ಅರಸಕ್ಕ ಎಂಬುವಳು ಬಳರಿಯ ಗುಡಿಯನ್ನು 'ಪಕಸಟ್ಟುಗಮುಂಡು ಬಳರಿಯಂ ಪ್ರತಿಷ್ಠೆಗೆಯಿ'ಸುವುದು.[4] ಈಕೆ ಗುಡಿಕಟ್ಟಿಸಲು ಬೇಕಾದ ದ್ರವ್ಯಸಂಗ್ರಹಕ್ಕಾಗಿ ತನ್ನ ಊಟದ ನಿಯಂತ್ರಣ ಮಾಡುವುದು ಅವಳ ಆರ್ಥಿಕತೆಯನ್ನೂ ಉತ್ಕಟನಿಷ್ಠೆಯನ್ನೂ ಸೂಚಿಸುತ್ತಿದೆ. ರಾಣಿಯರ ಇಲ್ಲವೇ ಧನಿಕ ಮಹಿಳೆಯರ ಶಾಕ್ತಸೇವೆಗಳ ಹಿಂದೆ ಆಡಳಿತಾತ್ಮಕ ಕಾರಣಗಳಿಗಿಂತ ಗಂಡನ ಆಯುಷ್ಯ, ಸಂತಾನ, ಮಕ್ಕಳ ಆರೋಗ್ಯ ಮುಂತಾದ ಕೌಟುಂಬಿಕ ಆಶಯಗಳು ಮುಖ್ಯವಾಗಿರುತ್ತಿದ್ದವು. ಶಾಕ್ತವೆಂಬುದು ಸಾಮಾಜಿಕವಾಗಿ ಕೆಳಸ್ತರದವರ ಮತವೆಂಬ ಗ್ರಹಿಕೆ ವ್ಯಾಪಕವಾಗಿದ್ದ ಕಾಲದಲ್ಲಿ, ಸಾಮಾಜಿಕ ಪ್ರತಿಷ್ಠೆಯನ್ನು ಮುಖ್ಯವಾಗಿಸಿಕೊಳ್ಳದ ಮಹಿಳೆಯರು ಶಾಕ್ತದೈವಗಳ ಜತೆ ಗುರುತಿಸಿಕೊಂಡರು.

ಸಾಮಾನ್ಯವಾಗಿ ಚಕ್ರವರ್ತಿ-ದೊರೆಗಳು ಪ್ರತಿಷ್ಠಿತ ಮತಗಳನ್ನೂ ಮಾಂಡಲಿಕರು-ಅಧಿಕಾರಿಗಳು-ರಾಣಿಯರು ಶಾಕ್ತದಂತಹ ಅಪ್ರತಿಷ್ಠಿತ ಮತಪಂಥಗಳನ್ನೂ ಪೋಷಿಸಿರುವುದು ಕಾಣುತ್ತದೆ. ಸೋದೆಯ ಇಮ್ಮಡಿ ಸದಾಶಿವನಾಯಕನು (1696-1702) ಮಾರಿಕಾಂಬೆಯ ಗುಡಿ ಕಟ್ಟಿಸಿ ಅದಕ್ಕೆ ಅಮೃತಪಡಿ (ಭತ್ತ) ಕೊಡುವ ಪದ್ಧತಿ ಜಾರಿಗೆ ತಂದನು; ಕರಾವಳಿಯಲ್ಲಿ ಕಡಬ ಸಂಸ್ಥಾನವು ಶಾಕ್ತಾಚರಣೆಗೆ ಪ್ರೋತ್ಸಾಹ ನೀಡಿದ್ದಾಗಿ ತಿಳಿದುಬರುತ್ತದೆ. ಕೆಳಮಟ್ಟದ ಮಾಂಡಲಿಕರು ಮತ್ತು ಅಧಿಕಾರಿಗಳು ಸ್ಥಳೀಯ ಅಗತ್ಯಗಳಿಗೆ ಅನುಸಾರವಾಗಿ ಧಾರ್ಮಿಕ-ಆರ್ಥಿಕ ನಿರ್ಣಯ ತೆಗೆದುಕೊಳ್ಳುತ್ತಿದ್ದರೂ, ಅದಕ್ಕೆ ಕೇಂದ್ರ ಪ್ರಭುತ್ವದ ಸಮ್ಮತಿ ಪಡೆಯಬೇಕಾಗುತ್ತಿತ್ತು. ಹೀಗಾಗಿಯೇ ತಮ್ಮ ಧಾರ್ಮಿಕ ಸೇವೆಯನ್ನು ಅವರು ದೊರೆಯ ಉಲ್ಲೇಖದೊಂದಿಗೇ ಮಾಡಿರುವರು. ಸ್ಥಳೀಯ ಅಧಿಕಾರಿಗಳ ಉಪಕ್ರಮವು ರಾಜ್ಯದ ವಿಭಿನ್ನ ಸಮುದಾಯ ಮತ್ತು ಪ್ರದೇಶಗಳ ಅಗತ್ಯಗಳನ್ನು ಸಂತೃಪ್ತಗೊಳಿಸುವಂತಿದ್ದರೆ ಅದಕ್ಕೆ ಕೇಂದ್ರ ಪ್ರಭುತ್ವವು ಅಡ್ಡಿ ತರುತ್ತಿರಲಿಲ್ಲವೆಂದು ತೋರುತ್ತದೆ. ಕೇಂದ್ರಪ್ರಭುತ್ವದ ಸ್ತರದಿಂದ ಬರುವ ದಾನಗಳು ಹೆಚ್ಚಾಗಿ ಅಗ್ರಹಾರಗಳಿಗೆ ಹೋದರೆ, ಮಾಂಡಲಿಕರು ಸಂಸ್ಥಾನಿಕರು ತುಂಡರಸರು ಕೊಡುವ ಮಾನ್ಯಗಳು ಸ್ಥಳೀಯ ಸಮುದಾಯಗಳ ಕೆರೆ ಬಾವಿ ನಿರ್ಮಾಣದಂತಹ ಲೋಕೋಪಯೋಗಿ ಕೆಲಸಗಳಿಗೆ ಬಳಕೆಯಾಗಿವೆ. ಈ ಹಿನ್ನೆಲೆಯಲ್ಲಿ ಉಜ್ಜನಿಯಲ್ಲಿ ವಿಜಯನಗರದ ವೀರಪ್ರತಾಪರಾಯನ ಕಾಲದಲ್ಲಿ ಹೊಯ್ಸಿಸಲಾದ ಶಾಸನವನ್ನು (*ಎಕ 24;* ಕುಣಿಗಲ್ 5; ಕ್ರಿ.ಶ.1429) ನೋಡಬಹುದು. ಇದರಲ್ಲಿ ಯಿಚರಸ ಮಸಣಗೌಡ ಮತ್ತು ಮುತ್ತುಗೌಡ ಎಂಬುವರು ಕೆರೆಯನ್ನು ಕಟ್ಟಿಸಿ ಚೇಮರಸ ಎಂಬ ನೀರಗಂಟಿಗೆ ಉಸ್ತುವಾರಿ ಮಾಡುವ ಹೊಣೆವಹಿಸಿ, ಪ್ರತಿಫಲವಾಗಿ ಗದ್ದೆ 'ಕೊಡಗಿ' ಕೊಟ್ಟು ಮಾಹಿತಿಯಿದೆ. ಶಾಸನವು 'ಶ್ರೀಚಲುಡೇಶ್ವರೀದೇವಿ' ಎಂಬ ಅಂಕಿತದೊಂದಿಗೆ ಮುಗಿಯುತ್ತದೆ. ಕೃಷಿ ಮತ್ತು ನೀರು ಶಾಕ್ತಪಂಥದಲ್ಲಿ ಮುಖ್ಯವಾಗಿದ್ದು, ದೇವಿಯ ಹೆಸರಲ್ಲಿ ಕೆರೆಕಟ್ಟುವುದು ಮತ್ತು ನಿರ್ವಹಿಸುವುದು ಸಾಮಾನ್ಯ ಹರಕೆಯಾಗಿತ್ತು.

ಕರ್ನಾಟಕದಲ್ಲಿ ಶಾಕ್ತದೇವತೆಗಳ ಹೆಸರಲ್ಲಿ ನೂರಾರು ಕೆರೆಗಳಿವೆ. ಅದರಲ್ಲಿ ಬೌದ್ಧಯಕ್ಷಿ ತಾರಾಭಗವತಿಯ ಹೆಸರಲ್ಲಿ ಲಕ್ಕುಂಡಿಯಲ್ಲಿ ಕಟ್ಟಿಸಲಾದ ತಟಾಕವೂ ಸೇರಿದೆ.

ಮಾಂಡಲಿಕರಂತೆಯೇ ಸ್ಥಳೀಯ ಉಳ್ಳವರು ಗುಡಿಕಟ್ಟಿಸುವ, ವಿಸ್ತರಣೆ ಮಾಡುವ, ಜಮೀನು ಬಿಟ್ಟುಕೊಡುವ ಸೇವೆ ಸಲ್ಲಿಸುತ್ತ ಬಂದಿರುವರು. ಮಳಲಿ (ಹಾಸನ) ಗಿಡ್ಡಮ್ಮನ ಗುಡಿಯ ಕಂಬಗಳಲ್ಲಿ 'ಯುದ್ಧಗೌಂಡ ಮುದ್ದೆಗೌಉಂಡ' ಎಂಬ; ದೇವೀಹೊಸೂರಿನ (ಹಿರೇಕೆರೂರ) ಬನಶಂಕರಿ ಗುಡಿಯ ಮಕರತೋರಣದ ಮೇಲೆ 'ಮಾಳಜದೇವಿಗೆ ಅಂಘರಕ್ಕ ಇಂದಪಯ್ಯ ನಾಯಕ' ಎಂಬ (1063) ಉಲ್ಲೇಖಗಳಿವೆ. ಊರಿನ ಸಿರಿವಂತರೂ ದೊಡ್ಡ ಭೂಮಾಲಿಕರೂ ಆದವರು ಕಟ್ಟಿಸಿದ ಗುಡಿ ಮತ್ತು ಬಿಟ್ಟಿರುವ ಭೂಮಿ ದಾಖಲೆಗಳಿವು. ಶಾಸನಗಳಲ್ಲಿರುವ 'ಮರಗಮ್ಮನ ಹೋಡ' 'ದ್ಯಾವಮ್ಮನ ಪಟ್ಟಿ' 'ಚೌಡೇಶ್ವರಿ ಭೂಮಿ' 'ಕಾಳಿಕಬ್ಬೆ ಕೆಯ್' 'ಬಳಾರಿಯ ಮಾನ್ಯ' 'ಭಳಾರಿಗೆ ಭೂಮಿ' 'ಬಾದುಂಬೆಯ ಪಾಳು' ಎಂಬ ಪರಿಭಾಷೆಗಳು, ಸ್ಥಳೀಯ ಮಾಂಡಲಿಕ ಮತ್ತು ಭೂಮಾಲಿಕರ ಭೂಕೊಡುಗೆಗಳನ್ನು ಸೂಚಿಸುತ್ತವೆ. ಇವುಗಳಲ್ಲಿ ಹೆಚ್ಚಿನವು ಜನಪದ ದೈವಗಳಾಗಿವೆ. ಪ್ರಾಚೀನ ಶಾಕ್ತದೈವಗಳಲ್ಲಿ ಜನಪ್ರಿಯವಾದ ಭಳಾರಿಗೆ ಸಂಬಂಧಪಟ್ಟಂತೆ 9 ರಿಂದ 11ನೇ ಶತಮಾನಕ್ಕೆ ಸೇರಿದ ಶಾಸನಗಳು ಸಿಗುತ್ತವೆ. ಇವು ಸಿಗ್ಗಾವಿ (9ನೇ ಶತಮಾನ), ಚಿಕ್ಕೆರೂರು (10ನೇ ಶತಮಾನ), ಕೌಜಗೇರಿ (ರೋಣ, 10ನೇ ಶತಮಾನ), ಬೆಳಗಲಿ (ಬಳ್ಳಾರಿ 10ನೇ ಶತಮಾನ), ಕುಂತೂರು (ಮೈಸೂರು, 10ನೇ ಶತಮಾನ), ನಿಟ್ಟಪಲ್ಲಿ (ರಾಣೆಬೆನ್ನೂರು 10ನೇ ಶತಮಾನ), ಕರಿಯಂಗಲ್ಲು (ಮಂಗಳೂರು 11ನೇ ಶತಮಾನ)ಗಳಲ್ಲಿವೆ. ಸಾಮಾನ್ಯವಾಗಿ ಈ ಭೂಕೊಡುಗೆಗಳನ್ನು ಗುಡಿಯ ಸೇವಾದಾರರಾದ ಕೆಳಜಾತಿಯ ಅರ್ಚಕರೂ ಮಾತಂಗಿಯರೂ ದೇವಿಯ ಮೇಲೆ ಹಾಡುವ ಆಸಾದಿಗಳೂ ಅನುಭವಿಸಿರುವರು. ಇದು ದೊಡ್ಡ ಪ್ರಭುತ್ವಗಳು ಪೌರಾಣಿಕ ದೇವತೆಗಳಿಗೆ ಕೊಟ್ಟ ಉಂಬಳಿಗೂ ಚಿಕ್ಕಪುಟ್ಟ ಭೂಮಾಲಿಕರು ಸ್ಥಳೀಯ ಶಾಕ್ತದೈವಗಳಿಗೆ ಕೊಟ್ಟ ಉಂಬಳಿಗೂ ಇರುವ ಸಮಾಜೊ ಆರ್ಥಿಕ ಆಯಾಮವಾಗಿದೆ.

ತೀರ್ಥಂಕರ ಹಾಗೂ ಸವಣ ಸಂಸ್ಕೃತಿಯವರಾದ ಪದ್ಮಾವತಿ ಯಕ್ಷಿಯ ಆರಾಧನೆಯಿಂದ ಜೈನರಾಜರು ಒಂದು ಬಗೆಯಲ್ಲಿ ಶಾಕ್ತರಾಗಿದ್ದರು. ಮುನಿಗಳು ರಾಜ್ಯನಿರ್ವಹಣೆಯಲ್ಲಿ ಕೊಟ್ಟ ಮಾರ್ಗದರ್ಶನದ ಕಾರಣದಿಂದಲೊ, ತಮಗೆ ದೇವಿಯ ಹರಕೆಯಿಂದ ಸಂತಾನ ಪ್ರಾಪ್ತಿಯಾಯಿತೆಂದೂ ಕೃತಜ್ಞತೆ ಸಲ್ಲಿಸಿರುವರು. ಸಿಂಹನಂದಿಮುನಿ ಪದ್ಮಾವತಿಯ ಹರಕೆಯಿಂದ ಹೊಯ್ಸಳ ವಂಶ ಸ್ಥಾಪನೆಗೆ ನೆರವಾದನೆಂಬ ಮತ್ತು ಪದ್ಮಾವತಿಗೆ ಹರಕೆಹೊತ್ತು ಗಂಗರಾಜ ನನ್ನಿಗಂಗನು ಹೆಮ್ಮಾಡಿದೇವ ಎಂಬ ಮಗನನ್ನು ಪಡೆದನೆಂಬ (ಕ್ರಿ.ಶ. 1122) ಶಾಸನಗಳನ್ನು ಇಲ್ಲಿ ಉಲ್ಲೇಖಿಸಬಹುದು. ಹೊಂಬುಚದಿಂದ ಆಳ್ವಿಕೆ ಮಾಡಿದ ಜಿನದತ್ತರಾಯನಿಗೆ ಪದ್ಮಾವತಿ ದೇವಿ ಹರಸಿದ ಮಿತ್ ಈ ದೃಷ್ಟಿಯಿಂದ ಸ್ವಾರಸ್ಯಕರವಾಗಿದೆ. ಇವನ್ನು ನಿರ್ದಿಷ್ಟ ಪಂಥದ ಜತೆಗೆ ಲಗತ್ತಿಸಿಕೊಳ್ಳಲು ಪ್ರಭುತ್ವ ಅಥವಾ ಆಳುವ ವರ್ಗವನ್ನು ಅಧೀನದಲ್ಲಿಟ್ಟುಕೊಳ್ಳುವ ಭಾಗವಾಗಿ ಪಂಥಗಳು ಕಟ್ಟಿರುವ ಸಾಧ್ಯತೆಯಿದೆ.

ಸ್ಥಳೀಯ ಶಾಕ್ತದೈವಗಳ ಜತೆ ಸುಲ್ತಾನರ ಸಂಬಂಧಗಳು ಸ್ವಾರಸ್ಯಕರವಾಗಿವೆ. ಇಲ್ಲಿ ಸುಲ್ತಾನರ ಪರ ಮತ್ತು ವಿರುದ್ಧವಾದ ಮಿತ್‌ಗಳು ಸಿಗುತ್ತವೆ. ಹುಲಿಗಿಯ ಹುಲಿಗೆಮ್ಮನಿಗೆ ಟಿಪ್ಪುಸುಲ್ತಾನ ಮುತ್ತಿನದಂಡೆ ಅರ್ಪಿಸಿರುವ ಐತಿಹ್ಯವು ಇದರಲ್ಲಿ ಒಂದು. ಸುಲ್ತಾನರು ತಮ್ಮ ಸೈನ್ಯದ ಅಥವಾ ಅಧಿಕಾರಿಗಳ ಧಾರ್ಮಿಕ ಶ್ರದ್ಧೆಯನ್ನು ರಾಜಧರ್ಮದ ಉದಾರತೆಯ ಭಾಗವಾಗಿಯೊ, ರಾಜ್ಯಾಡಳಿತ ಸುಸೂತ್ರವಾಗಿ ನಡೆಯುವ ಆಡಳಿತಾತ್ಮಕ ತಂತ್ರಗಾರಿಕೆಯಿಂದಲೊ ಮನ್ನಿಸಿರಬಹುದು. ಜನಪದ ಶಾಕ್ತದಲ್ಲಿ ದಿಲ್ಲಿಯು ಅಧಿಕಾರವೆಂದು ಭಾವಿಸಿ, ಅದರ ಪ್ರತಿನಿಧಿಗಳಾದ ಸುಲ್ತಾನರನ್ನು ಸೋಲಿಸಿ ಇಲ್ಲವೇ ಶಕ್ತಿತೋರಿಸಿ ಗೌರವ ಪಡೆಯುವುದು ಸ್ಥಳೀಯ ದೈವಗಳ ಕಥೆಗಳಿವೆ. "ಅಲ್ಲಿ ಇದ್ದೋಳಲ್ಲ ಇಲ್ಲಿ ಇದ್ದೋಳಲ್ಲ, ದಿಳ್ಳೇಲಿದ್ದ ಒಳೆ ಕರಿಯಮ್ಮ ಬುಳ್ಳಯ್ಯನ ಬಲಿದನಂದಾಕೆ ತೆರಿಳ್ಯಾಳೊ" ಎಂಬ ಉತ್ತರ ಕನ್ನಡದಲ್ಲಿ ಸಿಗುವ ಹಾಡನ್ನು ಗಮನಿಸಬಹುದು. ಇದರ ಜತೆಗೆ, ಬಹಳಷ್ಟು ಸಮುದಾಯಗಳು ತಮ್ಮ ಕುಲದ ಆದಿಮ ಮಹಿಳೆಯ ಶೀಲವನ್ನು ಸುಲ್ತಾನನ ಬಲಾತ್ಕಾರದಿಂದ ರಕ್ಷಿಸಿಕೊಳ್ಳಲು ವಲಸೆ ಬರುವಾಗ ದೇವಿ ನೆರವಾದ ಕಥನಗಳನ್ನು ಕಟ್ಟಿಕೊಂಡಿವೆ. ಈ 'ದುಷ್ಟ'ದೊರೆ ಕೆಲವೊಮ್ಮೆ ಕೆಳಜಾತಿಯವನೂ ಆಗಬಲ್ಲನು. ಮಂಡ್ಯ ಸೀಮೆಯ ಕಬ್ಬಾಳಮ್ಮನ ಕತೆಗಳಲ್ಲಿ ಬಲಾತ್ಕಾರ ಮಾಡುವ ದೊರೆ ಕ್ಷೌರಿಕ ಜಾತಿಯವನು. ಈ ಕಥನಗಳಲ್ಲಿ ಪ್ರಭುತ್ವ ವಿರೋಧದ ಆಯಾಮವಿದೆ. ಅದರೊಳಗೆ ಸ್ವಜಾತಿ ಸ್ವಮತಗಳ ಪಾವಿತ್ರ್ಯ ರಕ್ಷಣೆಯ ಆಯಾಮವೂ ತಮ್ಮದಲ್ಲದ ಸಮುದಾಯಕ್ಕೆ ಸೇರಿದವರ ಬಗ್ಗೆ ಜಾತಿಅಸಹನೆಯೂ ಸೇರಿಕೊಂಡಿದೆ.

– 4 –

ಬ್ರಿಟಿಶ್ ಪ್ರಭುತ್ವವು ಶಾಕ್ತಲೋಕದ ನಂಬಿಕೆ ಮತ್ತು ಆಚರಣೆಗಳಲ್ಲಿ ನಾನಾ ರೀತಿಯಲ್ಲಿ ಮಧ್ಯಪ್ರವೇಶಿಸಿತು. ಅದು ತಾನು ಮಾಡಿಸಿದ ಜನಾಂಗ ಮತ್ತು ಧರ್ಮಗಳ ಅಧ್ಯಯನಗಳಲ್ಲಿ ಶಾಕ್ತ ಕಾಪಾಲಿಕ ಶಾಕ್ತ ಮುಂತಾದ ಪಂಥಗಳನ್ನು ಯೂರೋಪಿಯನ್ ಮತ್ತು ಕ್ರೈಸ್ತ ವೈಚಾರಿಕ ದೃಷ್ಟಿಕೋನದಿಂದ ತುಚ್ಛವಾಗಿ ಕಂಡಿತು.[5] ವಸಾಹತುಶಾಹಿ ಪ್ರಭುತ್ವವು ನರಬಲಿ ಪ್ರಾಣಿಬಲಿ ಇರುವ ದೈವ ಮತ್ತು ಪಂಥಗಳನ್ನು 'ಕ್ರಿಮಿನಲ್' ಎಂದು ಪರಿಗಣಿಸುವ ಮತ್ತು ನಿಷೇಧಿಸುವ ಯತ್ನ ಮಾಡಿತ್ತಷ್ಟೆ. ತಾಂತ್ರಿಕ ಸಾಧನೆಗಳಲ್ಲಿದ್ದ ಲೈಂಗಿಕ ಆಚರಣೆಗಳನ್ನು ಅನಾಗರಿಕವೆಂದು ಜಿಂಜಿಸುವ ಬರೆಹಗಳನ್ನು ಪಾದ್ರಿಗಳು (ಡಬ್ಲ್ಯು ಟಿ. ಎಲ್ಮೋರ್ 1913; ವೈಟ್‌ಹೆಡ್ 1921) ಮಾಡಿದರು. ಬಹಳ ಕಡೆ ಪಾದ್ರಿಗಳು ವಸಾಹತುಶಾಹಿ ವಿದ್ವಾಂಸರಾಗಿ ರೂಪಾಂತರಗೊಳ್ಳುತ್ತಾರೆ ಮತ್ತು ವಸಾಹತುಶಾಹಿ ಪ್ರಭುತ್ವದ ಜತೆ ಏಕೀಭವಿಸುತ್ತಾರೆ. ಕುತೂಹಲಕರವೆಂದರೆ, ಆಂಗ್ಲಪ್ರಭುತ್ವವು ಶಾಕ್ತವನ್ನು ತನ್ನ ಸಾಮ್ರಾಜ್ಯ ವಿಸ್ತರಣೆಯ ಉದ್ದೇಶಕ್ಕೂ ಬಳಸಿಕೊಂಡಿದ್ದು. ಬಂಗಾಳದಲ್ಲಿ ಕಾಳಿ ಮತ್ತು ದುರ್ಗೆಯರ ಬಗ್ಗೆ ಜನರಲ್ಲಿರುವ ಧಾರ್ಮಿಕ ಶ್ರದ್ಧೆಯನ್ನು ಇಂಗ್ಲೆಂಡಿನ ರಾಣಿಗೆ ಲಗತ್ತಿಸಿದ್ದು ಇದಕ್ಕೆ ಸಾಕ್ಷಿ. ಕೊಲ್ಕತ್ತೆಯಲ್ಲಿ (1921) ರಾಣಿಯ ನೆನಪಿಗೆ ಬಂಗಾಳಿ ಭೂಮಾಲಿಕರ ಹಾಗೂ ವ್ಯಾಪಾರಿಗಳ ನೆರವಿನಿಂದ ಕಟ್ಟಿದ ವಿಕ್ಟೋರಿಯ ಮೆಮೋರಿಯಲ್ ಹಾಲ್‌ನ ವಾಸ್ತುವಿನ್ಯಾಸದಲ್ಲಿ ಇದು ವ್ಯಕ್ತವಾಗಿದೆ. ಹಾಲ್‌ನ ಮೇಲ್ಭಾಗದಲ್ಲಿ ರಾಣಿಯು ತನ್ನ ಎದೆಹಾಲನ್ನು ಭಾರತದ ಮಕ್ಕಳಿಗೆ ಕುಡಿಸುತ್ತಿರುವ ಮೂರ್ತಿಶಿಲ್ಪಗಳನ್ನು ನಾಲ್ಕೂ ಕಡೆ ಸ್ಥಾಪಿಸಲಾಯಿತು. ಬ್ರಿಟಿಶರು ಪಂಥಗಳನ್ನು ನೋಡುವ ಬಗೆಯಲ್ಲಿ ಏಕರೂಪತೆಯಿಲ್ಲ. ಯುದ್ಧತಾಂತ್ರಿಕವಾಗಿ ಬಳಸಿಕೊಳ್ಳುವ ಮತ್ತು ನಿಷೇಧಿಸುವ

ಎರಡೂ ಬಗೆಯ ಕಾರ್ಯಾಚರಣೆಯನ್ನು ಅವರು ಮಾಡಿದರು. ಹೀಗೆ ಮಾಡುವಾಗ ಆಯಾ ಪ್ರದೇಶದ ಸಾಂಸ್ಕೃತಿಕ ಲೋಕ ಮತ್ತು ಜನರ ಸ್ವಭಾವಗಳ ಅರಿವನ್ನು ಹೊಂದಿರುತ್ತಿದ್ದರು. ಅವು ಆಡಳಿತದ ಮೇಲೆ ಬೀರಬಹುದಾದ ಪರಿಣಾಮಗಳನ್ನು ಗಮನದಲ್ಲಿ ಇರಿಸಿಕೊಂಡಿರುತ್ತಿದ್ದರು.

ವಿಶೇಷವೆಂದರೆ, ಕನ್ನಡದ ಶಾಕ್ತಜಾನಪದದಲ್ಲಿ ಶಾಕ್ತದೈವಗಳು ಆಂಗ್ಲರನ್ನು ಮುಖಾಮುಖಿ ಮಾಡುವ ಕಥನಗಳಿವೆ. ಅರಸೀಕೆರೆಯ (ಹರಪನಹಳ್ಳಿ) ದಂಡಿನ ದುರುಗಮ್ಮನ ಹಾಡುಗಳಲ್ಲಿ ಪಾರಂಗಿಯರನ್ನು (ಬ್ರಿಟಿಶರನ್ನು) ದುರುಗಿಯರು ಸೋಲಿಸುವ ಅಪರೂಪದ ಪ್ರಸಂಗವಿದೆ.

ಉತ್ತರ ದಿಕ್ಕಿನ್ಯಾಗ ಹುಟ್ಟಿನಾ ಪಾರಾಂಗಿ, ಸೊಕ್ಕಿಲೆ ಎ ಮಾರಾಮಲೆತಾನ
ಕಲ್ಲು ದೇವರು ಒಡ್ಯಾಸಾನ, ಕಟ್ಟಿಗಿ ದೇವರ ಸುಡಿಸ್ಯಾನ, ಅವನಿಗೆ ಯಾ ದ್ಯಾವರು ಇದಿರಿಲ್ಲ
ಆರುಸಾವಿರ ದಂಡು ವಾರಿಲೆ ಕರಕ್ಕೊಡು ಬರತಾನ, ಚಿನ್ನದ ಕ್ವಾಟೆಯ ನಿಂತು ನೋಡ್ಯಾನ

ಪಾರಂಗಿಯವನು ದುರುಗಿಯರ ಮುತ್ತಿನಕೋಟೆಯನ್ನು 'ಕಾಲೀಲೆ ದೂಡುವ' ಉದ್ಧಟತನ ಮಾಡಿದಾಗ, ದುರುಗಿಯರು 'ದುರಗೇರು ಅಂಬೋದು ಅವನಿಗೆ ಅರಿವಿಲ್ಲ. ದಿಟ್ಟಪಾರಂಗಿ ನಿನ್ನ ಗುಟ್ಟಳಿಯದ್ದಿದ್ದರೆ ನಾನು ಮುಕ್ಕಣ್ಣೇಶ್ವರನ ಮಗಳಲ್ಲ' ಎಂದು ಶಪಥ ಮಾಡುವರು. ಪಾರಂಗಿಯನ್ನು ಗೆಲ್ಲಲು ಬಡಿಗೇರರನ್ನು ಕರೆಸಿ ಹಾರುವರಥ ಮಾಡಿಸಿ ಅಂತರದಲ್ಲಿ ನಿಂತು ಕಾಳಗ ಮಾಡುವರು. ಪಾರಂಗಿ ಹತ್ತುಸಾವಿರ ದಂಡಿನೊಂದಿಗೆ ಅಮ್ಮನ ಗಚ್ಚಿನಮಠಕ್ಕೆ ಬಂದು ಬಾಗಿಲು ತೆಗೆಯಲು ಕೇಳಿದಾಗ "ದಿಟ್ಟ ಪಾರಂಗಿ ನನ್ನ ಬಟ್ಟೆಯ ಮುಟ್ಟಿದರೆ ಸೂಲದ ಹಲ್ಲ ಮುರಿದೇನೊ ಚಕ್ಕಡಿಯ ಅಡಿಗೆ ಒಗದೇನೊ" ಎಂದು ಎಚ್ಚರಿಸುವರು. ಕೊನೆಗೆ ಪಾರಂಗಿಯ ಕಣ್ಣುಕಿತ್ತು ಸೋಲಿಸುವರು. ಇಲ್ಲಿನ ಶಕ್ತಿದೈವದ ಹೆಸರಲ್ಲೇ 'ದಂಡು' ಶಬ್ದವಿದ್ದು, ಅದಕ್ಕೆ ಸೈನ್ಯ ಎಂಬರ್ಥವಿರುವ ಹಾಗೆ ಸೈನಿಕಪಾಳ್ಯ (ಕಂಟೋನ್ಮೆಂಟ್) ಎಂಬರ್ಥವೂ ಇದೆ. ಬಳ್ಳಾರಿಯು ದುರುಗಮ್ಮ ದೈವದಿಂದ ಮಾತ್ರವಲ್ಲದೆ, ಬ್ರಿಟಿಶರು ವಸತಿಯಿದ್ದ ದಂಡು ಪ್ರದೇಶವೂ ಆಗಿತ್ತು. ಹಾಡಿನಲ್ಲಿ ದುರುಗಿಯರು ಬಳ್ಳಾರಿ, ಕೋಟೆ, ಬ್ರಿಟಿಶರು, ಕಾಯಿಬಜಾರ ಮತ್ತು ಅಕ್ಕಿಬಜಾರಗಳನ್ನು ಸುಡುವ ಉಲ್ಲೇಖಗಳಿವೆ. ಈ ಕಥನವು ಬಳ್ಳಾರಿಯ ದುರ್ಗಮ್ಮನ ಒಕ್ಕಲುಗಳು ಬ್ರಿಟಿಶರು ಮಾಡಿದ ಯಾವುದೊ ಕೃತ್ಯಕ್ಕೆ ಅಥವಾ ಹೇರಿದ ನಿಯಮಕ್ಕೆ ಮಾಡಿರಬಹುದಾದ ವಿರೋಧದ ನೆನಪಿನಿಂದ ಹುಟ್ಟಿರಬಹುದು.

– 5 –

ಪ್ರಭುತ್ವಕ್ಕೆ ದಾನವು ದೇವತೆಗೆ ವೈಯಕ್ತಿಕನಿಷ್ಠೆ ತೋರುವುದಕ್ಕಿಂತ, ಅವನ್ನು ನಂಬಿದ ವರ್ಗಗಳನ್ನು ತನ್ನ ಪರವಾಗಿಸಿಕೊಳ್ಳುವುದು ಮುಖ್ಯವಾಗಿರುತ್ತದೆ. ಈ ಧಾರ್ಮಿಕ ರಾಜಕಾರಣವು ಆಧುನಿಕ ಕಾಲದಲ್ಲೂ –ಸ್ಥಳೀಯ ರಾಜಕಾರಣಿಗಳು ಜಾತ್ರೆಗಳಲ್ಲಿ ಕೈಮುಗಿದು ಸ್ವಾಗತಕೋರುವ ಫಲಕ ಹಾಕುವ, ಗುಡಿಗೆ ಗೋಪುರ ಇಲ್ಲವೇ ಛತ್ರ ಕಟ್ಟಿಸಿಕೊಡುವ, ಜಾತ್ರೆಯಲ್ಲಿ ಭಕ್ತರಿಗೆ ನೀರು ಆಹಾರ ಸೇವೆಗಳ ರೂಪದಲ್ಲಿ– ಮುಂದುವರೆದಿದೆ. ಧರ್ಮವನ್ನು ಶಕ್ತಿ ರಾಜಕಾರಣದಲ್ಲಿ ಹತ್ಯಾರವಾಗಿ ಬಳಸುವಲ್ಲಿ ಸಾಮಾನ್ಯವಾಗಿ ಬಲಪಂಥೀಯ ಪಕ್ಷಗಳು

ಮುಂದಿರುತ್ತವೆ. ಆದರೆ ಬಂಗಾಳದ ದುರ್ಗಾಪೂಜೆ ಹಾಗೂ ಕೇರಳದ ಭಗವತಿ ಆರಾಧನೆಯ ಸಮಿತಿಗಳಲ್ಲಿರುವ ಕಮ್ಯುನಿಸ್ಟರನ್ನು ಕಂಡರೆ, ಅವರೂ ಹಿಂದೆಬಿದ್ದಿಲ್ಲದಿರುವುದು ತಿಳಿಯುತ್ತದೆ. ಈ ಹಿನ್ನೆಲೆಯಲ್ಲಿ ಆಧುನಿಕ ಸರ್ಕಾರಗಳು ಶಾಕ್ತಲೋಕದಲ್ಲಿ ನಡುಪ್ರವೇಶ ಮಾಡಿರುವ ಬಗೆಯಲ್ಲಿ ಎರಡು ಮಾದರಿಗಳನ್ನು ಗಮನಿಸಬಹುದು. ಅ. ಅರಮನೆಗೆ ಸೀಮಿತವಾಗಿದ್ದ ನವರಾತ್ರಿ ದಸರೆಯನ್ನು ನಾಡಹಬ್ಬವನ್ನಾಗಿ ಮಾಡುವ; ದೇವದಾಸಿಯರಿಗೆ ಪುನರ್ವಸತಿ ಕಲ್ಪಿಸುವ, ಮುಜರಾಯಿ ಇಲಾಖೆಯ ಮೂಲಕ ಜಾತ್ರೆಗಳ ಏರ್ಪಾಟು ಮಾಡುವ ಮೊದಲಾದ ಹೊಸ ಆಚರಣೆಗಳನ್ನು ಹುಟ್ಟುಹಾಕುವುದು. ಆ. ಹಿಂದಿನಿಂದಲೂ ಇದ್ದ ಸಾಂಪ್ರದಾಯಿಕ ಆಚರಣೆಗಳನ್ನು-ಬೆತ್ತಲೆಸೇವೆ, ಪ್ರಾಣಿಬಲಿ, ದೇವದಾಸಿ ಪದ್ಧತಿ ಇತ್ಯಾದಿ- ನಿಷೇಧಿಸುವುದು. ಹೈದರಾಬಾದ್ ನಿಜಾಮ್ ಸರ್ಕಾರವು ಭಗದುರಿ (ಬಸವಕಲ್ಯಾಣ) ಎಲ್ಲಮ್ಮ ಜಾತ್ರೆಯಲ್ಲಿದ್ದ ಬೆತ್ತಲೆಸೇವೆಯನ್ನು ನಿಷೇಧಿಸಿತು. ಆದರೆ ತನ್ನ ಸಂಸ್ಥಾನದಲ್ಲಿದ್ದ ಅರೋಲಿ (ಸಿಂಧನೂರು) ಚುಂಚೂರು (ಆಳಂದ)ಗಳಲ್ಲಿ ಅದನ್ನು ನಿಷೇಧಿಸಲಿಲ್ಲ. ಈ ದ್ವಂದ್ವ ಧೋರಣೆಗೆ ಸ್ಥಳೀಯ ರಾಜಕೀಯ ಕಾರಣಗಳಿರಬಹುದು.[6] ಕರ್ನಾಟಕ ಸರ್ಕಾರವು ಶಾಕ್ತಲೋಕಕ್ಕೆ ಸಂಬಂಧಿಸಿದಂತೆ ಮುತ್ತುಕಟ್ಟು ಅಥವಾ ದೇವದಾಸಿ, ಬೆತ್ತಲೆಸೇವೆ ಹಾಗೂ ಪ್ರಾಣಿಬಲಿ ನಿಷೇಧಿಸುವ ಕಾನೂನು ಹೊರಡಿಸಿತು. ವಿಶೇಷವೆಂದರೆ, ಬೆತ್ತಲೆಸೇವೆಯನ್ನು ಚಂದ್ರಗುತ್ತಿ (1986) ಚಿಂಚೂರ (1979) ಹಾಗೂ ಆರೋಲಿಗಳಲ್ಲಿ (1980) ನಿಲ್ಲಿಸಲು ದಲಿತ ಸಂಘಟನೆಗಳು ಸರ್ಕಾರದ ಜತೆ ಕೈಜೋಡಿಸಿದ್ದು. ಅವು ಅಂಬೇಡ್ಕರ್ ರಚಿತ ಸಂವಿಧಾನದಲ್ಲಿ ವೈಚಾರಿಕತೆ ಮತ್ತು ವೈಜ್ಞಾನಿಕ ಮನೋಭಾವ ಬೆಳೆಸುವ ಆಶಯವನ್ನು ಉಲ್ಲೇಖಿಸಿ, ಬೆತ್ತಲೆಸೇವೆ ಮೌಢ್ಯಕ್ಕೆ ಹಾಗೂ ದಲಿತ ಕೆಳಜಾತಿಯ ಮಹಿಳೆಯರ ಲೈಂಗಿಕ ಶೋಷಣೆಗೆ ಕಾರಣವಾಗಿರುವುದರಿಂದ ಅದನ್ನು ನಿಷೇಧಿಸಬೇಕೆಂಬ ಬೇಡಿಕೆಯನ್ನು ಮುಂದಿಟ್ಟವು. ಶಾಕ್ತಾಚರಣೆಯ ಭಾಗವಾಗಿರುವ ದೇವದಾಸಿ ಪದ್ಧತಿಯು, ಊಳಿಗಮಾನ್ಯ ಪದ್ಧತಿಯಲ್ಲಿ ಬಹುಪತ್ನಿತ್ವದ ಭಾಗವಾಗಿಯೂ ಮಹಾನಗರಗಳಲ್ಲಿ ವೇಶ್ಯಾವಾಟಿಕೆಯ ಭಾಗವಾಗಿಯೂ ರೂಪಾಂತರಗೊಂಡು ಸಾಮಾಜಿಕ ಸಮಸ್ಯೆಯಾಗಿತ್ತು. ಇದರ ವಿರುದ್ಧ ಹುಟ್ಟಿದ ಅಭಿಪ್ರಾಯಗಳು ವೈಚಾರಿಕ ಆಂದೋಲನವಾಗಿ ಮಾರ್ಪಟ್ಟವು. ಪ್ರಜ್ಞಾವಂತ ದಲಿತ ಸಂಘಟನೆಗಳಿಗೆ ದಲಿತ ಸಂಸ್ಕೃತಿಯ ಭಾಗವಾಗಿದ್ದ ಶಾಕ್ತವು ಸಮುದಾಯಗಳ ಬದುಕಿನಲ್ಲಿ ಆಹಾರಸಂಭ್ರಮ ಮತ್ತು ಊಳಿಗಮಾನ್ಯ ವ್ಯವಸ್ಥೆಯ ಪ್ರತಿರೋಧ ಆಗಿರುವುದಕ್ಕಿಂತ, ಅದು ಸಾಮಾಜಿಕ ತಾರತಮ್ಯಗಳ ಭಾಗವಾಗಿರುವುದರ ಅರಿವು ಆಕ್ರೋಶಕ್ಕೆ ಕಾರಣವಾಯಿತು. ನಿಷೇಧವನ್ನು ಬಹುತೇಕ ಶಾಕ್ತಗುಡಿಗಳ ವ್ಯವಸ್ಥಾಪಕರೂ ಜೋಗಿತಿಯರೂ ಭಕ್ತರೂ ಸಾಂಪ್ರದಾಯಿಕ ಭೀತಿಯುಳ್ಳ ಭಕ್ತರೂ ಪ್ರತಿರೋಧ ಮಾಡಿದರು. ಆದರೆ ಪ್ರಜ್ಞಾವಂತ ದಲಿತರ ಬೇಡಿಕೆಗಳನ್ನು ಪ್ರಭುತ್ವವು ಮನ್ನಿಸಿತು. ಅಸ್ಪೃಶ್ಯತೆಯಂತೆ ಜೀವಂತ ಮನುಷ್ಯರನ್ನು ಸಿಡಿಯಾಡುವ ಆಚರಣೆಗಳನ್ನೂ ನಿಷೇಧಿಸಿತು. ಸರ್ಕಾರದ ನೆರವಿನಿಂದ ದೇವದಾಸಿ ನಿರ್ಮೂಲನ ಸಂಸ್ಥೆಗಳು ಹುಟ್ಟಿಕೊಂಡವು. ಇಷ್ಟಾಗಿಯೂ ಮೇಲ್ಜಾತಿಗಳ ಪರವಾಗಿದ್ದ ಶಾಕ್ತಲೋಕದ ಅಸ್ಪೃಶ್ಯತೆ ಆಚರಣೆಗಳನ್ನು ಕೆಲವೊಮ್ಮೆ ಆಳುವ ಪಕ್ಷಕ್ಕೆ ಸೇರಿದ ದಲಿತ ಶಾಸಕ-ಮಂತ್ರಿಗಳಿಗೂ ಅಲುಗಿಸಿಸುವುದು ಕಷ್ಟವಾಗುತ್ತದೆ. ಪ್ರಭುತ್ವದ ಬೆಂಬಲವಿದ್ದರೂ ಜಾತಿನಿಷ್ಠ ಸಮಾಜವು ಅವುಗಳ ಉಲ್ಲಂಘನೆಗೆ ಸುಲಭವಾಗಿ ಒಪ್ಪುವುದಿಲ್ಲ.

ದಲಿತ ರಾಜಕಾರಣಿಗಳಾದರೂ, ಚುನಾವಣೆಯಲ್ಲಿ ಬಹುಸಂಖ್ಯಾತ ಜನರ ಬೆಂಬಲ ಕಳೆದುಹೋಗುವ ಆತಂಕದಿಂದ ಇಂತಹ ನಂಬಿಕೆಗಳ ವಿರುದ್ಧ ಹೋರಾಟಕ್ಕಿಳಿಯಲು ಹಿಂದೇಟು ಹಾಕುವರು. ರಾಜಕೀಯ ಪ್ರಭುತ್ವಕ್ಕಿಂತ ಜಾತಿಪ್ರಭುತ್ವವು ಬಲಶಾಲಿಯಾಗಿರುವ ಹಲವಾರು ನಿದರ್ಶನಗಳು ಸಿಗುತ್ತವೆ.

ಇಲ್ಲಿಯೇ ಆಧುನಿಕ 'ಶಾಕ್ತಸಾಹಿತ್ಯ'ದಲ್ಲಿ ವ್ಯಕ್ತವಾಗುವ ಪ್ರಭುತ್ವ ಕುರಿತ ನಿಲುವುಗಳನ್ನು ಗಮನಿಸಬಹುದು. ರಾಜಭಕ್ತಿಯ ಕವಿಗಳು ದೊರೆಯನ್ನು ಸ್ತುತಿಸುವಾಗ, ದೊರೆಗಳು ನಂಬಿದ ದೈವಗಳನ್ನೂ ಸ್ತುತಿಸುವರು. ಅಲ್ಲಿ ಕವಿಯ ವೈಯಕ್ತಿಕ ಭಕ್ತಿಗಿಂತ ಪ್ರಭುತ್ವದ ಒಲವು ನಿಲುವುಗಳೇ ಪ್ರಧಾನವಾಗಿರುತ್ತವೆ. ಪ್ರಭುವನ್ನು ನಾಡಿನ ಪ್ರತಿನಿಧೀಕರಣವೆಂದು ಭಾವಿಸುವ ಕವಿಗಳು ತಾಯ್ನಾಡು–ತಾಯ್ನುಡಿಗಳನ್ನು ಅವನ ಕುಲದೈವದ ಜತೆಗೆ ಸಮೀಕರಿಸುತ್ತಾರೆ. ಆಸ್ಥಾನ ವಿದ್ವಾಂಸರಾದ ಬಸವಪ್ಪಶಾಸ್ತ್ರಿ, ನಾಡಗೀತೆಯನ್ನು ಒಡೆಯರ ಕುಲದೇವತೆ ಚಾಮುಂಡಿಯನ್ನು ಮನಸ್ಸಲ್ಲಿಟ್ಟುಕೊಂಡು ರಚಿಸುವಾಗ, ದೊರೆಗೂ ದೇವಿಗೂ ಇರುವ ಸಂಬಂಧವನ್ನು ('ಚಾಮನಾಮಾಂಕಿತ ಭೂಮೀಂದ್ರ ಲಲಾಮನ ಮುದದೆ') ಸ್ಪಷ್ಟಪಡಿಸುವರು. ಪ್ರಭುವನ್ನೂ ಶಕ್ತಿದೇವತೆಯನ್ನೂ ಸಮೀಕರಿಸುವ ಹಲವಾರು ರಚನೆಗಳು ಮೈಸೂರು ಭಾಗದ ರಾಜಸೇವಾಸಕ್ತ ಕವಿಗಳಿಂದ ರಚಿತವಾದವು. ಈ ನಾಡಗೀತೆಗಳಲ್ಲಿ ಶಕ್ತಿದೇವತೆಯನ್ನು 'ರಾಜೇಶ್ವರಿ' ಎನ್ನಲಾಗುತ್ತದೆ. ರಾಜೇಶ್ವರಿ ಎಂಬಲ್ಲಿರುವ 'ರಾಜ' ಶಬ್ದ ಸಾಂಕೇತಿಕವಾಗಿದೆ. ಬಿ.ಎಂ.ಶ್ರೀಕಂಠಯ್ಯನವರ 'ಕನ್ನಡ ತಾಯನೋಟ' ಪದ್ಯವು ಒಡೆಯರನ್ನು 'ಶ್ರೀಗೌರಿ ಕಾವಲಿಹ ರಾಯರನುರಕ್ತರು' ಎನ್ನುತ್ತದೆ. ದೊರೆಯನ್ನು ದೇವಿಯ ಜತೆ ಸಮೀಕರಿಸುವುದರಿಂದ, ದೊರೆಗಳ ದೋಷಗಳ ವಿಮರ್ಶೆ ಮಾಡುವುದು ಅಸಾಧ್ಯವಾಗುತ್ತದೆ. ಪದ್ಯದ ನಾಯಕನು 'ಕನ್ನಡಿಗರೊಡತಿ ರಾಜೇಶ್ವರಿ'ಗೆ ಬಾಳ್ ಏಳ್ ಆಳ್ ಎಂದು ವಿನಂತಿಸುವನು. ಇದೊಂದು ಬಗೆಯಲ್ಲಿ ರಾಜ್ಯನಿಷ್ಠೆಗೆ ಕೊಡುವ ವೀರತ್ವದ ಕರೆಯೂ ಹೌದು. ನುಡಿ, ನಾಡು ಹಾಗೂ ಜನ ಹಾಗೂ ದೊರೆಯನ್ನು ಪದ್ಯವು ಒಂದು ದೈವಿಕ ಚೌಕಟ್ಟಿನಲ್ಲಿ ಬಂಧಿಸುತ್ತದೆ. ರಾಜಸೇವಾಸಕ್ತರಲ್ಲದೆ ಹೋದರೂ ಶಾಂತಕವಿ ('ರಕ್ಷಿಸು ಕರ್ಣಾಟಕ ದೇವಿ') ಹಾಗೂ ಬೆನಗಲ್ ರಾಮರಾಯರು ('ಕನ್ನಡಾಂಬೆಯ ಹಿರಿಮೆ') ಶಕ್ತಿದೇವಿಸ್ತುತಿಯ ಮಾದರಿಯಲ್ಲಿ ಕರ್ನಾಟಕವನ್ನಾಳಿದ ರಾಜಮನೆತನಗಳ ಪಟ್ಟಿಕೊಡುವರು.

> **ಕದಂಬಾದಿ ಸಂಪೂಜಿತ ಚರಣೆ ಗಂಗಾರಾಧಿಕ ಪದನಖ ಸರಣೆ**
> **ಚಲುಕ್ಯರುತ್ತಮ ಕಾಂಚೀ ಕಿರಣೆ ರಾಷ್ಟ್ರಕೂಟ ಮಣಿಕಂಠಾಭರಣೆ**
> **ಚಾಲುಕ್ಯಾಂಶುಕ ಶೋಭವರಣೆ, ಯಾದವಮಣಿ ಕಂಕಣಾಂಶು ಸುಂದರ**
> **ಬಲ್ಲಾಳರ ಭುಜಭೂಷಣ ಬಂಧುರೆ ವಿಜಯನಗರ ಮಂಗಲಮಣಿ ಕಂಧರೆ**

ಈ ಮಾದರಿಯು ಕುವೆಂಪು ರಚಿತ ನಾಡಗೀತೆಯಲ್ಲೂ ಇದೆ. ಆದರೆ ಈ ಯಾವ ನಾಡುನುಡಿ ಕುರಿತ ಗೀತೆಗಳಲ್ಲಿರುವ ರಾಜರ ಪಟ್ಟಿಯಲ್ಲಿ ಸುಲ್ತಾನರ ಉಲ್ಲೇಖವಿಲ್ಲ. ಕುತೂಹಲಕರವೆಂದರೆ, ಕುವೆಂಪು ಅವರ ನಾಡಗೀತೆಯ ಮೊದಲನೇ ಕರಡಿನಲ್ಲಿ (1924) ಹೈದರ್ ಮತ್ತು ಟಿಪ್ಪುವಿನ ಹೆಸರಿದ್ದು, ಅದು ಪರಿಷ್ಕರಣೆಗೊಂಡಾಗ ಅವು ಕೈಬಿಟ್ಟುಹೋದವು.[7] ಬೆನಗಲ್ ರಾಮರಾಯರ ಕನ್ನಡಾಂಬೆ ಕುರಿತ ಕವನಗಳಲ್ಲಿ ಕವನದ ನಾಯಕನು 'ಭುವನೇಶ್ವರಿ'ಯನ್ನು ನಾಲ್ವಡಿ ಕೃಷ್ಣರಾಜರ ಜತೆ ('ಕೃಷ್ಣನಾಶ್ರಯ')

ಸಮೀಕರಿಸುವನು. ಭಾಷಿಕ ದೇವಿ ಪೌರಾಣಿಕ ದೇವಿಯಾಗಿ ಪ್ರಭುವಿನ ಕುಲದೇವತೆಯಾಗಿ ರೂಪಾಂತರ ಪಡೆಯುವಳು. ಗೋವಿಂದ ಪೈಯವರ 'ಕನ್ನಡಿಗರ ತಾಯಿ' ಕವನದಲ್ಲಿ ಭಾಷಿಕಮಾತೆ ನಾಡಮಾತೆಯಾಗಿ ರೂಪಾಂತರ ಪಡೆಯುವಳು. ನಾಡಮಾತೆಯು ರಕ್ಕಸರ ಕೊಂದ ಪೌರಾಣಿಕ ದೇವಿಯ ಕಥನವು, ದೊರೆಗಳು ತಮ್ಮ ರಾಜಕೀಯ ಎದುರಾಳಿಗಳನ್ನು ಎದುರಿಸಿ ರಾಜ್ಯವಿಸ್ತರಣೆಯನ್ನೊ ರಾಜ್ಯರಕ್ಷಣೆಯನ್ನೊ ಮಾಡಿಕೊಂಡ ಚರಿತ್ರೆಯನ್ನು ಸೂಚಿಸುತ್ತವೆ. ದೇವಿಯ ದುಷ್ಟಶಿಕ್ಷಣದ ಮಿತ್, ಆಳಿದ ದೊರೆಗಳಿಗೂ ಆಡುವ ಭಾಷೆಗೂ ಬದುಕುವ ನಾಡಿಗೂ ವರ್ಗಾವಣೆಯಾಗುವ ವಿನ್ಯಾಸ ಬಹುತೇಕ ನಾಡಗೀತೆಗಳಲ್ಲಿದೆ.[8]

– 6 –

ಕರ್ನಾಟಕದಲ್ಲಿ ಅನೇಕ ಸಮುದಾಯಗಳು ಯುದ್ಧಸಂಸ್ಕೃತಿಯ ಭಾಗವಾಗಿ ಬದಲಾದವು. ಶಸ್ತ್ರ ಮತ್ತು ಉಪಕರಣ ಬಳಸುವ ಬೇಟೆಗಾರ, ಕಮ್ಮಾರ, ಚರ್ಮಕಾರ, ಅಂಬಿಗ, ತೋಟಿಗ ಸಮುದಾಯಗಳನ್ನು ಪ್ರಭುತ್ವಗಳು ಸೈನಿಕ ಸಂಸ್ಕೃತಿಯ ಭಾಗವಾಗಿಸಿದವು. ಇದಕ್ಕೆ ಪೂರಕವಾಗಿ ಉಚ್ಚಜಾತಿ ಮತ್ತು ವರ್ಗಗಳ ಮೌಲ್ಯಪ್ರಜ್ಞೆಯ ಪರವಾದ ಶತ್ರುನಾಶದ ಪುರಾಣಗಳು, ಕಸುಬುದಾರಿಕೆ ಮತ್ತು ಕೃಷಿಸಂಸ್ಕೃತಿಯ ಭಾಗವಾದ ಸ್ಥಳೀಯ ಶಾಕ್ತದೈವಗಳ ಭಾಗವಾಗಿ ಕಸಿಗೊಂಡವು. ಈ ಹಿನ್ನೆಲೆಯಲ್ಲಿ ಶಾಕ್ತೇಯ ಸಮುದಾಯಗಳ ಮಾದಿಗರು, ಕಮ್ಮಾರರು, ಪರಿವಾರದವರು ಹಾಗೂ ತಿಗಳರು ಪ್ರಭುತ್ವದ ಭಾಗವಾಗಿ ಸೈನಿಕಸೇವೆ ಸಲ್ಲಿಸಿದ್ದನ್ನು ಗಮನಿಸಬಹುದು. ತಳವಾರರಾಗಿ ಊರು ಕಾಯುವ, ಕಳ್ಳರನ್ನು ಹಿಡಿಯುವ, ಮರಣದಂಡನೆಗೆ ಗುರಿಯಾದವರಿಗೆ ಶಿಕ್ಷೆ ವಿಧಿಸುವ ಹಾಗೂ ಕೋಟೆಕಾಯುವ ವೃತ್ತಿಕುಶಲತೆಗಳು ಅವರನ್ನು ಯುದ್ಧದಲ್ಲಿ ಸೇರಿಸಿಕೊಳ್ಳುವುದಕ್ಕೆ ಪೂರಕವಾಗಿರುವ ಸಾಧ್ಯತೆಯಿದೆ. ಜತೆಗೆ ಮಾದಿಗರು ಬೇಸಾಯಕ್ಕೆ ಬೇಕಾದ ಉಪಕರಗಳ ಹಾಗೆಯೇ ಸೈನ್ಯಕ್ಕೆ ಬೇಕಾದ ಜೀನು, ಬುದ್ದಲಿ, ಒರೆ, ಪಾದರಕ್ಷೆ ಇತ್ಯಾದಿ ಚರ್ಮೋತ್ಪನ್ನಗಳನ್ನು ಸಿದ್ಧಪಡಿಸಿಕೊಡುತ್ತಿದ್ದರು. ಈ ಹಿನ್ನೆಲೆಯಲ್ಲಿ ಮಾದಿಗ ತರುಣರು ಹೆಚ್ಚಾಗಿ ದೊರೆಗಳ ಬೆಂಗಾವಲು ಪಡೆಯಲ್ಲಿ ಸೇವೆಸಲ್ಲಿಸಿರುವುದನ್ನು ಗುರುತಿಸಬಹುದು. ಈ ದೃಷ್ಟಿಯಿಂದ ರಾಜನ ಸಾವಿನ ಜತೆಗೇ ತಮಗೂ ಸಾವನ್ನು ತಂದುಕೊಳ್ಳುತ್ತಿದ್ದ ವೇಳೆವಾಳಿಗಳ ಸಾಮಾಜಿಕ ಹಿನ್ನೆಲೆಯನ್ನು ಪರಿಶೀಲಿಸಬೇಕಾಗಿದೆ. ಕುಮಾರರಾಮನಿಗೆ ಮಾದಿಗರ ಹಂಪ ಪ್ರಿಯವಾದ ಅಂಗರಕ್ಷನಾಗಿದ್ದನು. ಅನೇಕರು ಸೈನಿಕಸೇವೆಗೆ ಪ್ರತಿಯಾಗಿ 'ಬಾಳ್ಗರ್ಚು' ನೆತ್ತರಕೊಡಿಗೆ, ಮಾನ್ಯಗಳನ್ನು ಪಡೆದರು.[9] ಮಾದಿಗರ ದೈವವಾದ ದುರುಗಿಯ ಹೆಸರಲ್ಲಿರುವ ದುರ್ಗ ಶಬ್ದಕ್ಕೂ ಆಕೆ ದುರ್ಗರಕ್ಷಕ ದೇವತೆಯಾಗಿರುವುದಕ್ಕೂ, ಮಾದಿಗರು ಕೋಟೆ ರಕ್ಷಕರಾಗಿರುವುದಕ್ಕೂ ಸಂಬಂಧವಿದ್ದಂತಿದೆ. ಅಲ್ಲೂರು(ಚಿತಾಪುರ) ದೇವದುರ್ಗ, ದೇವಗಿರಿ (ಬೀದರ)ಗಳಲ್ಲಿ ಕೋಟೆಯ ಮುಂದೆ ದುರ್ಗಮ್ಮನ ಗುಡಿಗಳಿವೆ. ಶಾಕ್ತಕ್ಷೇತ್ರಗಳಾದ ಬಾದಾಮಿ (ಚಾಲುಕ್ಯರು) ಚಂದ್ರಗುತ್ತಿ (ಗುತ್ತರು) ಸವದತ್ತಿ (ರಟ್ಟರು) ಕೊಲ್ಹಾಪುರ (ಸಾಹುಮಹಾರಾಜ) ಮೈಸೂರು (ಒಡೆಯರು) ಉಚ್ಚಂಗಿದುರ್ಗ ಬಳ್ಳಾರಿಗಳು ಕೋಟೆಯಿರುವ ಊರುಗಳಾಗಿವೆ. ಮಾದಿಗರು ಬಹುಸಂಖ್ಯಾತರಾಗಿರುವ ಊರುಗಳು ಕೋಟೆ ಮತ್ತು ಪ್ರಭುತ್ವಗಳಿದ್ದ ಪ್ರದೇಶಗಳಲ್ಲಿವೆಯೇ ಎಂಬ ಅಂಶವನ್ನು ಪರಿಶೀಲಿಸಬೇಕಾಗಿದೆ. ಇಲ್ಲೇ ಅರಸೀಕೆರೆಯ (ಹರಪನಹಳ್ಳಿ) ಮಾದಿಗರು ದಂಡಿನ ದುರುಗಮ್ಮನ ಆರಾಧಕರಾಗಿದ್ದು, ಆ ದಂಡಿನ

ದುರುಗಮ್ಮ ಬಳ್ಳಾರಿಯ ಬ್ರಿಟಿಶರ ವಿರುದ್ಧ ಯುದ್ಧಮಾಡುವ ಕಥನವು ಉಲ್ಲೇಖಾರ್ಹವಾಗಿದೆ. ರಾಜ್ಯ ವಿಸ್ತರಣೆಯ ದೃಷ್ಟಿಯಿಂದ ಇನ್ನೊಂದು ಉಪಯುಕ್ತ ವೃತ್ತಿಕುಶಲತೆಯೆಂದರೆ, ಕಮ್ಮಾರಿಕೆ. ಕಬ್ಬಿಣವು ಸೈನ್ಯದ ಮೂಲಕ ರಾಜ್ಯವಿಸ್ತರಣೆ ಮಾಡುವುದಕ್ಕೆ ಚಿನ್ನಕ್ಕಿಂತ ಮುಖ್ಯ ಲೋಹವಾಗಿತ್ತು. ಸೈನ್ಯಗಳು ಯುದ್ಧಗಳಿಂದ ರಾಜಧಾನಿಗೆ ಮರಳುವಾಗ ಗುಡಿಯ ರಥ ಮತ್ತು ಬಾಗಿಲುಗಳನ್ನು ಸುಟ್ಟು ಇಲ್ಲವೇ ಮುರಿದು ಲೋಹವನ್ನು ಸಂಗ್ರಹಿಸಿಕೊಂಡು ಹೋಗುತ್ತಿದ್ದವು. ಕುಕನೂರಿನ ಮಹಾಮಾಯೆ ಗುಡಿಯ ಸುಟ್ಟಬಾಗಿಲನ್ನು ದುರಸ್ತಿಮಾಡುವ ಶಾಸನ ಮತ್ತು ಮೇಲುಕೋಟೆಯ ರಥವನ್ನು ಸುಟ್ಟು ಅದರಲ್ಲಿದ್ದ ಕಬ್ಬಿಣವನ್ನು ಪೇಶ್ವೆ ಸೈನ್ಯ ಒಯ್ದ ಸನ್ನಿವೇಶಗಳು ಇದಕ್ಕೆ ಸಾಕ್ಷಿ. 18ನೇ ಶತಮಾನದ *ಕಂಚಿಪುರಾಣ*ದಲ್ಲಿ ಕಾಳಿಕಾದೇವಿ ತನ್ನ ಒಕ್ಕಲುಗಳಾದ ಪಾಂಚಾಳರನ್ನು ಚೋಳದೊರೆಗೆ 'ಆಯುಧ ತಯಾರಿಕೆಯಲ್ಲಿ ಪರಿಣಿತರೆಂದು ಪರಿಚಯಿಸುವ' ಕಥೆಯಲ್ಲಿ ಇದೇ ಆಶಯವಿದೆ. ಶಿರಸಿ ಸೀಮೆಯಲ್ಲಿ ಸಿಗುವ ಕಾಳಮ್ಮನ ಹಾಡಲ್ಲಿ ಕಬ್ಬಿಣದ ಹರಕೆ ಹೊರುವ ಪ್ರಸಂಗವಿದೆ. ಅದರಲ್ಲಿ ದೊರೆಯೊಬ್ಬ ತನಗೆ ಸಂತಾನವಾದರೆ 'ಆರೂ ಸೇರಿನ್ ಉಕ್ಕಿನ ಕಟವ (ಖಡ್ಗ)' ಮಾಡಿಸಿ ಕೊಡುವ ಹರಕೆ ಹೊರುತ್ತಾನೆ. ಲೋಹ ಮತ್ತು ಕುಶಲಕರ್ಮಿ ಸಮುದಾಯಗಳ ಉಪಯುಕ್ತತೆಯೇ ಪ್ರಭುತ್ವವು ನಿರ್ದಿಷ್ಟ ಕುಶಲಕರ್ಮಿ ದೈವಗಳಿಗೆ ಮನ್ನಣೆ ಕೊಡುವುದಕ್ಕೆ ಕಾರಣವಾಗಿದೆ. ಕಬ್ಬಿಣ ತಯಾರಿಕೆಗಾಗಿ ಮುದ್ದೆಗಂಬಾರರು ರಾಜಮನ್ನಣೆ ಪಡೆದಿರುವುದಕ್ಕೆ ಬಳ್ಳಾರಿ ಸೀಮೆಯ ಅದಿರುಬೆಟ್ಟಗಳ ಕೆಳಗಿನ ಊರುಗಳಲ್ಲಿ ಸಿಗುವ ಶಾಸನಗಳು (*ಕವಿಶಾಸಂ I;* ಬಳ್ಳಾರಿ 54, ಕ್ರಿಶ. 10ನೇ ಶತಮಾನ) ಪುರಾವೆಯಾಗಿವೆ. ಕೊಳಗಲ್ಲಿನ ಗದಾಧರ ಎಂಬ ಕಮ್ಮಾರನ ಪ್ರಶಸ್ತಿ ಶಾಸನ; ಕಾರ್ತಿಕೇಯ ತಪೋವನದ ಅಧಿಪತಿಯಾದ ಗದಾಧರಯ್ಯನ ಸಮ್ಮುಖದಲ್ಲಿ ವಿದ್ಯಾದಾನದ ಸತ್ರಕ್ಕೆ ತೋಟ ಭೂಮಿ ಗಾಣಗಳನ್ನು ದಾನಕೊಟ್ಟ (*ಕವಿಶಾಸಂ I;* ಸೊಂಡೂರು; ಕ್ರಿ.ಶ. 964ನೇ ಶತಮಾನ) ಶಾಸನಗಳನ್ನು ಗಮನಿಸಬಹುದು. ಈ ಹಿನ್ನೆಲೆಯಲ್ಲಿ ಮುದ್ದೆಗಂಬಾರರ ಹಾಡುಗಳಲ್ಲಿ ಕಾಳಿಗೆ ದೊರೆಗಳು ಮನ್ನಣೆ ಕೊಡುವ ವಿವರಗಳನ್ನು ನೋಡಬೇಕು. ಇವು ಕಬ್ಬಿಣ ಪೂರೈಸುತ್ತಿದ್ದ ಕಂಬಾರರ ಶ್ರಮ ಮತ್ತು ಕುಶಲತೆಯನ್ನು ಪ್ರಭುತ್ವ ಮನ್ನಿಸಿರುವುದರ ಸಂಕೇತದಂತಿವೆ. ವಿಜಯನಗರದ ಅರಸೊತ್ತಿಗೆಯ ಆಸುಪಾಸಿನಲ್ಲಿ ಅದಿರಿನ ಬೆಟ್ಟಗಳು, ಕಬ್ಬಿಣ ಕರಗಿಸುವರಿಗೆ ಮನ್ನಣೆ ಕೊಟ್ಟಿರುವ ಶಾಸನಗಳು, ಮುದ್ದೆಗಂಬಾರರ ವಸತಿಗಳು ಹಾಗೂ ಕಾಳಿಗುಡಿಗಳು ಒಟ್ಟಿಗೇ ಇರುವುದು ಅರ್ಥಪೂರ್ಣವಾಗಿದೆ. ವಿಜಯನಗರದ ಕಮ್ಮಾರರು ಕಬ್ಬಿಣದ ಉತ್ಪನ್ನಗಳನ್ನು ಅರಬಸ್ಥಾನಕ್ಕೆ ರಫ್ತು ಮಾಡುವುದಕ್ಕೂ, ಸ್ವಂತ ಸೈನ್ಯಕ್ಕೆ ಆಯುಧ ತಯಾರಿಸುವುದಕ್ಕೂ ಪ್ರಭುತ್ವಕ್ಕೆ ಕಬ್ಬಿಣ ಒದಗಿಸುತ್ತಿದ್ದರು. ಪ್ರಭುತ್ವ ಮತ್ತು ಅಗತ್ಯ ಸರಕು-ಸೇವೆ ಒದಗಿಸುವ ಕುಶಲಕರ್ಮಿ ಸಮುದಾಯಗಳ ನಡುವಿನ ಸಂಬಂಧ ಏರುಪೇರಾಗುತ್ತಿತ್ತು. ಇದು ಆಯಾ ಸಮುದಾಯಗಳ ದೇವತೆಗಳು ಮನ್ನಣೆ ಪಡೆಯುವುದರಲ್ಲಿ ಪರಿಣಾಮ ಬೀರುತ್ತಿತ್ತು. ಕಬ್ಬಿಣ ಮತ್ತು ಕಮ್ಮಾರರ ಸೇವೆ ಅತಿಮುಖ್ಯವಾದಾಗೆಲ್ಲ ಪ್ರಭುತ್ವ ಅವರನ್ನೂ ಅವರ ದೈವವನ್ನೂ ಮೇಲ್ಚಲನೆಗೆ ಒಳಪಡಿಸುತ್ತಿತ್ತು. ಅವರಿಗೆ ತೆರಿಗೆ ವಿಧಿಸುವ ಮತ್ತು ಮನ್ನಾಮಾಡುವ ಕೆಲಸವನ್ನು ಮಾಡುತ್ತಿತ್ತು.[10]

ಮೈಸೂರು ಭಾಗದಲ್ಲಿ ಸೈನಿಕೀಕರಣಗೊಂಡ ಶಾಕ್ತೇಯ ಸಮುದಾಯವೆಂದರೆ, ಬೆಸ್ತರು ಅಥವಾ ತೊರೆಯವರು. ಗಂಗೆಯನ್ನು ಆರಾಧಿಸುವ, ಮೀನುಗಾರಿಕೆ ಮತ್ತು ಅಂಬಿಗ ವೃತ್ತಿಯ ಈ ಸಮುದಾಯವು, ಸೈನ್ಯವನ್ನೂ ಅದಕ್ಕೆ ಬೇಕಾದ ಸರಕುಗಳನ್ನೂ ನದಿ/ಹಳ್ಳ ದಾಟಿಸುವ ಕೆಲಸದಲ್ಲಿ ಸೈನಿಕೀಕರಣಗೊಂಡಿತು. ಸೈನಿಕಸೇವೆಗೆ ಸೇರುತ್ತ ಹೋದ ಪರಿಣಾಮವಾಗಿ ಈ ಸಮುದಾಯಕ್ಕೆ 'ಪರಿವಾರದವರು' ಎಂಬ ಹೆಸರೂ ಬಂದಿತು. ಒಡೆಯರಲ್ಲಿ ಪರಿವಾರದವರ ವಿಶೇಷ ತುಕಡಿಗಳೇ ಇದ್ದವು. ಇದರ ಪ್ರತಿಫಲವಾಗಿ ಈ ಭಾಗದಲ್ಲಿ ಪರಿವಾರದವರಿಗೆ ಭೂಮಿ ಅಧಿಕಾರದ ಕೊಡುಗೆಗಳಲ್ಲೂ ಪ್ರಭುತ್ವದ ಕಡೆಯಿಂದ ಕೊಡಲ್ಪಟ್ಟವು. ಮೈಸೂರು ಸೀಮೆಯ ಬಹುತೇಕ ಶಾಕ್ತಾರಾಧನೆಯಲ್ಲಿ ಪರಿವಾರದವರ ಸಂಖ್ಯೆ ಪ್ರಧಾನವಾಗಿದೆ. ಮಳವಳ್ಳಿಯ ಪಟಾಲದಮ್ಮನ ಜಾತ್ರೆಯು ಒಂದು ಬಗೆಯಲ್ಲಿ ಪರಿವಾರದವರ ಸಮಾವೇಶವೇ ಆಗಿದೆ. ಈ ಜಾತ್ರೆಯಲ್ಲಿ ಬೆಸ್ತವೀರನ ಮರದ ಪ್ರತಿಮೆಯ ಮೆರವಣಿಗೆ ಮುಖ್ಯ ಘಟನೆ. ಶಾಕ್ತಪಂಥದಲ್ಲಿ ಅಪಾರ ಸಂಖ್ಯೆಯಲ್ಲಿ ವೀರರ ನೆನಪಿನ ಆಚರಣೆಗಳಿದ್ದು ಅವರು ದೇವಿಗೆ ನರಬಲಿ ಹೋದವರೊ ಇಲ್ಲವೇ ಸೈನಿಕರಾಗಿ ಮಡಿದವರೊ ಆಗಿದ್ದಾರೆ.

ಧರ್ಮರಾಯನ ದ್ರೌಪದಿ ಕರಗಕ್ಕಾಗಿ ಪ್ರಸಿದ್ಧರಾಗಿರುವ ತಿಗಳರು ತಮಿಳುನಾಡಿನಿಂದ ವಲಸೆ ಬಂದ ತೋಟಗಾರಿಕೆ (ಮಾಲಿ) ಸಮುದಾಯ. ತಮಿಳುನಾಡಿನಲ್ಲಿ ದ್ರೌಪದಿಯು ಶಕ್ತಿದೇವತೆಯಾಗಿದ್ದಾಳೆ. ವಿದ್ವಾಂಸರ ಪ್ರಕಾರ, ತಿಗುಳರು ಆಚರಿಸುವ ಧರ್ಮರಾಯನ ಕರಗವು ಗೌಡವಂಶದ ಪಾಳೇಗಾರರು ಆಳ್ವಿಕೆ ಇರುವ ಬೆಂಗಳೂರು ಸೀಮೆಯ ಪ್ರದೇಶಗಳಲ್ಲಿಯೇ ಇದ್ದು, ಕಂಚಿಯ ಭಾಗದಿಂದ ಈ ವಂಶಜರು 14ನೇ ಶತಮಾನದಲ್ಲಿ ಕರ್ನಾಟಕದತ್ತ ಬಂದಾಗ, ಇವರ ಜತೆ ಕರಗ ಸಂಪ್ರದಾಯವೂ ಬಂದಿರಬಹುದು. ತಮಿಳುನಾಡಿನ ಭಾಗವನ್ನು ಆಳುವಾಗ, ಹೈದರನು ತೋಟಗಾರಿಕೆ ಕೆಲಸಗಳಲ್ಲಿ ಪರಿಣತರಾಗಿದ್ದ ತಿಗುಳರನ್ನು ಕರೆತಂದು ಬೆಂಗಳೂರಲ್ಲಿ ನೆಲೆಗೊಳಿಸಿದನು ಎಂಬ ಅಭಿಪ್ರಾಯವಿದೆ.[11] ಬೆಂಗಳೂರಿನ ಧರ್ಮರಾಯನ ಗುಡಿಯ ಮುಂದಿನ ಕಂಬದಲ್ಲಿ ಮಹಿಷಾಸುರ ಮರ್ದಿನಿಯ ಪ್ರತಿಮೆಯಿದ್ದು ಅದು ಒಡೆಯರ ಜತೆಗಿನ ಸಂಬಂಧವನ್ನು ಸೂಚಿಸುತ್ತಿರಬಹುದು. ಆದರೆ ಕರಗ ಹೊರುವ ಪದ್ಧತಿ 15ನೇ ಶತಮಾನದಿಂದಲೂ ಇದೆ. ಇದಕ್ಕೆ ಚಿಕ್ಕಬಳ್ಳಾಪುರದ ತಾಮ್ರಶಾಸನ (*ಎಕ 10;* (ರೈಸ್) ಚಿಕ್ಕಬಳ್ಳಾಪುರ 10: ಕ್ರಿಶ.1428) ಉದಾಹರಣೆ. ಈ ಶಾಸನದಲ್ಲಿ ಕರಗ ಪೂಜಾರಿಗೆ 'ಕರಗ ಮಾನ್ಯದ ಹೊಲ' ಬಿಟ್ಟ ಉಲ್ಲೇಖವಿದ್ದು, "ನಮಗೆ ಕುಲದೈವ ಭೈರವ ಜನಕ ತಾನು ಮನೆದೇವರು, ಕರಗದಮ್ಮನ ಪತಿ ತಾನಾದ ಕಾರಣ, ನಮಗೆ ದೇಶಾಂತರವಿಲ್ಲ" ಎಂಬ ಹೇಳಿಕೆಯಿದೆ. ಇಲ್ಲಿ 'ದೇಶಾಂತರ'ದ ಮಾತು ಕುತೂಹಲ ಹುಟ್ಟಿಸುತ್ತದೆ. ಬಹುಶಃ ಹೊರಗಿನಿಂದ ಬಂದವರು ಎಂಬ ಆರೋಪದಿಂದ ಪಾರಾಗಲು ತಿಗುಳರು ಕರ್ನಾಟಕದ ಭೈರವನಿಗೂ ಕರಗದಮ್ಮನಿಗೂ ದಾಂಪತ್ಯ ಸಂಬಂಧ ಜೋಡಿಸಿರಬಹುದು. ಈಗಲೂ ಕರಗ ಹೊರುವವನ ಸುತ್ತ ತಿಗಳವೀರರು ಕತ್ತಿಪಹರೆ ಮಾಡುತ್ತಾರೆ. ಕರಗದ ರಕ್ಷಣೆಗಾಗಿ ಶಸ್ತ್ರಪಹರೆ ಮಾಡುವ ವೀರಕುಮಾರರನ್ನು ಮಧ್ಯಕರ್ನಾಟಕದ ಬನಶಂಕರಿ ಹಬ್ಬದಲ್ಲಿಯೂ ಕಾಣಬಹುದು. ತೋಟಗಾರಿಕೆ ಮತ್ತು ನೇಕಾರಿಕೆ ಮಾಡುವ ಶಾಕ್ತೇಯ ಸಮುದಾಯಗಳಿಗೆ ಈ ಶಸ್ತ್ರಸಂಗ

ಯಾವಾಗ ಮತ್ತು ಯಾಕೆ ಬಂದಿತು ಎಂಬ ಪ್ರಶ್ನೆಯನ್ನು ಬಿಡಿಸಬೇಕಿದೆ. ಕರಗವು ಹಳೆಯ ಬೆಂಗಳೂರಿನ ಗಡಿಗಳಿಗೆ ಹೋಗುತ್ತದೆ. ಕರಗದಲ್ಲಿ ಕೋಟೆಕಾಳಗ ಎಂಬ ಆಚರಣೆಯಿದ್ದು, ಅದರಲ್ಲಿ ವೀರಕುಮಾರನ ಮಣ್ಣಿನ ಪುತ್ತಳಿಯ ಶಿರಚ್ಛೇದ ಮಾಡುವ ಅಭಿನಯವಿದೆ. ಇವು ಕೋಟೆ ರಕ್ಷಣೆಯ ಭಾಗವಾಗಿ ತಿಗುಳರು ಜೀವಬಿಟ್ಟ ಸ್ಮೃತಿಯಲ್ಲಿ ನಡೆಯುವ ಆಚರಣೆಗಳಾಗಿ ಕಾಣುತ್ತವೆ.

– 7 –

ಮೇಲ್ಕಾಣಿಸಿದ ಚರ್ಚೆಯ ಹಿನ್ನೆಲೆಯಲ್ಲಿ ಕರ್ನಾಟಕ ಶಾಕ್ತಪಂಥ ಮತ್ತು ಪ್ರಭುತ್ವದ ಸಂಬಂಧವಾಗಿ ಈ ಕೆಲವು ಸಂಗತಿಗಳನ್ನು ತಾತ್ವೀಕರಿಸಿ ಹೇಳಬಹುದು.

1. ಶಾಕ್ತಲೋಕದಲ್ಲಿ ಸ್ಥಳೀಯ ಸಮುದಾಯಗಳ ಬದುಕಿನ ಭಾಗವಾಗಿರುವ ಜನಪದ ಪರಂಪರೆಯಿರುವ ದೈವಗಳ ಹಾಗೂ ಅಖಿಲ ಭಾರತೀಯ ವ್ಯಾಪ್ತಿಯೂ ಶಿಷ್ಟವೂ ರಾಜಾಶ್ರಿತವೂ ಆಗಿರುವ ವ್ಯವಸ್ಥಿತವಾದ ಗುಡಿ ರಾಜಪೋಷಣೆ ಇರುವ ಅಗ್ರಹಾರದ ಭಾಗವಾಗಿರುವ ದೇವತೆಗಳ ಎರಡು ಸ್ತರಗಳಿವೆ. ಮೊದಲನೆಯ ಸ್ತರಕ್ಕೆ ಜನಪದ ಸಾಹಿತ್ಯವಿದ್ದರೆ, ಎರಡನೆಯದಕ್ಕೆ ಶಾಸನಗಳು ಆಕರವಾಗಿವೆ. ದೊರೆಗಳು ದೇವತೆಗಳಿಗೆ ಕೊಟ್ಟಿರುವಷ್ಟು ಮನ್ನಣೆಯನ್ನು ದೈವಗಳಿಗೆ ಕೊಡಲಿಲ್ಲ. ಆದರೂ ಬಯಲಲ್ಲಿ ಮತ್ತು ಸಣ್ಣಗುಡಿಯಲಿದ್ದ ಕೆಲವು ದೈವಗಳು ಪ್ರಭುತ್ವದ ಮನ್ನಣೆಯಿಂದ ದೊಡ್ಡ ಕಟ್ಟಡಗಳನ್ನು ಪಡೆದು ದೇವತೆಗಳಾಗಿ ಬಡ್ತಿ ಪಡೆದವು. ಇವು ಸಂಸ್ಕೃತೀಕರಣ ಪ್ರಕ್ರಿಯೆಯಲ್ಲಿ ಮೇಲ್ಜಾತಿ ಮತ್ತು ಮೇಲ್ವರ್ಗಗಳ ಮೂಲಕ ಪ್ರಭುತ್ವಗಳಿಗೆ ಹತ್ತಿರವಾದವು.

2. ಪ್ರಭುತ್ವಗಳ ಯುದ್ಧ ಮತ್ತು ರಾಜ್ಯವಿಸ್ತರಣೆಗಳಿಗೂ ಅವುಗಳ ಪೋಷಣೆಯಲ್ಲಿರುವ ಗುಡಿಗಳು ಬೆಳೆಯುವಿಕೆಗೂ ಸಂಬಂಧವಿದೆ. ಭವಾನಿಯ ಭಕ್ತನಾಗಿದ್ದ ಶಿವಾಜಿಯು ತುಳುಜಾಪುರದ ಅಂಬಾಭವಾನಿಯ ಗುಡಿಯನ್ನು ಸಿರಿವಂತಗೊಳಿಸಿದ್ದು ಹೀಗೆ. ಕರ್ನಾಟಕದಲ್ಲಿ ಪ್ರಭುತ್ವದಿಂದ ಉತ್ತೇಜನ ಅನುಭವಿಸಿದ ಶಾಕ್ತದೇವತೆಗಳಲ್ಲಿ ಪಟ್ಟದಕಲ್ಲಿನ ದುರ್ಗಾ, ಕುಕನೂರಿನ ಮಹಾಮಾಯಾ, ಬಾದಾಮಿಯ ಬನಶಂಕರಿ, ಮೈಸೂರಿನ ಚಾಮುಂಡಿ, ಸಿಂಗಣಗದ್ದೆಯ ಪದ್ಮಾವತಿ, ಕೋಲಾರದ ಕೋಲಾರಮ್ಮ, ಕೊಲ್ಲಾಪುರದ ಮಹಾಲಕ್ಷ್ಮೀ, ಕಂಚಿಯ ಕಾಮಾಕ್ಷಿ, ತುಳುಜಾಪುರದ ಅಂಬಾಭವಾನಿ, ಆಲಂಪುರದ ಜೋಗುಳಾಂಬ ಮುಖ್ಯರು. ಇವುಗಳಲ್ಲಿ ಕೊನೇ ನಾಲ್ವರ ಗುಡಿಗಳು ಈಗಿನ ಕರ್ನಾಟಕದ ಹೊರಗಿದ್ದರೂ, ಕನ್ನಡಿಗರಿಗೂ ಕರ್ನಾಟಕದಿಂದಾಳಿದ ದೊರೆಗಳಿಗೂ ಸಂಬಂಧವಿದ್ದವು. ಕೋಲಾರಮ್ಮನ ಗುಡಿ ಕರ್ನಾಟಕದೊಳಗಿದ್ದರೂ ತಮಿಳುನಾಡಿನ ಚೋಳರ ಜತೆ ಸಂಬಂಧ ಪಡೆದಿತ್ತು. ಅದರ ಗೋಡೆಗಳು ತಮಿಳು ಶಾಸನಗಳಿಂದ ತುಂಬಿಹೋಗಿವೆ. ಶಾಕ್ತದೈವ–ದೇವತೆಗಳು ಭಾಷಾತೀತವಾಗಿ ಪ್ರಭುತ್ವದ ನೆರವನ್ನು ಪಡೆದವು. ಪ್ರಭುತ್ವೀಕರಣದ ಲಾಭವನ್ನು ಊರೊಳಗೆ ಹಾಗೂ ಅಗ್ರಹಾರಗಳ ಭಾಗವಾಗಿದ್ದ ಮತ್ತು ಉಚ್ಚಜಾತಿಯ ಉಸ್ತುವಾರಿಯಲ್ಲಿದ್ದ ಗುಡಿಗಳು ಹೆಚ್ಚುಪಡೆದವು.

3. ಶಾಕ್ತೇಯ ಸಮುದಾಯಗಳ ಕಸುಬುಗಳು ಯುದ್ಧ ಮತ್ತು ರಾಜ್ಯವಿಸ್ತರಣೆಗಳೊಂದಿಗೆ ಲಗತ್ತಾದಾಗ ಅವುಗಳ ದೈವಗಳ ಪ್ರಭುತ್ವೀಕರಣ ತೀವ್ರಗೊಂಡಿತು. ಈ ಪ್ರಕ್ರಿಯೆಯಲ್ಲಿ ಪ್ರಭುತ್ವಗಳು ಕೆಲವು ದೇವತೆಗಳನ್ನು ಕುಲದೇವತೆಗಳನ್ನಾಗಿ ಮಾಡಿಕೊಂಡವು. ಆದರೆ

ರೈತಾಪಿ ಕುಶಲಕರ್ಮಿಗಳ ಫಲವಂತಿಕೆಯ ದೈವಗಳು ದೇವತೆಗಳ ಪಕ್ಷವಹಿಸಿ ರಾಕ್ಷಸರನ್ನು ಅಥವಾ ದೊರೆಗಳ ಶತ್ರುಗಳನ್ನು ಕೊಲ್ಲುವ ರಣದೇವತೆಗಳಾಗಿ ಬದಲಾದವು. ಈ ಹಿನ್ನೆಲೆಯಲ್ಲಿ ದೊರೆಗಳಿಗೆ 'ತಿಗುಳಮಾರಿ' (ಕಲ್ಯಾಣಚಾಲುಕ್ಯರ ಸತ್ಯಾಶ್ರಯ ಕ್ರಿ.ಶ.10), 'ಕೊಂಗರಮಾರಿ' (ವಿಷ್ಣುವರ್ಧನ ಕ್ರಿ.ಶ.12) 'ಕೊಂಗಮಾರಿ' (ಹೊಯ್ಸಳರ ದಂಡನಾಯಕ ವೀರಮಾಧವ ಕ್ರಿ.ಶ.14) ಬಿರುದುಗಳನ್ನು ಗಮನಿಸಬಹುದು. ಕೊಯಮತ್ತೂರು ಭಾಗದ ಕೊಂಗಾಳ್ವರನ್ನು ಗೆದ್ದುದಕ್ಕಾಗಿ ಅವರು ಧರಿಸಿದ ಬಿರುದುಗಳಿವು. ತಮ್ಮನ್ನು ಕಾತ್ಯಾಯಿನಿ, ಭಗವತಿ, ಪದ್ಮಾವತಿ, ಗೌರಿ, ಪರಮೇಶ್ವರಿ, ಚಾಮುಂಡಿ ಮುಂತಾದ ಶಿಷ್ಟದೇವತೆಗಳ ಪಾದಸೇವಕರೆಂದು ಕರೆದುಕೊಳ್ಳುವ ದೊರೆಗಳು, ಜನಪದ ದೈವವಾದ ಮಾರಿಯನ್ನು ಯುದ್ಧಸಂಸ್ಕೃತಿಯಲ್ಲಿ ಅಗತ್ಯವಾಗಿರುವ ಭೀಷಣತೆ, ಮೃತ್ಯು, ನಾಶ ಮತ್ತು ಉಗ್ರತೆಗಳ ಸಂಕೇತವಾಗಿಸಿಕೊಂಡರು. ಶಿಷ್ಟದೈವಗಳನ್ನು ಬಿರುದುಗಳಿಗೆ ಬಳಸುವ ದೊರೆಗಳು ಕೆಳವರ್ಗದ ಜನಪದ ದೈವಗಳನ್ನು ನೇತ್ಯಾತ್ಮಕ ಅರ್ಥದಲ್ಲಿ ಬಳಸುವುದು ಗಮನಾರ್ಹ.

4. ಪ್ರಭುತ್ವಗಳು ರೂಪಿಸಿಕೊಂಡ ಪೌರಾಣಿಕ ದೇವತೆಗಳು ಸಶಸ್ತ್ರಮೂರ್ತಿಗಳಾಗಿದ್ದು ಅಲ್ಲಿ ಸಾಮಾನ್ಯವಾಗಿ ದೇವದಾನವರ ಸಂಘರ್ಷದ ಭಿತ್ತಿಯಿರುತ್ತದೆ. ದೇವತೆಗಳ ಪರವಾಗಿ ದಾನವರ ವಿರುದ್ಧ ಹೋರಾಡಿದ ಶಕ್ತಿದೇವತೆಗಳು ಯುದ್ಧಮಾಡುವ ಪುರಾಣವು ಶಾಕ್ತಪಂಥವನ್ನು ರಾಜಕೀಯ ಪ್ರಭುತ್ವಗಳ ಜತೆಗೆ ಸಮೀಕರಣಗೊಳ್ಳಲು ರಹದಾರಿ ನಿರ್ಮಿಸಿತು. ಶಿಷ್ಟದೇವತೆಗಳ ದೃಷ್ಟಿಯಿಂದ ದುಷ್ಟರೂ ಕ್ರೂರಿಗಳೂ ಆದ ಮುಂಡ, ಚಂಡ, ಕೊಲ್ಲ, ದಾರುಕ, ಶುಂಭ, ನಿಶುಂಭ, ರಕ್ತಬೀಜ ಮುಂತಾದ 'ರಾಕ್ಷಸ'ರನ್ನು ಕೊಲ್ಲುವ ಪುರಾಣಕಥನಗಳು ಜನಪ್ರಿಯವಾದವು. ಶಕ್ತಿದೇವತೆಗಳಲ್ಲಾದ ಈ ಪ್ರತಿಮಾ ಪಲ್ಲಟವು, ಪ್ರಭುತ್ವಗಳ ಯುದ್ಧನೀತಿಗಳನ್ನು ಪ್ರಭಾವಿಸಿತು. ಪ್ರಭುತ್ವಗಳು ವೀರಮೌಲ್ಯದ ಹೆಸರಲ್ಲಿ ಪ್ರಭುತ್ವಕ್ಕೆ ನಿಷ್ಠನಾಗುವ ಮತ್ತು ಸಾಧ್ಯವಾದರೆ ಪ್ರಾಣತ್ಯಾಗ ಮಾಡುವ ಸೈನಿಕ ಸಂಸ್ಕೃತಿಗೆ ಸಮಾಜದಲ್ಲಿ ಸಮ್ಮತಿ ಸೃಷ್ಟಿಸುವುದಕ್ಕೆ ಅವಕಾಶ ಕಲ್ಪಿಸಿತು. ಸೈನಿಕ ಸಂಸ್ಕೃತಿಯು ಧಾರ್ಮಿಕ ಆಶಯದಲ್ಲಿ ಜನರ ಮನಸ್ಸಿನಲ್ಲಿ ನೆಲೆಯೂರಿಸಿ ರಾಜ್ಯವಿಸ್ತರಣೆಯ ಯುದ್ಧಗಳಿಗೆ ಬೇಕಾದ ಪರವಾನಗಿ ಪಡೆದವು. ಜನರಲ್ಲಿ ಯುದ್ಧಕ್ಕೆ ಬೇಕಾದ ಮಿಲಿಟನ್ಸಿ ಮತ್ತು ಪ್ರಭುವಿಗಾಗಿ ದೇಹತ್ಯಾಗ ಮಾಡುವ ಮನೋಭಾವವನ್ನು ಸೃಷ್ಟಿಸಿದವು. ಆಧುನಿಕ ಪ್ರಭುತ್ವಗಳು ಸಹ ನೆರೆ ದೇಶಗಳ ಮಿಲಿಟರಿ ಘರ್ಷಣೆಗಳಿಗೆ ದೇಶಮಾತೆಯನ್ನು ಒದಗಿಸಿಕೊಳ್ಳುತ್ತಿರುವುದನ್ನು ಗಮನಿಸಬಹುದು.

5. ಪ್ರಭುತ್ವವು ಹೆಚ್ಚು ಬ್ರಾಹ್ಮಣೀಕರಣಗೊಂಡಂತೆ ಅದರ ದಾಖಲೆಗಳಲ್ಲಿ ಸಂಸ್ಕೃತವು ಪ್ರವೇಶ ಪಡೆಯುತ್ತದೆ. ಈ ಹಿನ್ನೆಲೆಯಲ್ಲಿ ಮೈಸೂರು ಪ್ರಭುತ್ವವು ಚಾಮುಂಡಿಗೆ ಸಲ್ಲಿಸಿದ ಸೇವೆಗಳಲ್ಲಿ ಸಂಸ್ಕೃತ ಮತ್ತು ಕನ್ನಡದ ಬಳಕೆಗಳು ಗಮನಾರ್ಹವಾಗಿವೆ. ಮುಮ್ಮಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿ ಮಾಡಿಸಲಾದ ಚಾಮುಂಡಿಯ ದೇವಿಸ್ತುತಿಯಿರುವ 30 ಸಂಸ್ಕೃತ ಶ್ಲೋಕಗಳನ್ನು ಕೊರೆಯಿಸಲಾದ ಚಿನ್ನದ ನಕ್ಷತ್ರಮಾಲಿಕೆ ಅರ್ಪಿಸಲಾಯಿತು. (*ಎಕ–5;* ಮೈಸೂರು 157; 19ನೇ ಶತಮಾನ) ಆದರೆ ರಾಣಿಯರು ಸೇವೆಸಲ್ಲಿಸಿದ ಶಾಸನಗಳಲ್ಲಿ ಕನ್ನಡವಿದೆ ಮತ್ತು 'ಶ್ಯಾವೆ' (ಸೇವೆ) ಎಂಬ ಆಡುಮಾತು ಇದೆ. ಜನಪದದಲ್ಲಿ ಸಂಸ್ಕೃತದ ಭಾರವೇ ಇಲ್ಲದ ಕನ್ನಡದಲ್ಲಿ ದೇವಿಯ ಮಹಿಮೆಯ ಕಥನಗಳಿವೆ.

6. ಗುಡಿ ದೈವಗಳ ಹಕ್ಕುದಾರಿಕೆ ವಿಷಯದಲ್ಲಿ ಆ ಗುಡಿ ದೈವದ ಭಾಗವಾಗಿ ರಾಜಾಶ್ರಯ ಆಸ್ತಿ ವರಮಾನಗಳಿದ್ದಾಗ ಸಂಘರ್ಷಗಳು ಘಟಿಯುತ್ತವೆ. ಆಗ ಪ್ರಭುತ್ವವು ಮಧ್ಯಪ್ರವೇಶಿಸಿ ಸೋಶಿಯಲ್ ಎಂಜಿನಿಯರಿಂಗ್ ಕೆಲಸವನ್ನು ಎಚ್ಚರಿಕೆಯಿಂದ ಮಾಡುತ್ತದೆ. ಗುಡಿಯ ಸಾಂಪ್ರದಾಯಿಕ ವ್ಯವಸ್ಥೆಯಲ್ಲಿ ಬದಲಾವಣೆ ಮಾಡುವಾಗ ಹಕ್ಕುದಾರಿಕೆಯಿರುವ ವಂಶ ಇಲ್ಲವೇ ಸಮುದಾಯಗಳ ನಡುವೆ ಸಾಮರಸ್ಯ ಏರ್ಪಡಿಸಲು ಸೌಲಭ್ಯಗಳ ಹಂಚಿಕೆ ಮಾಡುತ್ತದೆ. ಈ ಮರುಹಂಚಿಕೆಯಲ್ಲಿ ಬಹುತೇಕ ಉಚ್ಚಜಾತಿ ಮತ್ತು ವರ್ಗಗಳು ಫಾಯದೆ ಪಡೆದುಕೊಳ್ಳುತ್ತವೆ. ಈ ಮರುವಿನ್ಯಾಸಗೊಂಡು ಜಾರಿಯಾಗುವ ಹೊಸ ವ್ಯವಸ್ಥೆಯಲ್ಲಿ ಎಲ್ಲ ಪಂಗಡಗಳ ಆಚರಣೆಗಳು ಒಟ್ಟಿಗೆ ಇರುವಂತೆ ಪ್ರಭುತ್ವ ನೋಡಿಕೊಳ್ಳುತ್ತದೆ. ಈ ಉಪಕ್ರಮದಿಂದ ಪಂಥೀಯ ಆಚರಣೆಗಳಲ್ಲಿ ಸಂಕರತನ ಕಾಣಿಸಿಕೊಳ್ಳುತ್ತದೆ. ಇದಕ್ಕೆ ದಿವಾನ್ ಪೂರ್ಣಯ್ಯನ ಕಾಲದಲ್ಲಿ ಪರಂಪರೆಯಿಂದ ಗುಡಿಯ ಅರ್ಚಕರಾಗಿದ್ದ ಶಿವಾಚಾರದವರನ್ನು ಬದಲಿಸಿ ದೀಕ್ಷಿತ ಬ್ರಾಹ್ಮಣ ಅರ್ಚಕರ ನೇಮಕಾತಿ ಮಾಡಿದ ಪ್ರಕರಣವನ್ನು ನೋಡಬಹುದು. ಶಿವಾರ್ಚಕರ ಅಸಮಾಧಾನ ಕಡಿಮೆ ಮಾಡಲು ಅವರಿಗೆ 200 ಎಕರೆ ಜಮೀನು, ಪಲ್ಲಕ್ಕಿ ಏರುವ ಸೌಲಭ್ಯ ಹಾಗೂ ಕುದುರೆ ಸವಾರರ ಕಾವಲನ್ನು ಕೊಡಲಾಯಿತು.[12]

7. ಜನಪದ ದೈವಗಳು ಪ್ರಭುತ್ವ ಮನ್ನಣೆಯ ಹೊರತಾಗಿಯೂ ಸಮುದಾಯಗಳ ನಿಷ್ಠೆಯ ಮೇಲೆ ಅಸ್ತಿತ್ವ ಪಡೆದಿರುತ್ತವೆ. ಬಹುತೇಕ ಪ್ರಭುತ್ವಪೋಷಕ ಶಾಕ್ತದೇವತೆಗಳಿಗೆ ಜನಪದ ಪರಂಪರೆ ಇಲ್ಲದಿರುವುದು ಪ್ರಭುತ್ವದ ಶಾಕ್ತ ಮತ್ತು ಜನಪದ ಶಾಕ್ತಗಳ ತಾತ್ವಿಕ ವ್ಯತ್ಯಾಸವನ್ನು ಸಹ ಸೂಚಿಸುತ್ತದೆ. ತನ್ನ ಭಕ್ತರಿಗೆ ಸೂರಿಲ್ಲದ ತನಕ ತನಗೂ ಬೇಡವೆಂದು ಹೇಳಿದ ಬಿಸಿಲಮಾರಮ್ಮನ ಕತೆ ಗಮನಿಸಬಹುದು.[13] ಮೊದಲ ಘಟ್ಟದಲ್ಲಿ ಊರ ಹೊರಗೆ ಬನಗಳಲ್ಲಿ ತೆರೆದ ಆಕಾಶಕ್ಕೆ ಒಡ್ಡಿಕೊಂಡು ಇಲ್ಲವೇ ಚಿಕ್ಕ ಕಲ್ಲುಮಣ್ಣಿನ ರಚನೆಯೊಳಗೆ ಇರುವ ದೈವಗಳನ್ನು, ಕಟ್ಟಡದೊಳಕ್ಕೆ ಸೇರಿಸುವುದು ಪುರೋಹಿತರ ಮಧ್ಯಸ್ಥಿಕೆಯ ಮತ್ತು ಕಟ್ಟಡ ಕಟ್ಟಲು ಉಳ್ಳವರ ನೆರವಿನ ಹಂಗಿಗೆ ಸಿಲುಕಿಸುತ್ತದೆ. ಕಟ್ಟಡವು ಕೆಲವರಿಗೆ ಪ್ರವೇಶ ಕೊಡುವ ಮತ್ತು ನಿರಾಕರಿಸುವ ತರತಮಗಳಿಗೆ ಕಾರಣವಾಗುತ್ತದೆ; ವೈಯಕ್ತಿಕ ಭಕ್ತಿ ಮತ್ತು ಸಾಧನೆಯನ್ನು ಸಾಮುದಾಯಿಕವಾಗಿಸುತ್ತದೆ ಎಂಬ ಆಶಯಗಳೂ ಇಂತಹ ಕತೆಗಳಲ್ಲಿರಬಹುದು. ಆದರೆ ಪ್ರಭುತ್ವದ ಪೋಷಣೆಗೆ ಸಿಕ್ಕ ಬಳಿಕ ದೈವಗಳು ದೇವತೆಗಳಾಗುತ್ತವೆ. ಪ್ರಭುತ್ವದ ಪೋಷಣೆಯಿಂದ ಸಮುದಾಯಗಳ ದೈವಗಳು ಅರಮನೆಯ ದೇವತೆಗಳಾಗಿ ರೂಪಾಂತರ ಪಡೆಯುತ್ತವೆ. ಅವು ದೊಡ್ಡಗುಡಿಯನ್ನೂ ವಿಶಾಲ ಕಲ್ಯಾಣ ಎತ್ತರದ ಪ್ರಾಕಾರ ಹಾಗೂ ಗೋಪುರಗಳನ್ನು ಪಡೆಯುತ್ತವೆ. ಆಕಾರದಲ್ಲಿ ಸಂಭವಿಸುವ ಈ ಪಲ್ಲಟಗಳು ತಿರುಳಿನಲ್ಲಿಯೂ ಪಲ್ಲಟ ತರುತ್ತವೆ. ಗುಡಿ ನಿರ್ವಹಣೆಯಲ್ಲಿ ಉಚ್ಚವರ್ಗಗಳು ದೇವತೆಗೆ ಹತ್ತಿರವಾಗಿ ಪಾರಂಪರಿಕ ಕೆಳಜಾತಿಯ ಜನರು ಅವುಗಳ ಆಚರಣೆಗಳು ಮುಖ್ಯವಾಗಿ ಬಲಿ ಮತ್ತು ಮಾಂಸಾಹಾರಗಳು ಅಂಚಿಗೆ ಸರಿಯಲ್ಪಡುತ್ತವೆ.

8. ಯುದ್ಧಶೌರ್ಯವನ್ನು ಮೌಲ್ಯೀಕರಿಸಿ ಸೈನಿಕ ಸಂಸ್ಕೃತಿಯನ್ನು ಜನಪ್ರಿಯಗೊಳಿಸಲು ಮತ್ತು ನೆರೆರಾಜ್ಯಗಳಿಗೆ ತಮ್ಮ ಸೈನಿಕಶಕ್ತಿ ಪ್ರಕಟಿಸಲು ಹುಟ್ಟಿಕೊಂಡ ಶಾಕ್ತೇಯ ಆಚರಣೆಗಳು ನಾಡಹಬ್ಬಗಳಾಗಿ ರೂಪಾಂತರ ಪಡೆದವು. ವಿಜಯನಗರದ ಅರಸರು ಆರಂಭಿಸಿದ

ನವರಾತ್ರಿ ಆಚರಣೆಗಳು ಮೈಸೂರೊಡೆಯರಲ್ಲಿ ಮುಂದುವರೆದವು. ವಿಜಯನಗರದ ತುಳುವ ವಂಶದ ರಾಜರು ಮತ್ತು ಮೈಸೂರು ಅರಸರು ವೈಷ್ಣವರಾದರೂ ನವರಾತ್ರಿಯನ್ನು ಮಾಡುವುದಕ್ಕೆ ಕಾರಣ, ಅದು ಆಯುಧ ಯುದ್ಧ ಮತ್ತು ಸೈನಿಕ ಸಂಸ್ಕೃತಿಯನ್ನು ಜನಪ್ರಿಯಗೊಳಿಸುವ ಆಚರಣೆಯೂ ಆಗಿದ್ದುದು. ಮೈಸೂರಿನ ನವರಾತ್ರಿಯು ಆರಂಭದಲ್ಲಿ ಸೈನಿಕ ಕವಾಯತು, ಆಯುಧ ಪ್ರದರ್ಶನ, ಮಲ್ಲಯುದ್ಧ, ರಾಜನ ವೈಹಾಳಿ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳ ರೂಪದಲ್ಲಿತ್ತು. ರಾಜಪ್ರಭುತ್ವ ಹೋಗಿ ಚುನಾಯಿತ ಸರ್ಕಾರಗಳು ಬಂದ ಬಳಿಕ ಅದು, ಪ್ರಭುತ್ವದ ಉಸ್ತುವಾರಿಯಲ್ಲಿ ನಾಡಹಬ್ಬದ ಕಾರ್ಯಕ್ರಮವಾಗಿ ರೂಪಾಂತರಗೊಂಡ ಬಳಿಕವೂ ಇದೇ ಆಶಯಗಳು ಮುಂದುವರೆದವು. ಬದಲಾವಣೆಯೆಂದರೆ, ದೊರೆಯ ಜಾಗದಲ್ಲಿ ಚಾಮುಂಡಿ ಮೂರ್ತಿಯು ಬಂದಿದ್ದು. ಈಗಲೂ ನವರಾತ್ರಿಯಲ್ಲಿ ಪರಿವಾರದ ಜತೆ ಬನ್ನಿಮಂಟಪಕ್ಕೆ ಹೋಗಿ ಬನ್ನಿಮುಡಿಯುವ ಹಾಗೂ 'ಅಂಬು' ಹೊಡೆಯುವ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಮತ್ತು ರಾಜ್ಯಪಾಲರು ಭಾಗವಹಿಸುವರು. ಇದೇ ದಿನ ಹಿಂದಿನ ಮೈಸೂರು ರಾಜ್ಯದ ಪ್ರಾಂತ್ಯಾಧಿಕಾರಿಗಳು ನವರಾತ್ರಿಯಲ್ಲಿ ಅಂಬುಹೊಡೆಯುವ ಪದ್ಧತಿಯಿತ್ತು. ಈಗಲೂ ಅದು ತಹಸಿಲ್ದಾರರು ಬನ್ನಿ ಮುಡಿಯುವ ಕಾರ್ಯಕ್ರಮದಲ್ಲಿ ಪ್ರಭುತ್ವದ ಪ್ರತಿನಿಧಿಯಾಗಿ ಭಾಗವಹಿಸುವ ಪದ್ಧತಿಯಾಗಿ ಮುಂದುವರೆದಿದೆ. ಪ್ರಜಾಪ್ರಭುತ್ವದಲ್ಲಿ ಪ್ರಭುತ್ವವು ನಿರ್ದಿಷ್ಟ ಧರ್ಮದ ಉತ್ಸವವನ್ನು ಮುಂದೆ ನಿಂತು ಮಾಡುವುದು ಎಷ್ಟು ಉಚಿತವೆಂಬ ತಕರಾರುಗಳ ನಡುವೆಯೇ, ಪ್ರಭುತ್ವದ ಈ ನಡುಪ್ರವೇಶವು ಜನಮಾನ್ಯತೆ ಪಡೆದುಕೊಂಡಿದೆ.

9. ಆಧುನಿಕ ಶಕ್ತಿ ರಾಜಕಾರಣದಲ್ಲಿ ಸಮುದಾಯಗಳ ಧಾರ್ಮಿಕ ಲೋಕಗಳನ್ನು ಮನ್ನಿಸುವುದು ಚುನಾವಣ ಯುದ್ಧತಂತ್ರದ ಭಾಗವಾಗಿದೆ. ಈ ಪ್ರವೃತ್ತಿಯು ಶಾಕ್ತಲೋಕಗಳಲ್ಲಿ ರೂಪಾಂತರಗಳನ್ನು ತರುತ್ತಿದೆ. ಹಳೆ ಗುಡಿಗಳನ್ನು ಕೆಡವಿ ಹೊಸಗುಡಿ ಕಟ್ಟುವಂತಾಗಿದೆ; ಗುಡಿಯ ಸ್ವರೂಪದಲ್ಲಿ ಆಗುವ ಬದಲಾವಣೆಗಳು ಅದರ ಸೇವಾದಾರರ ಸಾಮಾಜಿಕ ಸ್ವರೂಪದಲ್ಲಿಯೂ ಬದಲಾವಣೆ ತರುತ್ತವೆ. ಜೀರ್ಣೋದ್ಧಾರವಾದ ಗುಡಿಗಳಲ್ಲಿ ಸಾಮಾನ್ಯವಾಗಿ ಬ್ರಾಹ್ಮಣ ಪುರೋಹಿತಿಕೆ ಬಂದಿದೆ ಮತ್ತು ಪ್ರಾಣಿಬಲಿ ನಿಂತಿದೆ ಇಲ್ಲವೇ ಗುಡಿಯಿಂದ ದೂರಕ್ಕೆ ಹೋಗಿದೆ. ಆದರೆ ಎಲ್ಲೆಲ್ಲಿ ಪ್ರಾಣಿಬಲಿ ವಿಷಯದಲ್ಲಿ ಜನರ ಭಾವನೆಗಳು ಬಹಳ ಬಲವಾಗಿವೆಯೊ ಅಲ್ಲಿ ಗುಪ್ತರೀತಿಯಲ್ಲಿ ಬಲಿ ನೆರವೇರಲು ಪ್ರಭುತ್ವವು ನೆರವಾಗುವ ಒಳ ಒಪ್ಪಂದ ಅಥವಾ ಉಪಾಯಗಾರಿಕೆಗಳೂ ನಡೆದಿವೆ.

10. ಸಮುದಾಯಗಳ ವಲಸೆ ಅಥವಾ ಸೈನಿಕರು ಯುದ್ಧ ಕೋಟೆರಕ್ಷಣೆಯ ಭಾಗವಾಗಿ ಮಾಡುವ ವಲಸೆ, ದೈವಗಳ ವರ್ಗಾವಣೆಗೂ ಕಾರಣವಾಗುತ್ತದೆ. ಮರಾಠಿ ಮನೆಮಾತಿನ ಅಂಬಾಭವಾನಿ ಭಕ್ತರಾದ ಭಾವಸಾರ ಕ್ಷತ್ರಿಯರು ರಟ್ಟರ ಕಾಲದಲ್ಲಿ ಸೈನಿಕ ಸೇವೆ ಸಲ್ಲಿಸಿದರೆಂದು ಇತಿಹಾಸಕಾರರು ಹೇಳುವರು. ಭವಾನಿಯ ಆರಾಧಕನಾಗಿದ್ದ ಶಿವಾಜಿಯ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ಸೇನೆಯ ವಿಸರ್ಜನೆಯಿಂದ ಉತ್ತರ ಕರ್ನಾಟಕದಲ್ಲಿ ನೆಲೆನಿಂತರು ಎಂಬ ವ್ಯಾಖ್ಯಾನವೂ ಇದೆ. ಅಂಬಾಭವಾನಿಗೆ ಉತ್ತರ ಕರ್ನಾಟಕದಲ್ಲಿ ನೆಲೆ ಸಿಕ್ಕಿದ್ದು ಶಿವಾಜಿ ಹಾಗೂ ಪೇಶ್ವೆಗಳ ಸೈನಿಕ ವಲಸೆಯಿಂದ. ಇದರಂತೆ, ಘಟ್ಟದ ಮೇಲಿನ ಭೈರರು ಟಿಪ್ಪುಸೈನ್ಯಕ್ಕೆ ಸೇರಿದ ಕರಾವಳಿಗೆ ಇಳಿದಾಗ ಮತ್ತು ಕೋಳಿಗಳ

ರಕ್ಷಣೆಗೆ ಉಳಿದಾಗ ತಮ್ಮ ಮಾರಿದೈವವನ್ನು ಅಲ್ಲಿ ಸ್ಥಾಪಿಸಿಕೊಂಡರು. ಕೆಳದಿ ಅರಸರು ತುಳುನಾಡನ್ನು ಆಳುವಾಗ ಘಟ್ಟದ ಮೇಲಿಂದ ಹೋಗಿ ನೆಲೆಸಿಂತ ಸೈನಿಕರ ವಲಸೆ ಭಾಗವಾಗಿ ಕಾಪುವಿನಲ್ಲಿ ದಂಡಿನಮಾರಿ ನೆಲೆನಿಂತಳು. ಕರಾವಳಿಯಲ್ಲಿ ಸೈನ್ಯದ ಭಾಗವಾಗಿ ರಾಣೆಬೆನ್ನೂರಿನಿಂದ ಹೋದ ರಾಣೆಯವರು ತಮ್ಮ ಸೀಮೆಯ ಉಚ್ಚಂಗೆಮ್ಮನನ್ನು ಅಲ್ಲಿ ಸ್ಥಾಪಿಸಿದರು. ಪ್ರಭುತ್ವಗಳು ಸೈನಿಕರ ಧಾರ್ಮಿಕ ಆಚರಣೆಗಳನ್ನು ಅವರ ರಾಜನಿಷ್ಠೆಯನ್ನು ಬಲಗೊಳಿಸಲು ಉತ್ತೇಜಿಸುತ್ತವೆ. ಕಾಪುವಿನ ಮಲ್ಲಾರು ಕೋಟೆಯಲ್ಲಿ ಕಾವಲುಗಾರನ ಶಾಕ್ತಭಕ್ತಿಯನ್ನು ಮನ್ನಿಸಿದ ಟಿಪ್ಪು ಅವನಿಗೆ ಗುಡಿಕಟ್ಟಿಸಿಕೊಳ್ಳಲು ಅವಕಾಶ ಕೊಡುವ ಕತೆ ಇದೇ ಅರ್ಥವನ್ನು ಧ್ವನಿಸುತ್ತಿದೆ. ಸೈನ್ಯದ ಧಾರ್ಮಿಕ ಶ್ರದ್ಧೆಯನ್ನು ಕೆಣಕುವುದು ಯುದ್ಧಕಾಲದಲ್ಲಿ ಅಪಾಯಕಾರಿ ಎಂಬ ದಿಟವು ಪ್ರಭುತ್ವ ಚೆನ್ನಾಗಿ ಅರಿತು ವ್ಯವಹರಿಸಿದೆ. ವೈಯಕ್ತಿಕ ಕೃತಜ್ಞತೆಗಿಂತ ಜನರನ್ನು ಸಂಪ್ರೀತಗೊಳಿಸಲು ಪ್ರಭುತ್ವಗಳು ಪಂಥಗಳಿಗೆ ಪೋಷಣೆ ಮಾಡುತ್ತ ಬಂದಿವೆ.

11. ಜನಪದ ಹಾಡುಗಳಲ್ಲಿ ಮಳಲಿ ಗಿಡ್ಡಮ್ಮ ಹಾಗೂ ಹಿರೇಗೌಜದ (ಚಿಕ್ಕಮಗಳೂರು) ಬಳಲಿಕವ್ವ ವಿಜಯನಗರದಿಂದ ಬಂದರೆಂಬ ಮಿತ್ ಇದೆ.[14] ಶಾಕ್ತದೈವಗಳು ಪ್ರಸಿದ್ಧ ರಾಜಕೀಯ ಕೇಂದ್ರವೊಂದರಿಂದ ಬರುವ ಈ ಮಿತ್‌ಗಳ ಅರ್ಥವೇನಿರಬಹುದು? ದೈವಗಳು ಬಂದದಿಕ್ಕನ್ನು ಸೂಚಿಸುವುದೊ ಅಥವಾ ಶಾಕ್ತೇಯ ಸಮುದಾಯಗಳು ವಿಜಯನಗರ ಪ್ರಾಂತ್ಯದಲ್ಲಿ ಬಂದಿರಬಹುದಾದ ಯಾವುದೊ ಆಪತ್ತಿನ ಕಾರಣದಿಂದ, ತಮ್ಮ ದೈವದೊಂದಿಗೆ ವಲಸೆ ಬಂದಿರುವುದನ್ನೊ? ಆದರೆ ಜನಪದವು ಪ್ರಭುತ್ವದ ಕ್ರಮಗಳ ಮೇಲೆ ಉದ್ದಕ್ಕೂ ತನ್ನ ಪ್ರತಿಕ್ರಿಯೆ ತೋರಿಕೊಂಡು ಬಂದಿದೆ. ಉದಾಹರಣೆಗೆ, ತನ್ನ ಅಪ್ಪಣೆಯಿಲ್ಲದ ತುಂಗಭದ್ರಾ ಹೊಳೆಯ ಮೇಲೆ ರೈಲ್ವೇ ಸೇತುವೆ ಕಟ್ಟಿದ್ದಕ್ಕಾಗಿ ಹುಲಿಗೆಮ್ಮನು ರೈಲನ್ನು ನಿಲ್ಲಿಸಿ ಡ್ರೈವರನ ಕ್ಷಮೆ ಕೇಳಿಸಿದ ಹಾಡು. ಮಾರಿಕಣಿವೆಯ ಡ್ಯಾಮು ಕಟ್ಟಿದ್ದರಿಂದ ಮುಳುಗಿದ ಊರುಗಳಿಗೆ ದುಃಖಿಸುವ ("ಮಾರಿಯ ಕಣಿವೇಯ ಮ್ಹಾರಾಜ ಕಟ್ಟಿಸಿದ ಮೂವತ್ತೂರ‍್ಹಳ್ಳಿ ಮುಣುಗ್ಯಾವೊ ಅಂಬದು ಕೇಳಿ, ಆಕೆ ಬೇವಿನ್ಹಳ್ಳಿ ಕೆಂಚಿ ಅಳುತಾಳೆ") ಹಾಡು. ಜನಪದವು ಕೆಲವು ಕಡೆ ಶಾಕ್ತಕ್ಕೆ ಸಿಕ್ಕ ಪ್ರಭುತ್ವ ಮನ್ನಣೆಗೆ ಸಂಭ್ರಮಿಸಿದರೆ, ಕೆಲವು ಕಡೆ ಪ್ರಭುತ್ವಕ್ಕೆ ಪ್ರತಿರೋಧ ಮಾಡುವುದನ್ನು ದಾಖಲಿಸುತ್ತದೆ. ದೇವಿಯ ಕೋಪ ಮತ್ತು ಪ್ರಸನ್ನತೆಗಳ ಹೆಸರಲ್ಲಿ ಜನ ವ್ಯಕ್ತಪಡಿಸಿರುವ ಈ ನಿಲುವುಗಳು ಪ್ರಭುತ್ವಗಳ ಮೇಲಿನ ರಾಜಕೀಯ ಟಿಪ್ಪಣಿಗಳಂತಿವೆ. ಮೈಸೂರೊಡೆಯರು ಕಟ್ಟಿಸಿದ ಅಣೆಕಟ್ಟೆಗಳಿಗೆ ಆಧುನಿಕ ನಾಗರಿಕ ಸಮಾಜ ಕೃತಜ್ಞತೆ ಸಲ್ಲಿಸಿದರೆ, ಕೃಷಿಮೂಲದ ಜನಪದವು ವಿಷಾದ ವ್ಯಕ್ತಮಾಡುತ್ತದೆ.

ಪ್ರಭುತ್ವ ಮತ್ತು ಶಾಕ್ತದ ಸಂಬಂಧವು ಕರ್ನಾಟಕದ ಚರಿತ್ರೆಯಲ್ಲಿ ಕಾಲಕಾಲಕ್ಕೂ ಬದಲಾಗುತ್ತ ಬಂದಿದೆ. ಆದರೆ ಕೆಲವು ಲಕ್ಷಣಗಳು ಮಾತ್ರ ನಿರಂತರವಾಗಿವೆ. ಧರ್ಮವು ಯಾವತ್ತೂ ಕೇವಲ ಭಕ್ತಿಯ ಭಾವುಕವಾದ ಸಂಗತಿಯಲ್ಲ. ಅದು ಸಮುದಾಯಗಳ ದುಡಿಮೆ ಮತ್ತು ಉತ್ಪಾದನೆಯ ಜತೆ, ಆಳುವವರ್ಗಗಳ ಯುದ್ಧ ರಾಜ್ಯವಿಸ್ತರಣೆ ಮತ್ತು ಆಡಳಿತಗಳ ಜತೆ ಸಂಬಂಧಪಟ್ಟಿದೆ. ಇವೆರಡೂ ಪರಸ್ಪರ ಬೇರೆಬೇರೆ ಬಿಂದುಗಳಾದರೂ ಇವುಗಳ ನಡುವೆ ವಿಶಿಷ್ಟವಾದ ಕೊಡುಕೊಳೆ ನಡೆದಿದೆ. ಈ ಕೊಡುಕೊಳೆಯ ಪರಿಣಾಮಗಳು ಜನತೆಯ ಬದುಕಿನಲ್ಲಿ ಉಂಟುಮಾಡಿರುವ ಪರಿಣಾಮಗಳು ಬಹುರೂಪಿಯಾಗಿವೆ.

ಕೊನೆ ಟಿಪ್ಪಣಿಗಳು

1. *ಕರ್ನಾಟಕ: ಕನ್ನಡ ವಿಷಯ ವಿಶ್ವಕೋಶ,* ಪು. 417
2. 'ಸವದತ್ತಿ ಎಲ್ಲಮ್ಮ: ಚರಿತ್ರೆ ಮತ್ತು ಸ್ಥಳವಿವರ', *ಜಾನಪದ ಸಾಹಿತ್ಯ ದರ್ಶನ–11,* ಪು. 26–27
3. ಸೋಮಶೇಖರ್ ಎಸ್.ವೈ., *ಕರ್ನಾಟಕದ ಬಿರುದಾವಳಿಗಳು* ಕೃತಿ ಈ ದೃಷ್ಟಿಯಿಂದ ಉಪಯಕ್ತವಾದ ಆಕರ ಗ್ರಂಥವಾಗಿದೆ.
4. ಎಂ.ಎಂ.ಕಲಬುರ್ಗಿ, 'ಬಳರಿ ದೇವತೆ', *ಮಾರ್ಗ–3,* ಪು. 316
5. ನೋಡಿ: ಎಡ್ಗರ್ ಥರ್ಸ್ಟನ್ (ಸಂ.), *ಕ್ಯಾಸ್ಟ್ ಅಂಡ್ ಟ್ರೈಬ್ಸ್ ಆಫ್ ಮೈಸೂರು* ಹಾಗೂ *ಹೆನ್ರಿ ವೈಟ್‌ಹೆಡ್‌ನ ವಿಲೇಜ್‌ಗಾಡ್ಸ್ ಆಫ್ ಸೌತ್ ಇಂಡಿಯಾ* ಕೃತಿಗಳು.
6. ವೈಯಕ್ತಿಕವಾಗಿ ಮೂಢನಂಬಿಕೆಯ ವಿರೋಧಿಯಾಗಿರುವ ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಮೌಢ್ಯನಿಷೇಧ ಕಾಯ್ದೆಯನ್ನು ತರುವುದಕ್ಕೆ ಸಾಧ್ಯವಾಗಿಲ್ಲದೆ ಇರುವ ಸನ್ನಿವೇಶವನ್ನು ಇಲ್ಲಿ ನೆನೆಯಬಹುದು.
7. *ಕುವೆಂಪು ಸಮಗ್ರ ಕಾವ್ಯ, ಸಂ–2,* ಪು. 1057
8. ನೋಡಿ: ಎಲ್.ಎಸ್. ಶೇಷಗಿರಿರಾವ್ ಸಂಪಾದಿಸಿದ *ಕನ್ನಡ ತಾಯಿಗೆ ನುಡಿನಮನ* ಹಾಗೂ ಸಿ.ಆರ್. ಗೋವಿಂದರಾಜು ಅವರ *ಕನ್ನಡಮ್ಮ* ಕೃತಿಗಳು.
9. ನೋಡಿ: ಕೋಟಗಾನಹಳ್ಳಿ ರಾಮಯ್ಯನವರ *ಸಿಂದ್ ಮಾದಿಗರ ಸಂಸ್ಕೃತಿ;* ಚಿದಾನಂದಮೂರ್ತಿ ಎಂ. ಅವರ *ಮಧ್ಯಕಾಲೀನ ಕರ್ನಾಟಕದಲ್ಲಿ ಅಸ್ಪೃಶ್ಯತೆ* ಹಾಗೂ ಶೇಷಶಾಸ್ತ್ರಿ ಆರ್.ರವರ *ಕರ್ನಾಟಕದ ವೀರಗಲ್ಲುಗಳು* ಕೃತಿಗಳು.
10. John Brouwer, 1995, *The Makers of the World,* ಪು. 203–211
11. ಕೃಷ್ಣಮೂರ್ತಿ ಹನೂರು, 'ಬೆಂಗಳೂರು ಸುತ್ತಮುತ್ತಲ ಪ್ರದೇಶದಲ್ಲಿ ಕರಗ', ಪು. 80
12. ಗೋಸ್ವಾಮಿ ಮತ್ತಿತರರು *ಮೈಸೂರು ಚಾಮುಂಡೇಶ್ವರಿ ದೇವಾಲಯ: ಒಂದು ಸಾಮಾಜಿಕ ಅಧ್ಯಯನ,* ಪು. 19–20
13. ನೋಡಿ: ಸಿದ್ಧಲಿಂಗಯ್ಯ, *ಗ್ರಾಮದೇವತೆಗಳು,* ಪು.240
14. ವಸು ಮಳಲಿ, 'ಮಳಲಿ ಗಿಡ್ಡಮ್ಮ: ಚರಿತ್ರೆ ಕಟ್ಟುವ ಸಾಧ್ಯತೆಗಳು', *ಕನ್ನಡದೊಳ್ ಭಾವಿಸಿದ ಜನಪದಂ* ಕೃತಿಯಲ್ಲಿ.

ಆಕರ ಗ್ರಂಥಗಳು

ಅ.ಕೃತಿಗಳು

- ಕಲಬುರ್ಗಿ, (ಸಂ.) 1987, *ಜನಪದಸಾಹಿತ್ಯ ದರ್ಶನ–11,* (ಎಲ್ಲಮ್ಮ), ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯ.
- ಕುಮಾರ್ ಬಿ.ಆರ್., 2003, *ಮುದ್ದೆಕಂಬಾರರು,* ಮೈಸೂರು: ಸಾರಾ ಎಂಟರ್ ಪ್ರೈಸಸ್.
- ಕುವೆಂಪು, 2000, *ಸಮಗ್ರಕಾವ್ಯ ಸಂ.2,* ಹಂಪಿ: ಕನ್ನಡ ವಿಶ್ವವಿದ್ಯಾಲಯ.
- ಕೋಟಗಾನಹಳ್ಳಿ ರಾಮಯ್ಯ, 1993, *ಸಿಂಧ್ ಮಾದಿಗರ ಸಂಸ್ಕೃತಿ,* ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ.
- ಗೋಸ್ವಾಮಿ ಬಿ.ಬಿ. ಹಾಗೂ ಎಸ್.ಜಿ. ಮೊರಬ, (ಮೂಲ), ಮಹೇಶ ತಿಪ್ಪಶೆಟ್ಟಿ (ಅನು.), 2001, *ಮೈಸೂರು ಚಾಮುಂಡೇಶ್ವರಿ ದೇವಾಲಯ: ಒಂದು ಸಾಮಾಜಿಕ ಅಧ್ಯಯನ,* ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ.
- ಚಿದಾನಂದಮೂರ್ತಿ ಎಂ., 1985, *ಮಧ್ಯಕಾಲೀನ ಕನ್ನಡ ಸಾಹಿತ್ಯ ಮತ್ತು ಅಸ್ಪೃಶ್ಯತೆ,* ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯ.

- ದೇವರ ಕೊಂಡಾರೆಡ್ಡಿ (ಸಂ.). 1998. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ 1 (ಬಳ್ಳಾರಿ ಜಿಲ್ಲೆ)*. ಹಂಪಿ: ಕನ್ನಡ ವಿಶ್ವವಿದ್ಯಾಲಯ.
- ದೇವರ ಕೊಂಡಾರೆಡ್ಡಿ (ಸಂ.). 1999. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ 2* (ಕೊಪ್ಪಳ ಜಿಲ್ಲೆ). ಹಂಪಿ: ಕನ್ನಡ ವಿಶ್ವವಿದ್ಯಾಲಯ.
- ಭಟ್ ಸೂರಿ ಕೆ.ಜಿ. ಮತ್ತು ಇತರರು. (ಸಂ.). 2006. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ 9* (ಬಾಗಲಕೋಟೆ ಜಿಲ್ಲೆ). ಹಂಪಿ: ಕನ್ನಡ ವಿಶ್ವವಿದ್ಯಾಲಯ.
- ನಾಯಕ ಹಾ.ಮಾ. (ಪ್ರ.ಸಂ.). 1979. *ಕರ್ನಾಟಕ: ಕನ್ನಡ ವಿಷಯ ವಿಶ್ವಕೋಶ*. ಮೈಸೂರು: ಕನ್ನಡ ಅಧ್ಯಯನ ಸಂಸ್ಥೆ.
- ರಮೇಶ್ ಎಚ್., 2015. *ಅರಸೀಕೆರೆ ದುಂಡಿನ ಮದುಗಮ್ಮ ಜಾತ್ರೆ: ಚಾರಿತ್ರಿಕ ಅಧ್ಯಯನ*. ಬೆಂಗಳೂರು: ಅನ್ನಪೂರ್ಣ ಪಬ್ಲಿಷಿಂಗ್ ಹೌಸ್.
- ಶಂಬಾ ಜೋಶಿ. (ಮರಾಠಿ ಮೂಲ). 1990. ಕೀರ್ತಿನಾಥ ಕುರ್ತಕೋಟಿ (ಅನು.). *ಮಹಾರಾಷ್ಟ್ರ ಸಂಸ್ಕೃತಿ*. ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ.
- ಶೇಷಗಿರಿರಾವ್ ಎಲ್.ಎಸ್., (ಸಂ). 1993. *ಕನ್ನಡ ತಾಯಿಗೆ ನುಡಿನಮನ*. ಹಂಪಿ: ಕನ್ನಡ ವಿಶ್ವವಿದ್ಯಾಲಯ.
- ಶೇಷಶಾಸ್ತ್ರಿ ಆರ್., 1982. *ಕರ್ನಾಟಕದ ವೀರಗಲ್ಲುಗಳು*. ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.
- ಸಿದ್ಧಲಿಂಗಯ್ಯ. 1997. *ಗ್ರಾಮದೇವತೆಗಳು*. ಬೆಂಗಳೂರು: ಮೂಲಭಾರತಿ ಪ್ರಕಾಶನ.
- ಸೋಮಶೇಖರ್ ಎಸ್.ವೈ., 2014. *ಕರ್ನಾಟಕದ ಬಿರುದಾವಳಿಗಳು*. ಹಂಪಿ: ಕನ್ನಡ ವಿಶ್ವವಿದ್ಯಾಲಯ.
- Anantakrishna Iyer. 1935. *The Mysore Caste and Tribes*. Mysore: University of Mysore.
- Henry whitehead D.D., 1921. *The Village Gods of South India*. Calcutta: Association Press.
- John Brouwer. 1995. *The Makers of the World*. Oxford University Press.

ಆ. ಲೇಖನಗಳು

- ಕಪಟರಾಳ ಕೃಷ್ಣರಾವ್. 1970. 'ಶ್ರೀಚಂದಲಾ ಪರಮೇಶ್ವರಿ'. *ಕರ್ನಾಟಕ ಸಂಸ್ಕೃತಿ ಸಂಶೋಧನೆ*. ಉಷಾ ಸಾಹಿತ್ಯ ಮಾಲೆ, ಮೈಸೂರು.
- ಕಲಬುರ್ಗಿ ಎಂ.ಎಂ., 1988. 'ಬಾದುಬ್ಬೆ'. *ಮಾರ್ಗ 2*. ಸಪ್ನ ಬುಕ್ ಹೌಸ್. ಬೆಂಗಳೂರು. 2010
- ಕೃಷ್ಣಮೂರ್ತಿ ಹನೂರು. 'ಬೆಂಗಳೂರು ಸುತ್ತಮುತ್ತಲ ಪ್ರದೇಶಗಳಲ್ಲಿ ಕರಗ'. *ನುಡಿಶೋಧ*. ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು. 2004
- ಚಕ್ರವರ್ತಿ ವಿ.ಎಂ.. ಆಲಂಪುರ. *ಶ್ರೀಶೈಲ ಪರಿಸರ: ಸಾಂಸ್ಕೃತಿಕ ಅಧ್ಯಯನ* ಕೃತಿಯಲ್ಲಿ. ಅನು: ಜಾಜಿ ದೇವೇಂದ್ರಪ್ಪ. ಪ್ರಭುದೇವರ ಜನಕಲ್ಯಾಣ ಸಂಸ್ಥೆ. ಸೊಂಡೂರು. 2009
- ಚಿದಾನಂದಮೂರ್ತಿ ಎಂ.. ಮಧ್ಯಕಾಲೀನ ಕರ್ನಾಟಕದ ಕೆಲವು ರಹಸ್ಯ ತಾಂತ್ರಿಕ ಪಂಥಗಳು. *ಸಂಶೋಧನ ತರಂಗ 2*. ಬೆಂಗಳೂರು ವಿಶ್ವವಿದ್ಯಾಲಯ. ಬೆಂಗಳೂರು. 1970
- ಶ್ರೀಕಂಠಶಾಸ್ತ್ರಿ ಎಸ್., 'ಶ್ರೀಚಾಮುಂಡೇಶ್ವರಿ'. *ಸಂಶೋಧನ ಲೇಖನಗಳು*. ಬಾ.ರಾ.ಗೋಪಾಲ (ಸಂ.). ಮೈಸೂರು ವಿಶ್ವವಿದ್ಯಾನಿಲಯ. ಮೈಸೂರು. 1975
- ವಸು ಎಂ.ವಿ., 'ಮಳಲಿ ಗಿಡ್ಡಮ್ಮ: ಚರಿತ್ರೆ ಕಟ್ಟುವ ಸಾಧ್ಯತೆಗಳು'. *ಕನ್ನಡಮೊಳ್ ಭಾವಿಸಿದ ಜನಪದಂ*. ಚಿಂತನ ಪುಸ್ತಕ. ಬೆಂಗಳೂರು. 2009

■

ದೇವಿಯೂ ವೈಷ್ಣವಧರ್ಮವೂ, ಪ್ರಾದೇಶಿಕ ಮೇಲುಗೈ ಸಾಧಿಸುವ ತವಕದಲ್ಲಿ: ರಾಜ ಒಡೆಯರ್ ಕಾಲದ (ಕ್ರಿ.ಶ. 1578–1617) ಒಡೆಯರ್ ದೈವಭಕ್ತಿ ಪರಂಪರೆಗಳು

□ ಇಂಗ್ಲಿಷ್ ಮೂಲ:
ಕ್ಯಾಲೆಬ್ ಸಿಮನ್ಸ್
ಸಹಾಯಕ ಪ್ರಾಧ್ಯಾಪಕರು
ಹಾಗೂ ಧಾರ್ಮಿಕ ಅಧ್ಯಯನದ
ಪದವಿಪೂರ್ವ ನಿರ್ದೇಶಕರು,
ಧಾರ್ಮಿಕ ಅಧ್ಯಯನ ಕಾರ್ಯಕ್ರಮ,
ಮಾನವಿಕ ಶಾಸ್ತ್ರ ಮಹಾವಿದ್ಯಾಲಯ
ಅರಿಜೋನಾ ವಿಶ್ವವಿದ್ಯಾಲಯ
calebsimmons@email.arizona.edu

□ ಕನ್ನಡಕ್ಕೆ:
ಮನು ವಿ. ದೇವದೇವನ್
ಸಹಾಯಕ ಪ್ರಾಧ್ಯಾಪಕರು,
ಮಾನವಿಕ ಮತ್ತು ಸಮಾಜ
ವಿಜ್ಞಾನ ವಿಭಾಗ,
ಐ.ಐ.ಟಿ ಮಂಡಿ–175001,
ಹಿಮಾಚಲ ಪ್ರದೇಶ
discoverie@gmail.com

ಮಧ್ಯಯುಗದ ದಕ್ಷಿಣ ಭಾರತದಲ್ಲಿ ಅರಸನಾಗುವುದೆಂದರೆ ಪ್ರದೇಶವೊಂದರ ಮೇಲೆ ಅಧಿಕಾರ ಸಾಧಿಸಿ, ಸೈನಿಕ ಶಕ್ತಿ ಹಾಗೂ ಆಡಳಿತ ಕಾರ್ಯಾಚರಣೆಗಳ ಮೂಲಕ ಅಂಥ ಅಧಿಕಾರವನ್ನು ಚಲಾಯಿಸುವುದಷ್ಟೇ ಆಗಿರಲಿಲ್ಲ. ರಾಜ್ಯವನ್ನು ಸುಭದ್ರಗೊಳಿಸುವ ನಿಟ್ಟಿನಲ್ಲಿ ನಿರಂತರ ನಡೆಯುತ್ತಿದ್ದ ಪರಿಶ್ರಮಗಳ ಅಂಗವಾಗಿ ನೆರೆಯ ರಾಜ್ಯಗಳೊಂದಿಗೆ ಈ ಕಾರ್ಯಕ್ಕೆ ನೆರವಾಗಬಲ್ಲಂಥ ಸಂಬಂಧಗಳನ್ನು ಬೆಸೆಯುವುದಕ್ಕೂ ಅದು ಸೀಮಿತವಾಗಿರಲಿಲ್ಲ. ಅರಸನ ಕಾರ್ಯಕ್ಷೇತ್ರದ ದೈನಂದಿನ ನಿರ್ವಹಣೆಗೆ ಈ ಕ್ರಮಗಳು ಬಹುಮುಖ್ಯವಾಗಿದ್ದವು ನಿಜ, ಆದರೆ ಅರಸುಗಳು ಅಂದಿನ ಯುಗದಲ್ಲಿ ಬೆಸೆದ ಅತ್ಯಂತ ಮಹತ್ವದ ಸಂಬಂಧವೆಂದರೆ ನಿಗದಿತ ದೇವತೆಯೊಂದರ ಜೊತೆಗಿನ ದೈವಭಕ್ತಿ ಹಾಗೂ ತಾತ್ವಿಕ ನಂಟು. ತಮ್ಮ ಮಾನವ ಸಹಚರರಂತೆಯೇ, ದೇವತೆಗಳಿಗೂ ತಮ್ಮದೇ ಆದ ವಿಶಿಷ್ಟ ಪಾತ್ರಗಳನ್ನು ನಿರ್ವಹಿಸುವುದಿತ್ತು. ಅವು ಅರಸುಗಳ ರಾಜಕೀಯ ಏಳಿಗೆಯ ವಿವಿಧ ಹಂತಗಳಲ್ಲಿ ಸಹಾಯಕವಾಗುತ್ತಿದ್ದವು. ಮಾನವರೊಂದಿಗಿನ ಮೈತ್ರಿಗಿಂತ ಭಿನ್ನವಾಗಿ, ದೇವತೆಗಳೊಂದಿನ ಸಂಬಂಧವು ರಾಜ್ಯಾಡಳಿತವನ್ನು ಕೈಗೊಳ್ಳಲು ಅಗತ್ಯವಾದ ಅಧಿಭೌತಿಕ ಪರಿಯಂತ್ರವೊಂದನ್ನು ನಿರ್ಮಿಸಿಕೊಡುತಿತ್ತು. ಅರಸನು ಆಯ್ಕೆ ಮಾಡಿಕೊಂಡ ದೇವತೆಯು ಆ ರಾಜ್ಯಕ್ಕೆ ಒಟ್ಟಾರೆಯಾಗಿ ತಾತ್ವಿಕವೂ ಅಧಿಭೌತಿಕವೂ ಆದ ಮಾರ್ಗದರ್ಶನ ನೀಡುತಿತ್ತು. ಈ ದೃಷ್ಟಿಯಿಂದ ಹೇಳುವುದಾದರೆ, ಎಲ್ಲ ದೇವತೆಗಳೂ ಸಮಾನ

ಗುಣದವರಾಗಿರಲಿಲ್ಲ. ಕ್ಷುದ್ರ, ಸ್ಥಳೀಯ, ತಾಂತ್ರಿಕ ಮೂಲದ ದೇವಿಯರು ಭಯ ಹಾಗೂ ಉತ್ಕರ್ಷವನ್ನುಂಟು ಮಾಡಿದರೆ, ವಿಷ್ಣು-ನಾರಾಯಣನಂಥ ಇತರರು ಲೋಕಪಾಲನೆಯ ಆಶಯವನ್ನು ಪ್ರಕಟಪಡಿಸುತ್ತಿದ್ದರು.

ದೇವತಾ ಸ್ವರೂಪವನ್ನು ಕಾಲಕಾಲಕ್ಕೆ ಸ್ಮರಿಸುವುದು ಮಾತ್ರವಾಗಿರದೆ ದೇವತೆಗಳನ್ನೂ ಅವರಿಗೆ ಸಂಬಂಧಿಸಿದ ದೈವಭಕ್ತಿಯ ಪರಂಪರೆಗಳನ್ನೂ ಗುಪ್ತರ ಕಾಲದಿಂದಲೇ ಪೌರಾಣಿಕ ರಾಜಕಾರಣ ವ್ಯವಸ್ಥೆಯೊಂದರ ಜೊತೆ ಬೆಸೆದು ಅದಕ್ಕೆ ಸ್ಪಷ್ಟವೂ ಸೂಕ್ಷ್ಮವೂ ಆದ ರೂಪವೊಂದನ್ನು ನೀಡಲಾಗಿತ್ತು. ಈ ವ್ಯವಸ್ಥೆಯು ಅಧಿಭೌತಿಕ ಶ್ರೇಣಿಯೊಂದನ್ನು ಕಟ್ಟಿಕೊಂಡು, ಕೆಳಸ್ತರದ ದೇವತೆಗಳಾದ ಯಕ್ಷರು, ಅಪ್ಸರೆಯರು, ಬಳಿಕ ಸ್ಥಳೀಯವೂ ಕೆಲವೊಮ್ಮೆ ಕ್ಷುದ್ರವೂ ಆದ ದೇವಿಯರಂಥ ದೇವತೆಗಳು, ನಂತರ ಪರಮಾತ್ಮ ತತ್ವದೊಂದಿಗೆ ಗುರುತಿಸಿಕೊಂಡ ವಿಷ್ಣು, ಶಿವರಂತ ದೇವತೆಗಳು, ಹೀಗೆ ಹಲವು ಸ್ತರಗಳ ದೇವತಾಶ್ರೇಣಿಯನ್ನು ನಿರ್ಮಿಸಿತು. ಈ ದೇವತೆಗಳನ್ನು ಮಾನವರ ರಾಜಕೀಯ ಸಂರಚನೆಯ ಮೇಲೆ ಪ್ರತಿಬಿಂಬಿಸಲಾಗಿ ಅತ್ಯಂತ ಎತ್ತರದ ಸ್ತರವನ್ನು ಪರಮೇಶ್ವರನೂ (ಪರಮ ಅಧಿಪತಿ) ಕೆಳಗಿನ ಸ್ತರಗಳನ್ನು ಅವನ ಸಾಮಂತರೂ ಪಡೆದುಕೊಳ್ಳುವ ಸಂರಚನೆಯೊಂದಕ್ಕೆ ಅದು ಕಾರಣವಾಯಿತು. ಗುಪ್ತ ಸಾಮ್ರಾಜ್ಯದ ಪತನದ ನಂತರ ಪರಮೇಶ್ವರ ಸ್ಥಾನವು ನಾಮಮಾತ್ರಕ್ಕೆ ಉಳಿದು ಹಲವು ಸಣ್ಣ ಪ್ರಾದೇಶಿಕ ರಾಜ್ಯಗಳು ಏಳಿಗೆ ಪಡೆದವು. ಸಾರ್ವತ್ರಿಕ ಅಧಿಪತಿಯ ಈ ಅಭಾವಕ್ಕೆ ಕಲಿಯುಗದ ಕೊನೆಯಲ್ಲಿ ಉಂಟಾಗುವ ಧರ್ಮದ ಕೊರತೆಯಿಂದಾಗಿ ನೈತಿಕತೆ ಕುಸಿದು ಸಾರ್ವತ್ರಿಕ ಅರಸನೊರ್ವನ ಸಾಧ್ಯತೆಯೇ ಇಲ್ಲದಂತಾದುದೇ ಕಾರಣವೆಂದು ಅಂದಿನ ಧಾರ್ಮಿಕ ತಜ್ಞರೂ ತತ್ವಶಾಸ್ತ್ರ ಪ್ರವೀಣರೂ ಸ್ಪಷ್ಟನೆ ನೀಡಿದರು. ಆದರೆ ಒಂಭತ್ತನೆಯ ಶತಮಾನದ ವೇಳೆಗೆ ಮಧ್ಯಯುಗೀನ ದಕ್ಷಿಣ ಭಾರತದಲ್ಲಿ ಅರಸುಗಳೂ ಅವರ ಮಂತ್ರಿಗಳೂ ಅಳಿದುಹೋದ ಈ ವ್ಯವಸ್ಥೆಗೆ ಪುನಃ ಚಾಲನೆ ನೀಡಲು ಹವಣಿಸಿ ಪರಮಾಧಿಪತಿ ಎಂಬ ತತ್ವವನ್ನು ಮತ್ತೆ ಎತ್ತಿ ಹಿಡಿಯತೊಡಗಿದರು. ಕ್ರಮೇಣ, ವಿಷ್ಣುಪುರಾಣದ ವಿವಿಧ ಭಾಗಗಳ ಮರು ವ್ಯಾಖಾನದ ಮೂಲಕ ಕಲಿಯುಗದಲ್ಲಿಯೂ ಪರಮೇಶ್ವರ ಪದವಿಗೆ ಯೋಗ್ಯನಾದ ಅರಸನ ಏಳಿಗೆ ಸಾಧ್ಯವಿದೆಯೆಂದು ವಾದಿಸುತ್ತ ಅಂತಹ ಸಾಧ್ಯತೆಯನ್ನು ಎತ್ತಿಹಿಡಿಯುವ ಹೊಸ ವ್ಯವಸ್ಥೆಯೊಂದಕ್ಕೆ ರೂಪುನೀಡಿದರು.[1] ಅಂತ ಪ್ರಮುಖ ಸ್ಥಾನಕ್ಕೇರಲು ಬೇಕಾದ ಸಾಮರ್ಥ್ಯವನ್ನು ಇಕ್ಷ್ವಾಕು ಯಾ ಯಾದವ ಕುಲಗಳಲ್ಲಿ ಜನಿಸಿದ ವ್ಯಕ್ತಿ ಮಾತ್ರ ಹೊಂದಿದ್ದಾನೆಂದು ಈ ಪುರಾಣ ಹೇಳುತ್ತದೆ. ಹೀಗಾಗಿ ಮಧ್ಯಯುಗಾರಂಭದ ದಕ್ಷಿಣ ಭಾರತದಲ್ಲಿ ಸಾರ್ವಭೌಮ ಅಧಿಪತಿಯಾಗಲು ಹವಣಿಸುವ ಅರಸನಿಗೆ ಗುಪ್ತೋತ್ತರ ಯುಗದ ಸಾಮಂತ-ಊಳಿಗಮಾನ್ಯ ವ್ಯವಸ್ಥೆಯಲ್ಲಿನ ಈ ವಿಶಾಲ ಹಾಗೂ ದಿವ್ಯತ್ವದ ಮಾದರಿಯಡಿಯಲ್ಲಿನ ಸ್ಪಷ್ಟವಾದೊಂದು ವಂಶಾವಳಿಯ ಮೂಲಕ ನ್ಯಾಯಸಮ್ಮತಿ ಪಡೆದುಕೊಳ್ಳುವುದು ಅನಿವಾರ್ಯವಾದೊಂದು ಸೂತ್ರವೇ ಆಗಿತ್ತು. ಈ ಎರಡು ವಂಶಾವಳಿಗಳಲ್ಲಿ ಒಂದರ ಮೂಲಕ ನ್ಯಾಯಸಮ್ಮತಿ ಪಡೆದುಕೊಂಡ ಅರಸುಮನೆತನಕ್ಕೆ ತಮ್ಮ ಅರಸನೊಬ್ಬ ಸಾರ್ವಭೌಮ ಅಧಿಪತಿಯಾಗಿ ಲೋಪದೋಷಗಳಿರದ ಸಾಮ್ರಾಜ್ಯವೊಂದನ್ನು ಸ್ಥಾಪಿಸಿ, ಹಿಂದಿನ, ಶ್ರೇಷ್ಠವೂ ಹೆಚ್ಚು ನೈತಿಕವೂ ಆದ, ಯುಗದಲ್ಲಿ

ನಿರ್ಮಿಸಲಾದ ಧಾರ್ಮಿಕ ಕಟ್ಟಳೆಗಳೊಂದಿಗೆ ನೀತಿಯುಕ್ತವಾಗಿ ಆಳ್ವಿಕೆ ನಡೆಸುವ ಸಾಧ್ಯತೆ ತೆರೆದುಕೊಂಡಿತು. ಅರಸು ಮನೆತನದ ವಂಶಾವಳಿಯನ್ನು ಕಟ್ಟಿಕೊಳ್ಳುವ ಈ ಕ್ರಿಯೆಯು ಬ್ರಹ್ಮ ಎಂಬ ಸ್ಥೂಲ ಶಕ್ತಿಯೊಂದಿಗೆ ಸಮೀಕರಿಸಲಾದ ಶಿವನ ಅಥವಾ ವಿಷ್ಣುವಿನ ಪ್ರಾಪಂಚಿಕ ರೂಪದೊಂದಿಗೆ ಭಕ್ತಿಸಂಬಂಧಗಳನ್ನು ಸ್ಥಾಪಿಸುವ ಕಾರ್ಯದ ಜೊತೆ ಕೈಜೋಡಿಸಿಯೇ ಮುನ್ನಡೆಯಿತು. ರಕ್ತ ಸಂಬಂಧದ ಮೂಲಕವಾಗಲಿ ಭೌಗೋಳಿಕ ನೆಲೆಯಿಂದಾಗಲಿ ಪರಸ್ಪರ ಸಂಬಂಧ ಹೊಂದಿರದ ಜನಾಂಗಗಳನ್ನು ಒಗ್ಗೂಡಿಸತಕ್ಕ ಸ್ಥೂಲರೂಪದ ರಾಜಕಾರಣದ ಅಗತ್ಯತೆಯು ಸಾರ್ವಭೌಮ ಅಧಿಪತಿಗೆ ಇದ್ದುದೇ ಇದಕ್ಕೆ ಕಾರಣ. ದೇವತೆಗಳು, ಮಾನವರು, ಜಂತು ಮೃಗಾದಿಗಳೇ ಮೊದಲಾಗಿ ಎಲ್ಲವನ್ನೂ ಏಕೀಕರಿಸುವ ತತ್ವಗಳನ್ನು ಪೌರಾಣಿಕ ದೃಷ್ಟಿಕೋನದ ಸತ್ಯದ ಪರಿಕಲ್ಪನೆಯಿಂದ ಎರವಲು ಪಡೆಯಲಾಯಿತು. ಈ ಪ್ರಕ್ರಿಯೆಯಡಿಯಲ್ಲಿ ಅವುಗಳನ್ನು ವರ್ಗೀಕರಿಸಿ, ಶ್ರೇಣೀಕರಣಕ್ಕೆ ಗುರಿಪಡಿಸುತ್ತ ಏಕೀಕರಿಸಲಾಯಿತು. ಮಧ್ಯಯುಗೀನ ದಕ್ಷಿಣ ಭಾರತದ ಈ ರಾಜತ್ವ ವ್ಯವಸ್ಥೆಯಲ್ಲಿ ಅರಸನು ಭೂಮಿಯಲ್ಲಿ (ಬ್ರಹ್ಮ ಎಂಬ) ಪರಮ ಅಧಿಭೌತಿಕ ಏಕೀಕರಣಕಾರನ ಪ್ರತಿಬಿಂಬವಾದನು. ಹೀಗಾಗಿ, (ಕ್ಷುದ್ರವೂ ತಾಂತ್ರಿಕ ಮೂಲಕ್ಕೆ ಸೇರಿದ್ದೂ ಆದ ದೇವಿಯರಂತ) ಸ್ಥೂಲವಲ್ಲದ ಸ್ಥಳೀಯ ದೇವತೆಗಳೊಂದಿಗಿನ ಸಂಬಂಧದಲ್ಲಿ ಅಪಾಯವೊಂದು ಅಡಗಿತ್ತು. ಅವುಗಳ ಸೀಮಿತ ಭೌತಿಕ ವ್ಯಾಪ್ತಿಯಿಂದಾಗಿ, ಅರಸನ ಹಾಗೂ ಅವನ ಸಾಮ್ರಾಜ್ಯದ ಪ್ರಭಾವವು ಸ್ಥಳೀಯ ರಾಜಕೀಯ ರೂಪಗಳ ವ್ಯಾಪ್ತಿ ಮೀರಿ ವಿಸ್ತರಿಸುವುದನ್ನು ತಡೆಗಟ್ಟಬಹುದಿತ್ತು, ಪರಮೇಶ್ವರ ಎಂಬ ಪರಮಾಧಿಕಾರದ ಸ್ಥಾನಕ್ಕೆ ಏರುವುದನ್ನು ಸ್ಥಗಿತಗೊಳಿಸಬಹುದಿತ್ತು.

ದಕ್ಷಿಣ ಕರ್ನಾಟಕದ ಮೈಸೂರು ಒಡೆಯರ ಚರಿತ್ರೆಯಲ್ಲಿ ಈ ಪಕ್ರಿಯೆಯನ್ನು ಸ್ಪಷ್ಟವಾಗಿ ಕಾಣಬಹುದಾಗಿದೆ. ಈ ಸಣ್ಣ ರಾಜ್ಯವು ಹದಿನಾರನೆಯ ಶತಮಾನದ ಕೊನೆಯಲ್ಲಿ ಹಾಗೂ ಹದಿನೇಳನೆಯ ಶತಮಾನದ ಆರಂಭದಲ್ಲಿ ಶಿಥಿಲಗೊಳ್ಳತೊಡಗಿದ ವಿಜಯನಗರ ಸಾಮ್ರಾಜ್ಯದ ಅಧಿಕಾರಕ್ಕೆ ಸವಾಲೆಸಗಿ ನಗಣ್ಯ ಎನ್ನಬಹುದಾಗಿದ್ದ ಸ್ಥಾನದಿಂದ ಮೇಲಕ್ಕೇರಿತು. ತಮ್ಮ ವ್ಯಾಪ್ತಿ ಹಾಗೂ ವರ್ಚಸ್ಸಿನಲ್ಲಿ ಉಂಟಾದ ಅತಿವೇಗದ ಏಳಿಗೆಗೆ ಅವರು ಪೌರಾಣಿಕ ರಾಜತ್ವದ ಪರಿಕಲ್ಪನೆಯನ್ನು ಒಪ್ಪಿಕೊಂಡು ಅದರಂತೆ ತಮ್ಮನ್ನು ಮಾರ್ಪಡಿಸಿಕೊಳ್ಳುತ್ತ ತಮ್ಮ ನಗರದೇವತೆಯಾದ ಸ್ಥಳೀಯ ಕ್ಷುದ್ರ ದೇವತೆಯಿಂದ ಸಂಬಂಧವನ್ನೂ ಭಕ್ತಿಯನ್ನೂ ಶ್ರೀವೈಷ್ಣವ ಧರ್ಮದ ಸ್ಥೂಲಪಥಕ್ಕೆ ವರ್ಗಾಯಿಸಿದ್ದು ಸೂತ್ರಪ್ರಾಯವಾಗಿತ್ತು. ಈ ಭಕ್ತಿ ಸಂಬಂಧದ ವರ್ಗಾವಣೆಯ ಕಾರ್ಯವು ರಾಜ ಒಡೆಯನ ಕಾಲದಲ್ಲಿ ನಡೆಯಿತು. ತನ್ನ ತಂದೆ ನಾಲ್ವಡಿ (ಬೋಳ) ಚಾಮರಾಜನ ಆರಂಭಿಕ ವಿಜುಗೀಷು ದೊರೆತನದಿಂದ ಇವನು ಒಡೆಯರ್ ಆಳ್ವಿಕೆಯನ್ನು ಯಶಸ್ವಿಯಾಗಿ ಪರಿವರ್ತಿಸಿದನು. ಬೋಳ ಚಾಮರಾಜನು ಮೈಸೂರು ನಗರದ ಹೊರಗಿನ ಬೆಟ್ಟದ ಮೇಲಿನ ಸ್ಥಳೀಯ ಕ್ಷುದ್ರದೇವಿಯೊಂದಿಗೆ ಮೈತ್ರಿ ಸ್ಥಾಪಿಸಿದಾಗ ರಾಜನು ಕ್ರಿ.ಶ. 1610ರಲ್ಲಿ ವಿಜಯನಗರದ ಪ್ರತಿನಿಧಿಯ ನೆಲೆಯಾದ ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡು ಮೇಲುಕೋಟೆಯ ಲಕ್ಷ್ಮೀನಾರಾಯಣನನ್ನು ಒಡೆಯರ್ ಮನೆತನದ ಕುಲದೇವತೆಯಾಗಿ ಸ್ವೀಕರಿಸಿದನು. ವಿಜಯನಗರ ಸಾಮ್ರಾಜ್ಯವು

ಪೆಟ್ಟು ತಿಂದು ಕುಸಿಯುತ್ತಿದ್ದ ಕಾರಣ ಬರಿದಾದ ಪರಮೇಶ್ವರನ ಪಾತ್ರವನ್ನು ರಾಜತ್ವದ ಈ ಸ್ಥೂಲ ಮಾದರಿಯ ಮೂಲಕ ಒಡೆಯರ್ ರಾಜ್ಯವೇ ನಿರ್ವಹಿಸುವಂತೆ ರಾಜ ಒಡೆಯನು ಸಜ್ಜುಗೊಳಿಸಿದನು. ಈ ಪಕ್ರಿಯೆಯನ್ನು ಪೂರ್ಣವಾಗಿ ಅರ್ಥೈಸಿಕೊಳ್ಳಲು ರಾಜ ಒಡೆಯನು ಆಳ್ವಿಕೆ ನಡೆಸಿದ ಕಾಲವನ್ನು ಸಮಗ್ರವಾಗಿ ಪರಿಶೀಲಿಸಬೇಕಿದೆ. ಏಕೆಂದರೆ, ಅದು ದೇವತೆಯು ಒಡೆಯರುಗಳ ಏಳಿಗೆಯ ಹಿಂದೆ ವಹಿಸಿದ ಪಾತ್ರವನ್ನು ಬಯಲುಪಡಿಸುವುದಲ್ಲದೆ ಅಂದಿನ ರಾಜಕೀಯ ಕ್ಷೇತ್ರದಲ್ಲಿ ತಮ್ಮ ಸೀಮಿತ ಸ್ಥಾನವನ್ನು ಮೀರಿ ಬೆಳೆಯಲು ಒಡೆಯರು ನಡೆಸಿದ ಪ್ರಯತ್ನದ ಮೇಲೆಯೂ ಬೆಳಕು ಚೆಲ್ಲುತ್ತದೆ.

ಆಧಿಪತ್ಯದ ಏಳಿಗೆ

ಮೈಸೂರು ಒಡೆಯರ್ ಮನೆತನದ ಚರಿತ್ರೆಗಳ ಪ್ರಕಾರ ಅವರ ರಾಜವಂಶವು 1399ರಲ್ಲಿ ಯದುರಾಯನೊಂದಿಗೆ ಆರಂಭಗೊಂಡಿತು; ಆದರೆ ಕ್ರಿ.ಶ. ಹದಿನಾರನೆಯ ಶತಮಾನದ ಮಧ್ಯದವರೆಗೆ ಆ ವಂಶವನ್ನು ಕುರಿತ ಐತಿಹಾಸಿಕ ವಿವರಗಳ ಕೊರತೆಯಿದೆ. ಮಾತ್ರವಲ್ಲ, ಮೊದಮೊದಲ ಉಲ್ಲೇಖಗಳು ಬಿಡಿಬಿಡಿಯಾಗಿದ್ದು ಒಡೆಯರು ಶ್ರೀರಂಗಪಟ್ಟಣದ ವಿಜಯನಗರದ ಪ್ರತಿನಿಧಿಯ ಮೇಲಾಳ್ವಿಕೆಯಲ್ಲಿ ಗ್ರಾಮದ ಒಡೆಯರಿಗಿಂತ ಹೆಚ್ಚೇನು ಆಗಿರಲಿಲ್ಲ ಎಂಬ ಪ್ರತೀತಿ ಉಂಟುಮಾಡುತ್ತವೆ. ಅವರು ಆದರಣೀಯ ಅರಸು ಪ್ರಭುತ್ವಗಳಲ್ಲಿ ಒಂದಾಗಿ ವಿಕಾಸ ಹೊಂದಿದ ಕಥೆ ಕ್ರಿ.ಶ. 1572ರಲ್ಲಿ ನಾಲ್ವಡಿ ಚಾಮರಾಜನೊಂದಿಗೆ (ಆಳ್ವಿಕೆ ಕ್ರಿ.ಶ. 1572–1576) ಆರಂಭಗೊಳ್ಳುತ್ತದೆ. ಅವನ ತಂದೆ ಮುಮ್ಮಡಿ ಹಿರಿಯ ಬೆಟ್ಟದ ಚಾಮರಾಜನು ಮನೆತನದ ಭೂಸಂಪತ್ತನ್ನು ತನ್ನ ಮೂವರು ಪುತ್ರರಾದ ಇಮ್ಮಡಿ ತಿಮ್ಮರಾಜ, ಕೃಷ್ಣರಾಜ ಹಾಗೂ ನಾಲ್ವಡಿ ಚಾಮರಾಜರಿಗೆ ಹಂಚಿಕೊಟ್ಟನು. ಹಿರಿಯ ಮಗನಾದ ಇಮ್ಮಡಿ ತಿಮ್ಮರಾಜನು (ಆಳ್ವಿಕೆ ಕ್ರಿ.ಶ. 1553–1572) ನನ್ನಿಗಹಳ್ಳಿಯಲ್ಲಿ ನೆಲೆಸಿದನಲ್ಲದೆ ಆಸುಪಾಸಿನ ಗ್ರಾಮಗಳ ಮೇಲೆ ಆಳ್ವಿಕೆ ನಡೆಸಿ ಆ ಪ್ರದೇಶದಲ್ಲಿ ಹೆಚ್ಚಿನ ಪ್ರಭಾವ ಹೊಂದಿದ್ದ ಕಳಲೆ ಮನೆತನದೊಂದಿಗೆ ವಿವಾಹ ಸಂಬಂಧ ಬೆಳೆಸಿದನು. ನಾಲ್ವಡಿ ಚಾಮರಾಜನು ಪುರಗುರ್ರಿ ಎಂಬ ಗ್ರಾಮವನ್ನು ಪಡೆದು ಅದನ್ನು ಮೈಸೂರು (ಅಂದರೆ ಎಮ್ಮೆಗಳ ಊರು) ಎಂದು ಮರುನಾಮವಿಟ್ಟು ಕರೆದನು. ಶಿವನ (ಮಹಾಬಲ್ಲೇಶ್ವರ) ದೇವಾಲಯವನ್ನು ಶಿಖರದಲ್ಲಿ ಹೊಂದಿದ್ದು ಆ ಹೆಸರಿನಿಂದಲೇ ಖ್ಯಾತವಾಗಿದ್ದ ದೊಡ್ಡ ಬೆಟ್ಟವೊಂದರ ಹತ್ತಿರ ಈ ಗ್ರಾಮವನ್ನು ಸ್ಥಾಪಿಸಲಾಗಿತ್ತು. ಆ ಬೆಟ್ಟದ ಮೇಲೆ ದೇವಿಯೋರ್ವಳ ಗುಡಿಯೂ ಇತ್ತು. ಈ ದೇವತೆಯ ಬಗ್ಗೆ ಒಡೆಯರುಗಳು ರಾಜಕೀಯ ಪಟುಗಳಾಗಿ ಏಳಿಗೆ ಹೊಂದಿ ಪೌರಾಣಿಕ ರಾಜಕಾರಣದ ಮಾದರಿಯನ್ನು ಸ್ವೀಕರಿಸಿದ ಬಳಿಕ ಕ್ರಿ.ಶ. 1633ರಲ್ಲಿ ರಚಿಸಲಾದ *ರಾಮಾಯಣ* ಕಾವ್ಯದ ಕನ್ನಡ ರೂಪವಾದ *ಚಾಮರಾಜೋಕ್ತಿ ವಿಲಾಸ* ಕಾವ್ಯದಲ್ಲಿ ಶ್ರೀ ಚಾಮುಂಡಿಕಾಂಬ ಎಂದು ಉಲ್ಲೇಖಿಸಲಾಗಿರುವ ತನಕ ನಮಗೆ ವಿಶೇಷ ಮಾಹಿತಿಯೇನೂ ದೊರಕುವುದಿಲ್ಲ. ಜೊತೆಗೆ ಆ ದೇವಿಯನ್ನು ಈ ಹೊತ್ತಿಗಾಗಲೇ ದುರ್ಗೆಯು ಮಹಿಷಾಸುರನನ್ನು ಕೊಂದ ಪುರಾಣಮೂಲದ ಕಥೆಯೊಂದಿಗೆ ತಳುಕು ಹಾಕಲಾಯಿತೆಂಬುದು ಸ್ಪಷ್ಟವಾಗುತ್ತದೆ. ಆದರೆ, ಈ ಚಿತ್ರಣವು ರಾಜ ಒಡೆಯನು ಉಂಟುಮಾಡಿದ ಪರಿವರ್ತನೆಗಳ ಫಲ ಎಂಬುದು ನನ್ನ ಅಭಿಮತ;

ಹೀಗಾಗಿ ಈ ಪ್ರಬಂಧದ ಉದ್ದಕ್ಕೂ ಆ ದೇವಿಯನ್ನು ಆಕೆ ಪ್ರಾದೇಶಿಕ ರಾಜಕರಣದಲ್ಲಿ ಒಡೆಯರುಗಳ ಏಳಿಗೆಯ ಸಂದರ್ಭದಲ್ಲಿ ಪ್ರೌಢ ಪೌರಾಣಿಕ ದೇವತೆಯಾಗಿ ಪುನರ್ರಚಿಸಿದ ನಂತರ ಪಡೆದುಕೊಂಡ ಚಾಮುಂಡಿ ಎಂಬ ಹೆಸರಿಗೆ ಬದಲು 'ಬೆಟ್ಟದ ಮೇಲಿನ ದೇವಿ' ಎಂದೇ ಕರೆದಿದ್ದೇನೆ. ಪೌರಾಣಿಕ ಪುನರ್ರಚನೆಗಿಂತ ಹಿಂದೆಯೂ ಆಕೆ ಚಾಮುಂಡಿ ಎಂದೇ ಕರೆಸಿಕೊಂಡಿರಬಹುದಾದ ಸಾಧ್ಯತೆಯಿದೆ. ಆದರೆ ಇದು ಪ್ರಸ್ತುತ ಬೆಟ್ಟದ ಮೇಲೆ ಪೂಜಿಸಲಾಗುತ್ತಿರುವ ದುರ್ಗಾರೂಪದ ದೇವತೆಯನ್ನು ಸೂಚಿಸದೆ ಐದನೆಯ ಶತಮಾನದಿಂದ ಈಚೆಗೆ ಭುಬನೇಶ್ವರ ಯಾ ಅಸ್ಸಾಂನ ದೇವಾಲಯಗಳಲ್ಲಿ ಕಂಡುಬಂದ, ಶ್ಮಶಾನ, ವೇತಾಳ ಹಾಗೂ ವಾಮಾಚಾರಿ ತಾಂತ್ರಿಕ ಆಚರಣೆಗಳೊಂದಿಗೆ ಸಂಬಂಧ ಹೊಂದಿದ್ದ ಆಗಮೇತರ ಕ್ಷುದ್ರದೇವತೆಯನ್ನು ಸೂಚಿಸುತ್ತಿರುವ ಸಾಧ್ಯತೆಯೇ ಹೆಚ್ಚು.

ಅನಂತರದ ಹಲವು ವಂಶಚರಿತೆಗಳ ಪ್ರಕಾರ ಅಣ್ಣ ತಿಮ್ಮರಾಜನು ಕ್ರಿ.ಶ. 1572ರಲ್ಲಿ ಮರಣ ಹೊಂದಿದ ಬಳಿಕ ನಾಲ್ವಡಿ ಚಾಮರಾಜನು ದೇವಿಯನ್ನು ಒಲಿಸಿಕೊಳ್ಳಲು ಬೆಟ್ಟವೇರಿದನು. ಆಗ ಮಿಂಚೊಂದು ಅವನ ತಲೆ ಮೇಲಿದ್ದ ಕೀರೀಟಕ್ಕೆ ಬಡಿಯಿತು. ದೇವಿಯ ಕೃಪೆಯಿಂದ ನಾಲ್ವಡಿ ಚಾಮರಾಜನು ಈ ಸತ್ವಪರೀಕ್ಷೆಯಲ್ಲಿ ಅದ್ಭುತಕರವಾಗಿ ಪಾರಾದನು.[2] ಆದರೆ ಅವನ ತಲೆ ಬೋಳಾಗಿ ಹೋಗಿ ಅವನು ಬೋಳ ಚಾಮರಾಜ ಎಂಬ ಬಿರುದಾಂಕಿತದಿಂದೇ ಖ್ಯಾತನಾದನು. ಇದು ದೇವಿಯ ಶಕ್ತಿಯನ್ನು ಸದಾ ನೆನಪಿಗೆ ತರುವಂತದ್ದಾಗಿತ್ತು. ಮೊದಲ ನೋಟದಲ್ಲಿ ಇದು ಒಡೆಯರ್ ಮನೆತನದ ಪ್ರಾಂತೀಯ ಮೇಲಾಳ್ವಿಕೆಯ ಹುಡುಕಾಟ ಯಾ ಅವರ ವೈಷ್ಣವೀಕರಣಕ್ಕೆ ಕಾರಣವಾಗಲಿಲ್ಲ ಎನ್ನಿಸಿದರೂ, ಈ ತೀವ್ರತರ ಘಟನೆಯು ಒಡೆಯರ್ ರಾಜಕೀಯ ಮಹತ್ವಾಕಾಂಕ್ಷೆಗೆ ಚಾಲನೆ ನೀಡಿದ ಮುಂದಿನ ದಿನಮಾನಗಳ ಸೈನಿಕ ಹಲ್ಲೆಗಳಿಗೆ ಹಸಿರು ನಿಶಾನೆ ತೋರಿಸಿದಂತಿದೆ.

ನಾಲ್ವಡಿ ಚಾಮರಾಜನು ದೇವಿಯ ಪೂಜೆಗೆ ಹೊರಟಿದ್ದು ಮಹತ್ವದ ಘಟನೆ. ಏಕೆಂದರೆ ಅದು ವರ್ಚಸ್ಸುಳ್ಳ ರಾಜ್ಯವೊಂದನ್ನು ಕಟ್ಟಲು ಹವಣಿಸಿದ ವಿಜಗೀಶುವೊಬ್ಬನು ಸೈನಿಕ ಕಾರ್ಯಾಚರಣೆಗಳ ಸರಮಾಲೆಯೊಂದನ್ನು ಆರಂಭಿಸಲು ದೇವಿಯನ್ನು ಒಲಿಸಿ ಆಕೆಯ ಕೃಪೆ ಹಾಗೂ ಶಕ್ತಿಗೆ ಪಾತ್ರನಾಗುವ ಉದ್ದೇಶದಿಂದ ಕೂಡಿತ್ತು. ದೇವಿಯ ಗುಡಿಗೆ ನೀಡಿದ ಭೇಟಿಯ ಪವಾಡಪ್ರಾಯ ಸಂದರ್ಭ ಹಾಗೂ ನಂತರದ ಘಟನಾವಳಿಗಳ ಮಾಲಿಕೆಯು ಕ್ರಿ.ಶ. 12ನೆಯ ಶತಮಾನದಲ್ಲಿ ಹೊಯ್ಸಳರು (ಹಾಗೂ ಸ್ವಲ್ಪ ಮಟ್ಟಿಗೆ ಅದಕ್ಕೂ ಹಿಂದೆ ಪಶ್ಚಿಮ ಗಂಗರು) ಸ್ಥಾಪಿಸಿದ ಮಾದರಿಗೆ ಅನುಗುಣವಾಗಿತ್ತು. ಹೊಯ್ಸಳರ ಮೂಲ ಕುರಿತ ದಂತಕಥೆಯ ಪ್ರಕಾರ ಆ ಸಾಮ್ರಾಜ್ಯವು ವಂಶದ ಮೂಲಸ್ಥಾಪಕನೆಂದು ನಂಬಲಾಗಿರುವ ಸಳನು ದೇವಿಯನ್ನು ಒಲಿಸಿಕೊಳ್ಳಲು ಪದ್ಮಾವತಿ/ವಾಸಂತಿಯ ದೇವಾಲಯಕ್ಕೆ ಹೊರಟ ಪ್ರಸಂಗದಿಂದ ಆರಂಭಗೊಳ್ಳುತ್ತದೆ.[3] ಸಿಂಹವೊಂದು ಎದಿರಾದಾಗ ದೇವಿಯ ಪೂಜಾರಿಯು ಸಳನ ಕೈಗೆ ಕುಂಚವೊಂದನ್ನು ನೀಡಿ ಆ ಮೃಗವನ್ನು ಕೊಲ್ಲಲು ಆದೇಶಿಸಿದ. ಸಳನು ಸಿಂಹವನ್ನು ಕೊಲ್ಲುವ ಕಾರ್ಯ ನೆರವೇರಿಸಿದಾಗ ದೇವಿಯು ಆತ ತನ್ನ ರಾಜ್ಯವನ್ನು ಆಳಲು ಯೋಗ್ಯನೆಂದು ಬಗೆದು ಅವನ ವಂಶವು ಆಕೆಯನ್ನು

ಆರಾಧಿಸುವುದೆಂಬ ಷರತ್ತಿನ ಮೇರೆಗೆ ಅವನಿಗೆ ರಾಜ್ಯ ಸ್ಥಾಪಿಸುವ ಅನುಮತಿಯನ್ನೂ ಅದಕ್ಕೆ ಅಗತ್ಯವಾದ ಸೈನಿಕ ಪರಾಕ್ರಮವನ್ನೂ ಒದಗಿಸಿಕೊಟ್ಟಳು. ಹೊಯ್ಸಳರ ಉಗಮದ ಕಥೆಯಲ್ಲಿನ ಸಿಂಹವು ಬಹುಶಃ ಚೋಳವಂಶದ ಲಾಂಛನವನ್ನು ಪ್ರತಿನಿಧಿಸುತ್ತದೆ. ಚೋಳರನ್ನು ಪರಾಭವಗೊಳಿಸಿ ದಕ್ಷಿಣ ಕರ್ನಾಟಕದಲ್ಲಿ ತಮ್ಮದೇ ರಾಜ್ಯವನ್ನು ಸ್ಥಾಪಿಸುವ ಮುನ್ನ ಹೊಯ್ಸಳರು ಅವರ ಸಾಮಂತರಾಗಿದ್ದರು.

ಈ ಕಥನಪ್ರಭೇದವು ಸ್ಥಳೀಯ ದೇವಿಯರಿಗೆ ಜಾನಪದ ಹಾಗೂ ಗ್ರಾಮೀಣ ಆಚರಣೆಗಳಲ್ಲಿರುವ ಪಾತ್ರವನ್ನು ಪ್ರತಿಬಿಂಬಿಸುತ್ತದೆ. ಈ ದೇವಿಯರು ಗ್ರಾಮದೇವತೆಗಳಾಗಿದ್ದು ಸೀಮಿತ ಭೌಗೋಳಿಕ ಕ್ಷೇತ್ರವೊಂದರ ಮೇಲೆ ಸ್ವಾಧೀನ ಸಾಧಿಸಿ, ಆ ಕ್ಷೇತ್ರದಲ್ಲಿನ ನಿವಾಸಿಗಳಿಗೆ ಅವರು ತಮ್ಮನ್ನು ಒಲಿಸಿಕೊಳ್ಳುವ ಕ್ರಮ ಹಾಗೂ ನೀಡುವ ಕಾಣಿಕೆಗೆ ಅನುಗುಣವಾಗಿ ಏಳಿಗೆ ಯಾ ಬೀಳಿಗೆಯನ್ನು ಕರುಣಿಸುತ್ತಿದ್ದರು. ಹಾಗೆಯೇ ಈ ಕಥನವು ಅರಸನು ದೇವಿಯೊಂದಿಗೆ ಭಕ್ತಿಸಂಬಂಧದಲ್ಲಿ ಏರ್ಪಡುವುದರ ಅನಿವಾರ್ಯತೆಯನ್ನೂ ಪ್ರತಿಬಿಂಬಿಸುತ್ತದೆ. ಅಂಥ ಸಂಬಂಧ ಸ್ಥಾಪಿಸಿದ ಬಳಿಕವಷ್ಟೇ ಭಕ್ತನಮೇಲೆ ಆಕೆ ಶೌರ್ಯವನ್ನು ಕರುಣಿಸಿ ಯೋಗ್ಯ ಅರಸನಾಗಿ ಅವನನ್ನು ತಯಾರುಗೊಳಿಸುತ್ತಿದ್ದಳು. ಈ ವಿದ್ಯಮಾನವು ಪೂರ್ವ ಭಾರತದಲ್ಲಿಯೂ ಚಲಾವಣೆಯಲ್ಲಿದ್ದಂತೆ ತೋರುತ್ತದೆ. ಇದನ್ನು ಮಧ್ಯಯುಗದಲ್ಲಿ ಈಗಿನ ತಮಿಳುನಾಡಿನಿಂದ ಹಿಡಿದು ಒಡಿಶಾ, ಅಸ್ಸಂವರೆಗಿನ, ದೇವಿಯರನ್ನು ಆರಾಧಿಸುವ ರಾಜ್ಯಗಳಲ್ಲಿ ಕಾಣಬಹುದು.[4] ಚೋಳ ದೊರೆಗಳಾದರೂ, ತಂಜಾವೂರನ್ನು ವಶಪಡಿಸಿಕೊಂಡ ಬಳಿಕ ಕ್ಷುದ್ರದೇವಿಯಾದ ನಿಶುಂಬಸೂದಿನಿಗೆ ದೇವಾಲಯವನ್ನೇ ನಿರ್ಮಿಸಿದರು. ಇದು ಚೋಳರು ಕ್ರಿ.ಶ. ಒಂಭತ್ತನೆಯ ಶತಮಾನದಲ್ಲಿ ಸಮಾನ ಸ್ಥಿತಿಗತಿಗಳೊಂದಿಗೆ ಏಳಿಗೆ ಪಡೆದರೆಂಬುದಕ್ಕೆ ಪುರಾವೆಯಾಗಿರಬಹುದು. ಹದಿನಾಲ್ಕನೆಯ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯದಲ್ಲಿ ಅರಸನ ಸೈನಿಕ ವಿಜಯಗಳಲ್ಲಿ ದೇವಿ ವಹಿಸುವ ಪಾತ್ರವನ್ನು ಪುರಾಣೀಕರಿಸಿ ಹತ್ತು ದಿನಗಳ ಮಹಾನವಮಿ ಆಚರಣೆಯ ಮಟ್ಟಕ್ಕೆ ಏರಿಸಲಾಯಿತು. ಇಲ್ಲಿ ದೇವಿಯನ್ನು ಮಹಿಷಾಸುರಮರ್ದಿನಿರೂಪದ ದುರ್ಗೆಯೊಂದಿಗೆ ತಳುಕುಹಾಕಲಾಯಿತು. ಹಳೆಯ ಮಾದರಿಯ ಆಗಮೇತರ, ಸ್ಥಳೀಯ ರಾಜತ್ವದ ಪಳೆಯುಳಿಕೆಗಳು ಮುಂದುವರೆದವು ಎನ್ನುವುದಕ್ಕೆ ಮಹಾನವಮಿಯೊಂದಿಗೆ ಅಧಿಕೃತವಾಗಿ ವಿಜಯನಗರದ ಸೈನಿಕ ಕಾರ್ಯಾಚರಣೆಗಳ ಮಾಸವು ಆರಂಭಗೊಳ್ಳುತ್ತದೆ ಎಂಬುದು ಸಾಕ್ಷಿಯಾಗಿದೆ. ಹೊಸ ಪ್ರದೇಶಗಳನ್ನು ಗೆದ್ದು ಹಳೆಯ ಸಾಮಂತರುಗಳನ್ನು ನಿಯಂತ್ರಿಸುವ ಕಾರ್ಯವು ನಡೆದದ್ದು ಈ ಸಂದರ್ಭದಲ್ಲಿಯೇ.

ನಾಲ್ವಡಿ ಚಾಮರಾಜನು ದೇವಿಯನ್ನು ಕಾಣಲು ಹೋದದ್ದು ಈ ಮಾದರಿಗೆ ಅನುಗುಣವಾಗಿದೆಯಲ್ಲದೆ ಇದೇ ಲಕ್ಷ್ಯವನ್ನು ಹೊಂದಿದೆ ಎಂಬುದು ಐತಿಹಾಸಿಕ ಆಧಾರಗಳಿಂದ ಸೂಚಿತವಾಗುತ್ತದೆ. ಏಕೆಂದರೆ, ಕೂಡಲೆಯೇ ಅವನು ನೆರೆಯ ಕಾರುಗಹಳ್ಳಿ, ಕನ್ನಂಬಾಡಿ ಹಾಗೂ ಅಮ್ಮಚವಾಡಿ ದೊರೆಗಳ ಮೇಲೆ ಸೈನಿಕ ಕಾರ್ಯಾಚರಣೆ ಹಮ್ಮಿಕೊಂಡ.[5] ಈ ಹಲ್ಲೆಗಳು ಶ್ರೀರಂಗಪಟ್ಟಣದಲ್ಲಿದ್ದ ವಿಜಯನಗರದ ಪ್ರತಿನಿಧಿ ರಾಮರಾಜಯ್ಯನ ಸಿಟ್ಟಿಗೆ ಕಾರಣವಾಯಿತು. ರಾಮರಾಜಯ್ಯನು ಈ ಹೊಸ ಮಹತ್ವಾಕಾಂಕ್ಷಿಯನ್ನು ಸದೆ ಬಡಿಯಲು ತನ್ನ ದಳವಾಯಿ ರೇಮಟಿ ವೆಂಕಟನನ್ನು

ಕಳುಹಿಸಿಕೊಟ್ಟ. ಆದರೆ ವೆಂಕಟನ ಕಾರ್ಯಾಚರಣೆ ವಿಜಯನಗರದ ಪಡೆಗೆ ಭೀಕರ ಹಿನ್ನಡೆಯನ್ನು ತಂದಿಕ್ಕಿತು. ಮೂರು ತಿಂಗಳ ಯುದ್ಧದ ಬಳಿಕ ಚಾಮರಾಜನ ಸೈನ್ಯವು ಅಧಿಪತಿಯನ್ನು ಪರಾಭವಗೊಳಿಸಿ ವಿಜಯನಗರದ ಯುದ್ಧದ ಸಾಮಗ್ರಿಗಳನ್ನು ಕಾಣಿಕೆಯಾಗಿ ಪಡೆದುಕೊಂಡಿತು. ಕಾಣಿಕೆಗಳೂ ಶಕ್ತಿಪ್ರದರ್ಶನವೂ ಅಲ್ಲದೆ ನಾಲ್ವಡಿ ಚಾಮರಾಜನು ತನ್ನ ಸಾಮ್ರಾಜ್ಯಪತಿಯನ್ನು ಧಿಕ್ಕರಿಸುವ ಸಲುವಾಗಿ ವೆಂಕಟನ ಸೈನಿಕರ ಮೂಗು ಕತ್ತರಿಸಿಹಾಕಲು ತನ್ನ ಭಟರಿಗೆ ಆದೇಶ ನೀಡಿದನು. ಇದು ಅವರಲ್ಲಿನ ಪರಿಷ್ಕೃತ ಸೈನಿಕ ನಡವಳಿಕೆಯ ಕೊರತೆಯನ್ನು ಸ್ಪಷ್ಟವಾಗಿ ಬಯಲುಪಡಿಸುತ್ತದೆ. ಆದರೆ ಈ ಹಲ್ಲೆಯು ಆ ಪ್ರದೇಶದಲ್ಲಿನ ವಿಜಯನಗರದ ಒಟ್ಟಾರೆ ಆಧಿಪತ್ಯಕ್ಕೆ ಸವಾಲೇನೂ ಆಗಿರಲಿಲ್ಲ. ಬದಲಿಗೆ, ನಾಲ್ವಡಿ ಚಾಮರಾಜನು ವಿಜಯನಗರದ ಪ್ರತಿನಿಧಿಯೊಂದಿಗೆ ಒಪ್ಪಂದಕ್ಕೆ ಮುಂದಾಗಿ ತನ್ನ ಮೇಲಧಿಕಾರಿಯಿಂದ ಮೂವತ್ತಮೂರು ಹಳ್ಳಿಗಳ ಒಡೆಯರು ಎಂಬ ಪದವಿಯನ್ನಷ್ಟೇ ಪಡೆದನು. ಇದು ಅಂದಿನ ದಕ್ಷಿಣ ಭಾರತದ ವಿಶಾಲವೂ ಹೆಚ್ಚು ಸಂಕೀರ್ಣವೂ ಆದ ರಾಜಕಾರಣದ ವಿನ್ಯಾಸಗಳಲ್ಲಿ ಅಷ್ಟೇನೂ ಗಮನಾರ್ಹವಾದ ಪಾತ್ರವಾಗಿರಲಿಲ್ಲ.

ಒಡೆಯರುಗಳ ವೈಷ್ಣವೀಕರಣ

ಬೋಳ ಚಾಮರಾಜನ ಮಗ ರಾಜ ಒಡೆಯನು (ಆಳ್ವಿಕೆ ಕ್ರಿ.ಶ. [1578]–1610–1617) ಹಿರಿಯನೂ ಶಕ್ತಿಹೀನನೂ ಆದ ತನ್ನ ಸೋದರಸಂಬಂಧಿ ಐದನೆಯ ಬೆಟ್ಟದ ಚಾಮರಾಜನ (ಆಳ್ವಿಕೆ ಕ್ರಿ.ಶ. 1576 [1578–1610]) ಕಾಲದಲ್ಲಿ ಕ್ರಿ.ಶ. 1578ರಿಂದ 1610ರವರೆಗೆ ಆಡಳಿತ ನಡೆಸಿದನು. ಈ ಅವಧಿಯಲ್ಲಿ ಅವನು ಕ್ರಿ.ಶ 1610ರಲ್ಲಿ ಶ್ರೀರಂಗಪಟ್ಟಣದ ವಿಜಯನಗರ ಪ್ರತಿನಿಧಿಯ ವಿರುದ್ಧ ಬಂಡಾಯ ನಡೆಸುವಲ್ಲಿ ಯಶಸ್ವಿಯಾಗಿ ಕೂಡಲೆ ತಾನೇ ಒಡೆಯರ್ ಅರಸನ ಸ್ಥಾನಕ್ಕೇರಿದನು. ತನ್ನ ತಂದೆ ಮಿಂಚಿನ ಹೊಡೆತದಿಂದ ಪಾರಾದಂತೆ ರಾಜ ಒಡೆಯನೂ ಅದ್ಭುತಕರವಾಗಿ ವಿಷದಿಂದ ಪಾರಾದನೆಂದು ನಂಬಲಾಗಿದೆ. ಇದಕ್ಕೆ ಅವನು ದೇವಿಯ 'ಕರ್ಣಾಭರಣ'ವಾಗಿದ್ದುದೇ ಕಾರಣವಂತೆ. ದೇವಿಯು ಅವನಿಗೆ 'ವಿರೋಧಿ ಶಕ್ತಿಗಳನ್ನು ಸದೆಬಡೆಯುವ ಸಾಮರ್ಥ್ಯ' ಕರುಣಿಸಿದಳು.[6] ಅವನ ಬಲ ಹಾಗೂ ಸೈನಿಕ ಸಾಮರ್ಥ್ಯಕ್ಕೆ ದೇವಿ ಕಾರಣವಾದದ್ದು ಸ್ಪಷ್ಟವೇ ಆದರೂ ರಾಜ ಒಡೆಯನ ಆಳ್ವಿಕೆಯಲ್ಲಿ ಅವನ ತಂದೆಯ ಆಳ್ವಿಕೆಯ ಕಾಲಕ್ಕಿಂತ ತೀರ ಸಣ್ಣ ಪಾತ್ರವನ್ನಷ್ಟೇ ನಿರ್ವಹಿಸಿದ್ದಳು.

ರಾಜ ಒಡೆಯನ ಆಳ್ವಿಕೆ ಒಡೆಯರುಗಳು ಆ ಪ್ರದೇಶದ ಮೇಲೆ ಮೇಲುಗೈ ಸಾಧಿಸಲು ನಡೆಸಿದ ಪ್ರಥಮ ಯತ್ನವನ್ನು ಸೂಚಿಸುತ್ತಿದ್ದು ಅದೇ ಕಾಲದಲ್ಲಿನ ವಿಜಯನಗರ ವಂಶದ ಪತನವನ್ನೂ ಪ್ರತಿಬಿಂಬಿಸುತ್ತದೆ. ಪ್ರದೇಶದ ಇತರ ಒಡೆಯರುಗಳಂತೆ ರಾಜ ಒಡೆಯನು ಎಂದೂ ವಿಜಯನಗರ ಆಧಿಪತ್ಯವನ್ನು ಗೌರವದಿಂದ ಕಾಣಲಿಲ್ಲ. 1565ರಲ್ಲಿ ಉತ್ತರದ ಮುಸ್ಲಿಂ ಅರಸುಗಳು ಒಗ್ಗೂಡಿ ರಾಜಧಾನಿ ವಿಜಯನಗರವನ್ನು ಧ್ವಂಸಗೊಳಿಸಿ ರಾಜ್ಯವನ್ನು ಶಿಥಿಲಪಡಿಸಿದ್ದರಿಂದ ವಿಜಯನಗರ ಸಾಮ್ರಾಜ್ಯವು ಗೊಂದಲದಲ್ಲಿ ಸಿಲುಕಿಕೊಂಡಿತ್ತೆಂದು ಮನಗಂಡದ್ದೇ ಇದಕ್ಕೆ ಕಾರಣವಾಗಿರಬಹುದು. ಹಿಂದೆ ತನ್ನ

ತಂದೆ ನಡೆಸಿದಂತೆಯೇ 1584ರಲ್ಲಿ ರಾಜ ಒಡೆಯನು ಸೈನಿಕ ಕಾರ್ಯಾಚರಣೆಗಳ ಸರಮಾಲೆಯೊಂದನ್ನು ಕೈಗೊಂಡು ನೆರೆಹೊರೆಯ ದೊರೆಗಳನ್ನು ಪರೀಕ್ಷಿಸುತ್ತ ನರಸೀಪುರದ ದೊರೆಯ ಕೈಯಿಂದ ಸಮೀಪದ ಗ್ರಾಮವೊಂದನ್ನು ಪಡೆದುಕೊಂಡನು. ಇಮ್ಮಡಿ ವೆಂಕಟನು ವಿಜಯನಗರದ ಹೊಸ ಪ್ರತಿನಿಧಿಯಾಗಿ ಶ್ರೀರಂಗಪಟ್ಟಣದಲ್ಲಿ ನೇಮಕಗೊಳಿಸಿದ ತಿರುಮಲನನ್ನು 1585ರಲ್ಲಿ ಮೊದಲ ಸಲ ಭೇಟಿಮಾಡಿದ ರಾಜ ಒಡೆಯನು[7] ಕೃಷಿನಾಶದ ಕಾರಣ ಹೇಳಿ ಕಪ್ಪ ನೀಡಲು ನಿರಾಕರಿಸಿದನು.[8] *ಮೈಸೂರು ದೊರೆಗಳ ಪೂರ್ವಾಭ್ಯುದಯದ ವಿವರ* ಕೃತಿಯಲ್ಲಿ (ಸುಮಾರು 1714) ಹೇಳಿರುವಂತೆ ರಾಜನು ಮೈಸೂರು ನಗರದ ಸುತ್ತ ಕೋಟೆ ಕಟ್ಟಿ, ನಿರ್ಮಾಣಕಾರ್ಯ ಮುಗಿದಕೂಡಲೇ ವಿಜಯನಗರದ ಕಂದಾಯಗಾರರನ್ನು ಹೊರಗಟ್ಟಿ ನೆರೆಯ ದೊರೆಗಳ ಮೇಲೆ ಹಲ್ಲೆಗೆ ಹೊರಟನು.[9] ತಿರುಮಲನು ರಾಜ ಒಡೆಯನ ಯುದ್ಧ ಹಾಗೂ ವಿಸ್ತಾರದಾಹವನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಏನನ್ನೂ ಮಾಡುವ ಸ್ಥಿತಿಯಲ್ಲಿರಲಿಲ್ಲ, ಏಕೆಂದರೆ ಮಧುರೈ ನಾಯಕರೊಂದಿಗೆ ನಡೆಯುತ್ತಿದ್ದ ಯುದ್ಧದಲ್ಲಿ ಭಾಗವಹಿಸಲು ಸೇನೆಯೊಂದಿಗೆ ಅಲ್ಲಿಗೆ ಹೊರಟಿದ್ದನು. ಆದರೆ ಬರಲಿರುವ ಕಾಲದ ಮುನ್ಸೂಚನೆ ಎಂಬಂತೆ ಗಮನಸೆಳೆಯುವ ಘಟನೆಯೊಂದು ನಡೆಯಿತು. ರಾಜ ಒಡೆಯನು ತಿರುಮಲನಿಂದ ರಾಜ್ಯಭಾರದ ಸೂತ್ರಗಳನ್ನು ಕಲಿಯಲು ಆಹ್ವಾನವೊಂದರೆ ಮೇರೆಗೆ ತನ್ನ ಪ್ರತಿನಿಧಿಯೋರ್ವನನ್ನು ಶ್ರೀರಂಗಪಟ್ಟಣಕ್ಕೆ ಕಳುಹಿಸಿಕೊಟ್ಟನು. ನಂತರದ ಮುಖಾಮುಖಿಗಳನ್ನು ಮೈಸೂರು ರಾಜ್ಯದ ಚರಿತ್ರಕಾರರು ಬಹು ವಿಸ್ತಾರವಾಗಿ ವರ್ಣಿಸಲು ಮುಂದಾಗಿದ್ದಾರೆ.

ಬಹುತೇಕ ಕಥನಗಳಲ್ಲಿ ಹೇಳಿರುವಂತೆ ವಿಜಯನಗರದ ಪ್ರತಿನಿಧಿಯು ಇತರ ಸ್ಥಳೀಯ ಅರಸುಗಳೊಂದಿಗೆ ಸಂಧಿ ನಡೆಸಿದ್ದನು. ಈ ಸ್ಥಳೀಯ ಅರಸುಗಳಾಗಲಿ, ರಾಜ ಒಡೆಯನು ಪದೆ ಪದೇ ತಮ್ಮ ಪ್ರದೇಶಗಳ ಮೇಲೆ ಆಕ್ರಾಮಕ ಧಾಳಿ ನಡೆಸುತ್ತಿದ್ದರಿಂದ ಅಸಮಾಧಾನಕ್ಕೆ ಒಳಗಾಗಿದ್ದರು. ಮೈತ್ರಿಯನ್ನು ಪುನಃ ಸ್ಥಾಪಿಸುವ ನೆಪದಿಂದ ತಿರುಮಲನು ರಾಜ ಒಡೆಯನನ್ನು ಮಹಾನವಮಿ (ದಸರಾ) ಆಚರಣೆಗೆಂದು ಶ್ರೀರಂಗಪಟ್ಟಣಕ್ಕೆ ಆಹ್ವಾನಿಸಿದನು. ಇತರ ದೊರೆಗಳೂ ಗುಪ್ತವಾಗಿ ಸೇನೆಯೊಂದಿಗೆ ಅಲ್ಲಿ ಉಪಸ್ಥಿತರಿದ್ದು, ಮೈಸೂರಿನ ಅರಸ ಬಂದೊಡನೆ ಅವನ ಮೇಲೆ ತಮ್ಮ ಸಂಚಿತ ಸೇನೆಯೊಂದಿಗೆ ಹಲ್ಲೆ ನಡೆಸಿದರು. ಆದರೆ ದೊರೆಗಳ ಒಕ್ಕೂಟ ತೀವ್ರ ಪೆಟ್ಟಿಗೆ ಗುರಿಯಾಯಿತು. ರಾಜ ಒಡೆಯನು ಆ ಒಕ್ಕೂಟವನ್ನು ಪರಾಭವಗೊಳಿಸಿದನಲ್ಲದೆ ತಿರುಮಲನ ಪತಾಕೆ ಹಾಗೂ ಆನೆಯನ್ನೂ ವಶಪಡಿಸಿಕೊಂಡನು. ತನ್ನ ಅಧಿಪತಿ ತಿರುಮಲನನ್ನು ಆಘಾತಕರವಾಗಿ ಸೋಲಿಸಿದ ಬಳಿಕ ಅವಹೇಳಿಸಲೂ ಆರಂಭಿಸಿದನು. ತಿರುಮಲನಾಗಲಿ, ವಿಜಯನಗರದ ಚಕ್ರವರ್ತಿ ಇಮ್ಮಡಿ ವೆಂಕಟನೊಂದಿಗಿನ ಸಂಬಂಧ ಬಿರುಕುಗೊಂಡ ಕಾರಣ ರಾಜಕೀಯ ಪ್ರಭಾವದಲ್ಲಿ ಇಳಿತ ಅನುಭವಿಸುತ್ತಿದ್ದನು.[10] ಕೊನೆಗೆ, 1610ರಲ್ಲಿ ಅವನ ದುರ್ಬಲ ಸ್ಥಿತಿಯನ್ನು ಮನಗಂಡ ರಾಜ ಒಡೆಯನು ಶ್ರೀರಂಗಪಟ್ಟಣವನ್ನು ಆಕ್ರಮಿಸಿ 8 ಫೆಬ್ರವರಿ 1610ರಂದು ನಗರವನ್ನು ವಶಪಡಿಸಿಕೊಂಡನು.[11] ಮಾರ್ಚ್ 21ರ ವೇಳೆಗೆ ರಾಜ ಒಡೆಯನು ಪಟ್ಟವೇರಿ ಪ್ರಥಮ ಬಾರಿಗೆ ಸಭೆ ನಡೆಸಿದನು. ಹಯವದನರಾಯರು ಹೇಳುವ ಪ್ರಕಾರ ಇದು "ಮೈಸೂರು

ಅರಸರ ಪಾಲಿಗೆ ವಿಜಯನಗರದ ಆಧಿಪತ್ಯದಿಂದ ಸ್ವಾತಂತ್ರ್ಯವನ್ನು ಘೋಷಿಸುವ ಸೂಚನೆಯಾಗಿದೆ".[12]

ಪಟ್ಟವೇರಿ ರಾಜವಂಶವು ಹೊಸದಾಗಿ ಪಡೆದುಕೊಂಡ ಸ್ವಾತಂತ್ರ್ಯವನ್ನು ಗುರುತುಪಡಿಸಿದ ಮೇಲೆ ರಾಜ ಒಡೆಯನು ಅತಿ ಭಿನ್ನವಾದ ದೇವಿಯ ಪರಿಕಲ್ಪನೆಯೊಂದನ್ನು ಮುಂದಿಟ್ಟನು. ಅದನ್ನು ಅದೇ ವರ್ಷ ಶ್ರೀರಂಗಪಟ್ಟಣದಲ್ಲಿ ವಿಜಯನಗರ ಮಾದರಿಯಲ್ಲಿ ಮಹಾನವಮಿ ಆಚರಣೆಯನ್ನು ಹಮ್ಮಿಕೊಂಡುದರಲ್ಲಿ ಕಾಣಬಹುದಾಗಿದೆ. ಈ ಕಾರ್ಯದ ಮೂಲಕ ಬೆಟ್ಟದ ಮೇಲಿನ ಕ್ಷುದ್ರದೇವಿಯನ್ನು ಪೌರಾಣಿಕ ಕಥನಗಳ ಹಾಗೂ ರಾಜತ್ವದ ಮಾದರಿಗಳ ಅನ್ವಯ ಮರುವಿನ್ಯಾಸಗೊಳಿಸಿ ಆವಿಷ್ಕರಿಸಲಾಯಿತು. ಮಹಾನವಮಿ ಆಚರಣೆಯು ಒಡೆಯರುಗಳ ಅತಿ ಪ್ರಮುಖ ರಾಜಕೀಯ ಆಚರಣೆಯಾಯಿತಲ್ಲದೆ, 8 ರಿಂದ 17 ಸೆಪ್ಟಂಬರ್ 1610 ರಿಂದ ಇಂದಿನವರೆಗೆ ಕೆಲವೇ ಕೆಲವು ಸಂದರ್ಭಗಳನ್ನು ಹೊರತುಪಡಿಸಿ ಪ್ರತಿ ವರ್ಷವೂ ಆಚರಿಸಲಾಗುತ್ತಿದೆ.[13] ಈಗಾಗಲೇ ಹೇಳಿದಂತೆ ಮಹಾನವಮಿ ಆಚರಣೆಯು ಹದಿನಾಲ್ಕನೆಯ ಶತಮಾನದಿಂದಲೇ ವಿಜಯನಗರ ಮನೆತನದ ಸೈನಿಕ ಮಾಸಾಚರಣೆಯನ್ನು ಸೂಚಿಸುತ್ತಿತ್ತು. ಭಾರತದಾದ್ಯಂತ ಹಾಗೂ ವಿದೇಶದ ಭಾರತೀಯ ಜನಾಂಗಗಳ ನಡುವಲ್ಲಿ ಆಚರಿಸಲಾಗುವ ಈ ಹಬ್ಬವು ಪೌರಾಣಿಕ ಕಥೆಯಲ್ಲಿ ದೇವಿಯು ಮಹಿಷಾಸುರನ ಮೇಲೆ ವಿಜಯ ಸಾಧಿಸಿದ್ದನ್ನು ಅನುಸ್ಮರಿಸುತ್ತದೆ. ಒಂಬತ್ತು ರಾತ್ರಿಗಳಲ್ಲಿ (ನವರಾತ್ರಿ) ದುರ್ಗಾದೇವಿಯ ವಿವಿಧ ರೂಪವನ್ನು ಆರಾಧಿಸಲಾಗುತ್ತದೆ. ಹತ್ತನೆಯ ದಿನ (ದಸರಾ) ದೇವಿಯು ದೇವತೆಗಳ ವೈರಿಯನ್ನು ಕೊಂದುದರ ನೆನಪಿನೊಂದಿಗೆ ಉತ್ಸವವು ಕೊನೆಗೊಳ್ಳುತ್ತದೆ. ಈ ಉತ್ಸವಕ್ಕೆ ಅರಸುಗಳು ಸೈನಿಕ ಸಾಮರ್ಥ್ಯ ಪಡೆದುಕೊಳ್ಳುವ ಕ್ರಿಯೆಯೊಂದಿಗೆ ತೀವ್ರ ಸಂಬಂಧವಿದೆಯಲ್ಲದೆ *ರಾಮಾಯಣ* ಕಥೆಯಲ್ಲಿ ರಾಮನು ದೇವಿಯೋರ್ವಳನ್ನು ಒಲಿಸಿಕೊಂಡು ಶಕ್ತಿಯನ್ನೂ ವೀರ್ಯವನ್ನೂ ಪಡೆದು ದಶಾನನನಾದ ತನ್ನ ವೈರಿ ರಾವಣನನ್ನು ಕೊಂದುದರ ಆಚರಣೆಯೂ ಆಗಿದೆ.[14] ಅಲ್ಲದೆ, *ಮಹಾಭಾರತ*ದಲ್ಲಿ ಪಾಂಡವ ಸೋದರರು ತಮ್ಮ ವನವಾಸದ ಕೊನೆಯ ವರ್ಷವನ್ನು ಕಳೆದ ಮಾದರಿಯಲ್ಲಿ ರಾಜಮನೆತನದ ಆಯುಧಗಳಿಗೆ ಹಾಗೂ ತಮಗೆ ಆಶ್ರಯ ನೀಡಿದ ಮರಕ್ಕೆ ಆಯುಧ ಪೂಜೆಯನ್ನೂ ಶಮೀ (ಬನ್ನಿ) ಪೂಜೆಯನ್ನೂ ಸಲ್ಲಿಸಲಾಗುತ್ತದೆ. ರಾಮನು ಸೀತೆಯೊಂದಿಗೆ ಅಯೋಧ್ಯೆಗೆ ಜಯಶಾಲಿಯಾಗಿ ಹಿಂದಿರುಗಿದ್ದನ್ನು ನೆನಪಿಸುವ ದಿವಾಲೀ/ದೀಪಾವಳಿ ಆಚರಣೆಗೂ ಈ ದಸರಾ ಹಬ್ಬ ಪೂರ್ವಸೂಚನೆಯಾಗಿದೆ.

ಹದಿನಾಲ್ಕನೆಯ ಶತಮಾನಕ್ಕೆ ಹಿಂದೆ, ವಿಜಯನಗರದ ಸ್ಥಾಪನೆಯ ಪೂರ್ವದಲ್ಲಿ, ಇದೇ ತರಹದ ಉತ್ಸವಗಳು ದಕ್ಷಿಣ ಹಾಗೂ ಪೂರ್ವ ಭಾರತದಲ್ಲಿ ವ್ಯಾಪಕವಾಗಿದ್ದವು. ಸಾಮಾನ್ಯವಾಗಿ ಕ್ಷುದ್ರ, ರೌದ್ರ ಹಾಗೂ ರಕ್ತದಾಹಿ ದೇವಿಯರೊಂದಿಗೆ (ಉದಾ. ಚರ್ಚಿಕಾ, ಚಾಮುಂಡಿ, ಭದ್ರಕಾಳಿ ಇತ್ಯಾದಿ.) ಸಂಬಂಧ ಹೊಂದಿದ್ದ ಈ ಆಚರಣೆಗಳು ಸಣ್ಣ ರಾಜ್ಯಗಳಲ್ಲಿ ಜರುಗಿದ್ದವು. ವಿಜಯನಗರ ರಾಜ್ಯದ ಮೂಲಕ ಈ ಉತ್ಸವವು ದೇವಿಯ ಸೈನಿಕಶಕ್ತಿಯ ಕೊಂಡಾಡುವಿಕೆಯಿಂದ ಮೇಲೆದ್ದು ಬಹು ಸಂಭ್ರಮದ ಹಬ್ಬವಾಗಿ ಬೆಳೆಯಿತು. ಇದರಲ್ಲಿ ವಿಜಯನಗರದ ಅರಸು ತನ್ನ ಸಭೆಯನ್ನು ಮಂಡಲದ ಆಕೃತಿಯಲ್ಲಿ

ವಿನ್ಯಾಸಗೊಳಿಸಿದನು. ಇಲ್ಲಿ ಪ್ರಾಪಂಚಿಕ ಶ್ರೇಣೀಕರಣವನ್ನು ಪುನರ್‍ರಚಿಸುತ್ತಾ, ಪರಮೇಶ್ವರನನ್ನು ಪ್ರಮುಖ ಸ್ಥಾನದಲ್ಲಿಯೂ, ಮಹಾಮಂಡಲೇಶ್ವರರನ್ನು ನಂತರದ ಸ್ತರದಲ್ಲಿಯೂ, ಕೊನೆಗೆ ನಾಯಕ/ಒಡೆಯರಗಳನ್ನು ಸರಹದ್ದಿನ ಹಂತದಲ್ಲಿಯೂ ನಿಲ್ಲಿಸಲಾಯಿತು. ಉತ್ಸವಕ್ಕೆ ಹೊಸ ರೂಪನೀಡಲಾಗಿ ಕ್ಷುದ್ರ ಹಾಗೂ ಗಡಿಮೂಲದ ದೇವಿಯರಿಗೆ ಬದಲು ದೇವಿಯನ್ನು ರಾಜಕೀಯದ ರೂಪಗಳೊಂದಿಗೆ, ವಿಶೇಷವಾಗಿ ದುರ್ಗೆಯೊಂದಿಗೆ ಸಮೀಕರಿಸಲಾಯಿತು. ಈ ಕಾರ್ಯದಲ್ಲಿ ಹಿಂದಿನ ತಾಂತ್ರಿಕ ಮೂಲದ ದೇವಿಯರ ರಕ್ತ ಮಾಂಸಗಳ ಆಚರಣೆಗಳಿಗೆ ಬದಲಾಗಿ ಬಲಗೈ ಮೂಲದ ಆಗಮಿಕ ಆಚರಣೆಗಳಿಗೂ ಪೌರಾಣಿಕ ಕಥೆಗಳಿಗೂ ಆದ್ಯತೆ ನೀಡಲಾಯಿತು. ವಿಜಯನಗರ ಮಾದರಿಯ ಆಚರಣೆಯನ್ನು ತನ್ನ ಸಾಮ್ರಾಜ್ಯ ಶಕ್ತಿ ಸ್ಥಾಪನೆಯ ಅಂಗವಾಗಿ ಸ್ವೀಕರಿಸಿಕೊಂಡ ರಾಜ ಒಡೆಯನು ಮೈಸೂರ ಹೊರವಲಯದ ಬೆಟ್ಟದ ಮೇಲಿನ ದೇವಿಯೊಂದಿಗೆ ಒಡೆಯರುಗಳಿಗಿದ್ದ ಸಂಬಂಧವನ್ನು ಮರುವಿನ್ಯಾಸ ಗೊಳಿಸುವ ಕ್ರಿಯೆಗೆ ಚಾಲನೆ ನೀಡಿ ಆಕೆಗೆ ಪೌರಾಣಿಕ ದೇವಿಯಾದ ದುರ್ಗೆಯ ಆಕೃತಿಯನ್ನು ನೀಡಿದನು. ಈ ಪಲ್ಲಟವು ರಾಜ ಒಡೆಯನು ರಾಜತ್ವದ ಸಾಮ್ರಾಜ್ಯವಾದಿ ಹಾಗೂ ಪೌರಾಣಿಕ ಪರಿಕಲ್ಪನೆಯ ಅನ್ವಯ ರಾಜಕೀಯ ಹಾಗೂ ದೈವಭಕ್ತಿಯ ನವೀಕರಣವನ್ನು ಕಾರ್ಯರೂಪಕ್ಕೆ ತಂದ ಪ್ರಕ್ರಿಯೆಯಲ್ಲಿಯೂ ಪ್ರತಿಬಿಂಬಿತವಾಗುತ್ತದೆ.

ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡ ಬಳಿಕ ರಾಜ ಒಡೆಯನು ಹಲವು ಹೊಸ ಕ್ರಮಗಳನ್ನು ಜಾರಿಗೊಳಿಸಿದನು. ಇವು ಅವನು ಹೆಚ್ಚಿನ ಸಂಕೀರ್ಣತೆ ಹಾಗೂ ಸ್ಥೂಲತೆ ಬಯಸುವ ರಾಜ್ಯಾಡಳಿತದ ವಿಶಾಲ ವ್ಯವಸ್ಥೆಯೊಂದಕ್ಕಾಗಿ ಹವಣಿಸಿದುದನ್ನು ಸ್ಪಷ್ಟ ಪಡಿಸುತ್ತದೆ. 1613 ಹಾಗೂ 1614ರ ನಡುವಲ್ಲಿ ಒಮ್ಮೆ ಅವನು ತನ್ನ ಶ್ರೇಷ್ಠ ಕುದುರೆಗಳಲ್ಲಿ ಒಂದಾದ ಮೇಘಪುಷ್ಪವನ್ನು ನಿರಂತರ ವಿಸ್ತಾರಗೊಳ್ಳುತ್ತಿದ್ದ ತನ್ನ ಪ್ರದೇಶದ ಗಡಿಭಾಗಗಳಿಗೆ ರವಾನಿಸಿದನು. ವೈದಿಕ ಯುಗದ ಅಶ್ವಮೇಧಯಾಗದ ಪರಿವರ್ತಿತ ರೂಪದಂತೆ ತೋರುವ ಈ ಕಾರ್ಯದಲ್ಲಿ ಅವನು ತನ್ನ ನಿಯಂತ್ರಣಕ್ಕೆ ಬಂದಿರದ ಒಡೆಯರುಗಳನ್ನು, ನಾಯಕರುಗಳನ್ನು ಕೆಣಕಿ ಕುದುರೆಯನ್ನು ವಶಪಡಿಸಿಕೊಂಡು ಯುದ್ಧಕ್ಕೆ ತಯಾರಾಗುವಂತೆ ಸವಾಲೆಸಗಿದನು. 1614ರಲ್ಲಿ ಹದಿನಾಡಿನ ನಂಜರಾಜನ ನೇತೃತ್ವದಲ್ಲಿ ನಾಯಕರುಗಳ ತಂಡವೊಂದು ಕುದುರೆಯನ್ನು ಯಶಸ್ವಿಯಾಗಿ ವಶಪಡಿಸಿಕೊಂಡಿತು. ಆದರೆ ಕೆಲವೇ ವಾರಗಳಲ್ಲಿ ರಾಜನು ಈ ಒಕ್ಕೂಟದ ಮೇಲೆ ಹಲ್ಲೆ ನಡೆಸಿ, ಅವರನ್ನು ಪರಾಸ್ತಗೊಳಿಸಿ ತನ್ನ ಶಕ್ತಿಯ ಸೂಚನೆಯಂತೆ ಅವರ ರಾಜ್ಯಗಳನ್ನು ತನ್ನದಾಗಿಸಿಕೊಂಡನು. 1614ರಲ್ಲಿಯೇ ರಾಜನು ದಳವಾಯಿ ಎಂಬ ಸಚಿವ ಸ್ಥಾನವನ್ನು ಸ್ಥಾಪಿಸಿದನು. ಸೈನ್ಯದ ಮುಖಂಡನಾಗಿರುವುದಲ್ಲದೆ, ರಾಜನಿಗೆ ಸಲಹೆ ನೀಡಿ ರಾಜ್ಯ ವಿಸ್ತರಣೆಯಲ್ಲಿ ನೆರವಾಗುವುದು ದಳವಾಯಿಯ ಉಸ್ತುವಾರಿಯಾಗಿತ್ತು. ಅಲ್ಲದೆ ರಾಜ ಒಡೆಯನು ತನ್ನ ಅಡಿಯಲ್ಲಿ ಆಳ್ವಿಕೆ ನಡೆಸುವವರಿಗಾಗಿ ಸ್ವಂತ ವ್ಯವಸ್ಥೆಯೊಂದನ್ನು ಕಾರ್ಯರೂಪಕ್ಕೆ ತಂದು ಅಂಥವರಿಗೆ ಪಾಳೆಗಾರ ಪದವಿಯನ್ನೂ ಗಡಿ ಎಂಬ ಆಡಳಿತ ಘಟಕವನ್ನೂ ವಹಿಸಿಕೊಟ್ಟನು. ಜೊತೆಗೆ ಕಾರಣಿಕ, ಓಲೆಕಾರ, ಠಾಣೆದಾರನಂತಹ ಹಲವು ಪದವಿಗಳನ್ನು ಕರುಣಿಸುವ ಮೂಲಕ ಭೂವಲಯದಲ್ಲಿ ಪ್ರಾಪಂಚಿಕ ರಾಜ್ಯದ ಸ್ವರೂಪವನ್ನು ವಿಜಯನಗರದ ಅರಸರು

ದುಡಿಸಿಕೊಂಡ ಪೌರಾಣಿಕ ದಿವ್ಯಶ್ರೇಣೀಕರಣದ ಅನ್ವಯ ಹೊಸದಾಗಿ ಕಟ್ಟಿಕೊಂಡನು. 1617ರ ಮಧ್ಯದ ವೇಳೆಗೆ ಒಡೆಯರ್ ವಂಶವು ತನ್ನ ಶಕ್ತಿಯ ಪಾರಮ್ಯ ತಲುಪಿ ಮಧುರೆಯ ನಾಯಕರಂತೆಯೇ ವಿಶಾಲವಾಗಿ ಕಂಗೊಳಿಸತೊಡಗಿತ್ತು. ರಾಜನು ಪ್ರದೇಶದ ಅತ್ಯಂತ ಶಕ್ತಿಶಾಲಿ ಅರಸನಾಗಿ 'ಮಂಡಲಾಧಿಪತ್ಯದೊಳ್' ಇದ್ದು, ಗುಪ್ತೋತ್ತರ ಪೌರಾಣಿಕ ಯುಗದ ವಿಶಾಲವೂ ಸ್ಥೂಲವೂ ಆದ ಕಟ್ಟಳೆಗಳಿಗೆ ಅನುಗುಣವಾಗಿ 'ಧರ್ಮದಿಂ ಧರೆಯಂ ಪಾಲಿಸಿ' ರಾಜ್ಯಭಾರನಡೆಸಿದನು. ಈ ಎಲ್ಲ ಕ್ರಮಗಳು ಸಾಮ್ರಾಜ್ಯಪರ ರಾಜಕರಣದಲ್ಲಿ ಒಡೆಯರುಗಳಿಗಿದ್ದ ಸ್ಥಾನದ ನವೀಕರಣವನ್ನು ಸೂಚಿಸುತ್ತವೆ.

ಒಡೆಯರ್ ರಾಜ್ಯದ ರಾಜಕೀಯ ಮರುವಿನ್ಯಾಸವು ಅವರ ದೈವಭಕ್ತಿ ಕ್ರಿಯೆಗಳಲ್ಲಿಯೂ ಪ್ರತಿಬಿಂಬಿತವಾಗಿತ್ತು. ವಿಜುಗೀಷು ಸ್ಥಾನದಿಂದ ಬೆಳೆದು ಮಹಾಮಂಡಲೇಶ್ವರನಾಗಿ ಪರಿವರ್ತನೆ ಹೊಂದಿ ಇನ್ನೂ ಉನ್ನತ ಸ್ತರದ ಪರಮೇಶ್ವರ ಪದವಿಗೇರಲು ಹವಣಿಸಿದ ರಾಜ ಒಡೆಯನು ಬೋಳಚಾಮರಾಜನು ದೇವಿಯ ಪ್ರತಿ ತೋರಿದ ಭಕ್ತಿಗೆ ಬದಲು 'ಸೂಕ್ತವಾದ' ವೈಷ್ಣವಧರ್ಮದ ಸಾಮ್ರಾಜ್ಯಪರ ಹಾದಿಯನ್ನು ಒಪ್ಪಿಕೊಂಡನು. ತನ್ನ *ಮೈಸೂರು ಅರಸರ ಚರಿತ್ರೆ*ಯಲ್ಲಿ ವಿಲ್ಕ್ಸ್, ರಾಜ ಒಡೆಯನು 1610ರಲ್ಲಿ ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡ ಮೇಲೆ ವೈಷ್ಣವಧರ್ಮ ಸ್ವೀಕರಿಸಿದ ಮೊದಲ ಮೈಸೂರು ಅರಸನಾದನು ಎಂದು ಹೇಳಿದ್ದಾನೆ.[18] ಇದು ಪೂರ್ಣವಾಗಿಯೂ ಸರಿಯಲ್ಲ. ಏಕೆಂದರೆ, 1598ರ ಶಾಸನವೊಂದರಲ್ಲಿ ರಾಜ ಒಡೆಯನು ಆಗಲೇ ತನ್ನ ವಂಶಕ್ಕೆಂದು ವೈಷ್ಣವಧರ್ಮವನ್ನು ಒಪ್ಪಿಕೊಂಡ ವಿಚಾರವು ಉಕ್ತವಾಗಿದೆ.[19] ಆದರೆ ಪರಿವರ್ತನೆ ಹೊಂದಿದ ಮೊದಲ ಮೈಸೂರು ಅರಸ ರಾಜ ಒಡೆಯನೇ ಎಂಬುದು ಸೂಕ್ಷ್ಮ ಶೋಧ ಬಯಸುತ್ತದೆ.

ಶಾಸನ ಹಾಗೂ ಸಾಹಿತ್ಯ ಮೂಲದಿಂದ ರಾಜ ಒಡೆಯನು ತನ್ನ ಆಳ್ವಿಕೆಯಲ್ಲಿ ರಾಜ್ಯಾದ್ಯಂತ ವೈಷ್ಣವ ನಾರಾಯಣ ದೇವಾಲಯಗಳಿಗೆ ಪೋಷಣೆ ನೀಡಿದನೆಂದು ತಿಳಿದು ಬರುತ್ತದೆ. *ಚಿಕ್ಕದೇವರಾಯ ವಂಶಾವಳಿ* (ಸು. 1700) ಪ್ರಕಾರ ರಾಜ ಒಡೆಯನು ಮೇಲುಕೋಟೆಯ ಲಕ್ಷ್ಮೀಕಾಂತ(ಲಕ್ಷ್ಮೀನಾರಾಯಣ)ನನ್ನು ತನ್ನ ವಂಶದ ಕುಲದೇವತೆಯಾಗಿ ಸ್ವೀಕರಿಸಿದನು. ಈ ಕೃತಿಯ ಪ್ರಕಾರ ಅವನ ಭಕ್ತಿ ಎಷ್ಟು ಹಿರಿಮೆಯದಾಗಿತ್ತೆಂದರೆ ಅವನು ದೇವಾಲಯದಲ್ಲಿ ತನ್ನದೇ ಪ್ರತಿಮೆಯನ್ನು (ಭಕ್ತವಿಗ್ರಹ) ಸ್ಥಾಪಿಸಿದನು. ತಾನು ಶ್ರೀರಂಗಪಟ್ಟಣದಲ್ಲಿದ್ದು, ರಾಜ್ಯಭಾರ ನಡೆಸುತ್ತಿರುವಾಗಲೂ ಸದಾ ಭಕ್ತಿಯುತವಾಗಿ ದೇವತಾರಾಧನೆಯಲ್ಲಿ ತೊಡಗುವುದೇ ಇದರ ಲಕ್ಷ್ಯವಾಗಿತ್ತು. ಶ್ರೀರಂಗಪಟ್ಟಣದ ರಂಗನಾಥನ ಪ್ರತಿಯೂ ಅವನಿಗೆ ಅಪಾರ ಭಕ್ತಿ ಇತ್ತೆಂದು ಹೇಳಲಾಗಿದೆ. ಅವನು ಈ ದೇವಾಲಯಕ್ಕೆ ನೀಡಿದ ದಾನಗಳು ಇದಕ್ಕೆ ಪುಷ್ಟಿ ನೀಡುತ್ತವೆ.

ಭಕ್ತಿಮಾರ್ಗಗಳ ಈ ಉತ್ಕರ್ಷ ದಾವೂದ್ ಅಲಿ ಅವರು ವಿವರಿಸಿರುವಂತೆ 9ರಿಂದ 14ನೆಯ ಶತಮಾನಗಳ ದಕ್ಷಿಣ ಭಾರತದ ರಾಜ್ಯಗಳ ಮಧ್ಯಯುಗೀನ ರಾಜಕಾರಣಗಳ ಮಾದರಿಗಳೊಂದಿಗೆ ಹೊಂದಿಕೊಳ್ಳುತ್ತದೆ.[20] ಅಲಿ ಅವರ ಪ್ರಕಾರ ರಾಜನು ಕಲಿಯುಗಪೂರ್ವದ ದೊಡ್ಡ ಅರಸುಗಳಂತೆ ಪರಮೇಶ್ವರನೆಂಬ ಅಧಿಪತಿಯ

ಸ್ಥಾನಕ್ಕೇರಬಹುದೆಂಬ ಪರಿಕಲ್ಪನೆಯು ಈ ಕಾಲದಲ್ಲಿ ದಕ್ಷಿಣ ಭಾರತದಲ್ಲಿ ಮತ್ತೆ ತಲೆದೋರಿತ್ತು. ಪರಮೇಶ್ವರ ಪದವಿಯ ಸಾಧ್ಯತೆಯನ್ನು ಭೂಮಿಯನ್ನಾಳುವ ಅನೇಕ ಪರಮೇಶ್ವರರ ಕಥೆ ಹೇಳುವ ವಿಷ್ಣುಪುರಾಣದ ವಿವಿಧ ಭಾಗಗಳ ವ್ಯಾಖ್ಯಾನದ ಮೂಲಕ ಮತ್ತೊಮ್ಮೆ ಎತ್ತಿ ಹಿಡಿಯಲಾಗಿತ್ತು. ಈ ಕೃತಿಯು ಮನು, ಇಕ್ಷ್ವಾಕು, ಪುರೂರವರನ್ನು ಮೊದಲುಗೊಂಡು ಸೂರ್ಯ ಹಾಗೂ ಚಂದ್ರವಂಶಗಳ ಪಿತೃಪ್ರಾಯರ ಚರಿತ್ರೆಯನ್ನು ಗುಪ್ತ ಸಾಮ್ರಾಜ್ಯದವರೆಗೆ ವಿವರಿಸುತ್ತದೆ. ಈ ಕೃತಿಯಲ್ಲಿ ವಿಷ್ಣುವಿನ ಮುಂಬರುವ ಅವತಾರವಾದ ಕಲ್ಕಿಯ ಪರಾಮರ್ಶೆಯೂ ಇದೆ. ಕಲ್ಕಿಯು ಈ ಯುಗದ ಆರಂಭದಲ್ಲಿ ಮನುವೈವಸ್ವತನು ಮಾಡಿದಂತೆ ಹೊಸ ಧಾರ್ಮಿಕ ಯುಗವೊಂದಕ್ಕೆ ಚಾಲನೆ ನೀಡಿ ಯುಗಚಕ್ರವನ್ನು ಮತ್ತೆ ಆರಂಭಗೊಳಿಸಿದನು ಎನ್ನಲಾಗಿದೆ.[21] ದಕ್ಷಿಣ ಭಾರತದ ಅರಸುಗಳು ವಿಷ್ಣುಪುರಾಣದ ಈ ತತ್ವವನ್ನು ವೈಷ್ಣವ ಹಾಗೂ ಶೈವಭಕ್ತಿಯ ಆಚರಣೆಗಳೊಂದಿಗೆ ಹಾಗೂ ನಂಬಿಕೆಗಳೊಂದಿಗೆ ಕ್ರಿಯಾಶೀಲವಾಗಿ ಪುನರ್‌ನಿರ್ಮಿಸಿದುದನ್ನು ಅಲಿಯವರು ತೋರಿಸಿಕೊಡುತ್ತಾರೆ. ಈ ಮಾದರಿಯ ಮೂಲಕ ಅರಸನು ವಿಷ್ಣುವಿನ ಅವತಾರವಾಗಿ (ಯುಗಾಂತ್ಯದಲ್ಲಿ ಬರಲಿರುವ ವಿಷ್ಣುವಿನ ಅವತಾರ ಕಲ್ಕಿಯಂತೆ) ನಲ್ಮೆಯ ಯುಗವೊಂದರ ಸಂಚಾಲಕನಾದನು. ಈ ಪೌರಾಣಿಕ ಮಾದರಿಗೆ ಹೊಂದಿಕೊಳ್ಳುವಂತೆ ಅರಸುಗಳು ತಮ್ಮ ಮನೆತನಕ್ಕೆಂದು ಇಕ್ಷ್ವಾಕು (ಸೂರ್ಯವಂಶ) ಯಾ ಪೌರವ/ಯಾದವ (ಚಂದ್ರವಂಶ)ರಿಂದ ಆರಂಭಗೊಳ್ಳುವ ವಂಶಾವಳಿಯನ್ನು ಸೃಷ್ಟಿಸಿಕೊಳ್ಳಬೇಕಿತ್ತು. ಹೀಗಾಗಿ ದಕ್ಷಿಣ ಭಾರತದ ಪ್ರಮುಖ ಅರಸುಗಳ ರಾಜಪ್ರಶಸ್ತಿಯಲ್ಲಿ ಅವರ ಮನೆತನವನ್ನು ಸೂರ್ಯವಂಶದೊಂದಿಗೋ, ಚಂದ್ರವಂಶ ದೊಂದಿಗೋ ತಳುಕು ಹಾಕಲಾಗಿದೆ. ಆರಂಭದಲ್ಲಿ ಇಕ್ಷ್ವಾಕುವಿನಿಂದ ಶುರುವಾಗುವ ವಂಶಾವಳಿ ಹೆಚ್ಚು ಪ್ರಚಾರದಲ್ಲಿದ್ದರೆ, ಕ್ರಮೇಣ ಬಹುತೇಕ ರಾಜವಂಶಗಳು ತಮ್ಮ ಮನೆತನವನ್ನು ಯಾದವ ವಂಶದೊಂದಿಗೆ ಗುರುತಿಸಿಕೊಳ್ಳತೊಡಗಿದವು. ಒಡೆಯರ್ ಚರಿತ್ರೆಗಳಲ್ಲಿಯೂ ಇದನ್ನೇ ಕಾಣುತ್ತೇವೆ. ಅಲಿ ಅವರು ಸೂಚಿಸುವಂತೆ ಈ ಪಲ್ಲಟಕ್ಕೆ ದಕ್ಷಿಣ ಭಾರತದ ಅರಸುಗಳ ನಡುವಲ್ಲಿ ಭಕ್ತಿ ಪರಂಪರೆಗಳು ನೆಲೆಗೊಂಡು, ಅವರು ತಮ್ಮನ್ನು ವಿಷ್ಣುವಿನ ಒಂಬತ್ತನೆಯ ಅವತಾರವಾದ ಕೃಷ್ಣನ ವಂಶಜರೆಂದು ಬಣ್ಣಿಸಿಕೊಳ್ಳುವುದಲ್ಲದೆ, ಧರೆಯ ಮೇಲೆ ವಿಷ್ಣುವಿನ ಅವತಾರವಾಗಿದ್ದರೆಂದು ನಿರೂಪಿಸಿಕೊಳ್ಳತೊಡಗಿದ್ದೇ ಕಾರಣವಾಗಿದೆ. ಆದ್ದರಿಂದ ನಿರ್ದಿಷ್ಟವಾದ ಭಕ್ತಿ ಸಂಬಂಧವನ್ನಲ್ಲದೆ ಒಡೆಯರ್ ಅರಸುಗಳಿಗೆ ಯೋಗ್ಯವಾದ ವಂಶಾವಳಿಯೊಂದನ್ನು ಕಟ್ಟಿಕೊಳ್ಳುವುದೂ ಅನಿವಾರ್ಯವಾಗಿತ್ತು. ಇಲ್ಲದಿದ್ದಲ್ಲಿ ಪ್ರಾದೇಶಿಕ ರಾಜಕಾರಣದಲ್ಲಿ ಅವರಿಗೆ ಮಹತ್ವವಿಲ್ಲದಂತಾಗುತ್ತಿತ್ತು. ಸೂರ್ಯ ಯಾ ಚಂದ್ರವಂಶಗಳ, ಮತ್ತು ಪೌರಾಣಿಕ ವಂಶಾನುಚರಿತೆಗಳ ಅನ್ವಯ ಒಡೆಯರ್ ವಂಶಾವಳಿಯನ್ನು ತಿರುಚಿ ಹಾಕಿ ಪೌರಾಣಿಕ ಅರಸುಗಳ ಕಥನವೊಂದನ್ನು ಕಟ್ಟಿಕೊಂಡು ಹೊಸವಂಶಾವಳಿಯನ್ನು ರಚಿಸುವ ಅಗತ್ಯತೆ ಮೈಸೂರು ಅರಸರಿಗಿತ್ತು.[22]

ಪ್ರಾದೇಶಿಕ ರಾಜಕಾರಣದಲ್ಲಿ ಏಳಿಗೆ ಪಡೆದುದರಿಂದ ರಾಜ ಒಡೆಯನು ಮನೆತನದ ಹಿನ್ನೆಲೆ ಕುರಿತು ಕಾಳಜಿ ವಹಿಸಿದ ಮೊಟ್ಟಮೊದಲ ಮೈಸೂರು ಅರಸನಾಗಿದ್ದ.[23] ಮನೆತನದ

ಮೊದಲ ವಂಶಾವಳಿಯ ದಾಖಲೆ ರಾಜ ಒಡೆಯನು ತನ್ನ ಸಹೋದರನ ಅಡಿಯಲ್ಲಿ ರಾಜ್ಯಭಾರ ನಡೆಸುತ್ತಿದ್ದ ಕಾಲಕ್ಕೆ ಸೇರುತ್ತದೆ. 1598ರ ಕಾಲಕ್ಕೆ, ಅವನು ವಿಜಯನಗರದ ಪ್ರತಿನಿಧಿಯನ್ನು ಧಿಕ್ಕರಿಸಿ ಕಂದಾಯ ಅಧಿಕಾರಿಗಳನ್ನು ಹೊರಗಟ್ಟಿದ ವೇಳೆಗಾಗಲೇ, ಅವನ ಸಾಮ್ರಾಜ್ಯಾಕಾಂಕ್ಷೆ ಪ್ರಕಟಗೊಳ್ಳುತ್ತಿದ್ದಂತೆ ತೋರುತ್ತದೆ. ಈ ಶಾಸನದಲ್ಲಿ ಒಡೆಯರ್ ಮನೆತನವು ಋಗ್ವೇದ ಶಾಖೆಯ ಆಶ್ವಲಾಯನ ಸೂತ್ರದ ಆತ್ರೇಯಸ ಗೋತ್ರಕ್ಕೆ ಸೇರಿದ್ದು ಎನ್ನಲಾಗಿದೆ.[24] ಗೋತ್ರವ್ಯವಸ್ಥೆಯು ಋಷಿಯೋರ್ವನಿಂದ ಆರಂಭಗೊಳ್ಳುವ ಬ್ರಾಹ್ಮಣರ ವರ್ಗೀಕರಣವಾಗಿದ್ದರೂ ದಕ್ಷಿಣ ಭಾರತದಲ್ಲಿ ಅನೇಕ ಅರಸುಗಳು ಪರಂಪರಾಗತವೂ ಬಹುಸಮ್ಮತವೂ ಆದ ವಂಶವೊಂದರಲ್ಲಿ ತಮ್ಮನ್ನು ನೆಲೆಗೊಳಿಸಿಕೊಳ್ಳುವ ಉದ್ದೇಶದಿಂದ ಅದನ್ನು ಸ್ವೀಕರಿಸಿದ್ದರು. ವೈದಿಕ ವಂಶಾವಳಿಗಳ ವರ್ಣನೆಯಲ್ಲಿ ಕಾಣುವಂತ ವೈದಿಕ ಆಚರಣಾ ಸಂಹಿತೆಗಳನ್ನು ವಿಧಿವತ್ತಾಗಿ ಪಾಲಿಸುವವರಾಗಿ ತಮ್ಮನ್ನು ಬಿಂಬಿಸಿ ತನ್ನ ಮನೆತನವನ್ನು ನ್ಯಾಯಸಮ್ಮತಗೊಳಿಸುವುದು ರಾಜ ಒಡೆಯನ ಉದ್ದೇಶವಾಗಿತ್ತೆಂಬುದು ಸ್ಪಷ್ಟವಾಗಿದೆ. ರಾಜ ಒಡೆಯನ ಸೋದರಳಿಯ ಮೊದಲನೆಯ ಕಂಠೀರವ ನರಸರಾಜನ ಕಾಲದಲ್ಲಿ ಬರೆಯಲಾದ *ಕಂಠೀರವ ನರಸರಾಜ ವಿಜಯಂ* (ಸು. 1648) ಕೃತಿಯಲ್ಲಿ ರಾಜನನ್ನು ಮತ್ತು ಅವನ ಮನೆತನವನ್ನು ಕೀರ್ತಿಸುತ್ತಾ ಯಾದವವಂಶದೊಂದಿಗೆ ಗುರುತಿಸಿಕೊಂಡಿರುವುದಕ್ಕೆ ಮುನ್ನ ಈ ವಿಚಾರವು ಯಾವುದೇ ಸಾಹಿತ್ಯ ಯಾ ಶಾಸನ ಮೂಲದ ಆಕರಗಳಲ್ಲಿ ಕಂಡುಬರುವುದಿಲ್ಲ. ಆದಾಗ್ಯೂ ವೈಷ್ಣವೀಕರಣ ಹಾಗೂ ಪೌರಾಣೀಕರಣ 1598ರ ಶಾಸನದ ವೇಳೆಗಾಗಲೇ ಆರಂಭಗೊಂಡಿತ್ತು.

ರಾಜ ಒಡೆಯನು ವೈಷ್ಣವ ದೇವತೆಗಳನ್ನು ಆಯ್ಕೆ ಮಾಡಿಕೊಂಡುದರ ಹಿಂದೆ ಯಾದವವಂಶದೊಂದಿಗೆ ಅಷ್ಟೇ ಅಲ್ಲದೆ ದಕ್ಷಿಣ ಕರ್ನಾಟಕದ ಪೂರ್ವ ದೊರೆಗಳೊಂದಿಗೂ ತನ್ನ ವಂಶದ ಸಂಬಂಧ ಸ್ಥಾಪಿಸುವ ಉದ್ದೇಶವಿರಬಹುದಾದ ಸಾಧ್ಯತೆ ಇದೆ. ಶ್ರೀರಂಗಪಟ್ಟಣದಲ್ಲಿ ವಿಜಯ ಸಾಧಿಸಿದ ಬಳಿಕ ಅಲ್ಲಿನ ಶ್ರೀರಂಗನಾಥಸ್ವಾಮಿಯನ್ನು ಕುಲದೇವತೆಯಾಗಿ ಸ್ವೀಕರಿಸುವುದು ಸ್ವಾಭಾವಿಕವಾಗಿತ್ತು; ಆದರೆ ಅವನು ಒಡೆಯರ್ ಸಂಬಂಧವನ್ನು ತನ್ನ ರಾಜ್ಯದ ತುದಿಯಲ್ಲಿದ್ದ ಮೇಲುಕೋಟೆಯ ದೇವತೆ ನಾರಾಯಣಸ್ವಾಮಿಯೊಂದಿಗೆ ಸ್ಥಾಪಿಸಿದ. ಈ ಆಯ್ಕೆ ಆ ನಗರದ ನಾರಾಯಣಸ್ವಾಮಿ ದೇವಾಲಯದ ಇತಿಹಾಸದ ದೃಷ್ಟಿಯಿಂದ ಮಹತ್ವದ್ದಾಗಿದೆ. ಮೇಲುಕೋಟೆ ಎಂಬ 'ಮೇಲಿನ ಕೋಟೆ'ಯನ್ನು ಸೂಚಿಸುವ ಇಂದಿನ ಹೆಸರು ಅದರ ಪರಂಪರಾಗತ ನಾಮವಲ್ಲ. ಬದಲಿಗೆ, ಮಧ್ಯಯುಗದ ಬಹುತೇಕ ಕೃತಿಗಳಲ್ಲಿ ಹಾಗೂ ಶಾಸನಗಳಲ್ಲಿ ಅದನ್ನು ಯಾದವಗಿರಿ ('ಯಾದವರ ಬೆಟ್ಟ') ಎನ್ನಲಾಗಿದೆ. ನಾರಾಯಣಸ್ವಾಮಿ ದೇವಾಲಯವು ದ್ವಾಪರಯುಗದಲ್ಲಿ ಕೃಷ್ಣನ ಕಾಲದಿಂದಲೇ ಪರಂಪರಾಗತ ತೀರ್ಥಯಾತ್ರಾ ಕೇಂದ್ರವಾಗಿತ್ತು ಎನ್ನಲಾಗಿದೆ. ಮುಂದಿನ ಒಡೆಯರ್ ಕೃತಿಗಳಲ್ಲಿ ವಂಶಸ್ಥಾಪಕರಾದ ಯದುರಾಯ, ಕೃಷ್ಣರಾಜರಿಬ್ಬರೂ ದ್ವಾರಕೆಯಿಂದ ತೀರ್ಥಾಟನೆಗೆಂದು ಮೊದಲಿಗೆ ದಕ್ಷಿಣ ಕರ್ನಾಟಕದ ಈ ಪವಿತ್ರ ಕ್ಷೇತ್ರಕ್ಕೆ ಆಗಮಿಸಿದರು ಎಂದು ಹೇಳಲಾಗಿದೆ. ಅಲ್ಲದೆ, ಈ ನಗರಕ್ಕೆ ತಮಿಳುನಾಡಿನ ಚೋಳರಾಜ್ಯದಿಂದ ಗಡಿಪಾರುಗೊಳಿಸಲಾದ ಬಳಿಕ ಶ್ರೀವೈಷ್ಣವ ಆಚಾರ್ಯರಾದ

ರಾಮಾನುಜರಿಗೆ ಅಲ್ಲಿ ನೆಲೆಸಲು ಅನುವು ಮಾಡಿಕೊಟ್ಟ ಹೊಯ್ಸಳರೊಂದಿಗೂ, ನಾರಾಯಣಸ್ವಾಮಿ ಹಾಗೂ ಯೋಗಾನರಸಿಂಹಸ್ವಾಮಿ ದೇವಾಲಯಗಳಿಗೂ ಪೋಷಣೆ ನೀಡಿದ ವಿಜಯನಗರ ವಂಶದೊಂದಿಗೂ ಸಂಬಂಧವಿದೆ. ರಾಜ ಒಡೆಯನು ದೇವತೆಯನ್ನು ಆಯ್ಕೆ ಮಾಡಿಕೊಂಡುದರ ಹಿಂದೆ ಈ ರಾಜಕೀಯ ಮಾದರಿಗಳ ಬಗೆಗಿನ ಪ್ರಜ್ಞೆಯೂ ಅವುಗಳನ್ನು ತನ್ನ ಆಳ್ವಿಕೆಯಲ್ಲಿ ಅಳವಡಿಸಿಕೊಳ್ಳುವ ಬಯಕೆಯೂ ವ್ಯಕ್ತವಾಗುತ್ತದೆ.

ರಾಜ ಒಡೆಯನು ತಾನು ಧರೆಯ ಮೇಲೆ ವಿಷ್ಣುವಿನ ಅವತಾರವೆಂದು ಭಾವಿಸಿರುವುದಕ್ಕೂ ಆಧಾರಗಳಿವೆ. ಈಗಾಗಲೇ ಹೇಳಿದಂತೆ, ರಾಜ ಒಡೆಯನು ಮೇಲುಕೋಟೆಯ ಲಕ್ಷ್ಮೀನಾರಾಯಣ ದೇವಾಲಯದಲ್ಲಿ ತನ್ನದೇ ಮೂರ್ತಿಯೊಂದನ್ನು ಸ್ಥಾಪಿಸಿದನು. *ಚಿಕ್ಕದೇವರಾಯ ವಂಶಾವಳಿಯ* ವಿವರಣೆಯ ಪ್ರಕಾರ ಅಲ್ಲಿ ತಾನು ಭೌತಿಕವಾಗಿ ಉಪಸ್ಥಿತನಿರದ ಸಂದರ್ಭಗಳಲ್ಲಿಯೂ ನಿರಂತರ ದೇವತೆಯನ್ನು ಆರಾಧಿಸುವುದೇ ಇದರ ಹಿಂದಿನ ಗುರಿಯಾಗಿತ್ತು. ಈ ಹೇಳಿಕೆ ಒಪ್ಪಿಕೊಳ್ಳತಕ್ಕದ್ದೇ ಆದರೂ ದೇವಾಲಯದೊಳಗೆ ಈ ಮೂರ್ತಿಯನ್ನು ಕೆತ್ತಿ ನಿಲ್ಲಿಸುವ ಕಾರ್ಯಕ್ಕೆ ರಾಜ ಒಡೆಯನ ದಿವ್ಯತ್ವವನ್ನು ಒಳಗಿಂದೊಳಗೇ ವ್ಯಕ್ತಪಡಿಸುವ ಕೆಲವು ಪ್ರಕ್ರಿಯೆಗಳ ಅಗತ್ಯವಿದೆ. ಮೊದಲಿಗೆ, ದೇವಾಲಯದೊಳಗಿನ ಮೂರ್ತಿಗಳು ದೇವತೆಗಳಿಗೆ ಹಾಗೂ ಋಷಿಗಳ ಯಾ ಖ್ಯಾತ ಆಚಾರ್ಯರಂತ ಪ್ರಬುದ್ಧ ವ್ಯಕ್ತಿಗಳಿಗೆ ಮೀಸಲಾಗಿತ್ತೆಂಬುದು ಗಣನೀಯ ಅಂಶ. ಇದು ರಾಜ ಒಡೆಯನು 'ಸಾಮಾನ್ಯ' ಮಾನವನಾಗಿರದೆ ಸ್ವಲ್ಪಮಟ್ಟಿಗಾದರೂ ಪ್ರಬುದ್ಧ ಹಾಗೂ ಪವಿತ್ರ ವ್ಯಕ್ತಿಯಾಗಿದ್ದ ಎಂಬುದನ್ನು ಕೂಡಲೆ ಸೂಚಿಸುತ್ತದೆ. ಎರಡನೆಯದಾಗಿ, ತುಸು ಸ್ಥೂಲವಾದ ಅಂಶವೆಂದರೆ ಆರಾಧನೆ ನಿರಂತರ ಸಾಗಲು ನೆರವಾಗುವಂತೆ ಮೂರ್ತಿಯನ್ನು ಸಚೇತನಗೊಳಿಸುವ ಪ್ರಕ್ರಿಯೆ. ಅಂದರೆ ಜೀವಂತ ವ್ಯಕ್ತಿಯಾದ ರಾಜ ಒಡೆಯನು ತನ್ನ ಭೌತಿಕ ಶರೀರ ಹಾಗೂ ಚೈತನ್ಯದೊಂದಿಗೆ ಒಂದೇಸಮನೆ ಮೇಲುಕೋಟೆ ದೇವಾಲಯದ ತನ್ನ ಮೂರ್ತಿಯಲ್ಲಿ ಆವಾಹಿತನಾಗಬೇಕು. ಇದು ಶ್ರೀವೈಷ್ಣವ ಧರ್ಮದ ವಿಶಿಷ್ಟಾದ್ವೈತ ಸಿದ್ಧಾಂತವನ್ನು ಎತ್ತಿ ಹಿಡಿಯುತ್ತದೆ. ಅದರನ್ವಯ (ಶ್ರೀರಂಗಂ, ತಿರುಪತಿ ಮೊದಲಾದ) ಆಯಾ ದೇವಾಲಯಗಳಲ್ಲಿ ಸ್ಥಳೀಯ ರೂಪ ತಾಳಿರುವ ವಿಷ್ಣುವು ಒಂದೇ ಸಮನೆ ತನ್ನ ಪ್ರಾಪಂಚಿಕ ರೂಪದಲ್ಲಿ ಅವಿಭಜಿತ ಪೂರ್ಣತೆಯಲ್ಲಿಯೂ, ಸ್ಥಳೀಯ ದೇವಾಲಯದಲ್ಲಿನ ರೂಪದಲ್ಲಿ ಪೂರ್ಣ ವ್ಯಕ್ತಿಯಾಗಿಯೂ ನೆಲೆಗೊಳ್ಳುವವನು. ಇದಲ್ಲದೆ ರಾಜನು 1614ರಲ್ಲಿ ದೇವತೆಗೆ ಆಭರಣಗಳಿಂದ ಸುಸಜ್ಜಿತವಾದ ಕಮಲಾಸನವನ್ನೂ (ಪದ್ಮಪೀಠ)[25] ಕಿರೀಟವನ್ನೂ (ಮುಡಿ)[26] ಸಮರ್ಪಿಸಿದನು. ಈ ಕಿರೀಟವನ್ನು ಅವನು 'ರಾಜಮುಡಿ' ಎಂದು ಕರೆದನು. ಇದರ ಉಲ್ಲೇಖ ಬರುವ ಶಾಸನದಲ್ಲಿ ದೇವತೆಯನ್ನು ಚಳಪಿಳರಾಯ (ಚಲುವರಾಯ/ಲಕ್ಷ್ಮೀನಾರಾಯಣ) ಎನ್ನಲಾಗಿದೆ.[27] ರಾಜಮುಡಿಯು ದೇವತೆಗೆ ನೀಡಲಾದ ನಿರ್ದೋಷಕರ ಉಡುಗೊರೆ ಎಂದು ತೋರಬಹುದು. ಆದರೆ, ಈ ವಿಷಯವನ್ನು ದೇವಾಲಯದಲ್ಲಿ ತನ್ನದೇ ಮೂರ್ತಿ ಸ್ಥಾಪಿಸಿದ ಹಾಗೂ ತನ್ನ ಹೆಸರಿರುವ ಕಿರೀಟವೊಂದನ್ನು ದೇವತೆಯ ಶಿರದ ಮೇಲಿಡಲು ನೀಡಿದ ಸಂಗತಿಗಳೊಂದಿಗೆ ಸಮೀಕರಿಸಿ ನೋಡಿದಾಗ ಅದು ರಾಜ ಒಡೆಯನಿಗೆ ತನ್ನ ಬಗೆಗಿದ್ದ ಪರಿಕಲ್ಪನೆ ಕುರಿತು ಮಹತ್ವದ ವಿಚಾರವನ್ನು ಹೇಳುತ್ತದೆ.

ರಾಜನು ಇತ್ತ ತನ್ನನ್ನು ಕನಿಷ್ಟ ನಾರಾಯಣನು ಪ್ರಪಂಚವನ್ನು ನಿರ್ವಹಿಸುವಂತೆ ದೇವತೆಯಾಗಿ ಧರೆಯನ್ನು ನಿರ್ವಹಿಸುವ ದಿವ್ಯ ಪಾತ್ರದವನೆಂದು, ಅತ್ತ ಸಾಕ್ಷಾತ್ ವಿಷ್ಣುವಿನ ಅವತಾರವಾಗಿ ಧರೆಯಲ್ಲಿ ನೆಲೆಸಿ ಜನರ ಮೇಲೆ ನೀತಿ ಹಾಗೂ ಸಮೃದ್ಧಿಯೊಂದಿಗೆ ಆಳ್ವಿಕೆ ನಡೆಸುವ ಹೊಸ ಯುಗವೊಂದರ ಪ್ರವರ್ತಕನಾಗಿಯೂ ಕಂಡಿದ್ದನೆಂದು ನಂಬುವುದು ಅಚಾತುರ್ಯವಾಗಿರಲಿಕ್ಕಿಲ್ಲ. ರಾಜನು ಜೀವತೊರೆದ ವಿಚಿತ್ರ ಘಟನೆ ಕುರಿತಂತೆ *ಚಿಕ್ಕದೇವರಾಯ ವಂಶಾವಳಿ, ಮೈಸೂರು ರಾಜರ ಚರಿತ್ರೆ* ಹಾಗೂ *ಅನಾಲ್ಸ್ ಆಫ್ ದಿ ಮೈಸೂರ್ ರೂಲಿಂಗ್ ಹೌಸ್* ಕೃತಿಗಳಲ್ಲಿ ಹೇಳಿರುವ ಕಥೆಯನ್ನು ಗಮನಿಸಿದರೆ ಈ ಎರಡನೆಯ ವಿಚಾರ ಕುರಿತ ಸೂಚನೆಗಳು ಇನ್ನೂ ಪ್ರಬಲಗೊಳ್ಳುತ್ತವೆ. ಈ ಎಲ್ಲ ಕೃತಿಗಳೂ ಹೇಳುವಂತೆ ರಾಜ ಒಡೆಯನದು ಸಾಮಾನ್ಯ ಮರ್ತ್ಯರದನ್ನು ಹೋಲುವಂತ ಮರಣವಾಗಿರಲಿಲ್ಲ. ಬದಲಿಗೆ, ಎಲ್ಲ ಕಥನಗಳಲ್ಲಿಯೂ ರಾಜನು 20 ಜೂನ್ 1617ರಂದು ಮೇಲುಕೋಟೆಯ ಲಕ್ಷ್ಮೀನಾರಾಯಣಸ್ವಾಮಿ ದೇವಾಲಯದ ಗರ್ಭಗೃಹ ಪ್ರವೇಶಿಸಿ ದೇವತೆಯ ಮೂಲ ವಿಗ್ರಹದಲ್ಲಿ ಲೀನನಾದನೆಂದು ಹೇಳಲಾಗಿದೆ.[28] ಇದು ಅನೇಕ ಶ್ರೇಷ್ಠ ಭಕ್ತಿಸಂತರ ಸಾವಿನ ಬಗ್ಗೆ ಇರುವ ಎಲ್ಲ ಕಥನಗಳನ್ನೂ ಹೋಲುತ್ತದೆ. ಆದರೆ, ಅನಾಲ್ಸ್‌ನಲ್ಲಿ ನೀಡಿರುವ ಹೆಚ್ಚಿನ ವಿವರಗಳು ರಾಜನ ಮತ್ತು ವಿಷ್ಣುವಿನ ಹತ್ತನೆಯ ಹಾಗೂ ಕೊನೆಯ ಅವತಾರದೊಂದಿಗಿನ ಸಂಬಂಧವನ್ನು ದೃಢಪಡಿಸುತ್ತದೆ. ಇಲ್ಲಿ ಹೇಳಿರುವಂತೆ ರಾಜನು ಶ್ರೀರಂಗಪಟ್ಟಣದಲ್ಲಿನ ತನ್ನ ಸಿಂಹಾಸನದಿಂದ ಬಿಳಿಯ ಕುದುರೆಯನ್ನೇರಿ ಮೇಲುಕೋಟೆಗೆ ತೆರಳಿ ಮಂಗಳಾರತಿಯ ಸಮಯಕ್ಕೆ ದೇವತೆಯಲ್ಲಿ ಐಕ್ಯನಾದನು.[29] ಬಿಳಿ ಕುದುರೆಯ ವಿವರಣೆಯು ಕೂಡಲೆ ಕಲ್ಕಿಯ ಚಿತ್ರಣವನ್ನು ಮನಸ್ಸಿಗೆ ತರುತ್ತದೆ. ರಾಜನು ಮೇಲುಕೋಟೆಯ ದೇವತೆಯಲ್ಲಿ ಲೀನವಾದ ಕಥೆ ನಂತರದ ಕೃತಿಗಳಲ್ಲಿ ಬರುತ್ತದೆಯಾದರೂ, ಅದು ರಾಜ ಒಡೆಯನಿಗೂ, ವಿಷ್ಣುವಿಗೂ ಇದ್ದ ಸಂಬಂಧವನ್ನು ಅನುಚಿತವಲ್ಲದ ರೀತಿಯಲ್ಲಿ ಬಗೆಹರಿಸುವುದಲ್ಲದೆ, ಅವನ ಕಾಲದಲ್ಲಿದ್ದ ನಂಬಿಕೆಗೆ ಪುಷ್ಟಿಯೂ ನೀಡುತ್ತದೆ. ರಾಜ ಒಡೆಯನಿಗೆ ಸಂಬಂಧಿಸಿದ ಈ ಎಲ್ಲ ಕಾರ್ಯಾಚರಣೆಗಳೂ ವಿವರಗಳೂ ಒಡೆಯರ್ ರಾಜ್ಯವು ಸಾಮ್ರಾಜ್ಯ ಶಕ್ತಿಯೊಂದರ ಪ್ರತಿನಿಧಿಯನ್ನು ಧಿಕ್ಕರಿಸಿ ರಾಜ್ಯವಿಸ್ತರಣೆಯಲ್ಲಿ ತೊಡಗಿದ್ದ ಕಾಲಕ್ಕೆ ಸೇರಿದ್ದು. ವಿಶಾಲ ಸಾಮ್ರಾಜ್ಯವೊಂದಕ್ಕೆ ಹವಣಿಸಿದ ಅರಸುಗಳು ತಮ್ಮನ್ನೂ ತಮ್ಮ ಬೃಹತ್ ಪರಿಕಲ್ಪನೆಗಳನ್ನೂ ಪೌರಾಣಿಕ ಮಾದರಿಯಲ್ಲಿ ಪುನರ್ರಚಿಸಿ ಕೊಳ್ಳಬೇಕಿತ್ತೆಂಬ ಆಲಿ ಅವರ ವಾದವನ್ನು ಇದು ಸಮರ್ಥಿಸುತ್ತದೆ. ಹೀಗಾಗಿ ಇದು ಕೇವಲ ದೈವಭಕ್ತಿಯ ಅಭಿವ್ಯಕ್ತಿಯಾಗಿರದೆ ರಾಜನನ್ನು ದಿವ್ಯ ಶ್ರೇಣಿಯೊಂದರ ಜೊತೆಗೆ ಗುರುತಿಸಿಕೊಳ್ಳುವ ಕ್ರಿಯೆಯ ಭಾಗವಾಗಿತ್ತೆಂಬುದು ಸಹಜವೇ ಎನಿಸುತ್ತದೆ.

ಸಮಾರೋಪ:

ರಾಜ ಒಡೆಯನ ಆಳ್ವಿಕೆ ಮೈಸೂರಿನ ಒಡೆಯರ ಮನೆತನದಲ್ಲಿ ಮಹತ್ವದ ತಿರುವಾಗಿತ್ತು. ತನ್ನ ತಂದೆಯಂತೆ ಹಾಗೂ ಹಿಂದಿನ ಹಲವು ಸಣ್ಣ ರಾಜ್ಯಗಳಂತೆ ಅವನು ಚಿಕ್ಕ ಪ್ರದೇಶವೊಂದನ್ನು ಆಳುವ ಶಕ್ತಿ ಹಾಗೂ 'ಶತ್ರುಗಳನ್ನು ಸದೆಬಡಿಯುವ' ಸೈನಿಕ ಶೌರ್ಯಕ್ಕೆ

ದೇವಿಯೋರ್ವಳನ್ನು ಅವಲಂಬಿಸಿದ. ಆದರೆ, ಯುದ್ಧದಲ್ಲಿ ಅಪಾರ ವಿಜಯ ಸಾಧಿಸಿದ ಕಾರಣ ಒಡೆಯರುಗಳನ್ನು ಪೌರಾಣಿಕ ಅಧಿಪತ್ಯದ ಪಾತ್ರಕ್ಕೆಂಬ ಪೈಪೋಟಿಯ ಯುಗವೊಂದಕ್ಕೆ ಸಮರ್ಪಕವಾಗಿ ಕೊಂಡೊಯ್ದು. ಅವನು ಪ್ರಾದೇಶಿಕ ರಾಜಕಾರಣದಲ್ಲಿ ಏಳಿಗೆ ಪಡೆದಿದ್ದು ಸ್ಥಳೀಯ ದೇವಿಯನ್ನಾಧರಿಸಿದ ರಾಜತ್ವದ ಮಾದರಿಯನ್ನು ಹಳೆಯದಾಗಿಸಿತು. ಹೀಗಾಗಿ ರಾಜ ಒಡೆಯನು (ಬೆಟ್ಟದ ಮೇಲಿನ ದೇವಿಯು ಪ್ರತಿನಿಧಿಸುವ) ಸ್ಥಳೀಯ ಶಕ್ತಿಗೆ ಬದಲು (ವಿಷ್ಣುವು ಪ್ರತಿನಿಧಿಸುವ) ಪ್ರಾಪಂಚಿಕ ಹಾಗೂ ಅಧಿಭೌತಿಕ ವಿಶ್ವಶಕ್ತಿಯ ಸ್ಥೂಲಪರಿಕಲ್ಪನೆಯನ್ನು ಸ್ವೀಕರಿಸಿ ಪೌರಾಣಿಕ ರಾಜಕಾರಣದ ತತ್ವದಡಿಯಲ್ಲಿ ತನ್ನ ವಂಶಾವಳಿಯನ್ನು ಮರುರಚಿಸತೊಡಗಿದ. ಇದನ್ನು ದೇವತೆಗಳ ಲೋಕದ ಅತ್ಯುನ್ನತ ಸ್ಥಾನ ಹೊಂದಿ ಬ್ರಹ್ಮ ಎಂಬ ಪರಮಾತ್ಮನಿಗೆ ಸಮನಾದ ವಿಷ್ಣುವಿನ ನಾರಾಯಣ ರೂಪವನ್ನು ಕುಲದೇವತೆಯಾಗಿ ಒಪ್ಪಿಕೊಳ್ಳುವ ಮೂಲಕ ಕಾರ್ಯರೂಪಕ್ಕೆ ತಂದ. ಜೊತೆಯಲ್ಲಿಯೇ ಪುರಾಣ, ಇತಿಹಾಸ ಹಾಗೂ ವೈದಿಕ ಗೋತ್ರವೊಂದರ ಜೊತೆ ತನ್ನ ಹಾಗೂ ಮನೆತನದ ಸಂಬಂಧ ಬೆಸೆಯುತ್ತಾ ನಿರ್ದಿಷ್ಟ ವಂಶಾವಳಿಯನ್ನು ಕಟ್ಟಿಕೊಡುವ ಪ್ರಕ್ರಿಯೆಯನ್ನು ಆರಂಭಿಸಿದ. ಕೊನೆಗೆ, ರಾಜ ಒಡೆಯನು ಈ ಪೌರಾಣಿಕ ರಾಜಕೀಯ ಅಸ್ಮಿತೆಯ ನಿರ್ಮಾಣವನ್ನು ತನ್ನನ್ನು ದಿವ್ಯಪ್ರಭು ಹಾಗೂ ಧರೆಯಲ್ಲಿ ಕಲ್ಕಿಯ ಅವತಾರ ರೂಪದ ವಿಷ್ಣುವಿನ ಅವತಾರ ಎಂದು ಪ್ರತಿನಿಧಿಸಿಕೊಳ್ಳುವ ಮೂಲಕ ಪೂರ್ಣಗೊಳಿಸಿದ.

ಒಡೆಯರ್ ಚರಿತ್ರೆಯ ಉದ್ದಕ್ಕೂ ಇತರ ಪ್ರಮುಖ ಪ್ರಾದೇಶಿಕ ಶಕ್ತಿಗಳಾದ ಇಕ್ಕೇರಿ, ಮಧುರೈ, ಪೂಣೆ, ಹಾಗೂ ಕೊನೆಗೆ ಬ್ರಿಟಿಶರ ಮದ್ರಾಸ್ ಪ್ರೆಸಿಡೆನ್ಸಿಯೊಂದಿಗಿನ ಸಂಬಂಧದಲ್ಲಿ ಅವರ ಶಕ್ತಿ ಏರಿಳಿತಗಳನ್ನು ಕಾಣುತ್ತಿರುವಂತೆ ಈ ಪ್ರಕ್ರಿಯೆಯು ಅನಾವಣಗೊಳ್ಳತ್ತಾ ಹೋಯಿತು. ಅವರು ಪರಮೇಶ್ವರ ಪದವಿಯನ್ನು ಎಂದೂ ತಲುಪಲಿಲ್ಲ. ಪ್ರಾದೇಶಿಕ ರಾಜಕಾರಣದಲ್ಲಿ ಅವರ ಸ್ಥಾನವು ಅಲುಗಾಡುತ್ತಾ ಹೋದದ್ದು, ದೇವಿ ಹಾಗೂ ವೈಷ್ಣವ ಆಚರಣೆಗಳ ಕುರಿತ ಅವರ ದೃಷ್ಟಿಕೋನಗಳ ಮೇಲೆ ಪ್ರಭಾವ ಬೀರಿತು. ಕೆಳಮಟ್ಟಕ್ಕೆ ಕುಸಿದಾಗ ದೇವಿಯನ್ನು ಬೇಡಿಕೊಳ್ಳುವುದು, ಸ್ವಲ್ಪಮಟ್ಟದ ಸ್ಥಿರತೆಯನ್ನೂ ಪ್ರಾದೇಶಿಕ ಮೇಲುಗೈಯನ್ನೂ ಸಾಧಿಸಿದಾಗ *ಮಹಾಭಾರತ* ಅರಸುಗಳ ವಂಶಸ್ಥರೆಂದೂ ಶಿವ ಯಾ ವಿಷ್ಣುವಿನ ಪ್ರತಿ ಆಗಮಿಕ ಭಕ್ತಿಯಲ್ಲಿ ತೊಡಗಿದವರೆಂದೂ ಘೋಷಿಸಿಕೊಳ್ಳುವುದು, ಹೀಗೆ ಅವರ ಕಾಳಜಿಗಳು ಜೋಲಾಡಿದವು. ಇದು ಒಡೆಯರುಗಳಿಗೂ ದೇವಿಗೂ ದಂದ್ವ ವ್ಯಕ್ತಿತ್ವವನ್ನು ಸೃಷ್ಟಿಸಿತು. ಅದರಂತೆ ರಾಜನು ಒಂದೇ ಸಮನೆ ವೈಷ್ಣವನೂ ಶಾಕ್ತನೂ ಆದ, ದೇವಿಯು ಏಕಕಾಲಕ್ಕೆ ನಗರವನ್ನು ರಕ್ಷಿಸಿವ ಕ್ಷುದ್ರದೇವತೆಯೂ ಪ್ರೌಢ, ರಾಜಕೀಯ ಪೌರಾಣಿಕ ದೇವತೆಯೂ ಆದಳು. ಕಾಲ ಯಾವುದೇ ಆಗಿದ್ದರೂ ನೆರೆಯ ರಾಜ್ಯಗಳೊಂದಿಗಿನ ಸಂಬಂಧದಲ್ಲಿ ಅವರ ಸ್ಥಾನ ಏನೇ ಆದರೂ, ರಾಜ ಒಡೆಯನು ಜಾರಿಗೆ ತಂದ ಮೌಲಿಕ ಸಂಹಿತೆಯೂ ಆಚಾರವೂ ಅವರು ಮತ್ತೆ ಮತ್ತೆ ಪೌರಾಣಿಕ ರಾಜಕಾರಣದ ಕನ್ನಡಿಯ ಮೂಲಕ ತಮ್ಮನ್ನು ಅಭಿವ್ಯಕ್ತಿಪಡಿಸಲು ಹೊರಟಂತೆಲ್ಲ ಅವಿರತವಾಗಿ ತಲೆ ಎತ್ತಿತ್ತು.

ಕೊನೆ ಟಿಪ್ಪಣಿಗಳು

1. Ali 2011: 180–185.
2. ಮೈಸೂರು 26, *ಎಪಿಗ್ರಾಫಿಯ ಕರ್ನಾಟಕ (ಇಲ್ಲಿಂದಾಚೆಗೆ ಎಕ)*, ಸಂಪುಟ 5 (ಪರಿಷ್ಕೃತ)
3. ಟಿ.ನರಸೀಪುರ 88, ಇಲ್ಲೇ; ಚಾಮರಾಜನಗರ 20, *ಎಕ*, ಸಂಪುಟ 4 (ಪರಿಷ್ಕೃತ); ಸೊರಬ 28, *ಎಕ*, ಸಂಪುಟ 8, ಬೇಲೂರು 171, *ಎಕ*, ಸಂಪುಟ 5
4. Sanderson 2009: 125 ಮುಂದುವರೆದು.
5. *ಚಿಕ್ಕದೇವರಾಯ ವಂಶಾವಳಿ*, 23; *ಮೈಸೂರು ಮಹಾರಾಜ ಚರಿತಂ*, 17; *Annals of the Mysore Royal Family*, 1; ಶ್ರೀರಂಗಪಟ್ಟಣ 14, *ಎಕ*, ಸಂಪುಟ 3 (ಪರಿಷ್ಕೃತ); ಮೈಸೂರು 115, *ಎಕ*, *ಮೈಸೂರು ಸಪ್ಲಿಮೆಂಟ್*, Hayavadana Rao 1943 (1): 41 ಟಿಪ್ಪಣಿ 73.
6. ಮೈಸೂರು 26, ಎಕ, ಸಂಪುಟ 5 (ಪರಿಷ್ಕೃತ)
7. ಅರವೀಡು ವಂಶದಲ್ಲಿ ವೆಂಕಟ ಹೆಸರಿನವರಲ್ಲಿ ಮೊದಲಿಗನಾಗಿರುವುದರಿಂದ ಇವನನ್ನು ಸಾಮಾನ್ಯವಾಗಿ ಮೊದಲನೆಯ ವೆಂಕಟ ಎನ್ನಲಾಗುತ್ತದೆ. ಆದರೆ ತುಳುವ ವಂಶದಲ್ಲಿ ಓರ್ವ ವೆಂಕಟ ಇದ್ದು ಕ್ರಿ.ಶ.1542ರಲ್ಲಿ ಆಳ್ವಿಕೆ ನಡೆಸಿದ್ದ ಕಾರಣ ಹಾಗೂ ವಿಜಯನಗರ ಸೈನ್ಯದ ಮೊದಲನೆಯ ರೇಮಟಿ ವೆಂಕಟನೆಂದು ತಪ್ಪಾಗಿ ಗ್ರಹಿಸುವುದನ್ನು ತಡೆಗಟ್ಟುವ ಸಲುವಾಗಿ ಇವನನ್ನು ನಾನು ಇಮ್ಮಡಿ ವೆಂಕಟ ಎಂದಿದ್ದೇನೆ.
8. ನಂತರದ ಕೆಲವು ಸಾಹಿತ್ಯ ಕೃತಿಗಳಲ್ಲಿ ಇದನ್ನು ಬೋಳ ಚಾಮರಾಜನಿಗೆ ಆರೋಪಿಸಲಾಗಿದೆ. ಆದರೆ ಬೋಳ ಚಾಮರಾಜನು 1576ರಲ್ಲಿ ನಿಧನ ಹೊಂದಿದ ಕಾರಣ ಮತ್ತು ತಿರುಮಲನು 1585ರ ವರೆಗೆ ಅಧಿಕಾರಕ್ಕೆ ಬಂದಿರದ ಕಾರಣ ಇದು ಲಿಪಿಕಾರ/ಸಂಪಾದಕ ದೋಷವಾಗಿರಲು ಸಾಧ್ಯ. Hayavadana Rao 1943 (1): 47.
9. ಈ ಕೃತಿಯ ಪ್ರಕಾರ ರಾಜ ಒಡೆಯನು 1592–1595 ನಡುವಿನ ವರ್ಷಗಳಲ್ಲಿ ಅನೇಕ ಗ್ರಾಮಗಳನ್ನು ಪಡೆದುಕೊಂಡನು. ಆದರೆ ಕಾರುಗಹಳ್ಳಿಯ ಒಡೆಯನು ಅವನ ಪ್ರದೇಶಗಳ ಮೇಲೆ ಹಲ್ಲೆ ನಡೆಸಿದನಲ್ಲದೆ ರಾಜನನ್ನು ವಿಷ ಹಾಕಿ ಕೊಲ್ಲುವ ವಿಫಲ ಪ್ರಯತ್ನವನ್ನೂ ನಡೆಸಿದನು. ನಂತರ ರಾಜನು ಅವನ ಮೂಗನ್ನು ಕಡಿದನಲ್ಲದೆ ಗ್ರಾಮಸ್ಥರ ಮೇಲೆ ಪ್ರಹಾರ ಮಾಡಿ ಎಲ್ಲರನ್ನೂ ನೆಲಸಮಗೊಳಿಸಿದನು.
10. ತಿರುಮಲ ಇಮ್ಮಡಿ ವೆಂಕಟರ ನಡುವಿನ ತಳಮಳಭರಿತ ಸಂಬಂಧವು ಮುಂದೆ, 1614ರಲ್ಲಿ ವೆಂಕಟನ ಮಗ ಶ್ರೀರಂಗನ ಪಟ್ಟಾರೋಹಣದ ಹೊತ್ತು ಅಧಿಕಾರ ವಶಪಡಿಸಿಕೊಳ್ಳಲು ತಿರುಮಲನು ಸಜ್ಜಾಗಿ ಆಂತರಿಕ ಯುದ್ಧಕ್ಕೆ ಕಾರಣವಾಯಿತು. ಆದರೆ ಅವನ ಶ್ರಮ ವಿಫಲವಾಗಿ ಶ್ರೀರಂಗನನ್ನು ಆ ವರ್ಷವೇ ಪಟ್ಟಕ್ಕೇರಿಸಲಾಯಿತು.
11. ಒಡೆಯರ್ ದೊರೆಗಳು ಗಂಡುಮಕ್ಕಳನ್ನು ಹಡೆಯಲಾಗದೆ ಇರಲು ಕಾರಣವಾದ ಅಲಮೇಲಮ್ಮ ಮತ್ತು ತಲಕಾಡಿನ ಶಾಪದ ದಂತಕಥೆಗೆ ಈ ವೃತ್ತಾಂತವು ಮೂಲವಾಗಿದೆ. ಈ ದಂತಕಥೆಯು ಹತ್ತೊಂಬತ್ತನೆಯ ಶತಮಾನದಲ್ಲಿ ಡಲೌಸಿಯ ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಯ ಸಂದರ್ಭದಲ್ಲಿ ಹುಟ್ಟಿಕೊಂಡಿತೆಂದು ತೋರುತ್ತದೆ.
12. Hayavadana Rao 1943 (1): 61.
13. *Annals of the Mysore Royal Family*, 1.33–40.
14. *ರಾಮಾಯಣದ* ಕೆಲವು ಕಥನಗಳಲ್ಲಿ ರಾಮನು ರಾವಣನ ಮೇಲೆ ಜಯ ಸಾಧಿಸಿದ ಕಥೆಯನ್ನು ಲಂಕಾ ದ್ವೀಪವನ್ನು ಕಾಯುವ ಲಂಕಿನಿ ಎಂಬ ಗ್ರಾಮದೇವತೆಯೊಂದಿಗೆ ತಳುಕು ಹಾಕಲಾಗಿದೆ. ಈ ಕಥೆಯಲ್ಲಿ ಹನುಮಂತನು ರಾಮನ ಸೈನ್ಯವು ಲಂಕೆ ಪ್ರವೇಶಿಸಲು ಆಕೆಯ ಅನುಮತಿ ಪಡೆದು ಬದಲಿಗೆ ಆಕೆಯನ್ನು ಚಳಿಗಾಲದ ಆರಂಭದಲ್ಲಿ ಒಂಬತ್ತು ರಾತ್ರಿಗಳ ಕಾಲ ಆರಾಧಿಸಲು ಒಪ್ಪಿಕೊಳ್ಳುತ್ತಾನೆ.

15. Sanderson 2009: 112 ಮುಂದುವರೆದು ಮತ್ತು 225–232. ಈ ದೇವತೆಗಳ ನಡುವೆ ಹಲವು ಸ್ತರಗಳ ಸಮಾನತೆ ಇದ್ದರೂ ಶಿಲ್ಪಶಾಸ್ತ್ರದ ದೃಷ್ಟಿಯಿಂದ ಅವು ಭಿನ್ನವೇ ಆಗಿವೆ.
16. ಅರಸನ ಸ್ಥಾನವನ್ನು ಹೊರತುಪಡಿಸಿದರೆ ಇದು ರಾಜ್ಯದ ಅತ್ಯಂತ ಪ್ರಬಲ ಸ್ಥಾನವಾಯಿತು. ಈ ಸ್ಥಾನವು ದಳವಾಯಿಗಳು ಮತ್ತೆಮತ್ತೆ ಸಿಂಹಾಸನ ಕಸಿದುಕೊಳ್ಳಲು ಪ್ರಯತ್ನಿಸಿದ ಕಾರಣ ಆಂತರಿಕ ಚಕಮಕಿಗಳಿಗೆ ಕಾರಣವಾಯಿತು. ಹೈದರ್ ಅಲಿ ಖಾನ್ ಮತ್ತು ಅವನ ಮಗ ಟಿಪ್ಪೂ ಸುಲ್ತಾನರದು ಈ ಪೈಕಿ ಅತ್ಯಂತ ಖ್ಯಾತ ನಿದರ್ಶನಗಳು. ಹದಿನೆಂಟನೆಯ ಶತಮಾನದ ಮಧ್ಯದಲ್ಲಿ ಅಧಿಕಾರ ವಶಪಡಿಸಿಕೊಂಡ ಇವರು ಕ್ರಿ.ಶ.1799ರಲ್ಲಿ ಬ್ರಿಟಿಶರು ಮುಮ್ಮಡಿ ಕೃಷ್ಣರಾಜನನ್ನು ಪುನಃಸ್ಥಾಪಿಸುವವರೆಗೆ ಅಧಿಕಾರ ಚಲಾಯಿಸಿದರು.
17. Hayavadana Rao 1943 (1): 66–68.
18. Wilks 1930 (1): 52–54.
19. ಶ್ರೀರಂಗಪಟ್ಟಣ 198, *ಎಕ, ಮೈಸೂರು ಸಪ್ಲಿಮೆಂಟ್.*
20. Ali 2000.
21. *ವಿಷ್ಣುಪುರಾಣ,* 4.21–23.
22. *ಚಿಕ್ಕದೇವರಾಯ ವಂಶಾವಳಿ,* 1.12ರ ಪ್ರಕಾರ ಅವನು ಪ್ರತಿನಿತ್ಯ ಪುರಾಣ ಮಹಾಕಾವ್ಯಗಳನ್ನು ಕೇಳುವುದರಲ್ಲಿ ನಿರತನಾಗಿದ್ದ. ಇದು ಪುರಾಣ, ಮಹಾಕಾವ್ಯಗಳ ರಾಜತ್ವ ಪರಿಕಲ್ಪನೆಯತ್ತ ಅವನ ಆಸಕ್ತಿ ತಿರುಗಿದ್ದನ್ನು ಪುಷ್ಟಿಪಡಿಸುತ್ತದೆ.
23. ರಾಜಮನೆತನಕ್ಕೆ ಇದೊಂದು ನುಂಗಲಾಗದ ತುತ್ತಾಗಿಯೇ ಉಳಿಯಿತು. ಬ್ರಿಟಿಶ್ ಕಾಲದಲ್ಲಿ ಅವರನ್ನು ಆಗಾಗ ಶೂದ್ರ ರಾಜವಂಶ ಎಂದು ಗುರುತಿಸಲಾಗುತ್ತಿತ್ತು.
24. ಶ್ರೀರಂಗಪಟ್ಟಣ 198, *ಎಕ, ಮೈಸೂರು ಸಪ್ಲಿಮೆಂಟ್.*
25. ಮೈಸೂರು 93, *ಎಕ,* ಸಂಪುಟ 5 (ಪರಿಷ್ಕೃತ)
26. ಮೈಸೂರು 92, ಇಲ್ಲೇ; Hayavadana Rao 1943 (1): 70.
27. ಕಿರೀಟವನ್ನು 'ಅರಸನ ಕಿರೀಟ' ಎಂದು ಪರಿಕಲ್ಪಿಸಿಕೊಳ್ಳಬಹುದು. ಆದರೂ 'ರಾಜ' ಎಂಬ ಪ್ರಯೋಗವು ರಾಜ ಒಡೆಯನ ಹೆಸರನ್ನು ಸೂಚಿಸುತ್ತಿದೆ ಎಂಬ ಹಯವದನ ರಾಯರ ಮತವನ್ನು ಅನುಮೋದಿಸಬಹುದು. ಏಕೆಂದರೆ ಇದು ಒಡೆಯರ್ ಅರಸರು ದೇವತೆಗಳಿಗೆ ನೀಡಿದ ಕಿರೀಟದ ಕಾಣಿಕೆಯಲ್ಲಿ ಅದೊಂದು ಸಾಮಾನ್ಯ ವಿದ್ಯಮಾನವಾಯಿತು.
28. ಈಗ ಲಭ್ಯವಿರುವ ಈ ವೃತ್ತಾಂತದ ಪ್ರಪ್ರಥಮ ಉಲ್ಲೇಖ ಚಿಕ್ಕದೇವರಾಯನ ಕಾಲದಲ್ಲಿ (ಆಳ್ವಿಕೆ. 1673–1704) ರಚಿಸಲಾದ *ಚಿಕ್ಕದೇವರಾಯ ವಂಶಾವಳಿ* ಕೃತಿಯಲ್ಲಿ ಕಂಡುಬರುತ್ತದೆ ಎಂಬುದನ್ನು ಇಲ್ಲಿ ಗಮನಿಸಬೇಕು. ಚಿಕ್ಕದೇವರಾಯನು ತನ್ನನ್ನು ನವಕೋಟಿ ನಾರಾಯಣ ಎಂದು ಕರೆದುಕೊಳ್ಳುತ್ತಿದ್ದ.
29. "ವ್ಯಂಗಳ ಸಂವತ್ಸರದ ಜ್ಯೇಷ್ಠ ಬಹುಳ 13ರಲ್ಲಿ ಈಶ್ವರಾಂಶ ಸಂಭೂತರಾದ ರಾಜ ಒಡೆಯರವರು ನಾರಾಯಣನಿಗೂ ಪರಮೇಶ್ವರನಿಗೂ ಬೇದವಿಲ್ಲವೆಂದು ತೋರಿಸಲೋಸುಗ ಶ್ವೇತತುರಗಾರೂಢರಾಗಿ ಮೇಲುಕೋಟೆಗೆ ಬಂದು ಮಂಗಳಾರತಿಯ ಕಾಲದಲ್ಲಿ ನಾರಾಯಣಸ್ವಾಮಿಯಲ್ಲಿಯೇ ಐಕ್ಯವಾದಂತೆ ಸರ್ವಜನರೂ ಕಂಡು ಆಶ್ಚರ್ಯಪಡುತಿರಲು ಅಷ್ಟರಲ್ಲಿಯೇ ಶ್ರೀರಂಗಪಟ್ಟಣದಿಂದ ರಾಜಒಡೆಯರವರು ಸ್ವರ್ಗಸ್ಥರಾದರು ಎಂದು ಹೇಳಿ..." *Annals,* ಪುಟ 49.

Bibliography

Adiga, Malini. 2006. *The Making of Southern Karnataka : Society, Polity, and Culture in the Early Medieval Period, AD 400-1030.* New Delhi: Oriental Longman.

Ali, Daud. 2011 [2004]. *Courtly Culture and Political Life in Early Medieval India.* Cambridge: Cambridge University Press.

__________. 2008. 'Cosmos, Realm, and Property in Early Medieval South India'. In Martha Ann Selby and Indira Vishwanathan Peterson (eds), *Tamil Geographies,* Albany, NY: State University of New York Press, pp. 116-141.

__________. 2000. 'Royal Eulogy as World History: Rethinking Copperplate Inscriptions in Cōḷa India'. In Ronald B. Inden, Jonathan Walters and Daud Ali. *Querying the Medieval: Texts and the History of Practices in South Asia.* New York: Oxford Univesity Prees, pp 165-229.

Annals of the Mysore Royal Family or Maisūru Saṃthānada Prabhugaḷu Śrīmanmahārājaravara Vaṃśāvaḷi, (2 vols)-Nineteenth Century CE. [1881] 1916 and 1922. Edited by B. Ramakrishna Row. Mysore: Government Branch Press.

Cikkadēvarāya Vaṃśāvaḷi of Tirumalārya - 1680. 1895. Karnāṭaka Kāvya Manjari Series No. 13, Mysore: Government Branch Press.

Diwakar, R. R, et. al. 1968. *Karnataka Through the Ages: From Pre-historic Times to the day of the Independence of India.* Bangalore: Government of Mysore.

Einoo, Shingo. 1999. 'The Autumn Goddess Festival: Described in the Purāṇas'. *Senri Ethnological Studies,* 50, pp. 33-70.

Epigraphia Carnatica : Mysore Supplement. 1894. Edited by B. Lewis Rice. Mysore: Government Branch Press.

Epigraphia Carnatica (Revised). Vols. 4, 5, and 8. 1975, 1976, and 1984. Edited by B.R. Gopal, et.al. Mysore: Institute of Kannada Studies.

Hayavadana Rao, C. 1943. *History of Mysore (1399-1799 A.D.): Incorporating the Latest Epigraphical, Literary, and Historical Researches* (3 Vols). Bangalore: Government Press of Bangalore.

Joyser, G.R. 1939. *The History of Mysore and the Yadava Dynasty,* Mysore: Coronation Press.

Kulke, Hermann (ed). 1993. *Kings and Cults: State Formation and legitimization in India and Southeast Asia.* New Delhi: Manohar Publishers.

__________. 1995. *The State in India 1000-1700.* New Delhi: Oxford Univesity Press.

Rice, B. Lewis. 2001 [1897]. *Mysore: A Gazetteer Complied for Government.* New Delhi: Asian Educational Service.

Sanderson, Alexis. 2009. 'The Śiva Age: The Rise and Dominance of Śaivism During the Early Medieval Period'. In Shingo Einoo, ed. Genesis and Development of Tantrism. Tokyo: Institute of Oriental Culture, University of Tokyo, pp. 41-350.

Sastri, K.A. Nilakanta. 2011 [1955]. *A History of South India: From Prehistoric Times to the Fall of the Vijayanagar*. New Delhi: Oxford University Press.

Stein, Burton. 2001. *The New Cambridge History of India: Vijayanagara*. Cambridge: Cambridge University Press.

__________. 1983. 'Mahaanavamii: Medieval and Modern Kingly Ritual in South India', In Bardwell L. Smith (ed) *Essays on Gupta Culture*, Delhi: Motilal Banarsidass.

Viṣṇu Purāṇa. [1840] 1980. Edited by H.H. Wilson. Delhi: Nag Publishers.

Wilks, Mark. 1930. *Historical Sketches of the South of India in an Attempt to Trace the History of Mysoor from the Hindoo Government of that State to the Extinction of the Mohammedan Dynasty in 1799* (2 Vols). Mysore: Government Branch Press.

□

ಕೆಂಪಾಪುರ ಸಮಾಧಿಯ ಕೆಂಪೇಗೌಡ ಯಾರು?

□ ಹಂ.ಗು.ರಾಜೇಶ್
33/ಎ, ಐ.ಟಿ.ಐ.
ಕಾಲೇಜು ಹತ್ತಿರ,
ಕೆಂಪೇಗೌಡನಗರ,
ವಿಶ್ವನೀಡಂ-ಅಂಚೆ,
ಬೆಂಗಳೂರು-560091.
bangurajesh@gmail.com

– 1 –

"...ಕೂಪವೊಂದನ್ನು ಆಳಆಳಕ್ಕೆ ಅಗೆದಂತೆಲ್ಲ
ಅದರಿಂದ ಭೂತಗಳು ಎದ್ದು ಬರುತ್ತವೆ"

ಚರಿತ್ರೆಗೆ ಹೆಚ್ಚು ಅನ್ವಯವಾಗುವ ಈ ಮಾತು ಕೃಷ್ಣದೇವರಾಯನ *ಆಮುಕ್ತ ಮಾಲ್ಯದ* (6.65) ಕೃತಿಯಲ್ಲಿ ಬರುತ್ತದೆ. ಇದನ್ನು ಚರಿತ್ರೆ ಎಂಬ ಬಾವಿಯನ್ನು ಶೋಧಿಸಿದಂತೆಲ್ಲ ಭೂತಕಾಲದ ಸಂಗತಿಗಳು ಒಂದೊಂದಾಗಿ ಹೊರಬರುತ್ತವೆ ಎಂಬುದಾಗಿಯೂ ಅರ್ಥೈಸಬಹುದು.

2015ರ ಮಾರ್ಚ್ ತಿಂಗಳಲ್ಲಿ ರಾಮನಗರ ಜಿಲ್ಲೆ, ಮಾಗಡಿ ತಾಲ್ಲೂಕಿನ ಕೆಂಪಾಪುರ ಗ್ರಾಮದಲ್ಲಿ ಶಾಸನಯುಕ್ತ ಸ್ಮಾರಕವೊಂದನ್ನು ಹವ್ಯಾಸಿ ಇತಿಹಾಸಕಾರ ಪ್ರಶಾಂತ್ ಮರೂರು ಬೆಳಕಿಗೆ ತಂದರು. ಕೆಂಪಾಪುರ ಗ್ರಾಮವು ಮಾಗಡಿಯಿಂದ ಕುಣಿಗಲ್‌ಗೆ ಹೋಗುವ ಮಾರ್ಗದಲ್ಲಿ ಕೆಂಚನಹಳ್ಳಿ ಗ್ರಾಮದಿಂದ ಎರಡು ಕಿ.ಮೀ ಉತ್ತರಕ್ಕಿದ್ದು, ಹೆಚ್ಚೂಕಡಿಮೆ ಎರಡೂ ತಾಲ್ಲೂಕು ಕೇಂದ್ರಗಳಿಗೂ ಸಮನಾಂತರ (ಸು. 12ಕಿ.ಮೀ) ದೂರದಲ್ಲಿದೆ. ಈ ಗ್ರಾಮದ ದಕ್ಷಿಣಕ್ಕೆ ಸುಮಾರು 7ಕಿ.ಮೀ ದೂರದಲ್ಲಿ ಹುತ್ರಿದುರ್ಗವಿದೆ. ಕೆಂಪಾಪುರ ಸ್ಮಾರಕದ ಮೇಲಿನ ಶಾಸನವು ಪೂರ್ವ ಭಾಗದಿಂದ ಶುರುವಾಗಿ ಉತ್ತರ ಭಾಗದಲ್ಲಿಯೂ ಮುಂದುವರೆದಿದೆ. ಶಾಸನದ ಪಾಠ ಈ ರೀತಿ ಇದೆ:

"ಹಿರಿಯ ಕೆಂಪೆಯಗಉಡರಯ್ಯನವರು ಕುಣಿಗಿಲಿಂದ ಬಂದು ಯಿ ಬಳಿಯ ಜಗಳವಂನು ಮಾಡಿ ಅಯಿಕ್ಯವಾಗಿ ಕೈಲಾಸಕೆ ಹೋದಸ್ತಳ."

ಈ ಸ್ಮಾರಕವು ಬೆಂಗಳೂರು ನಿರ್ಮಾಪಕ ಹಿರಿಯ ಕೆಂಪೇಗೌಡನ ಸಮಾಧಿ ಎಂದು ಬಹುತೇಕ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.[1] ಅಲ್ಲದೆ, ಬೃಹತ್ ಬೆಂಗಳೂರು

ಮಹಾನಗರ ಪಾಲಿಕೆ (ಬಿ.ಬಿ.ಎಂ.ಪಿ.)ಯು 'ನಾಡಪ್ರಭು ಕೆಂಪೇಗೌಡ ಮಾನವಿಕ ಮತ್ತು ಸಮಾಜ ವಿಜ್ಞಾನ ಕೇಂದ್ರ'ದ ಅಧ್ಯಕ್ಷರಿಗೆ ಪತ್ರ ಬರೆದು ಈ ಸ್ಮಾರಕ ಶಾಸನದ ಬಗ್ಗೆ ಕೂಲಂಕಷ ಅಧ್ಯಯನ ನಡೆಸಿ ವರದಿ ನೀಡಲು ಆದೇಶಿಸಿತು. ಅದರಂತೆ ಐವರು ತಜ್ಞಸದಸ್ಯರ ಸಮಿತಿಯು ಅಧ್ಯಯನ ನಡೆಸಿ, ದಿ:31.10.2015ರಂದು ವರದಿ ಸಿದ್ಧಪಡಿಸಿ, ಬಿ.ಬಿ.ಎಂ.ಪಿ.ಗೆ ಸಲ್ಲಿಸಿತು. ಈ ವರದಿಯನ್ನು ಬಿ.ಬಿ.ಎಂ.ಪಿ. ಅಂಗೀಕರಿಸಿತು. ಆದರೆ ಸಾಕಷ್ಟು ತಪ್ಪು ಉಲ್ಲೇಖ ಮತ್ತು ಮಾಹಿತಿಯ ದೋಷಗಳಿಂದ ತುಂಬಿರುವ ಈ ವರದಿಯು ಅತ್ಯಂತ ಬಾಲಿಶವೂ ಮತ್ತು ಇತಿಹಾಸ ಸಂಶೋಧನೆಯ ಕನಿಷ್ಠ ಶಿಸ್ತನ್ನೂ ಪಾಲಿಸದ ಒಂದು ತರ್ಕಹೀನ ಊಹಾಗಾನವೂ ಆಗಿದೆ.[2]

ಅನೇಕ ಅಪಸವ್ಯದ ನಡುವೆಯೂ ಸಮಿತಿ ತನ್ನ ವರದಿಯ ಎಂಟನೇ ಪುಟದಲ್ಲಿ "ಪ್ರಸ್ತುತ ಸಮಾಧಿಯು ಬೆಂಗಳೂರು ಶಿಲ್ಪಿ ಹಾಗೂ ನಿರ್ಮಾಪಕನಾದ ಹಿರಿಯ ಕೆಂಪೇಗೌಡರದ್ದೇ ಎಂದು ನಿರ್ಣಯಿಸುತ್ತದೆ" ಎಂಬುದಾಗಿ ಘೋಷಿಸಿದೆ. ಹೀಗೆ ನಿರ್ಣಯಕ್ಕೆ ಬಂದರೂ ಸಹ, "ಸದ್ಯ ಲಭ್ಯ ಆಕರಗಳಲ್ಲಿ ನಾವು ಕಂಡ ಅಂಶಗಳನ್ನು ಮುಂದಿಡಲಾಗಿದೆ. ಮುಂದಿನ ಸಂಶೋಧನೆಯಲ್ಲಿ ಆಕರಗಳು ದೊರಕಿದಷ್ಟು ಗದ್ಯದ ಶಾಸನದ ಹಿನ್ನೆಲೆಯಲ್ಲಿ ಖಚಿತತೆಗೆ ನಾವು ನಿಲಕಬಹುದು" ಎನ್ನುವ ವಿರೋಧಾಭಾಸದ ಹೇಳಿಕೆಯ ನಡುವೆಯೂ ಮುಂದಿನ ಸಂಶೋಧನೆಗೆ ವಿಷಯದ ಬಾಗಿಲನ್ನು ತೆರೆದಿಟ್ಟಿರುವುದಕ್ಕೆ ಸಮಿತಿಯ ಸದಸ್ಯರನ್ನು ಅಭಿನಂದಿಸಲೇಬೇಕು!

ತಜ್ಞರ ಅಸಂಗತ ವರದಿಯನ್ನು ಓದಿದ ಬಳಿಕವೆ ಕೆಂಪಾಪುರ ಸ್ಮಾರಕದ ಬಗೆಗೆ ಕುತೂಹಲ ತೀವ್ರಗೊಂಡಿತು. ಅದು ಸಹಜವಾಗಿಯೇ ಅಧ್ಯಯನಕ್ಕೆ ಪ್ರೇರೇಪಿಸಿತು. ಅದಕ್ಕಾಗಿ ಕೆಲವು ಸರಳ ಪ್ರಶ್ನೆಗಳನ್ನು ನನಗೆ ನಾನೇ ಹಾಕಿಕೊಳ್ಳಬೇಕಾಯಿತು. ಕೆಂಪಾಪುರದ ಸ್ಮಾರಕದ ಮೇಲಿನ ಶಾಸನವನ್ನು ಗಮನಿಸಿದಾಗ ಹಿರಿಯ ಕೆಂಪೇಗೌಡ ಎಂಬಾತ ಕುಣಿಗಲ್‌ನಿಂದ ಬಂದು ಇಲ್ಲಿ ಜಗಳ(ಕದನ)ವಾಡಿ ಮಡಿದಿದ್ದಾನೆ ಎಂಬುದಂತೂ ಸ್ಪಷ್ಟ. ಹಾಗಾದರೆ, ಈ ಹಿರಿಯ ಕೆಂಪೇಗೌಡ ಯಾರು? ಈತ ಕುಣಿಗಲ್‌ನಿಂದ ಕೆಂಪಾಪುರಕ್ಕೆ ಏಕೆ ಬಂದ? ಯಾರ ವಿರುದ್ಧ ಜಗಳವಾಡಿ ಮಡಿದ? ಈ ಘಟನೆ ಯಾವಾಗ ನಡೆದಿರಬಹುದು? ಇವೇ ಮೊದಲಾದ ಪ್ರಶ್ನೆಗಳನ್ನು ಹಾಕಿಕೊಳ್ಳಲಾಯಿತು. ಏಕೆಂದರೆ, ಈ ಯಾವ ಪ್ರಶ್ನೆಗಳಿಗೂ ಶೋಧನಾ ವರದಿಯಲ್ಲಿ ತರ್ಕಬದ್ಧ ಉತ್ತರಗಳಾಗಲಿ, ವಾದಗಳಾಗಲಿ ಇರಲಿಲ್ಲ. ಆದ್ದರಿಂದ ಇವುಗಳಿಗೆ ಉತ್ತರ ಹುಡುಕುವ ಪ್ರಯತ್ನವಾಗಿಯೇ ಈ ಬರವಣಿಗೆ ರೂಪುಗೊಂಡಿತು.

– 2 –

ಮೊದಲನೆಯದಾಗಿ, ವರದಿಯಲ್ಲಿನ ಮೊದಲ ವಾಕ್ಯವೇ "ಬೆಂಗಳೂರಿನ ಸ್ಥಾಪಕರಾದ ಹಿರಿಯ ಕೆಂಪೇಗೌಡ ಅಥವಾ ಮೊದಲನೇ ಕೆಂಪೇಗೌಡರು ವಿಜಯನಗರ ಸಾಮ್ರಾಜ್ಯದ ಸಾಮಂತರಾಗಿ ಆಡಳಿತವನ್ನು ನಡೆಸಿರುವುದನ್ನು ಇತಿಹಾಸ ತಿಳಿಸುತ್ತದೆ" ಎಂಬುದಾಗಿದೆ. ಆದ್ದರಿಂದ "ಹಿರಿಯ ಕೆಂಪೇಗೌಡ ಅಥವಾ ಮೊದಲನೇ ಕೆಂಪೇಗೌಡ" ಎಂದು ಯಾವ ದಾಖಲೆಗಳು ಬೆಂಗಳೂರು ಸ್ಥಾಪಕ ಕೆಂಪೇಗೌಡನನ್ನು ಕರೆದಿವೆ ಎಂಬ ಮೊದಲ ಪ್ರಶ್ನೆಗೆ ಉತ್ತರ ಕಂಡುಕೊಳ್ಳಬೇಕಿದೆ. ಏಕೆಂದರೆ, ಸ್ಮಾರಕ ಶಾಸನದಲ್ಲಿ ಹಿರಿಯ ಕೆಂಪೇಗೌಡ

ವಂಶವೃಕ್ಷ (ಆಳಿದ ಕಾಲ)

ಆಧುನಿಕ ಬೆಂಗಳೂರು ನಿರ್ಮಾತೃ ಕೆಂಪೇಗೌಡ
(ಸು. 1532–1597)

ಇಮ್ಮಡಿ ಕೆಂಪೇಗೌಡ
(1597 – ಸು. 1641)

+ (ಕೆಂಪಮ್ಮ)
- ಮುಮ್ಮಡಿ ಕೆಂಪೇಗೌಡ (ಮಾಗಡಿ ಪ್ರಾಂತ್ಯ) (ಸು. 1641–ಸು. 1674)
- ಹಲಸ

+ (ಲಿಂಗಮ್ಮ)
- ಇಮ್ಮಡಿ ಹಿರಿಯ ಕೆಂಪೇಗೌಡ (ಕುಣಿಗಲ್ ಪ್ರಾಂತ್ಯ) (ಸು. 1641–ಸು. 1662)

ಎಂದು ಬರೆಯಲಾಗಿರುವುದರಿಂದ ಈ ಪ್ರಶ್ನೆ ಔಚಿತ್ಯಪೂರ್ಣವಾದುದಾಗಿದೆ. ಈ ಹಿನ್ನೆಲೆಯಲ್ಲಿ ಬೆಂಗಳೂರು ಸ್ಥಾಪಕ ಕೆಂಪೇಗೌಡನ ಸಮಕಾಲೀನ ಶಿಲಾಶಾಸನಗಳನ್ನು ಪರಿಶೀಲಿಸಿದಾಗ ಎಲ್ಲಿಯೂ "ಹಿರಿಯ ಕೆಂಪೇಗೌಡ ಅಥವಾ ಮೊದಲನೇ ಕೆಂಪೇಗೌಡ" ಎಂದು ದಾಖಲಾಗಿರುವುದಿಲ್ಲ.[3] ತಾಮ್ರಶಾಸನಗಳನ್ನು ತೆಗೆದುಕೊಂಡಾಗ 1578ಕ್ಕೆ ಸೇರಿದ ಮಾಸ್ತಿಯ ತಾಮ್ರ ಶಾಸನದಲ್ಲಿ ಪ್ರಥಮ ಬಾರಿಗೆ "ಹಿರಿಯ ಕೆಂಪೇಗೌಡ" ಎಂಬ ಉಲ್ಲೇಖ ಬರುತ್ತದೆ. ಆದರೆ ಇದೊಂದು ಕೂಟ(ನಕಲಿ)ಶಾಸನ ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ. ಏಕೆಂದರೆ ಈ ಶಾಸನವು ವಿಜಯನಗರದ ದೊರೆ ತಿರುಮಲರಾಯನು ಚಂದ್ರಗಿರಿಯಲ್ಲಿ ಆಳುತ್ತಿದ್ದುದಾಗಿ ಹೇಳುತ್ತದೆ. ಚಾರಿತ್ರಿಕ ದಾಖಲೆಗಳ ಪ್ರಕಾರ ತಿರುಮಲರಾಯನ ಆಳ್ವಿಕೆಯು 1572ಕ್ಕೆ ಕೊನೆಗೊಂಡಿದ್ದು, ಈ ಶಾಸನದ ಕಾಲಕ್ಕೆ ಅಂದರೆ 1578ರಲ್ಲಿ 1ನೇ ಶ್ರೀರಂಗರಾಯನು ಪೆನುಗೊಂಡೆಯಿಂದ ಆಳುತ್ತಿದ್ದನು.[4] ಭೂದಾನದ ಆಸೆಗಾಗಿ ಅಕ್ಷರ ಬಲ್ಲವರು ಅನಂತರದ ಕಾಲಘಟ್ಟದಲ್ಲಿ ಈ ತಾಮ್ರಶಾಸನವನ್ನು ಬರೆದುಕೊಂಡಿರುವಂತೆ ಕಾಣುತ್ತದೆ. ಶಾಸನ ಚರಿತ್ರೆಯಲ್ಲಿ ಈ ರೀತಿಯ ಪ್ರಕರಣಗಳು ಸಾಕಷ್ಟು ಕಂಡುಬರುತ್ತವೆ. ಈಗಾಗಿ ಇದೊಂದು ಕೂಟಶಾಸನವೆಂದು ನಿರ್ಧರಿಸಬಹುದು. 1578ರ ಮಾಸ್ತಿಯ ತಾಮ್ರ ಶಾಸನ ಹೊರತು ಪಡಿಸಿದರೆ 1630ರ ಇಮ್ಮಡಿ ಕೆಂಪೇಗೌಡನ ಮಾಗಡಿಯ ಒಂದನೇ ತಾಮ್ರ ಶಾಸನವು "ಹಿರಿಯ ಕೆಂಪೇಗೌಡ" ಎಂದು ಉಲ್ಲೇಖಿಸುವುದು ಮತ್ತು ಶಿಲಾಶಾಸನಗಳಲ್ಲಿ ಮೊದಲ ಬಾರಿಗೆ 1658ರ ಮುಮ್ಮಡಿ ಕೆಂಪೇಗೌಡನ ಅಳಲಕುಪ್ಪೆ ಶಾಸನದಲ್ಲಿ "ಹಿರಿಯ ಕೆಂಪೇಗೌಡ" ಎಂಬ ಹೆಸರಿನ ಉಲ್ಲೇಖ ಬರುವುದು.[5] ಆದರೆ, 1630ರ ತಾಮ್ರಶಾಸನದಲ್ಲಿ ವಿಜಯನಗರದ ದೊರೆ ಶ್ರೀರಂಗನು ಘನಗಿರಿಯಲ್ಲಿ ಆಳುತ್ತಿದ್ದನೆಂದು ಹೇಳುತ್ತದೆ. ವಾಸ್ತವವಾಗಿ ಈ ಕಾಲಘಟ್ಟದಲ್ಲಿ ರಾಮದೇವನ ಆಳ್ವಿಕೆ ಅಂತ್ಯಗೊಂಡು ಮೂರನೇ ವೆಂಕಟಪತಿಯ ಆಳ್ವಿಕೆ ಆರಂಭಗೊಂಡಿರುತ್ತದೆ.[5ಅ] ಆದ್ದರಿಂದ ಇದೂ ಕೂಡ ಒಂದು ಕೂಟಶಾಸನವಾಗಿದೆ. ಅಳಲಕುಪ್ಪೆಯ ಶಿಲಾಶಾಸನದಲ್ಲಿ ಮೊದಲ ಬಾರಿಗೆ ತಾತ, ಮಗ, ಮೊಮ್ಮಗನ ಹೆಸರು ಕಂಡುಬರುತ್ತದೆ. ಅದು ಹೀಗಿದೆ: "ಶ್ರೀಮತು ಯಲಹಂಕನಾಡಪ್ರಭು ಹಿರೀ ಕೆಂಪೇಗೌಡರವರ ಪೌತ್ರರಾದ ಯಿಂಮಡಿ ಕೆಂಪೇಗೌಡರವರ ಪುತ್ರರಾದ ಮುಂಮಡಿ ಕೆಂಪೇಗೌಡರವರು..." ಎಂಬುದಾಗಿದೆ. ಇಲ್ಲಿ ಮೂರೂ ತಲೆಮಾರಿನವರ ಹೆಸರುಗಳೂ ಕೆಂಪೇಗೌಡ ಆಗಿರುವುದರಿಂದ ಅವರನ್ನು ಗುರುತಿಸುವುದಕ್ಕಾಗಿ ಶಾಸನದಲ್ಲಿ ಹಿರಿಯ, ಇಮ್ಮಡಿ ಮತ್ತು ಮುಮ್ಮಡಿ ಎಂಬುದಾಗಿ ಹೆಸರಿನ ಮುಂದೆ ಉಪಮಾನಗಳನ್ನು ಬಳಸಲಾಗಿದೆ. ಒಂದೇ ಮನೆತನಕ್ಕೆ ಸೇರಿದ ಒಂದೇ ಹೆಸರಿನವರು ಬೇರೆ ಬೇರೆ ತಲೆಮಾರಿಗೆ ಸೇರಿದ್ದಾಗ ವ್ಯಕ್ತಿಯ ಗುರುತಿಸುವಿಕೆಗಾಗಿ ಹೀಗೆ ಕರೆದುಕೊಳ್ಳುವುದು ಸಾಮಾನ್ಯ ಸಂಗತಿಯಾಗಿದೆ. ಒಟ್ಟಾರೆ ಹೇಳುವುದಾದರೆ ಕೆಂಪೇಗೌಡನನ್ನು "ಹಿರಿಯ ಕೆಂಪೇಗೌಡ" ಎಂದು ಕರೆಯುವ ಪರಂಪರೆ ಬೆಳೆದುದು ಅವನು ಮರಣ ಹೊಂದಿದ ಕೆಲವು ದಶಕಗಳ ನಂತರವೇ ಹೊರತು ಅವನು ಬದುಕಿದ್ದ ಕಾಲಘಟ್ಟದಲ್ಲಿ ಅಲ್ಲ. ಅಲ್ಲದೆ, ಆ ಹೆಸರು 1658ರ ಹೊತ್ತಿಗೆ ಚೆನ್ನಾಗಿ ಬಳಕೆಯಲ್ಲಿತ್ತೆಂದೂ ಅರಿಯಬಹುದು.

ನಂತರ ಸಾಹಿತ್ಯಗಳಲ್ಲಿ ಕೆಂಪೇಗೌಡನನ್ನು ಮೊದಲ ಬಾರಿಗೆ "ಹಿರಿಯ ಕೆಂಪೇಗೌಡ" ಎಂಬ ಅರ್ಥದಲ್ಲಿ ಕರೆದಿರುವುದು ಬಹುಶಃ ಎರಡನೆಯ ಮುಮ್ಮಡಿ ಕೆಂಪನ ಕಾಲದಲ್ಲಿ

(1710–1728) ರಚಿತವಾದ ಏಕಾಮ್ರ ದೀಕ್ಷಿತನ *ವೀರಭದ್ರ ವಿಜಯದಲ್ಲಿ*. ಈ ಕೃತಿಯಲ್ಲಿ "ಪೆದ್ದ ಕೆಂಪೇಂದ್ರ" ಎಂದು ಕರೆದಿರುವ ಭಾಗವನ್ನು *ಕೆಂಪೇಗೌಡ ಜಯಪ್ರಶಸ್ತಿಯಲ್ಲಿ* ಶ್ರೀಕಂಠಯ್ಯ ಉಲ್ಲೇಖಿಸುತ್ತಾ, "ಪೆದ್ದ(ಹಿರಿಯ) ಕೆಂಪ" ಎಂದು ದಾಖಲಿಸಿದ್ದಾರೆ.[6] ಅಷ್ಟೇ ಅಲ್ಲ, ತಮ್ಮ ಕೃತಿಯ ಉದ್ದಕ್ಕೂ "ಹಿರಿಯ ಕೆಂಪೇಗೌಡ" ಎಂದೇ ಬರೆಯುತ್ತಾರೆ. ಇವರಿಗೂ ಮೊದಲು ಅಂದರೆ 1924ರಲ್ಲಿ ಎಸ್.ಕೆ.ನರಸಿಂಹಯ್ಯ ರಚಿಸಿದ *ಮಾಗಡಿ ಕೆಂಪೇಗೌಡ ಬೆಂಗಳೂರು ಸ್ಥಾಪಕ ಮತ್ತು ಆತನ ಪೂರ್ವಿಕರು* ಕೃತಿಯಲ್ಲಿ ಕೆಂಪೇಗೌಡನನ್ನು "1ನೇ ಕೆಂಪೇಗೌಡ" ಎಂದು ಕರೆಯಲಾಗಿದೆ.[7] ಹೀಗಾಗಿ ಆನಂತರ ರಚಿತವಾದ ಕೃತಿಗಳಲ್ಲಿ ಕೆಂಪೇಗೌಡನನ್ನು "ಹಿರಿಯ ಕೆಂಪೇಗೌಡ ಅಥವಾ ಒಂದನೇ ಕೆಂಪೇಗೌಡ" ಎಂದು ಕರೆಯಲಾಗಿದೆಯೇ ವಿನಃ ಅವನ ಸಮಕಾಲೀನ ದಾಖಲೆಗಳಲ್ಲಿ ಅಲ್ಲ ಎಂಬುದನ್ನು ಇಲ್ಲಿ ಗಮನಿಸಬೇಕು.

ಎರಡನೆಯದಾಗಿ, ಬಿ.ಬಿ.ಎಂ.ಪಿ.ಗೆ ಸಲ್ಲಿಸಿದ ವರದಿಯ ಎರಡನೇ ವಾಕ್ಯದಲ್ಲಿ "ಇವರು (ಬೆಂಗಳೂರು ನಿರ್ಮಾಪಕ ಕೆಂಪೇಗೌಡ) ಕ್ರಿ.ಶ 27ನೇ ಜೂನ್, 1510ರಲ್ಲಿ ಜನಿಸಿದ್ದು..." ಎನ್ನಲಾಗಿದೆ.[8] ಕೆಂಪೇಗೌಡನ ಕೊನೆಯ ಶಾಸನಗಳಲ್ಲಿ ಐಗಂಡಪುರ ಶಾಸನ ಕ್ರಿ.ಶ.1605ಕ್ಕೆ ಸೇರಿದರೆ,[9] ಶಿವಗಂಗೆಯಲ್ಲಿರುವ ಕೆಂಪೇಗೌಡನ ಪ್ರತಿಮೆಯ ಪೀಠದಲ್ಲಿರುವ ಶಾಸನ 1608ಕ್ಕೆ ಸೇರುತ್ತದೆ.[10] ಅಂದರೆ, ಕೊನೆಯ ಶಾಸನದ ಕಾಲಕ್ಕೆ ಕೆಂಪೇಗೌಡನಿಗೆ 98 ವರ್ಷಗಳಾಗಿತ್ತು. ಆನಂತರದಲ್ಲಿ ಮರಣಿಸಿರಬಹುದೆಂದುಕೊಂಡರೂ, ಸುಮಾರು ನೂರುವರ್ಷಗಳ ಕಾಲ ಕೆಂಪೇಗೌಡ ಬದುಕಿದ್ದನೆಂದು ತಿಳಿಯಬಹುದು. ಶತಮಾನದ ಅಂಚಿನಲ್ಲಿದ್ದ ವೃದ್ಧ ಕೆಂಪೇಗೌಡ ತನ್ನ ರಾಜಧಾನಿ ಬೆಂಗಳೂರಿನಿಂದ 80 ಕಿ.ಮೀ. ದೂರದ ಕುಣಿಗಲ್ಲಿಗೆ ಹೋಗಿ, ಅಲ್ಲಿಂದ ಕೆಂಪಾಪುರಕ್ಕೆ ಹೋಗಿ ಕಾದಾಡಿ ಮಡಿದ ಎಂಬುದನ್ನು ತಾರ್ಕಿಕವಾಗಿ ಒಪ್ಪಲಾಗದು. ಏಕೆಂದರೆ, ಸಾಮಾನ್ಯವಾಗಿ ನೂರರ ಆಸುಪಾಸು ಯುದ್ಧ ಮಾಡುವ ವಯಸ್ಸಲ್ಲ. ಆದ್ದರಿಂದ ಕೆಂಪಾಪುರದ ಸಮಾಧಿ ಬೆಂಗಳೂರು ಶಿಲ್ಪಿ ಕೆಂಪೇಗೌಡನದೆಂದು ಪ್ರತಿಪಾದಿಸುವುದರಲ್ಲಿ ಯಾವ ತರ್ಕವೂ ಇಲ್ಲ.

– 3 –

ಹಾಗಾದರೆ ಸ್ಮಾರಕದ ಶಾಸನದಲ್ಲಿರುವ "ಹಿರಿಯ ಕೆಂಪೇಗೌಡ" ಯಾರು? ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವ ಮುನ್ನ ಈ ಮನೆತನದ ಮುಂದಿನ ತಲೆಮಾರಿನವರನ್ನು ಪರಿಚಯಿಸಿಕೊಳ್ಳುವ ಅಗತ್ಯವಿದೆ. ಶಿವಗಂಗೆಯ ಘಂಟೆ ಮೇಲೆ "ಯೆಲಹಕನಾಡಪ್ರಭು ಕೆಂಪನಂಜೆಗೌಡರ ಮಕ್ಕಳೂ ಕೆಂಪೇಗೌಡರೂ ತಮಗೆ ಪುತ್ರ ಪೌತ್ರ ಪಾರಂಪರೆಯಾಭಿಉದ್ಧಿ ಯಾಗಲಿ ಯೆಂದು ತಂಮ ಪಿತ್ರು ಮಾತ್ರುಗಳಿಗೆ ಮೋಕ್ಷವಾಗಲಿ..." ಎಂಬುದಾಗಿ ಶಾಸನವಿದೆ.[11] ಈ ಶಾಸನದ ಕಾಲ 1588. "ಬಹಳ ವರ್ಷಗಳು ಮಕ್ಕಳಿದ್ದಿರಲಿಲ್ಲದುದ ರಿಂದಲೋ ಏನೋ ಈ ಹಿರಿಯ ಕೆಂಪೇಗೌಡನು ಈ ದಾನಶಾಸನದಲ್ಲಿ 'ಪುತ್ರ ಪೌತ್ರಾಭಿವೃದ್ಧಿ'ಯನ್ನು ಕೋರಿಕೊಂಡಿದ್ದಾನೆ. ಇಷ್ಟು ಹೊತ್ತಿಗೆ ಇಮ್ಮಡಿ ಕೆಂಪೇಗೌಡನು ಹುಟ್ಟಿದ್ದರೂ ಬಹಳ ಕಾಲಕ್ಕಾದ ತನ್ನ ಏಕಪುತ್ರನ ಮತ್ತು ಅವನ ಪೀಳಿಗದ ಶ್ರೇಯಸ್ಸನ್ನು ಬಯಸಿ ಈ ಹಿರಿಯ ಕೆಂಪರಸನು ಹೀಗೆ ಬರೆಸಿದ್ದರೂ ಇರಬಹುದು"[12] ಎಂದು ಘಂಟೆಯ ಮೇಲಿನ ಶಾಸನವನ್ನು ಕರ್ಲಮಂಗಲಂ ಶ್ರೀಕಂಠಯ್ಯ ವಿಶ್ಲೇಷಿಸುತ್ತಾರೆ.

ಕೆಂಪೇಗೌಡನ ಮಗನೇ ಇಮ್ಮಡಿ ಕೆಂಪೇಗೌಡ. ಇವನು 1597–1634ರವರೆಗೆ ಆಳಿದನೆಂದು *ಕೆಂಪೇಗೌಡನ ಜಯ ಪ್ರಶಸ್ತಿಯಲ್ಲಿನ* ಉಲ್ಲೇಖ ಮತ್ತು ಶಾಸನಗಳನ್ನು ಆಧರಿಸಿ ಶ್ರೀಕಂಠಯ್ಯ ನಿಶ್ಚಯಿಸುತ್ತಾರಾದರೂ,[13] *ವೀರಭದ್ರ ವಿಜಯ, ಕಂಠೀರವ ನರಸರಾಜ ವಿಜಯ* ಮೊದಲಾದ ಕೃತಿಗಳನ್ನಾದರಿಸಿ 1597–1656ರವರೆಗೂ ತನ್ನ ನಾಡನ್ನು ಆಳಿಕೊಂಡಿದ್ದನೆಂದು ಊಹಿಸುತ್ತಾರೆ.[14] ಒಟ್ಟಾರೆ, ಇಮ್ಮಡಿ ಕೆಂಪೇಗೌಡನು ಅಧಿಕಾರಕ್ಕೆ ಬಂದದ್ದು 1597 ಎಂಬುದರಲ್ಲಿ ಸಂಶಯವಿಲ್ಲ. ಪ್ರಾಪ್ತವಯಸ್ಸಿಗೆ ಬಂದೊಡನೆ ಅಧಿಕಾರಕ್ಕೆ ಬಂದನೆಂದು ಭಾವಿಸುವುದಾದರೂ ಅವನು 1579ಕ್ಕೆ ಮೊದಲು ಜನಿಸಿದನೆಂದು ಭಾವಿಸಬಹುದು. ಆದರೆ ಅವನ ಆಳ್ವಿಕೆಯ ಅಂತ್ಯದ ಬಗೆಗಿನ ಊಹೆಯನ್ನು ಸಂಪೂರ್ಣವಾಗಿ ಒಪ್ಪಲಾಗದು. ಕಾರಣ: ಮುನಿನಗರದ 1634ರ ಶಾಸನದ[15] ನಂತರ ಸಿಗುವ ಇಮ್ಮಡಿ ಕೆಂಪೇಗೌಡನದೆಂದು ಹೇಳುವ ಏಕೈಕ ಶಾಸನ 1667ರ ಮಾಗಡಿಯ ತಾಮ್ರಶಾಸನ.[16] ಈ ತಾಮ್ರಶಾಸನ ಒಂದು ಕೂಟ(ನಕಲಿ)ಶಾಸನವಾಗಿರುವ ಸಾಧ್ಯತೆ ಇದೆ. ಯಲಹಂಕ ನಾಡಪ್ರಭುಗಳ ಕಾಲದ ತಾಮ್ರಶಾಸನಗಳನ್ನು ವಿಮರ್ಶೆಯ ಶಿಸ್ತಿಗೆ ಒಳಪಡಿಸಿದಾಗ ಬಹುತೇಕವೆಲ್ಲವೂ ಕೂಟಶಾಸನಗಳಾಗಿರುವ ಶಂಕೆಯೂ ಮೂಡುತ್ತದೆ. ಆದರೆ ವಿದ್ವಾಂಸರೊಬ್ಬರು ತಾಮ್ರಶಾಸನಗಳು ಮಾತ್ರವಲ್ಲ; ಕೆಲವು ಶಿಲಾ ಶಾಸನಗಳೂ ಸಹ ಕೂಟ ಶಾಸನಗಳೆಂದು ಅಭಿಪ್ರಾಯ ಪಡುತ್ತಾರೆ.[17] ಅವರ ಅಭಿಪ್ರಾಯ ಅಷ್ಟು ಸಮಂಜಸವಾದುದಲ್ಲ. ಒಟ್ಟಾರೆಯಾಗಿ ಹೇಳುವುದಾದರೆ, ಇಮ್ಮಡಿ ಕೆಂಪೇಗೌಡನು 1634–1648ರ ನಡುವೆ ಯಾವಾಗಲೋ ತನ್ನ ಇಬ್ಬರು ಮಡದಿಯರ ಮಕ್ಕಳಾದ (ಇಮ್ಮಡಿ ಕೆಂಪೇಗೌಡನಿಗೆ ಕೆಂಪಮ್ಮ ಮತ್ತು ಲಿಂಗಮ್ಮ ಎಂಬಿಬ್ಬರು ಹೆಂಡತಿಯರು. ಹಿರಿಯ ಹೆಂಡತಿ ಕೆಂಪಮ್ಮನಲ್ಲಿ ಮುಮ್ಮಡಿ ಕೆಂಪೇಗೌಡ ಮತ್ತು ಹಲಸ ಹಾಗೂ ಲಿಂಗಮ್ಮನಲ್ಲಿ ಇಮ್ಮಡಿ ಹಿರಿಯ ಕೆಂಪೇಗೌಡ ಜನಿಸಿದರು ಎಂದು ವೀರಭದ್ರ ವಿಜಯದಲ್ಲಿ ಸ್ಪಷ್ಟವಾಗಿ ಹೇಳಿದೆ. ಇದನ್ನು ಇತರ ಆಕರಗಳೂ ದೃಢೀಕರಿಸುತ್ತವೆ.)[18] ಮುಮ್ಮಡಿ ಕೆಂಪೇಗೌಡ ಮತ್ತು ಇಮ್ಮಡಿ ಹಿರಿಯ ಕೆಂಪೇಗೌಡರಿಬ್ಬರಿಗೂ ಯಲಹಂಕ ನಾಡನ್ನು ಹಂಚಿಕೆ ಮಾಡಿರುವುದು ಶಾಸನಗಳ ಶಿಸ್ತುಬದ್ಧ ಅಧ್ಯಯನದಿಂದ ಮತ್ತು ಸಮಕಾಲೀನ ಸಾಹಿತ್ಯಗಳಿಂದ ತಿಳಿದುಬರುತ್ತದೆ. 1648ರಲ್ಲಿ ರಚನೆಯಾದ *ಕಂಠೀರವ ನರಸರಾಜ ವಿಜಯ* ಕೃತಿಯಲ್ಲಿ ಮಾಗಡಿ ಮತ್ತು ಕುಣಿಗಲ್ ಪ್ರದೇಶಗಳು ಇಬ್ಬರು ವ್ಯಕ್ತಿಗಳಿಂದ ಆಳಲ್ಪಡುತ್ತಿತ್ತು ಎಂಬ ಸುಳುಹುಗಳಿವೆ. ಅದನ್ನು ಈ ಮುಂದೆ ಚರ್ಚಿಸಲಾಗುವುದು. ಅಧಿಕಾರ ಹಂಚಿಕೆ ಮಾಡಿಕೊಟ್ಟ ವರ್ಷದ ಬಗೆಗೆ ನಿಖರ ಮಾಹಿತಿ ಸಿಗುವವರೆಗೂ 1634–1648ರ ಮಧ್ಯದವರ್ಷವನ್ನು ಅಧಿಕಾರಕ್ಕೆ ಬಂದ ಕಾಲವೆಂದು ತಾತ್ಕಾಲಿಕವಾಗಿ ಒಪ್ಪಿಕೊಳ್ಳಬೇಕಾಗುತ್ತದೆ. ಹೀಗೆ ಒಪ್ಪುವುದಾದರೆ, ಕ್ರಿ.ಶ.1641ರ ಸುಮಾರಿನಲ್ಲಿ ಇಮ್ಮಡಿ ಕೆಂಪೇಗೌಡನು ತನ್ನ ನಾಡನ್ನು ಮುಮ್ಮಡಿ ಕೆಂಪೇಗೌಡ ಮತ್ತು ಇಮ್ಮಡಿ ಹಿರಿಯ ಕೆಂಪೇಗೌಡರಿಗೆ ಹಂಚಿಕೆ ಮಾಡಿರಬಹುದೆಂಬ ತಾತ್ಕಾಲಿಕ ತೀರ್ಮಾನಕ್ಕೆ ಬರಬಹುದು. ಹಂಚಿಕೆಯ ಅಭಿಪ್ರಾಯಕ್ಕೆ ಪೂರಕವೆಂಬಂತೆ ಈಗ *ಕಂಠೀರವ ನರಸರಾಜ ವಿಜಯ* ಕೃತಿಯಲ್ಲಿನ ಪ್ರಸಂಗಗಳನ್ನು ಅವಲೋಕಿಸಬಹುದು. ಕವಿಯು ಮಹಾನವಮಿ ಉತ್ಸವಕ್ಕೆ ಬಂದಿದ್ದ ಮನ್ನೆಯರನ್ನು ಹೀಗೆ ಬಣ್ಣಿಸಿದ್ದಾನೆ:

> ಕಿವಿಯೊಳೊಪ್ಪುವ ಕಾಮಾಕ್ಷಿ ಕಡಕು ಗಂಟಿ
> ತವೆ ಚಿನ್ನ ಸರ ಪೈರಣೆಯ
> ಚವಿಯಿಂದ ತನ್ನಯ ಬಲುಸಹ ಕುಣಿಗಿಲ್ಪು
> ರವ ನಾಳ್ವ ನೃಪನೈತಂದ[19]

ನಾಗರ ಫಣಿಯ ಪಟ್ಟಿಯ ದಟ್ಟಿ ಕೊರಳೊಳು
ರಾಗದೆ ಮೆರೆವ ಉಳಿಗಳ
ತೂಗುವಾಯುಧಗಳ ಭಟರ ಸಮ್ಮೇಳದೆ
ಮಾಗಡಿ ಯುಧಿಪತಿ ಬಂದ[20]

ಬೆಡಗಿನ ತೇಜಿಯನೇರಿ ಚಾಮರಗಳ
ಬಿಡದೆ ಡಾಳಿಸಿಕೊಳ್ವನಾರೆ
ಮಡದಿರನ್ನಳೆ ಕೇಳು ಕುಣಿಗಿಲನಾಳುವ
ದೊಡಕೆಂಪೇಗೌಡನೆ ಈತ[21]

ಮುತ್ತಿನ ಕುಚ್ಚಿನಂದಣವೇರಿ ಸುಭಟರ
ಮೊತ್ತದೆ ಬಹ ದೊರೆಯಾರೆ
ಉತ್ತಮ ಮಾಗಡಿಯಧಿಪತಿ ಚಿಕಗೌಡ
ಚಿತ್ತಜರೂಪನಬ್ಬಾಕ್ಷಿ[22]

ಈ ಪದ್ಯದ ಸಾಲುಗಳಲ್ಲಿ ಕುಣಿಗಲ್ ಮತ್ತು ಮಾಗಡಿಯ ಅಧಿಪತಿಗಳನ್ನು ಕುರಿತು ಪ್ರತ್ಯೇಕವಾಗಿಯೇ ಹೇಳಿರುವುದನ್ನು ಗಮನಿಸಬಹುದು. ಮೂರನೇ ಪದ್ಯದಲ್ಲಿ ಬರುವ ಕುಣಿಗಿಲನಾಳುವ ದೊಡಕೆಂಪೇಗೌಡನೇ ಎಂಬುದು ಎರಡನೇ ಹಿರಿಯ ಕೆಂಪೇಗೌಡನನ್ನು ಉದ್ದೇಶಿಸಿ ಹೇಳುತ್ತಿರುವಂತೆ ಕಾಣುತ್ತದೆ. ಯಲಹಂಕನಾಡಿನ ಕುಣಿಗಲ್ ಸೀಮೆಯನ್ನು ಇಮ್ಮಡಿ ಹಿರಿಯ ಕೆಂಪೇಗೌಡನಿಗೂ, ಮಾಗಡಿ ಸೀಮೆಯನ್ನು ಮುಮ್ಮಡಿ ಕೆಂಪೇಗೌಡನಿಗೂ ವಹಿಸಿಕೊಟ್ಟಿರುವಂತೆ ತೋರುತ್ತದೆ. ಈ ಮೊದಲು ನೋಡಿದ 1658ರ ಮಾಗಡಿ ತಾಲ್ಲೂಕಿನ ಅಳಲಕುಪ್ಪೆ ಶಾಸನದಿಂದ ಆ ಪ್ರದೇಶವು ಮುಮ್ಮಡಿ ಕೆಂಪೇಗೌಡನಿಗೆ ಸೇರಿತ್ತೆಂದು ತಿಳಿಯುವುದು. ಇದೇ ಕಾಲದಲ್ಲಿ ಕುಣಿಗಲ್ ಭಾಗವನ್ನು ಇಮ್ಮಡಿ ಹಿರಿಯ ಕೆಂಪೇಗೌಡ ಆಳುತ್ತಿದ್ದ ಬಗೆಗೆ ಶಾಸನಗಳೂ ತಿಳಿಸುವುದನ್ನು ಮುಂದಿನ ಭಾಗದಲ್ಲಿ ನೋಡಬಹುದಾಗಿದೆ.

– 4 –

ತಾತನ ಹೆಸರನ್ನು ಮೊಮ್ಮಕ್ಕಳಿಗೆ ಇಡುವ ವಾಡಿಕೆಯು ಉತ್ತರ ಕರ್ನಾಟಕದ ಕೆಲವು ಭಾಗಗಳಲ್ಲಿ ಇಂದಿಗೂ ಪ್ರಚಲಿತದಲ್ಲಿದೆ. ಈ ವಾಡಿಕೆ 3–4 ದಶಕಗಳ ಹಿಂದೆ ದಕ್ಷಿಣ ಕರ್ನಾಟಕದಲ್ಲಿಯೂ ಚಾಲ್ತಿಯಲ್ಲಿತ್ತು. ಇತ್ತೀಚಿನ ವರ್ಷಗಳಲ್ಲಷ್ಟೇ ಕಡಿಮೆಯಾಗಿದೆ. ಈ ವಾಡಿಕೆಯಂತೆಯೇ ಇಮ್ಮಡಿ ಕೆಂಪೇಗೌಡನು ತನ್ನ ಮಗನೊಬ್ಬನಿಗೆ ತನ್ನ ತಂದೆ ಕೆಂಪೇಗೌಡನ ಹೆಸರನ್ನೆ ಇಟ್ಟಂತೆ ಕಾಣುತ್ತದೆ. ಈ ಸಂದರ್ಭದಲ್ಲಿಯೇ ಗುರುತಿಸುವಿಕೆ ಸಮಸ್ಯೆ ಉದ್ಭವವಾಗಿ ಕೆಂಪೇಗೌಡನನ್ನು "ಹಿರಿಯ ಕೆಂಪೇಗೌಡ" ಎಂದು ಗುರುತಿಸಲ್ಪಟ್ಟಿರಬಹುದೆಂದು ಊಹಿಸಬಹುದು. ಆದ್ದರಿಂದಲೇ ಇಮ್ಮಡಿ ಕೆಂಪೇಗೌಡನು ತನ್ನ ಮಡದಿ ಲಿಂಗಮ್ಮ(ಲಿಂಗಾಜಮ್ಮ)ಳಲ್ಲಿ ಜನಿಸಿದ ಮಗನಿಗೆ "ಇಮ್ಮಡಿ ಹಿರಿಯ ಕೆಂಪೇಗೌಡ" ಎಂದು ನಾಮಕರಣ ಮಾಡಿರುವಂತೆ ತೋರುವುದು. ಇವನೇ ಮುಂದೆ ಕುಣಿಗಲ್ ಮತ್ತು ಹುಲಿಯೂರು ದುರ್ಗಗಳನ್ನು ಆಳುತ್ತಿದ್ದುದಾಗಿ ಶಾಸನಗಳಿಂದ ತಿಳಿದು ಬರುತ್ತದೆ.[23] ಇಂದು ಕುಣಿಗಲ್ ಪಟ್ಟಣದ ಭಾಗವಾಗಿರುವ ಕೃಷ್ಣಸಾಗರದಲ್ಲಿನ ಶಾಸನವು ಯಲಹಂಕ ನಾಡಪ್ರಭು ಯಿಂಮಡಿ ಹಿರೀಕೆಂಪಯ್ಯಗೌಡನ ಮಡದಿ ವೇಂಕಟಕ್ರುಷ್ಣಾಜಮ್ಮಳು ತನ್ನ ಮಾವ ಯಿಂಮಡಿ ಕೆಂಪೇಗೌಡನಿಗೂ ತನ್ನ ಅತ್ತೆ ಲಿಂಗಾಜಮ್ಮನಿಗೂ

ಪುಣ್ಯವಾಗಲೆಂದು ಅಗ್ರಹಾರ ಮಾಡಿಸಿ, ಕುಣಿಗಲ್ ದೊಡ್ಡಕೆರೆ ಹಿಂದಿನ ಗದ್ದೆ ಮತ್ತು ಹೊಲವನ್ನು ಬ್ರಾಹ್ಮಣರಿಗೆ ದಾನ ನೀಡಿದ ಸಂಗತಿಯನ್ನು ತಿಳಿಸುತ್ತದೆ. ಶಾಸನದ ಪಾಠ ಈ ರೀತಿ ಇದೆ:

1. ಶುಭಮಸ್ತು [॥*] ಸ್ವಸ್ತಿ ಶ್ರೀ ವಿಜಯಾಭ್ಯದಯ
2. ಶಾಲಿವಾಹನ ಶಕವರುಷಂಗಳು 1521ಯ
3. ವಿಕಾರಿ ಸಂವತ್ಸರದ ಜೇಷ್ಟ ಬ 13 ಲು ಶ್ರೀಮದ್ರಾಜಾಧಿರಾ
4. ಜ ರಾಜಪರಮೇಶ್ವರ ಶ್ರೀವೀರಪ್ರತಾಪ ಶ್ರೀವೀರಶ್ರೀರಂಗರಯ
5. ದೇವ ಮಹಾರಾಯರ್ರೈಯ್ಯನವರು ಚಿರಪೃಥ್ವೀಸಾಂಬ್ರಾಜ್ಯಂ
6. ಗೈಉತ್ತಿರಲು ಚತುರ್ಥಗೋತ್ರದ ಯಲಹಂಕನಾಡ ಪ್ರಭು ಯಿಂ
7. ಮಡಿ ಹಿರೀಕೆಂಪಯ್ಯಗೌಡರ್ರೈಯ್ಯನವರ ಪುಂಣ್ಯಸ್ತ್ರೀಗಳಾದ
8. ವೇಂಕಟಕ್ರುಷ್ಣಾಜ(ಂ)ಮ್ಮನವರು ಮಾಡಿದ ಅಗ್ರಹಾರಕೆ ದಾನ
9. ಧರ್ಮಸಾಧನ ಶಿಲಾಶಾಸನಕ್ರಮವೆಂತೆಂದರೆ [॥*] ನಮ್ಮ ಕು
10. ಣಿಗಿಲಿಗೆ ಸಲುವ ಪಡುವದಿಕ್ಕಿನಲ್ಲು ಕಟ್ಟಿದ ವೇಂಕಟಕ್ರು
11. ಷ್ಣಸಾಗರದ ಗ್ರಾಮ 1ಕ್ಕೆ ಯೇರ್ಪಾಟ ಮಾಡಿದ ಬೀ
12. ಜವರೀ ಪ್ರಕಾರ ಹೊಲ ಖ 30 ದೊಡ್ಡಕೆರೆ ಕೆಳಗೆ
13. ಗದ್ದೆ ಖ 20ಕ್ಕೆ ಗಣಶಂಖೆಯ ವ್ರಿತ್ತಿ 19.
14. ನಂಮ ಮಾವ ಯಿಂಮ್ಮಡಿ ಕೆಂಪೇಗೌಡರ್ರೈಯನರವ
15. ರಿಗು ನಂಮ ಅತ್ತೆ ಲಿಂಗಾಜಂಮನವರಿಗು ಪುಂಣ್ಯ
16. ವಾಗಲಿ ಯೆಂದು ಸಹಿರಂಣ್ಯೋದಕ ದಾನಪೂರ್ವ
17. ಕವಾಗಿ ಧಾರೆಯನೆರದು ಕೊಟವಾದ ಕಾರಣ ಯೀ
18. ಕ್ಷೇತ್ರಗಳ ವಿವರ [॥*]...

(ಮುಂದೆ, ದಾನ ಪಡೆದ ಬ್ರಾಹ್ಮಣರನ್ನು ಹೆಸರಿಸುವ ಶಾಸನವು 26 ಸಾಲುಗಳವರೆಗೆ ಮುಂದುವರೆಯುತ್ತದೆ.)

ಈ ಶಾಸನದ ಕಾಲವನ್ನು ಬಿ.ಎಲ್.ರೈಸ್ ಶಕ 1521 (ಕ್ರಿ.ಶ.1599) ವಿಕಾರಿ ಸಂವತ್ಸರವೆಂದು ಓದಿರುವುದರಲ್ಲಿ ವರ್ಷ ತಪ್ಪಾಗಿದ್ದು, ಶಕ 1521ರ ಬದಲು ಶಕ 1581 (ಕ್ರಿ.ಶ.1659) ಆಗಿರಬಹುದೆಂದು ಕರ್ಲಮಂಗಲಂ ಶ್ರೀಕಂಠಯ್ಯ ಪಡುವ ಅಭಿಪ್ರಾಯ[24] ಅತ್ಯಂತ ಸಮಂಜಸವಾಗಿದೆ. ಏಕೆಂದರೆ, ವಿಜಯನಗರದ ಶ್ರೀರಂಗರಾಯನ ಹೆಸರನ್ನು ಈ ಶಾಸನದಲ್ಲಿ ಉಲ್ಲೇಖಿಸಿದೆ. ಶ್ರೀರಂಗರಾಯನ ಕಾಲ[25] 1642–1669 ಆಗಿರುವುದರಿಂದ ಆ ನಡುವಿನ ಕಾಲಕ್ಕೆ ಮೇಲಿನ ಶಾಸನ ಸೇರಬೇಕು. ಜೊತೆಗೆ ಇಮ್ಮಡಿ ಕೆಂಪೇಗೌಡನು ಜನಿಸಿದ್ದು ಕ್ರಿ.ಶ.1578(?) ಮತ್ತು ಅಧಿಕಾರಕ್ಕೆ ಬಂದಿದ್ದು ಕ್ರಿ.ಶ.1597 ಎಂದು ಈ ಮೊದಲಿನಂತೆ ಭಾವಿಸಿದ್ದೇ ಆದಲ್ಲಿ ಅವನ ಮಗನು 1599ರಲ್ಲಿ ಆಳುತ್ತಿದ್ದ ಎಂಬುದನ್ನು ಒಪ್ಪಲಾಗದು. ಆದ್ದರಿಂದ ಕೃಷ್ಣಸಾಗರದ ಶಾಸನವು ಶ್ರೀಕಂಠಯ್ಯ ಹೇಳುವಂತೆ ಶ.ಕ 1581

ಅಂದರೆ, ಕ್ರಿ.ಶ.1659ಕ್ಕೆ ಸೇರುತ್ತದೆ ಎಂಬುದೇ ಸರಿಯಾದ ಕ್ರಮವೆಂದು ತೋರುತ್ತದೆ. ಇಂದು ಸಾಕಷ್ಟು ಅಕ್ಷರಗಳು ಸವೆದಿರುವ ಸ್ಥಿತಿಯಲ್ಲಿರುವ ಈ ಶಾಸನದ ವರ್ಷವು ಬಿ.ಎಲ್.ರೈಸ್ ಅವರು ಓದುವ ಕಾಲಕ್ಕೂ ಕೂಡ ಸ್ಪಷ್ಟವಿದ್ದಂತೆ ಕಾಣುವುದಿಲ್ಲ. ಸಂವತ್ಸರವನ್ನು ಆಧರಿಸಿ ಸವೆದ ಅಂಕೆಗಳನ್ನು ಅವರು ನಿರ್ಧರಿಸಿರುವಂತೆ ಕಾಣುತ್ತದೆ. ಬಹುಶಃ ಈ ರೀತಿಯಿಂದಾಗಿ ತಪ್ಪಾಗಿರಬಹುದೆನಿಸುತ್ತದೆ.

ಶೃಂಗಾರಸಾಗರವನ್ನು ಒಳಗೊಂಡಿರುವ ಇಂದಿನ ಹುಲಿಯೂರುದುರ್ಗದಲ್ಲಿ ಇಮ್ಮಡಿ ಒರಿಯ ಕೆಂಪೇಗೌಡನ ಪಟ್ಟದ ನಾಟಕಶಾಲೆಯ ಶೃಂಗಾರಮ್ಮ ಎಂಬುವವಳ ಮೂರು ಶಾಸನಗಳಿವೆ. ಅವುಗಳ ಪ್ರಕಾರ ಆಕೆಯು ಅಗ್ರಹಾರ, ಕೆರೆ ಮತ್ತು ಬಸವ ಮಂಟಪ ಮಾಡಿಸಿದ ಕುರಿತು ಶಾಸನಗಳು ಉಲ್ಲೇಖಿಸುತ್ತವೆ.[26] ಬಹುಶಃ ಶೃಂಗಾರಮ್ಮ ಇಮ್ಮಡಿ ಒರಿಯ ಕೆಂಪೇಗೌಡನ ಮಡದಿಯರಲ್ಲಿ ಒಬ್ಬಳಾಗಿರುವಂತೆ ತೋರುತ್ತದೆ. ಆದರೆ ಶೃಂಗಾರಮ್ಮನ ಯಾವ ಶಾಸನಗಳಲ್ಲಿಯೂ ಕಾಲದ ಸ್ಪಷ್ಟ ಉಲ್ಲೇಖವಿಲ್ಲದಿರುವುದರಿಂದ ಕೃಷ್ಣಸಾಗರ ಶಾಸನದ ಕಾಲವನ್ನೇ ಅನ್ವಯಿಸಿ ಇವುಗಳ ಕಾಲ ಕೂಡ ಕ್ರಿ.ಶ.1599 ಎಂಬ ಅಭಿಪ್ರಾಯಕ್ಕೆ ಬಿ.ಎಲ್.ರೈಸ್ ಬಂದಂತಿದೆ. ಆದರೀಗ ಕೃಷ್ಣಸಾಗರ ಶಾಸನದ ಕಾಲವು ಪರಿಷ್ಕರಣೆಗೊಳ್ಳುವುದರಿಂದ ಈ ಮೂರೂ ಶಾಸನಗಳನ್ನು ಕ್ರಿ.ಶ.1659ರ ಸುಮಾರಿಗೆ ಸೇರಿಸಿಕೊಳ್ಳಬೇಕಾಗುತ್ತದೆ.

– 5 –

ಈ ಮೇಲಿನ ಎಲ್ಲ ವಿವರಣೆಗಳ ಅರ್ಥವಿಷ್ಟೇ, ಕೆಂಪಾಪುರದ ಸ್ಮಾರಕ ಶಾಸನ ಹೇಳುವಂತೆ ಕುಣಿಗಲ್‌ನಿಂದ ಕೆಂಪಾಪುರಕ್ಕೆ ಬಂದು ಜಗಳವಾಡಿ, ಅಲ್ಲಿಯೇ ಐಕ್ಯವಾದ ಒರಿಯ ಕೆಂಪೇಗೌಡನು ಕುಣಿಗಲ್‌ನ್ನು ಆಳುತ್ತಿದ್ದ ಇಮ್ಮಡಿ ಒರಿಯ ಕೆಂಪೇಗೌಡನಾಗಿರಬಹುದೇ ಹೊರತು ಬೆಂಗಳೂರು ನಿರ್ಮಾತೃ ಕೆಂಪೇಗೌಡನಾಗಿರಲು ಸಾಧ್ಯವಿಲ್ಲ. ಹಾಗಿದ್ದರೆ, ಇಮ್ಮಡಿ ಒರಿಯ ಕೆಂಪೇಗೌಡನ ಹೆಸರಿನಲ್ಲಿರುವ 'ಇಮ್ಮಡಿ' ಪ್ರಯೋಗವು ಸ್ಮಾರಕದ ಶಾಸನದಲ್ಲಿ ಯಾಕಿಲ್ಲ ಎಂಬ ಪ್ರಶ್ನೆ ಮೂಡುವುದು ಸಹಜವೆ. ಅನೇಕ ಬಾರಿ ಶಿಲಾಶಾಸನಗಳಲ್ಲಿ ಹೆಸರಿನ ಪೂರ್ಣಪ್ರಯೋಗಗಳು ಕಂಡುಬರುವುದಿಲ್ಲ. ಉದಾ: ವಿಜಯನಗರದ ಸಾಮ್ರಾಟ ಕೃಷ್ಣದೇವರಾಯನ ಹೆಸರನ್ನು ಅವನ ಕಾಲದ ಬಹುತೇಕ ಸಾಹಿತ್ಯ ಕೃತಿಗಳಲ್ಲಿ ಮತ್ತು ಶಿಲಾಶಾಸನಗಳಲ್ಲಿ 'ಕೃಷ್ಣರಾಯ' ಎಂದೇ ಪ್ರಯೋಗಿಸಿರುವುದುಂಟು.[27] ಆದ್ದರಿಂದ 'ಇಮ್ಮಡಿ ಒರಿಯ ಕೆಂಪೇಗೌಡ'ನನ್ನು 'ಒರಿಯ ಕೆಂಪೇಗೌಡ' ಎಂದಷ್ಟೇ ಕರೆದಿರುವುದರಲ್ಲಿ ಆಶ್ಚರ್ಯವಿಲ್ಲ. ಶಾಸನ ಮತ್ತು ಸಾಹಿತ್ಯಗಳಲ್ಲಿನ ಈ ರೀತಿಯ ನಾಮಸಂಕ್ಷೇಪ ರೂಪಗಳಿಂದಲೇ ಚರಿತ್ರೆಯಲ್ಲಿ ಹಲವು ಗೊಂದಲಗಳು ಉಳಿದಿವೆ. ಇದು ಯಲಹಂಕ ನಾಡುಪ್ರಭುಗಳ ಚರಿತ್ರೆಗೂ ಅನ್ವಯಿಸುತ್ತದೆಂದೇನು ಬೇರೆ ಹೇಳಬೇಕಿಲ್ಲ. ಏಕೆಂದರೆ, *ಗಂಗಾಗೌರಿ ವಿಲಾಸಮು* ಎಂಬ ತೆಲುಗು ಕೃತಿಯ ಮಂಗಳಾಚರಣೆಯ ವೃತ್ತದಲ್ಲಿ "ಒರಿಯ ಕೆಂಪ ನೃಪತಿ" ಎಂಬ ಉಲ್ಲೇಖವನ್ನಾಧರಿಸಿ ಕೆಲವು ವಿದ್ವಾಂಸರು ಈ ಕೃತಿಯನ್ನು ಒರಿಯ ಕೆಂಪೇಗೌಡನು ರಚಿಸಿದನೆಂತಲೂ, ಈ ವಂಶದವರೂ 'ತೆಲುಗರು' ಎಂತಲೂ ನಿರ್ಣಯಿಸಿ ಬಿಟ್ಟರು.[28] ಆದರೆ ಈ ಅಭಿಪ್ರಾಯವನ್ನು ಪರಿಶೀಲಿಸಲು ಬೇರೆ ಆಕರಗಳೊಂದಿಗೆ ಒರೆಗೆ ಹಚ್ಚಿನೋಡಿದವರು ವಿರಳ. ಅದನ್ನು ಒಪ್ಪುವ ಮುನ್ನ ಕವಿ ಏಕಾಮ್ರ ದೀಕ್ಷಿತನ ವೀರಭದ್ರ

ವಿಜಯ ಕೃತಿಯನ್ನು ನೋಡುವುದು ಒಳಿತು. ಈ ಕೃತಿಯಲ್ಲಿ ಇಮ್ಮಡಿ ಹಿರಿಯ ಕೆಂಪೇಗೌಡನನ್ನು ಕುರಿತು ಹೀಗೆ ಹೇಳಿದೆ: "ಇವನ ಅತಿ ಪರಾಕ್ರಮವುಳ್ಳ ಬಾಹುಗಳು ಶತ್ರುಗಳೆಂಬ ಗಂಧಹಸ್ತಿಗಳ ನೆತ್ತಿಗೆ ಅಂಕುಶದಂತಿತ್ತು. ಇವನ ಪರಾಕ್ರಮದಿಂದ ವೀರರ ಭೂಮಿಯಾಗುತ್ತಿತ್ತು. ಇವನು ಬಹುಭಾಷಾ ಪಂಡಿತನಾಗಿದ್ದು, ಅನೇಕ ಭಾಷೆಗಳಲ್ಲಿ ಕವಿ ಆಗಿದ್ದನು. ಹಲವು ಭಾಷೆಗಳನ್ನು ಅಭ್ಯಸಿಸಿದ್ದ ಇವನನ್ನು 'ನವ ಕವಿತಾ ಗುಂಭಮುಂಭವಾಣಿ' ಎಂದು ಕರೆದಿದೆ."[29] ಈ ಹಿನ್ನೆಲೆಯಲ್ಲಿ *ಗಂಗಾಗೌರಿ ವಿಲಾಸಮು* ಕೃತಿಯ ರಚನಾಕಾರನಾದ "ಹಿರಿಯ ಕೆಂಪ ನೃಪತಿ"ಯೇ ಇಮ್ಮಡಿ ಹಿರಿಯ ಕೆಂಪೇಗೌಡನೆಂದು ತೀರ್ಮಾನಿಸಬಹುದು. *ಗಂಗಾಗೌರಿ ವಿಲಾಸಮು* ಕೃತಿಯಲ್ಲಿ "ಹಿರಿಯ ಕೆಂಪ ನೃಪರ್ತಿ" ಎಂದು ಕರೆದಿರುವಂತೆಯೇ ಕೆಂಪಾಪುರದ ಸ್ಮಾರಕ ಶಾಸನದಲ್ಲಿಯೂ "ಇಮ್ಮಡಿ ಹಿರಿಯ ಕೆಂಪೇಗೌಡ"ನನ್ನು "ಹಿರಿಯ ಕೆಂಪೇಗೌಡ"ನೆಂದು ಕರೆಯಲಾಗಿದೆ. ಇದು ಸಮಕಾಲೀನ ರೂಢಿನಾಮ ಸಂಕ್ಷೇಪವೇ ವಿನಃ ಮತ್ತೇನು ಅಲ್ಲ.

– 6 –

ಇನ್ನು, ಇಮ್ಮಡಿ ಹಿರಿಯ ಕೆಂಪೇಗೌಡ ಯಾರೊಂದಿಗೆ ಕಾದಾಡಿದ ಮತ್ತು ಏಕೆ ಎಂಬ ಪ್ರಶ್ನೆಗಳಿಗೆ ಉತ್ತರವನ್ನು ಹುಡುಕಬೇಕಾದರೆ ಲಾವಣಿಗಳು, ಸಮಕಾಲೀನ ಮೈಸೂರಿನ ಚರಿತ್ರೆ ಮತ್ತು ಶಾಸನಗಳನ್ನು ಅಧ್ಯಯನ ಮಾಡಬೇಕಾಗುತ್ತದೆ.

ಚಾರಿತ್ರಿಕವಾಗಿ ಯಲಹಂಕ ನಾಡಪ್ರಭುಗಳ ಮನೆತನದಲ್ಲಿ ಕೆಂಪೇಗೌಡ ಹೆಸರಿನ ಆರು ಮಂದಿ ಬರುತ್ತಾರೆ.[30] ಆದರೆ ಲಾವಣಿಗಳಲ್ಲಿ ಈ ಆರು ಜನರ ಕಾಲದ ಘಟನೆಗಳನ್ನು ಒಬ್ಬನೇ ಕೆಂಪೇಗೌಡನಿಗೆ ಆರೋಪಿಸಿ ಹೇಳುತ್ತಾರೆ. ಇದರಿಂದ ಗೊಂದಲ ಮೂಡುವುದು ಸಹಜ. ಈ ಗೊಂದಲದ ಸಿಕ್ಕಿನಲ್ಲಿ ಸಿಲುಕಿರುವ ಚಾರಿತ್ರಿಕ ಸಂಗತಿಗಳನ್ನು ಸೂಕ್ಷ್ಮ ಅಧ್ಯಯನದ ಮೂಲಕ ಶೋಧಿಸುವುದೇ ಸವಾಲಿನ ಕೆಲಸ.

ಕೆಂಪೇಗೌಡನ ಅಂತ್ಯ ಕುರಿತು ಲಾವಣಿಗಳಲ್ಲಿ ನಿರೂಪಿತವಾಗಿರುವ ಕಥಾಸಾರ ಹೀಗಿದೆ: "ಮಾಗಡಿಯ ರಂಗಧಾಮ (ತಿರುಮಲೆ ರಂಗನಾಥ) ಕೆಂಪೇಗೌಡನ ಮನೆದೇವರು. ಕೆಂಪೇಗೌಡನಿಗೆ ಗಂಡು ಸಂತಾನವಿಲ್ಲದಿದ್ದಾಗ ಮನೆದೇವರಾದ ರಂಗಧಾಮನಲ್ಲಿ ಮೊರೆಯಿಟ್ಟು ಪ್ರಸಾದ ಸ್ವೀಕರಿಸುತ್ತಾನೆ. ಪ್ರಸಾದದಲ್ಲಿ ಬಿಳಿಯ ಕೂದಲು ಸಿಗುತ್ತದೆ. ಇದರ ಅರ್ಥವೇನೆಂದು ಮಂತ್ರಿ ಪ್ರಧಾನಿಗಳನ್ನು ಕೇಳುತ್ತಾನೆ. ಅದಕ್ಕೆ ಅವರು ಕೆಂಪೇಗೌಡನಿಗೆ ಮಕ್ಕಳ ಫಲ ಕೊಡುವುದಕ್ಕೆ ರಂಗಧಾಮ ಮುದುಕನಾದ, ಆದ್ದರಿಂದ ನೀವು ಸೋಮೇಶ್ವರನಲ್ಲಿ ಬೇಡಿಕೊಳ್ಳಿ ಎಂದು ಸಲಹೆ ನೀಡುತ್ತಾರೆ. ಅದರಂತೆ ಸೋಮೇಶ್ವರ ದೇವಸ್ಥಾನವನ್ನು ಮಾಗಡಿಯಲ್ಲಿ ಮಾಡಿಸಿದ. ಹೀಗೆ ಕೆಂಪೇಗೌಡನಿಂದ ಕಡೆಗಣನೆಗೆ ಒಳಗಾದ ರಂಗಧಾಮ ಅವನ ವಿರುದ್ಧ ಕುಪಿತಗೊಂಡು ಪ್ರತಿಕಾರಕ್ಕಾಗಿ ತಂತ್ರ ರೂಪಿಸಿದ. ಅದರಂತೆ, 'ಮಾಗಡಿ ಸೀಮೆ ಸಂಪದ್ಭರಿತವಾಗಿದೆ. ಅದರ ಮೇಲೆ ಆಕ್ರಮಣ ಮಾಡು ಬಾ, ನಿನ್ನ ಬೆಂಬಲಕ್ಕೆ ನಾನಿದ್ದೇನೆ' ಎಂದು ರಂಗಧಾಮನು ಮೈಸೂರಿನ ದಳವಾಯಿಯನ್ನು ಆಹ್ವಾನಿಸಿದ." ಜೀ.ಶಂ.ಪರಮಶಿವಯ್ಯ (ಜೀ.ಶಂ.ಪ) ಸಂಗ್ರಹದ ಆವೃತ್ತಿಯಲ್ಲಿ ಮೈಸೂರ ದಳವಾಯಿ ದೊಡ್ಡಯ್ಯ ಎಂದು ತಿಳಿದುಬರುತ್ತದೆ. "ಸೈನ್ಯ ಸಹಿತ ದಂಡೆತ್ತಿ ಬಂದ ದಳವಾಯಿಗೂ ಕೆಂಪೇಗೌಡನಿಗೂ ಕದನ ಜರುಗಿತು. ರಂಗಧಾಮನ ಸಹಾಯದಿಂದ ದಳವಾಯಿ ಸೈನ್ಯ

ಮೇಲುಗೈ ಸಾಧಿಸಿತು. ವೀರನಾದ ಕೆಂಪೇಗೌಡ ಸೋಲನ್ನಪ್ಪುವ ಮುನ್ನ ತನ್ನನ್ನು ತಾನು ಇರಿದುಕೊಂಡು ಆತ್ಮಹತ್ಯೆ ಮಾಡಿಕೊಂಡ." ಅವನ ಅಂತ್ಯದ ಬಗ್ಗೆ ಪಿ.ಕೆ.ರಾಜಶೇಖರ್ (ಪಿ.ಕೆ.ಆರ್) ಸಂಗ್ರಹಿಸಿದ ಲಾವಣಿಯ ಸಾಲುಗಳು ಹೀಗಿವೆ:

> ಆಗ ಮಾಗಡಿ ಕೆಂಪೆಗೌಡ ಏನೋಚನೆ ಮಾಡುತ್ತಾನೆ
>
> ....
>
> ಅವ್ನ-ಸೊಂಟದಲ್ಲಿದ್ದ ಬಾಕ ಕೈಗಾದ್ರೆ ತಕ್ಕೊಂಡ
> ಅವ್ನ-ಎದೆಗಾದ್ರೆ ತಾಟಿಕೊಂಡು ಕುಂತು ಪ್ರಾಣಬಿಟ್ಟನಲ್ಲೊ
> ಕೈಯಾರ ಪ್ರಾಣುವನ್ನೆ ಕಳುಕೊಂಡ ಕೆಂಪೆಗೌಡು
> ಎಂತೆ ದೊರೆಮಗನೀಗೆ ಎಂತೆಕಾಲ ಕೂಡಿತಪ್ಪ
> ಮೈಸೂರು ದಳವಾಯಿ ಕೆಂಪೇಗೌಡ್ನ ನೋಡಿದ
> ತನ್ನ ತೊಡೆ ಮ್ಯಾಲುಕಾದ್ರೆ ಅವನ ತಲೆ ಇಟುಕೊಂಡ
> ಮಾವೀನ ತೋಪಿನಲ್ಲಿ ಅವನ ಗೋರಿ ಮಾಡಿಸಿದ.

ಪಿ.ಕೆ.ಆರ್ ಮತ್ತು ಜೀ.ಶಂ.ಪ ಅವರು ಸಂಗ್ರಹಿಸಿದ ಲಾವಣಿಗಳಲ್ಲಿನ ಮೂಲ ಕಥಾಹಂದರ ಒಂದೇ ಆಗಿದ್ದು, ಕಥಾನಿರೂಪಣೆಯಲ್ಲಿ ಸಣ್ಣಪುಟ್ಟ ವ್ಯತ್ಯಾಸಗಳಿವೆ. ಮೇಲೆ ಹೇಳಿದ ಕಥಾಸಾರದಲ್ಲಿ ಕೆಂಪೇಗೌಡನ ಅನಾದರಕ್ಕೆ ಒಳಗಾದ ರಂಗಧಾಮ ಮಾಗಡಿಯ ಮೇಲೆ ಆಕ್ರಮಣ ಮಾಡುವಂತೆ ಮೈಸೂರು ದಳವಾಯಿಗೆ ಆಹ್ವಾನವಿತ್ತ ಎಂಬುದು ಅಧ್ಯಯನ ಯೋಗ್ಯ ಚಾರಿತ್ರಿಕ ಸಂಗತಿಯಾಗಿದೆ. ಈ ಸಂಗತಿಯನ್ನು ಸೂಕ್ಷ್ಮ ವಿಮರ್ಶೆಗೆ ಒಳಪಡಿಸಿದಾಗ ಅದರ ಒಳಾರ್ಥದ ಅರಿವಾಗುತ್ತದೆ. ಅದನ್ನು ಹೀಗೆ ವಿಶ್ಲೇಷಿಸಬಹುದು. ವೈಷ್ಣವ ದೇವರಾದ ರಂಗಧಾಮನಿಗೆ ನೀಡುತ್ತಿದ್ದ ದಾನದತ್ತಿಗಳನ್ನು ನಿಲ್ಲಿಸಿದ ಕೆಂಪೇಗೌಡನು ತನ್ನ ಒಲವನ್ನು ಶೈವದೇವರಾದ ಸೋಮೇಶ್ವರನ ಕಡೆಗೆ ಬದಲಿಸಿದ. ಇದು ಸಹಜವಾಗಿ ವೈಷ್ಣವರನ್ನು ಕೆರಳಿಸಿತು. ವೈಷ್ಣವರು ಗುಪ್ತವಾಗಿ ಮೈಸೂರಿನ ದಳವಾಯಿಯನ್ನು ಸಂಪರ್ಕಿಸಿ, ಮಾಗಡಿಯ ಸಿರಿವಂತಿಗೆಯನ್ನು ಹೊಗಳಿ ಅದರ ಮೇಲೆ ಆಕ್ರಮಣ ನಡೆಸಲು ಆಹ್ವಾನಿಸಿರುವಂತೆ ಕಾಣುತ್ತದೆ. ಇದಕ್ಕೆ ಪೂರಕವಾಗಿ ಎಸ್.ಕೆ.ನರಸಿಂಹಯ್ಯ ಹೀಗೆ ದಾಖಲಿಸುತ್ತಾರೆ: "ಮುಮ್ಮಡಿ ಕೆಂಪೇಗೌಡನ ಕಾಲಕ್ಕೆ ವಿಷ್ಣು ದ್ವೇಷವಂಕುರಿಸಿ ಶೈವರಲ್ಲಿ ಅನುರಾಗವೂ ಇತರರಲ್ಲಿ ಔದಾಸೀನ್ಯವೂ ಹೆಚ್ಚಿತು. ಮುಖ್ಯಾಧಿಕಾರಿಗಳಲ್ಲಿ ಕೆಲವರಿಗೆ ವೈಮನಸ್ಯವುಂಟಾಯಿತು."[31] ಈ ಅಭಿಪ್ರಾಯಕ್ಕೆ ಬರಲು ನರಸಿಂಹಯ್ಯನವರು ಯಾವುದೇ ಆಧಾರಗಳನ್ನು ನೀಡುವುದಿಲ್ಲವಾದರೂ, ಶಾಸನಗಳನ್ನು ಅವಲೋಕಿಸಿದಾಗ ಮುಮ್ಮಡಿ ಕೆಂಪೇಗೌಡನ ಕಾಲದಲ್ಲಿ ಶೈವಧರ್ಮಕ್ಕೆ ಹೆಚ್ಚಿನ ಪ್ರೋತ್ಸಾಹ ದೊರೆತಿರುವುದು ಕಂಡುಬರುತ್ತದೆ.

ಲಾವಣಿಗಳ ಹಿನ್ನೆಲೆಯಲ್ಲಿ ಚಾರಿತ್ರಿಕವಾಗಿ ಎರಡು ಅಂಶಗಳನ್ನು ಗುರುತಿಸಬಹುದು. ಒಂದು- ಲಾವಣಿಗಳಲ್ಲಿ ದಳವಾಯಿಯ ಉಲ್ಲೇಖವಾಗಿರುವುದರಿಂದ ಈ ಘಟನೆಯು 1614ರ ನಂತರದಲ್ಲಿ ಸಂಭವಿಸಿರಬಹುದೆಂದು ಖಚಿತವಾಗಿ ತೀರ್ಮಾನಿಸಬಹುದು. ಎರಡು- 17ನೆಯ ಶತಮಾನದ ಪೂರ್ವಾರ್ಧದ ಹೊತ್ತಿಗೆ ಒಡೆಯರ್ ಮನೆತನದವರು ವೈಷ್ಣವ ಧರ್ಮವನ್ನು ಸಾಕಷ್ಟು ಪೋಷಿಸುತ್ತಿದ್ದರು.[32] ಈ ಕಾಲದ ಮಾಗಡಿ ತಾಲ್ಲೂಕಿನ ಧಾರ್ಮಿಕ ಶಾಸನಗಳ ಲೆಕ್ಕಾಚಾರ ಕೂಡ ಇದಕ್ಕೆ ಆಧಾರವನ್ನೊದಗಿಸುತ್ತದೆ. ಮಾಗಡಿ ತಾಲ್ಲೂಕಿನಲ್ಲಿರುವ ಕ್ರಿ.ಶ. 1510-1670ರವರೆಗಿನ ಶಾಸನಗಳನ್ನು ಅವಲೋಕಿಸಿದಾಗ 18 ಶಾಸನಗಳಲ್ಲಿ ಧಾರ್ಮಿಕ

ಸಂಗತಿಗಳಿವೆ. ಇವುಗಳಲ್ಲಿ 1510–60ರವರೆಗಿನ 50 ವರ್ಷಗಳ ಅವಧಿಯಲ್ಲಿ 4 ಶೈವದೇವಾಲಯಗಳಿಗೂ, 6 ವೈಷ್ಣವ ದೇವಾಲಯಗಳಿಗೂ ದಾನ, ದತ್ತಿಗಳು ಲಭಿಸಿದೆ. 1560 ರಿಂದ 1620 ರವರೆಗಿನ 60 ವರ್ಷಗಳಲ್ಲಿ ಯಾವ ದೇವಾಲಯಗಳಿಗೂ ದಾನ, ದತ್ತಿ ದೊರೆತಿಲ್ಲ. ಆದರೆ, 1621 ರಿಂದ 1670ರವರೆಗೆ 6 ಶೈವದೇವಾಲಯಗಳಿಗೆ ಮತ್ತು ಶೈವ ಮಠಗಳಿಗೆ ದತ್ತಿಬಿಟ್ಟ ವಿವರಗಳಿವೆ. ಆದರೆ, ಈ ಅವಧಿಯಲ್ಲಿ ಒಂದೂ ವೈಷ್ಣವ ದೇವಾಲಯಕ್ಕೆ ದಾನ ಅಥವಾ ದತ್ತಿ ಬಿಟ್ಟ ಸಂಗತಿಗಳಿಲ್ಲ. ಬಹುಶಃ ಎರಡನೇ ಕೆಂಪೇಗೌಡನ ಕಾಲದಲ್ಲಿ ತೀವ್ರಗೊಂಡ ಶೈವಧರ್ಮದ ಕಡೆಗಿನ ಒಲವು ನಂತರದ ಕಾಲದಲ್ಲಿ ಸಹಜವಾಗಿ ವೈಷ್ಣವರನ್ನು ಕೆರಳಿಸಿದೆ. ಈ ಹೊತ್ತಿಗಾಗಲೆ ಶಿವಗಂಗೆಯು ಪ್ರಮುಖ ಶೈವಕೇಂದ್ರವಾಗಿ ದಕ್ಷಿಣ ಕರ್ನಾಟಕದಲ್ಲಿ ಬೆಳವಣಿಗೆ ಹೊಂದುತ್ತಿದ್ದುದನ್ನು ಕಾಣಬಹುದು.[33] ಅದರ ಅಭಿವೃದ್ಧಿಗೆ ಯಲಹಂಕ ಪ್ರಭುಗಳ ಕಾಣಿಕೆಯೂ ಪ್ರಮುಖವಾದುದು.

ಲಾವಣಿಗಳಲ್ಲಿ ವ್ಯಕ್ತವಾಗಿರುವಂತೆ ದಳವಾಯಿಯು ಮಾಗಡಿಯ ಮೇಲೆ ಆಕ್ರಮಣ ನಡೆಸುವ ಮುನ್ನ ಕುಣಿಗಲ್ ಗೆಲ್ಲುತ್ತಾನೆ. ಲಾವಣಿಗಳಲ್ಲಿ ಬರುವ ಸಂಗತಿಗಳೆಲ್ಲವೂ ಚಾರಿತ್ರಿಕ ಕಾಲಾನುಕ್ರಮದ ಜೊತೆಗೆ ಹೊಂದಾಣಿಕೆ ಆಗುವುದಿಲ್ಲವಾದರೂ, ಅದರಲ್ಲಿ ಯಾವ ಚಾರಿತ್ರಿಕ ಎಳೆಗಳನ್ನು ಸಂಪೂರ್ಣವಾಗಿ ನಿರಾಕರಿಸಲಾಗದು. ಉದಾ: ಲಾವಣಿಯಲ್ಲಿ ಬರುವ ದಳವಾಯಿ ದೊಡ್ಡಯ್ಯ ಚಿಕ್ಕದೇವರಾಜ ಒಡೆಯರ್ ಕಾಲದಲ್ಲಿದ್ದನು.[34]

– 7 –

ಇನ್ನು ಘಟನೆ ಸಂಭವಿಸಿರಬಹುದಾದ ಸನ್ನಿವೇಶಗಳ ಬಗೆಗೆ ವಿವೇಚಿಸಬೇಕಾದರೆ ಮೈಸೂರು ಚರಿತ್ರೆಯನ್ನು ಪರಿಶೀಲಿಸಬೇಕಾಗುತ್ತದೆ. *History of the Wodeyars of Mysore* ಕೃತಿಯ ಪ್ರಕಾರ: ಮೈಸೂರಿನ ರಾಜನಾದ ದೊಡ್ಡದೇವರಾಜ ಒಡೆಯರ್ ಎರಡು ಕಾರಣಗಳಿಗಾಗಿ ಮಾಗಡಿಯ ಮೇಲೆ ದಾಳಿ ಮಾಡಬಯಸಿದನು. ಮೊದಲನೆಯದಾಗಿ– ಮಾಗಡಿಯ ಅಧೀನದಲ್ಲಿದ್ದ ಕುಣಿಗಲ್ಲನ್ನು ಕೆಂಪೇಗೌಡನಿಂದ ಕಸಿದುಕೊಳ್ಳುವುದು. ಏಕೆಂದರೆ, ಈ ವೇಳೆಗಾಗಲೆ ಆದಿಲ್ ಷಾಹಿಗಳ ಅಧೀನದಲ್ಲಿದ್ದ ಚಿಕ್ಕನಾಯಕನಹಳ್ಳಿ, ತುರುವೇಕೆರೆ ಮತ್ತು ಬೇಲೂರು ಮುಂತಾದ ಪ್ರದೇಶಗಳನ್ನು ಆಕ್ರಮಿಸಿದ್ದನು. ಈಗ ಅವನ ಅಧೀನಕ್ಕೆ ಒಳಪಡದ ಏಕೈಕ ಪ್ರದೇಶ ಕುಣಿಗಲ್ ಆಗಿತ್ತು. ಬಿಜಾಪುರದ ಸೇನೆಯು ಮೈಸೂರಿಗೆ ಉತ್ತರ ಮತ್ತು ಪಶ್ಚಿಮ ದಿಕ್ಕಿನಿಂದ ಆಕ್ರಮಣ ನಡೆಸದಂತೆ ತಡೆಯಬಲ್ಲ ಆಯಕಟ್ಟಿನ ನೆಲೆ ಇದಾಗಿತ್ತು. ಎರಡನೆಯದಾಗಿ– ಮೈಸೂರು ಸೇನೆಯು ಕೆಂಪೇಗೌಡನ ಪ್ರಮುಖ ನೆಲೆಗಳಾದ ಹೆಬ್ಬೂರು, ಅಮೃತೂರು ಮೊದಲಾದವನ್ನು ಗೆಲ್ಲುವ ಮೂಲಕ ಬೆಂಗಳೂರಿನ ಕಡೆಗಿನ ಮಾರ್ಗಗಳನ್ನು ಸುಲಭಗೊಳಿಸಿಕೊಳ್ಳಲು ಮುಂದಾಯಿತು. ಅದಕ್ಕಾಗಿ ಕುಣಿಗಲನ್ನು ಮೈಸೂರು ರಾಜ್ಯಕ್ಕೆ ಸೇರಿಸಿಕೊಳ್ಳುವುದು ದೊಡ್ಡದೇವರಾಜನಿಗೆ ಅನಿವಾರ್ಯವಾಗಿತ್ತು. ಆದ್ದರಿಂದ ತನ್ನ ಸೇನೆಯನ್ನು ಮಾಗಡಿ ಸೀಮೆಗೆ ನುಗ್ಗಿಸಿದ. ಮೈಸೂರು ಸೇನೆಯು ಕೆಂಪೇಗೌಡನನ್ನು ಹುಲಿಯೂರುದುರ್ಗ ಮತ್ತು ಕುಣಿಗಲ್‌ಗಳಲ್ಲಿ 1667ರ ನವೆಂಬರ್ ಮತ್ತು ಡಿಸೆಂಬರ್‌ನಲ್ಲಿ ಸೋಲಿಸಿತು.[35] ಆದರೆ, ಮಾಗಡಿಯನ್ನು ಮುಮ್ಮಡಿ ಕೆಂಪೇಗೌಡನು 1674ರವರೆಗೆ ಆಳುತ್ತಿದ್ದ ಬಗ್ಗೆ ಶಾಸನಗಳಿರುವುದರಿಂದ ದೊಡ್ಡದೇವರಾಜನ ಈ ಆಕ್ರಮಣದ ಕಾಲವು ಇತರ

ಸಾಕ್ಷಗಳೊಂದಿಗೆ ಹೊಂದಾಣಿಕೆಯಾಗುವುದಿಲ್ಲ[36] ಎಂಬುದು ಕೃತಿಯ ಲೇಖಕರ ಅಭಿಪ್ರಾಯ. ವಾಸ್ತವವಾಗಿ ದೊಡ್ಡದೇವರಾಜನ ಸೈನ್ಯದೆದುರು (ಮೈಸೂರು ಸೇನೆಯನ್ನು ದಳವಾಯಿ ಮುನ್ನಡೆಸುತ್ತಿದ್ದನೆಂದು ಲಾವಣಿಗಳು ತಿಳಿಸುತ್ತವೆ) ಸೋತವನು ಕುಣಿಗಲ್‌ನ ಇಮ್ಮಡಿ ಹಿರಿಯ ಕೆಂಪೇಗೌಡನೇ ಹೊರತು; ಮಾಗಡಿ ಮುಮ್ಮಡಿ ಕೆಂಪೇಗೌಡನಲ್ಲ. ಈ ಕದನ ನಡೆದದ್ದು 1664ಕ್ಕೆ ಮೊದಲೇ ಹೊರತು ಆ ನಂತರವಲ್ಲ. ಏಕೆಂದರೆ, ಕುಣಿಗಲ್‌ನ ಕೃಷ್ಣಸಾಗರ ಅಗ್ರಹಾರದ ಇಮ್ಮಡಿ ಹಿರಿಯ ಕೆಂಪೇಗೌಡನ ಹೆಸರಿರುವ ಶಾಸನವು 1659ಕ್ಕೆ ಸೇರುತ್ತದೆ ಎಂಬುದನ್ನು ಆರಂಭದಲ್ಲಿಯೇ ವಿಶ್ಲೇಷಿಸಲಾಗಿದೆ. ಕುಣಿಗಲ್ ಸಮೀಪದ ಕಗ್ಗೆರೆಯಲ್ಲಿ ದೊಡ್ಡದೇವರಾಜ ಒಡೆಯರ್ ಹಾಕಿಸಿದ ಶಾಸನವೊಂದು 1664ಕ್ಕೆ ಸೇರುತ್ತದೆ.[37] ಆದ್ದರಿಂದ ಇಮ್ಮಡಿ ಹಿರಿಯ ಕೆಂಪೇಗೌಡ ಮತ್ತು ದೊಡ್ಡದೇವರಾಜನ ನಡುವಿನ ಕದನ 1659–1664ರ ಮಧ್ಯೆ ನಡೆದಿರಬಹುದಾಗಿದ್ದು, ಈ ಕದನದಲ್ಲಿಯೇ ಇಮ್ಮಡಿ ಹಿರಿಯ ಕೆಂಪೇಗೌಡನು ಮರಣವನ್ನಪ್ಪಿರಬಹುದೆಂದು ತರ್ಕಿಸಬಹುದಾಗಿದೆ.

ಈ ತರ್ಕವನ್ನು ಒಪ್ಪುವುದಾದಲ್ಲಿ, ಕದನವೇಕೆ ಕೆಂಪಾಪುರದಲ್ಲಿಯೇ ಏರ್ಪಟ್ಟಿತು? ಈ ಪ್ರಶ್ನೆಗೆ ಆಧಾರ ಸಹಿತ ಕಾರಣಗಳಿಲ್ಲವಾದರೂ, ಈ ಮುಂದಿನ ಅಂಶವನ್ನು ಸಕಾರಣವೆಂದು ಒಪ್ಪಬಹುದು. ಮೈಸೂರು ಸೇನೆಯು ಕುಣಿಗಲ್ಲಿನತ್ತ ಸಾಗುವ ಮಾರ್ಗದಲ್ಲಿ ಮೊದಲು ಎದುರಾಗುವ ಕೋಟೆಯೇ ಹುಲಿಯೂರುದುರ್ಗ. ಅದು ಕೆಂಪೇಗೌಡನ ನಿಯಂತ್ರಣದಲ್ಲಿದ್ದುದರಿಂದ ಅದನ್ನು ಗೆಲ್ಲಲೇಬೇಕಿತ್ತು. ಅದನ್ನು ಗೆದ್ದ ನಂತರ ಎದುರಾಗುವುದೇ ಕುಣಿಗಲ್ ಸಮೀಪದ ಹುತ್ರಿದುರ್ಗದ ಕೋಟೆ. ಇದಕ್ಕೂ ಲಗ್ಗೆಯನಿಡುವ ಮೂಲಕ ಇಮ್ಮಡಿ ಹಿರಿಯ ಕೆಂಪೇಗೌಡನಿಗೆ ದೊಡ್ಡದೇವರಾಜನ ದಳವಾಯಿಯು ರಣವೀಳ್ಯವನ್ನು ಕೊಟ್ಟಿರಲೂಬಹುದು. ನಂತರ ಮೈಸೂರು ಸೇನೆಯು ಕುಣಿಗಲ್ ಮುತ್ತುವ ಮಾರ್ಗದಲ್ಲಿ ಹುತ್ರಿದುರ್ಗದಿಂದ 6–7 ಕಿ.ಮೀ. ದೂರದಲ್ಲಿರುವ ಕೆಂಪಾಪುರದ ಬಳಿಗೆ ಬಂದಾಗ ಇಮ್ಮಡಿ ಹಿರಿಯ ಕೆಂಪೇಗೌಡನು ಸೇನೆ ಸಹಿತ ಮುಖಾಮುಖಿಯಾಗಿರಬಹುದು. ಮುಂದಿನ ಹೋರಾಟದಲ್ಲಿ ಇಮ್ಮಡಿ ಹಿರಿಯ ಕೆಂಪೇಗೌಡನು ಮಡಿದಿರಬಹುದೆಂದು ಸಕಾರಣವಾಗಿ ಊಹಿಸಬಹುದು.

ಕೊನೆಯ ಮಾತು: ಮೇಲಿನ ಅಧ್ಯಯನದಿಂದ ಮುಂದಿನ ನಿರ್ಣಯಗಳಿಗೆ ಬರಬಹುದಾಗಿದೆ.

1. ಬೆಂಗಳೂರು ನಿರ್ಮಾತೃ ಕೆಂಪೇಗೌಡನನ್ನು ಯಾವ ಸಮಕಾಲೀನ ಆಕರಗಳಲ್ಲಿಯೂ "ಹಿರಿಯ ಕೆಂಪೇಗೌಡ" ಎಂಬುದಾಗಿ ಕರೆದಿರುವುದಿಲ್ಲ. ಹಾಗೆ ಸಿಗುವ ಉಲ್ಲೇಖಗಳು ಅವನು ಗತಿಸಿದ ಕೆಲವು ದಶಕಗಳ ನಂತರದ ದಾಖಲೆಗಳಲ್ಲಿ ಮಾತ್ರ. ಆದ್ದರಿಂದ ಕೆಂಪಾಪುರ ಸ್ಮಾರಕ ಶಾಸನದಲ್ಲಿನ "ಹಿರಿಯ ಕೆಂಪೇಗೌಡ" ಬೇರೆಯದೇ ವ್ಯಕ್ತಿಯ ಹೆಸರಾಗಿದೆ.
2. ಕೆಂಪೇಗೌಡನು ನೂರರ ಸಮೀಪದ ಇಳಿವಯಸ್ಸಿನಲ್ಲಿಯೂ ಬದುಕಿದ್ದ ಎಂಬುದಕ್ಕೆ (1608ರವರೆಗೆ) ಶಾಸನಗಳ ಸಾಕ್ಷಿ ಇದೆ. ವೃದ್ಧ ಕೆಂಪೇಗೌಡನು ತನ್ನ ರಾಜಧಾನಿಯಿಂದ ದೂರದ ಕೆಂಪಾಪುರಕ್ಕೆ ಕುಣಿಗಲ್ ಮಾರ್ಗವಾಗಿ ಬಂದ ಎಂಬ ವಾದದಲ್ಲಿ ಯಾವುದೇ ಹುರುಳಿಲ್ಲ. ಏಕೆಂದರೆ ಬೆಂಗಳೂರಿನಿಂದ ಮಾಗಡಿ ಮಾರ್ಗವಾಗಿ

ಹೊರಟರೆ ಕುಣಿಗಲ್‌ಗೂ ಮೊದಲೇ ಕೆಂಪಾಪುರ ಸಿಗುತ್ತದೆ. ಶಾಸನದಲ್ಲಿರುವಂತೆ ಕುಣಿಗಲ್‌ನಿಂದ ಬಂದು ಕೆಂಪಾಪುರದಲ್ಲಿ ಜಗಳವಾಡಿ ಮಡಿದನೆಂದರೆ ಅವನು ಸುಮಾರು 1641–1662ರವರೆಗೆ ಕುಣಿಗಲ್‌ನಿಂದ ಆಳುತ್ತಿದ್ದ ಕೆಂಪೇಗೌಡನ ಮೊಮ್ಮಗನಾದ ಇಮ್ಮಡಿ ಹಿರಿಯ ಕೆಂಪೇಗೌಡನೇ ಇರಬೇಕೆಂದು ಆಧಾರಪೂರ್ವಕವಾಗಿ ಒಪ್ಪಬಹುದು.

3. ಇವನು ಮೈಸೂರಿನ ದಳವಾಯಿಯ ವಿರುದ್ಧದ ಕದನದಲ್ಲಿ ಮಡಿದಿರುವಂತೆಯೂ, ಈ ಕದನ 1660ರ ದಶಕದ ಆರಂಭಿಕ ವರ್ಷಗಳಲ್ಲಿ ಸಂಭವಿಸಿರುವಂತೆಯೂ ಲಾವಣಿ ಮತ್ತು ಶಾಸನಗಳ ವಿಶ್ಲೇಷಣೆ ಹಾಗೂ ಸಮಕಾಲೀನ ಚರಿತ್ರೆಯ ಅಧ್ಯಯನಗಳಿಂದ ತಿಳಿದುಬರುವುದು.

4. ಸ್ಮಾರಕ ಶಾಸನದ ಲಿಪಿಯೂ ಕೂಡ 17ನೇ ಶತಮಾನದ ಮಧ್ಯಕಾಲಕ್ಕೆ ಸರಿ ಹೊಂದುವುದೇ ವಿನಃ 16ನೇ ಶತಮಾನದ ಮಧ್ಯಕಾಲಕ್ಕೆ ಅಲ್ಲ. ಏಕೆಂದರೆ ಈ ಶಾಸನದಲ್ಲಿನ ಲಿಪಿಗಳು ಸಾಕಷ್ಟು ವಿಕಾಸಗೊಂಡಿರುವುದನ್ನು ಗುರುತಿಸಬಹುದು.

5. ಇಮ್ಮಡಿ ಹಿರಿಯ ಕೆಂಪೇಗೌಡನ ಮರಣಾನಂತರ ಕುಣಿಗಲ್ ಪ್ರಾಂತ್ಯವು ಯಲಹಂಕ ನಾಡ ಪ್ರಭುಗಳ ಕೈತಪ್ಪಿ ಶಾಶ್ವತವಾಗಿ ಮೈಸೂರು ಒಡೆಯರ ತೆಕ್ಕೆಗೆ ಹೋಯಿತೆಂದು ಆಧಾರ ಸಹಿತ ತೀರ್ಮಾನಕ್ಕೆ ಬರಬಹುದು.

ಇಷ್ಟಾದರೂ, ಕೆಂಪಾಪುರದ ಸಮಾಧಿಯು ಜನಪ್ರಿಯ ಕೆಂಪೇಗೌಡನಿಗೆ ಸಂಬಂಧಿಸಿದ್ದು ಎನ್ನುವ ಮೂಲಕ ಮತ್ತೊಬ್ಬ ಕೆಂಪೇಗೌಡನಿಗೆ ಅನ್ಯಾಯವೆಸಗುವುದು ಎಷ್ಟು ಸರಿ? ಚಾರಿತ್ರಿಕ ಘಟನೆಗಳು, ಸಂದರ್ಭಗಳು, ಸ್ಮಾರಕಗಳು, ಅವಶೇಷಗಳು ಹೀಗೆ ಎಲ್ಲವನ್ನೂ ಜನಪ್ರಿಯ ಐತಿಹಾಸಿಕ ವ್ಯಕ್ತಿಗೆ ತಳುಕು ಹಾಕುವ ಉಮೇದು ಜನಸಾಮನ್ಯರಲ್ಲಿ ಅಷ್ಟೇ ಅಲ್ಲ; ಇಂದು ನಮ್ಮ ಸಂಶೋಧನಾ ವಲಯದಲ್ಲೂ ಇರುವ ದೊಡ್ಡ ವ್ಯಸನ! ಇಂತಹ ವ್ಯಸನದಿಂದ ಸಂಶೋಧನಾ ವಲಯವನ್ನು ಪಾರುಮಾಡಿ, ಪೂರ್ವಾಗ್ರಹಮುಕ್ತ ವಸ್ತುನಿಷ್ಠ ಚರಿತ್ರೆಯನ್ನು ಕಟ್ಟುವ ಕಡೆಗೆ ಕೊಂಡೊಯ್ಯಬೇಕಾದ ತುರ್ತು ಇದೆ. ಸಂಶೋಧನೆ ಎಂಬುದು ಸತ್ಯದ ಹುಡುಕಾಟ; ಸತ್ಯದ ಸಾಮೀಪ್ಯಕ್ಕೆ ಸಾಗುವ ಮಾರ್ಗ. ಸತ್ಯದತ್ತ ಸಾಗುವ ಪ್ರಯತ್ನವೇ ಇತಿಹಾಸ ಸಂಶೋಧನೆಯ ಉದ್ದೇಶ. ಆದ್ದರಿಂದ ಸಂಶೋಧನೆ ಎಂಬುದು ನಿರಂತರ ಪ್ರಕ್ರಿಯೆ ಆಗಿದೆ/ಆಗಬೇಕು. ಪ್ರಾಮಾಣಿಕವಾಗಿ ಕಂಡುಕೊಂಡ ಚಾರಿತ್ರಿಕ ಸತ್ಯವನ್ನು ಮುಕ್ತವಾಗಿ ದಾಖಲಿಸುವ ಧೈರ್ಯ ಸಂಶೋಧಕನಿಗೆ ಇರಬೇಕು. ಇಲ್ಲವಾದಲ್ಲಿ ಅದು ಇತಿಹಾಸಕ್ಕೆ ಮಾಡಿದ ಅಪಚಾರವಾಗುತ್ತದೆ.

---

* **ಕೃತಜ್ಞತೆಗಳು:** ಈ ಲೇಖನ ಸಿದ್ಧಪಡಿಸುವ ಕಾಲದಲ್ಲಿ ಅಗತ್ಯ ಗ್ರಂಥಗಳನ್ನು ಸಕಾಲದಲ್ಲಿ ಪೂರೈಸಿಕೊಟ್ಟ ಗೆಳೆಯ ಸುಂಕಂ ಗೋವರ್ಧನ, ಶಿವಕುಮಾರ ಪಾವಟೆ ಹಾಗೂ ನಾಗಣ್ಣ, ಉಪನ್ಯಾಸಕರು, ಸ.ಪ್ರ.ದ.ಕಾಲೇಜು, ಕುಣಿಗಲ್ ಅವರುಗಳಿಗೆ ನನ್ನ ಮೊದಲ ಕೃತಜ್ಞತೆಗಳು. ಎಂದಿನಂತೆ ನನ್ನ ಬರವಣಿಗೆಗಳಿಗೆ ಮಾರ್ಗದರ್ಶನ ಮತ್ತು ಉತ್ತೇಜನ ನೀಡುತ್ತಾ ಬಂದಿರುವ ಗುರುಗಳಾದ ಅಶ್ವತ್ಥನಾರಾಯಣ, ಇತಿಹಾಸ ಪ್ರಾಧ್ಯಾಪಕರು, ಬೆಂ.ವಿ.ವಿ. ಅವರಿಗೂ, ಸನ್ಮಿತ್ರರಾದ ಎಸ್.ಕೆ.ಅರುಣಿ, ಸದಸ್ಯ ಕಾರ್ಯದರ್ಶಿಗಳು, ಐ.ಸಿ.ಎಚ್.ಆರ್., ನವದೆಹಲಿ ಮತ್ತು ಮನು ವಿ. ದೇವದೇವನ್, ಸ.ಪ್ರಾಧ್ಯಾಪಕರು, ಐ.ಐ.ಟಿ. ಮಂಡಿ, ಹಾಗೂ ಪೃಥ್ವಿದತ್ತ ಚಂದ್ರಶೋಭಿ, ಸ.ಪ್ರಾಧ್ಯಾಪಕರು, ಕ.ಮು.ವಿ.ವಿ., ಮೈಸೂರು. ಇವರೆಲ್ಲರಿಗೂ ನನ್ನ ಪ್ರೀತಿಪೂರ್ವಕ ಕೃತಜ್ಞತೆಗಳು.

ಕೊನೆ ಟಿಪ್ಪಣಿಗಳು

1. *Bangalore mirror* ಯಲ್ಲಿ ದಿನಾಂಕ: 9 ಸೆಪ್ಟಂಬರ್, 2015ರಂದು ಮೊದಲು ವರದಿಯಾಯಿತು. ಆನಂತರ ಎಲ್ಲಾ ಕನ್ನಡ ಮತ್ತು ಇಂಗ್ಲಿಷ್ ದಿನಪತ್ರಿಕೆಗಳಲ್ಲಿ ಇದೇ ಅಭಿಪ್ರಾಯವನ್ನು ಹಲವು ವಿದ್ವಾಂಸರು ವ್ಯಕ್ತಪಡಿಸಿದ್ದಾರೆ.
2. *ಹಿರಿಯ ಕೆಂಪೇಗೌಡರ ಸಮಾಧಿಯ ಶೋಧನಾ ವರದಿ* ಎಂಬ ಶೀರ್ಷಿಕೆಯಲ್ಲಿ ಸಲ್ಲಿಸಿರುವ ವರದಿಯಲ್ಲಿ ನನಗೆ ದೊರೆತ 9 ಪುಟಗಳನ್ನು ಅಭ್ಯಾಸ ಮಾಡಿದ್ದೇನೆ. ವರದಿಯ ಮೊದಲ ಪ್ಯಾರದಿಂದಲೇ ದೋಷಗಳು ಆರಂಭವಾಗುತ್ತವೆ. ಉದಾ. "1532ರ ಬೆಂಗಳೂರಿನ ಮಾಗಡಿ ರಸ್ತೆಯಲ್ಲಿರುವ ದಾಸರಹಳ್ಳಿ ಶಾಸನದ ಪ್ರಕಾರ ಇವರು ಬೆಂಗಳೂರು ಕೋಟೆಯನ್ನು ಮತ್ತು ಬೆಂಗಳೂರು ನಗರವನ್ನು ಕ್ರಿ.ಶ 1537ರಲ್ಲಿ ನಿರ್ಮಿಸಿ ತಮ್ಮ ರಾಜಧಾನಿಯನ್ನು ಯಲಹಂಕದಿಂದ ಬೆಂಗಳೂರು ಪೇಟೆಗೆ ವರ್ಗಾಯಿಸಿದರು ಎನ್ನಲಾಗಿದೆ..." ಎಂದು ವರದಿಯಲ್ಲಿ ದಾಖಲಿಸಿದ್ದಾರೆ. ಅಂದರೆ 1537ರ ಘಟನೆಯನ್ನು ಕುರಿತು 1532ರ ಶಾಸನದಲ್ಲಿಯೇ ಭವಿಷ್ಯ ನುಡಿಯಲಾಗಿತ್ತು ಎಂದಾಯಿತು. ವಾಸ್ತವವಾಗಿ ಈ ಶಾಸನದಲ್ಲಿ ಈ ಯಾವ ಸಂಗತಿಯೂ ಇಲ್ಲ. 1532ರ ಶಾಸನದಲ್ಲಿ ವಿಜಯನಗರದ ದೊರೆ ಅಚ್ಯುತರಾಯನು ಕೆಂಪದೇವರಸಗೌಡನಿಗೆ ನಾಯಕತನ ಕೊಟ್ಟು ಎಲಹಂಕ ರಾಜ್ಯವನ್ನು ವಹಿಸಿಕೊಟ್ಟ ಸಂಗತಿಯನ್ನು ಮಾತ್ರ ತಿಳಿಸುತ್ತದೆ (ನೋಡಿ: ಮಂಜುನಾಥ ಎಂ.ಜಿ. (ಸಂ.) *ಯಲಹಂಕ ನಾಡಪ್ರಭುಗಳ ಶಾಸನ ಸಂಪುಟ*, ಶಾಸನ ಸಂಖ್ಯೆ–13). ಇವೆಲ್ಲಕ್ಕೂ ಮಿಗಿಲಾಗಿ ವರದಿಯಲ್ಲಿ ಉಲ್ಲೇಖಿಸುವ ಶಾಸನ ಇರುವುದು ಮಾಗಡಿ ರಸ್ತೆ ದಾಸರಹಳ್ಳಿಯಲ್ಲಿ ಅಲ್ಲ; ಕೆ.ಆರ್.ಪುರಂ ಹೋಬಳಿಯ ದಾಸರಹಳ್ಳಿ. ಶಾಸನಗಳನ್ನು ತಪ್ಪಾಗಿ ಉಲ್ಲೇಖಿಸುತ್ತಾ ಕಪೋಲಕಲ್ಪಿತ ಕಥೆಗಳನ್ನು ಹೆಣೆದಿರುವ ಈ ತಜ್ಞರ ಸಮಿತಿ ಈಗಾಗಲೇ ಓದಿರುವ ಶಾಸನವನ್ನೂ ಅರ್ಥಮಾಡಿಕೊಳ್ಳುವಲ್ಲಿ ಸಂಪೂರ್ಣವಾಗಿ ವಿಫಲವಾಗಿರುವುದು ವಿಷಾದನೀಯ. ಇನ್ನೊಂದು ಗಮನಾರ್ಹ ಸಂಗತಿ ಎಂದರೆ ಸಮಾಧಿ ಎನ್ನಲಾದ ಸ್ಮಾರಕದ ಮೇಲಿನ ಶಾಸನವನ್ನು ಸದರಿ ವರದಿಯ ಪುಟ 3, 8 ಮತ್ತು 9ರಲ್ಲಿ ಉಲ್ಲೇಖಿಸಿದ್ದಾರೆ. ಆದರೆ, ಈ ಮೂರೂ ಕಡೆಗಳಲ್ಲಿಯೂ ಶಾಸನದ ಪಾಠದಲ್ಲಿ ಏಕರೂಪತೆ ಇಲ್ಲ. ಬದಲಿಗೆ ಭಿನ್ನಭಿನ್ನ ಪಾಠವನ್ನು ಉಲ್ಲೇಖಿಸಿದ್ದಾರೆ. ಇದು ಸಮಿತಿಯ ಅಧ್ಯಯನದ (ಅ)ಶಿಸ್ತಿನ ಒಂದು ಸ್ಯಾಂಪಲ್ ಅಷ್ಟೆ. ಈ ರೀತಿಯ ಅಪಸವ್ಯಗಳು ವರದಿಯ ಉದ್ದಕ್ಕೂ ಕಣ್ಣಿಗೆ ರಾಚುತ್ತವೆ.
3. ಮಂಜುನಾಥ ಎಂ.ಜಿ., (ಸಂ.), 2006, *ಯಲಹಂಕ ನಾಡಪ್ರಭುಗಳ ಶಾಸನ ಸಂಪುಟ*, ಶಾಸನ ಸಂಖ್ಯೆ: 14–21, 23, 25–35ರ ವರೆಗಿನ ಎಲ್ಲಾ ಶಿಲಾಶಾಸನಗಳನ್ನು ಗಮನಿಸಬಹುದು.
4. ಮಾಸ್ತಿಯ ಶಾಸನ ಪಾಠಕ್ಕಾಗಿ ನೋಡಿ: ಮಂಜುನಾಥ, 2006, ಅದೇ: ಶಾ.ಸಂ.–24.; ಮತ್ತು 1578ರಲ್ಲಿ ವಿಜಯನಗರವನ್ನು ಆಳುತ್ತಿದ್ದ ವಿವರಕ್ಕಾಗಿ ನೋಡಿ: ದಿವಾಕರ್ ಆರ್.ಆರ್. (ಸಂ.), 2014(1970), *ಕರ್ಣಾಟಕದ ಪರಂಪರೆ*, ಪು.51–52.
5. ಅದೇ, ಶಾ.ಸಂ–58 ಮತ್ತು 63.

5ಎ. ದಿವಾಕರ್, 2014(1970): 54.

6. ಶ್ರೀಕಂಠಯ್ಯ ಕರ್ಲಮಂಗಲ, 1961, *ಗೌಡಕುಲ ವಿಭೂಷಣ ಕೆಂಪೇಗೌಡನ ಜಯ ಪ್ರಶಸ್ತಿ*, ಪು.32.
7. ನರಸಿಂಹಯ್ಯ ಎಸ್.ಕೆ., 1924, *ಮಾಗಡಿ ಕೆಂಪೇಗೌಡ ಬೆಂಗಳೂರು ಸ್ಥಾಪಕ ಮತ್ತು ಆತನ ಪೂರ್ವಿಕರು*, ಪು.20.
8. ನನ್ನ ಅಧ್ಯಯನ ವೇಳೆ ಕೆಂಪೇಗೌಡನ ಜನನ ಕುರಿತು ಅಧಿಕೃತ ದಿನಾಂಕವೇನೂ ತಿಳಿದು ಬಂದಿಲ್ಲ. 1532ರ ದಾಸರಹಳ್ಳಿಯ ಶಾಸನವೇ ಹಿರಿಯ ಕೆಂಪೇಗೌಡನ ಮೊದಲ ಶಾಸನವೆಂದು ಒಪ್ಪಲಾಗಿದೆ. ಈ ಹಿನ್ನೆಲೆಯಲ್ಲಿ 1532ಕ್ಕೆ ಹಿರಿಯ ಕೆಂಪೇಗೌಡನು ಪ್ರಾಪ್ತವಯಸ್ಕನಾಗಿದ್ದನೆಂದು ಭಾವಿಸಬಹುದಾದರೆ 1514ಕ್ಕೆ ಮುನ್ನ ಜನಿಸಿರಬೇಕೆಂದು ಊಹಿಸಬಹುದಾಗಿದೆ. ಆದ್ದರಿಂದ ಅಧಿಕೃತ ಮಾಹಿತಿ ಸಿಗುವವರೆಗೂ 1510ರಲ್ಲಿ ಹಿರಿಯ ಕೆಂಪೇಗೌಡ ಜನಿಸಿದನು ಎಂದು ಹೇಳುವ ದಿನಾಂಕವನ್ನೆ ತಾತ್ಕಾಲಿಕವಾಗಿ ಒಪ್ಪಿಕೊಳ್ಳಬೇಕಾಗುತ್ತದೆ.

9. ಮಂಜುನಾಥ, 2006, ಪೂರ್ವೋಕ್ತ: ಶಾಸನ ಸಂಖ್ಯೆ–49.
10. ಅದೇ: ಶಾಸನ ಸಂಖ್ಯೆ–52.
11. ಅದೇ: ಶಾಸನ ಸಂಖ್ಯೆ–25.
12. ಶ್ರೀಕಂಠಯ್ಯ ಕರ್ಲಮಂಗಲಂ, (ಸಂ.), 1961, *ಗೌಡಕುಲ ವಿಭೂಷಣ ಕೆಂಪೇಗೌಡನ ಜಯ ಪ್ರಶಸ್ತಿ*, ಪು 34–35.
13. ಅದೇ: ಪು 3–4 ಮತ್ತು 20.
14. ಅದೇ: 53.
15. ಮಂಜುನಾಥ ಎಂ.ಜಿ., ಪೂರ್ವೋಕ್ತ: ಶಾಸನ ಸಂ.61.
16. ಅದೇ: ಶಾಸನ ಸಂ.64.
17. ಹನುಮಂತಯ್ಯ ಕೆಂಕೆರೆ, 2010, "ಏಳುನಾಡ ಪ್ರಭುಗಳು ಮತ್ತು ಕೂಟ ಶಾಸನಗಳು", ಪು 57–70, (ಗೋಪಾಲ್ ಆರ್. (ಸಂ.) 2010, *ನಾಡಪ್ರಭು ಕೆಂಪೇಗೌಡರ ಜೀವನ ಸಾಧನೆಗಳು*, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ: ಮೈಸೂರು. ಈ ಲೇಖನದಲ್ಲಿ ಕೂಟ ಶಾಸನಗಳನ್ನು ಶೋಧಿಸುವ ಬರದಲ್ಲಿ ಹನುಮಂತಯ್ಯನವರು ರೈಸರು ಕೊಟ್ಟಿರುವ ಶಾಸನಗಳ ಕಾಲಕ್ಕೂ, ಆ ಶಾಸನಗಳಲ್ಲಿ ಉಲ್ಲೇಖವಾಗಿರುವ ವ್ಯಕ್ತಿಗಳ ಕಾಲಕ್ಕೂ ಸರಿಹೊಂದುವುದಿಲ್ಲವೆಂದು ಅವುಗಳನ್ನು ಹಿಂದು ಮುಂದು ಪರಿಶೀಲಿಸದೆ ಕೆಲವು ನೈಜ ಶಿಲಾಶಾಸನಗಳನ್ನೂ ಕೂಟ ಶಾಸನಗಳ ಪಟ್ಟಿಗೆ ಸೇರಿಸಿದ್ದಾರೆ. ಸೂಕ್ಷ್ಮವಾಗಿ ಗಮನಿಸಬೇಕಾದ ಅಂಶವೆಂದರೆ: ಶಾಸನಗಳಲ್ಲಿ ವರ್ಷದ ಉಲ್ಲೇಖವಿಲ್ಲದ ಸಂದರ್ಭದಲ್ಲಿ ಸಂವತ್ಸರಗಳನ್ನೇ ಆಧರಿಸಿ ರೈಸ್ ಅವರು ಶಾಸನದ ಕಾಲವನ್ನು ಊಹಿಸಿದಂತೆ ಕಾಣುತ್ತದೆ. ಈ ಊಹೆ ಕೆಲವೆಡೆಗಳಲ್ಲಿ ತಪ್ಪಾಗಿದೆ. ಆದರೆ, ಯಲಹಂಕ ಪ್ರಭುಗಳ ಕಾಲದ ತಾಮ್ರಶಾಸನಗಳು ಬಹುತೇಕ ಕೂಟಶಾಸನಗಳಂತೆ ತೋರುತ್ತದೆ. ಕಾರಣ ತಾಮ್ರಶಾಸನಗಳಲ್ಲಿನ ಕಾಲ, ಅಲ್ಲಿ ಬರುವ ವಿಜಯನಗರದ ಅರಸರ ಹೆಸರುಗಳ ನಡುವೆ ಸಾಮ್ಯತೆ ಇಲ್ಲದಿರುವುದು. ಸಮಕಾಲೀನ ಇತರ ಆಕರಗಳಲ್ಲಿನ ವಿಷಯ ಸಂಗತಿಗಳಿಗೂ ತಾಮ್ರಶಾಸನಗಳಲ್ಲಿನ ಸಂಗತಿಗಳಿಗೂ ಭಿನ್ನತೆಗಳಿದ್ದು, ಸಂಶಯವನ್ನು ಹೊರಸೂಸುತ್ತವೆ. ಈ ಕುರಿತಾಗಿಯೇ ಪ್ರತ್ಯೇಕ ಅಧ್ಯಯನ ಮಾಡಬಹುದಾದಷ್ಟು ವಿಷಯ ವ್ಯಾಪ್ತಿ ಇದಕ್ಕಿದೆ.
18. ವಸಂತಲಕ್ಷ್ಮಿ ಕೋ., 1996, 'ಏಕಾಮ್ರ ದೀಕ್ಷಿತನ 'ವೀರಭದ್ರ ವಿಜಯ'ದಲ್ಲಿ ಯಲಹಂಕ ಪ್ರಭುಗಳು', ಪು.38–39; ಶ್ರೀಕಂಠಯ್ಯ, 1961, ಪೂರ್ವೋಕ್ತ, ಪು.31; ಮತ್ತು ರಿತ್ತಿ, ಶ್ರೀನಿವಾಸ, (ಸಂ.), 2009, *ಎಪಿಗ್ರಾಫಿಯ ಕರ್ನಾಟಿಕ, (ಪರಿಷ್ಕೃತ) ಸಂಪುಟ–24*, ಕುಣಿಗಲ್ ಶಾಸನ ಸಂ.25.
19. ಶಾಮಶಾಸ್ತ್ರಿ ಆರ್. (ಸಂ.) 1971, *ಕಂಠೀರವ ನರಸರಾಜ ವಿಜಯ*, ಸಂಧಿ: 20, ಪದ್ಯ:60.
20. ಅದೇ: ಸಂಧಿ:20, ಪಂದ್ಯ:61.
21. ಅದೇ: ಸಂಧಿ: 25, ಪದ್ಯ:95.
22. ಅದೇ: ಸಂಧಿ:25, ಪದ್ಯ:96.
23. *ಎ.ಕ. ಸಂ.24 (ಪರಿಷ್ಕೃತ):* ಕುಣಿಗಲ್ ಶಾಸನ ಸಂ.25 (ಕೃಷ್ಣಸಾಗರ), ಶಾ.ಸಂ.81 ಮತ್ತು ಶಾ.ಸಂ.82 (ಶೃಂಗಾರ ಸಾಗರ) ಶಾ.ಸಂ.93 (ಹುಲಿಯೂರು ದುರ್ಗ) ಈ ನಾಲ್ಕು ಶಾಸನಗಳೂ ಇಮ್ಮಡಿ ಹಿರಿಯ ಕೆಂಪೇಗೌಡನಿಗೆ ಸಂಬಂಧಿಸಿದವುಗಳಾಗಿವೆ. ಆದರೆ, ಮಂಜುನಾಥ ಎಂ.ಜಿ. ಅವರು ಸಂಪಾದಿಸಿರುವ *ಯಲಹಂಕ ನಾಡಪ್ರಭುಗಳ ಶಾಸನ ಸಂಪುಟ*ದಲ್ಲಿ ಮೊದಲ ಮೂರು ಶಾಸನಗಳ ಪಾಠವನ್ನು ಮಾತ್ರ ಕೊಟ್ಟಿದ್ದಾರೆ. ಹುಲಿಯೂರು ದುರ್ಗದ ಶಾಸನದ ಪಾಠವನ್ನು ನೀಡಿಲ್ಲ. ಆದರೆ, ಪುಟ 207ರಲ್ಲಿ ಶಾಸನದ ಪ್ರತಿಯನ್ನು ನೀಡಿರುತ್ತಾರೆ.

24. ಶ್ರೀಕಂಠಯ್ಯ, 1961, ಪೂರ್ವೋಕ್ತ: ಪು.28.
25. ಶಿವಣ್ಣ ಕೆ.ಎಸ್., (ಸಂ.) 1997, *ಕರ್ನಾಟಕ ಚರಿತ್ರೆ, ಸಂಪುಟ-3,* ಪು.56-57.
26. ರಿತ್ತಿ, (ಸಂ.), 2009, ಪೂರ್ವೋಕ್ತ: ಕುಣಿಗಲ್ ಶಾ.ಸಂ-81, 82 ಮತ್ತು 93.
27. ಗೋಪಾಲಕೃಷ್ಣರಾವ್ ಕೆ.ಜಿ., 2010, 'ಕೃಷ್ಣರಾಯನೋ? ಕೃಷ್ಣದೇವರಾಯನೋ?', ಪು.30-32.
28. "ತೆಲುಗು ಕಾವ್ಯವನ್ನು ನೋಡಿ ಶ್ರೀ ಸುಬ್ಬರಾಮಪ್ಪನವರು ಮಾಗಡಿ ಕೆಂಪೇಗೌಡನೂ, ಇವರ ವಂಶದವರೂ "ತೆಲುಗ"ರೆಂದು ನಿರ್ಣಯಿಸಿ ಬಿಟ್ಟರು" ಎಂದು ಶ್ರೀಕಂಠಯ್ಯ ತಮ್ಮ *ಕೆಂಪೇಗೌಡ ಜಯಪ್ರಶಸ್ತಿಯ* ಪು.50ರಲ್ಲಿ ಉಲ್ಲೇಖಿಸಿದ್ದಾರೆ.
29. ವಸಂತ ಲಕ್ಷ್ಮಿ ಕೋ., 1996, ಪೂರ್ವೋಕ್ತ: ಪು.39.
30. *ವೀರಭದ್ರ ವಿಜಯದಲ್ಲಿ* ಏಕಾಮ್ರ ದೀಕ್ಷಿತನು ನೀಡಿರುವ ಯಲಹಂಕ ನಾಡ ಪ್ರಭುಗಳ ವಂಶಾವಳಿಯ ವಿವರಕ್ಕಾಗಿ ನೋಡಿ: ವಸಂತಲಕ್ಷ್ಮಿ, 1996, ಪೂರ್ವೋಕ್ತ: 43.
31. ನರಸಿಂಹಯ್ಯ ಎಸ್.ಕೆ., 1924: 41.
32. Caleb Simmon, 2014, 'The Goddess and Vaiṣṇavism in Search for Regional Supremacy: Woḍeyar Devotional Traditions During the Reign of Rāja woḍeyar (1578-1617 CE)', Pp.27-46.
33. ಕಲಬುರ್ಗಿ ಎಂ.ಎಂ., 2005(2004), ಮಾರ್ಗ-4, ಪು:313-316.
34. Satyanarayana A., 1996, *History of the Wodeyars of Mysore (1610-1748),* ಪು.89.
35. ಅದೇ: ಪು.75.
36. ಅದೇ: ಪು.80, ಕೊನೆ ಟಿಪ್ಪಣಿ-88.
37. ರಿತ್ತಿ, (ಸಂ.), 2009, ಪೂರ್ವೋಕ್ತ: ಕುಣಿಗಲ್ ಶಾಸನ ಸಂ-25.

ಪರಾಮರ್ಶನ ಗ್ರಂಥ

1. ಅರುಣಿ ಎಸ್. ಕೆ, 2007, *ಯಲಹಂಕ ನಾಡ ಪ್ರಭುಗಳ ವಾಸ್ತುಶಿಲ್ಪ-ಶಿಲ್ಪಕಲೆ,* ಬೆಂಗಳೂರು: ಶ್ರೀಕೆಂಪೇಗೌಡ ಅಧ್ಯಯನ ಪೀಠ, ಬೆಂಗಳೂರು ವಿಶ್ವವಿದ್ಯಾಲಯ.
2. ಕಲಬುರ್ಗಿ ಎಂ.ಎಂ., 2004(2005), *ಮಾರ್ಗ-4,* ಬೆಂಗಳೂರು: ಸಪ್ನ ಬುಕ್ ಹೌಸ್.
3. ಕೃಷ್ಣಮೂರ್ತಿ ಪಿ.ವಿ., 2011, *ಶಾಸನ, ಇತಿಹಾಸ ಮಂಥನ,* ತುಮಕೂರು: ತುಮಕೂರು ವಿಶ್ವವಿದ್ಯಾನಿಲಯ.
4. ಕೃಷ್ಣಮೂರ್ತಿ ಪಿ.ವಿ., 2011, 'ಎಲಹಂಕ ರಾಜ್ಯದ ಪ್ರಭುಗಳಾದ ಬೆಂಗಳೂರು ಕೆಂಪೇಗೌಡರು' (*ಇತಿಹಾಸ ದರ್ಪಣ, ಪುಸ್ತಕ-11,* ಪು:40-49), ಬೆಂಗಳೂರು.
5. ಗೋಪಾಲಕೃಷ್ಣರಾವ್ ಕೆ.ಜಿ., 2010, 'ಕೃಷ್ಣರಾಯನೋ? ಕೃಷ್ಣದೇವರಾಯನೋ?', ರಾಜೇಶ್ ಹಂ.ಗು. (ಸಂ.), *ಇತಿಹಾಸ ದರ್ಪಣ - ಕೃಷ್ಣ(ದೇವ)ರಾಯ ಮತ್ತು ವಿಜಯನಗರ ಸಾಮ್ರಾಜ್ಯ, ಸಂಪುಟ-1, ಸಂಚಿಕೆ-4,* ತ್ರೈಮಾಸಿಕ, ಪು.30-32, ಬೆಂಗಳೂರು.
6. ಜಯಲಕ್ಷ್ಮಿ ಸೀತಾಪುರ, 2011, *ಕನ್ನಡದಲ್ಲಿ ಐತಿಹಾಸಿಕ ಜನಪದ ಲಾವಣಿಗಳು,* ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.
7. ದಿವಾಕರ್ ಆರ್. ಆರ್. (ಸಂ.), 2014 (1970), *ಕರ್ನಾಟಕ ಪರಂಪರೆ ಸಂ-2,* ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ.

8. ನರಸಿಂಹಯ್ಯ ಎಸ್.ಕೆ., 1924, *ಮಾಗಡಿ ಕೆಂಪೇಗೌಡ ಬೆಂಗಳೂರು ಸ್ಥಾಪಕ ಮತ್ತು ಆತನ ಪೂರ್ವೀಕರು*, ಬೆಂಗಳೂರು: ಒಕ್ಕಲಿಗರ ಸಂಘದ ಮುದ್ರಾಲಯ.

9. ಮಂಜುನಾಥ್ ಎಂ.ಜಿ., (ಸಂ.) 2006, *ಯಲಹಂಕ ನಾಡಪ್ರಭುಗಳ ಶಾಸನ ಸಂಪುಟ*, ಬೆಂಗಳೂರು: ಶ್ರೀಕೆಂಪೇಗೌಡ ಅಧ್ಯಯನ ಪೀಠ, ಬೆಂಗಳೂರು ವಿಶ್ವವಿದ್ಯಾಲಯ.

10. ರಿತ್ತಿ ಶ್ರೀನಿವಾಸ, (ಸಂ.), 2009, *ಎಪಿಗ್ರಾಫಿಯಾ ಕರ್ನಾಟಿಕ ಸಂಪುಟ–24*, ಮೈಸೂರು: ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ.

11. ಲಿಂಗಯ್ಯ ಡಿ., (ಸಂ.) 2005, *ಯಲಹಂಕ ನಾಡಪ್ರಭುಗಳ ಜಾನಪದ ಸಂಪುಟ*, ಬೆಂಗಳೂರು: ಶ್ರೀಕೆಂಪೇಗೌಡ ಅಧ್ಯಯನ ಪೀಠ, ಬೆಂಗಳೂರು ವಿಶ್ವವಿದ್ಯಾಲಯ,

12. ವಸಂತಲಕ್ಷ್ಮಿ ಕೋ., 1996, 'ಏಕಾಮ್ರ ದೀಕ್ಷಿತನ 'ವೀರಭದ್ರ ವಿಜಯ'ದಲ್ಲಿ ಯಲಹಂಕ ಪ್ರಭುಗಳು', ಕೃಷ್ಣಯ್ಯ ಎಂ.ಎಚ್. ಮತ್ತು ದೇವರಕೊಂಡಾರೆಡ್ಡಿ, (ಸಂ.), *ಬೆಂಗಳೂರು ಕೆಂಪೇಗೌಡರ ವಂಶಸ್ಥರು*, ಪು.35–46, ಬೆಂಗಳೂರು: ಜನತಾ ಶಿಕ್ಷಣ ಸಂಸ್ಥೆ.

13. ವೃಷಭಕುಮಾರ್, 2010, *ಮೈಸೂರು ಜಿಲ್ಲೆಯ ಐತಿಹ್ಯಗಳು ಒಂದು ಅಧ್ಯಯನ*, ಬೆಂಗಳೂರು: ಕರ್ನಾಟಕ ಜಾನಪದ ಅಕಾಡೆಮಿ.

14. ಶಾಮಶಾಸ್ತ್ರಿ ಆರ್.(ಸಂ.), 1971, *ಕಂಠೀರವನರಸರಾಜ ವಿಜಯ*, ಮೈಸೂರು: ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ.

15. ಶಿವಣ್ಣ ಕೆ.ಎಸ್., (ಸಂ.) 1997, *ಕರ್ನಾಟಕ ಚರಿತ್ರೆ ಸಂಪುಟ–3*, ಹಂಪಿ: ಕನ್ನಡ ವಿಶ್ವವಿದ್ಯಾನಿಲಯ.

16. ಶ್ರೀಕಂಠಯ್ಯ ಕರ್ಲಮಂಗಲಂ, (ಸಂ.), 1961, *ಗೌಡಕುಲ ವಿಭೂಷಣ ಕೆಂಪೇಗೌಡನ ಜಯ ಪ್ರಶಸ್ತಿ*, ಕರ್ಲಮಂಗಲಂ ಶಂಕರಪ್ಪ, ಮಾಗಡಿ–ಪೋಸ್ಟ್, ಬೆಂಗಳೂರು–ಜಿಲ್ಲೆ.

17. ಹನುಮಂತಯ್ಯ ಕೆಂಕೆರೆ, 2010, "ಏಳುನಾಡ ಪ್ರಭುಗಳು ಮತ್ತು ಕೂಟ ಶಾಸನಗಳು", (ಗೋಪಾಲ್ ಆರ್. (ಸಂ.), *ನಾಡಪ್ರಭು ಕೆಂಪೇಗೌಡರ ಜೀವನ ಸಾಧನೆಗಳು*, ಪು 57–70, ಮೈಸೂರು: ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ.

18. Caleb Simmon, 2014, 'The Goddess and Vaiṣṇavism in Search for Regional Supremacy: Woḍeyar Devotional Traditions During the Reign of Rāja woḍeyar (1578-1617 CE)', Anil Persaud & Others (Ed.), Indian History, Vol 1. Pp.27-46., Sikharchandi, Bhubaneswar.

19. Satyanarayana A., 1996, *History of the Wodeyars of Mysore (1610-1748)*. Mysore: Directorate of archaeology and museums.

20. Suryanath U. Kamath, (Ed.), 1986, *Bangalore District Gazetteer*, Bangalore.

■



ಕೆಂಪಾಪುರದ
ಸಮಾಧಿ ಸ್ಮಾರಕದ
ಹಿನ್ನೆಲೆಯಲ್ಲಿ
ಬಸವನ ದೇವಾಲಯ



ಸಮಾಧಿ ಸ್ಮಾರಕದ ಮೇಲೆ
ಪೂರ್ವ ಹಾಗೂ ಉತ್ತರ ದಿಕ್ಕಿನ
ಕಟ್ಟೆಯ ಮೇಲೆ ಕಾಣುತ್ತಿರುವ
ಶಾಸನದ ಪಕ್ಷಿನೋಟ



ಸ್ಮಾರಕದ ಪೂರ್ವ ಮುಖದಲ್ಲಿರುವ ಶಾಸನ



ಉತ್ತರ ಮುಖಕ್ಕೆ ಮುಂದುವರಿದಿರುವ ಶಾಸನ ಭಾಗ

ಗತ ಮತ್ತು ವರ್ತಮಾನವನ್ನು ಜೋಡಿಸುತ್ತಾ

❑ ಇಂಗ್ಲಿಶ್ ಮೂಲ:
ರಣ್‌ಬೀರ್ ಚಕ್ರವರ್ತಿ
ಪ್ರೊಫೆಸರ್, ಜವಾಹರ್ ಲಾಲ್ ನೆಹರು ಯುನಿವರ್ಸಿಟಿ, ನವದೆಹಲಿ.
ranbirchakravarthy@mail.jnu.ac.in

❑ ಕನ್ನಡಕ್ಕೆ:
ಪ್ರದೀಪ ಕುಮಾರ್ ಶೆಟ್ಟಿ
ಕೆಂಚನೂರು
ಸರಕಾರಿ ಪದವಿಪೂರ್ವ ಕಾಲೇಜು
ಬೈಂದೂರು.
pradeephistory@gmail.com

ರೊಮಿಲಾ ಥಾಪರ್
ಪ್ರೊಫೆಸರ್ ಎಮೆರೈಟಸ್,
ಜವಾಹರ್ ಲಾಲ್ ನೆಹರು ಯುನಿವರ್ಸಿಟಿ ಅವರೊಂದಿಗಿನ ಸಂದರ್ಶನ.

ಸಂದರ್ಶಕರು :
ರಣ್‌ಬೀರ್ ಚಕ್ರವರ್ತಿ
ಪ್ರೊಫೆಸರ್, ಜವಾಹರ್ ಲಾಲ್ ನೆಹರು ಯುನಿವರ್ಸಿಟಿ, ನವದೆಹಲಿ.

ಕೃತಜ್ಞತೆಗಳು

[ಸೆಪ್ಟಂಬರ್ 18, 2015 ರ *ಫ್ರಂಟ್‌ಲೈನ್* ಪಾಕ್ಷಿಕ ಪತ್ರಿಕೆಯಲ್ಲಿ ಮೂಡಿಬಂದ ಈ ಸಂದರ್ಶನವನ್ನು, ದೂರವಾಣಿ ಮತ್ತು ಇಮೇಲ್ ಮೂಲಕ *ಇತಿಹಾಸ ದರ್ಪಣ* ಬಳಗ ಸಂವಹನ ನಡೆಸಿ, ವಿನಂತಿಸಿದ ಕಾರಣ ವಿಶ್ವಾಸವಿಟ್ಟು ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಲು ಅನುಮತಿ ನೀಡಿದ ರೊಮಿಲಾ ಥಾಪರ್ ಅವರಿಗೂ, ಸಂದರ್ಶನ ನಡೆಸಿದ ರಣ್‌ಬೀರ್ ಚಕ್ರವರ್ತಿ, ಅವರಿಗೂ ಮತ್ತು ಫ್ರಂಟ್‌ಲೈನ್ ಪತ್ರಿಕೆಯ ಸಂಪಾದಕರಾದ ಆರ್. ವಿಜಯಶಂಕರ್ ಅವರಿಗೂ ಕೃತಜ್ಞತೆಗಳು. ಈ ಸಂದರ್ಶನವು ನಾಲ್ಕು ಭಾಗಗಳಲ್ಲಿ ಪ್ರಕಟವಾಗಲಿದೆ.]

ಭಾಗ – 1

ಜವಹರ್ ಲಾಲ್ ನೆಹರು ಯುನಿವರ್ಸಿಟಿಯ ಪ್ರೊಫೆಸರ್ ಎಮೆರೈಟಸ್ ಆಗಿರುವ ರೊಮಿಲಾ ಥಾಪರ್ ಭಾರತದ ಮತ್ತು ಜಗತ್ತಿನ ಬಹುದೊಡ್ಡ ಮತ್ತು ಸೆಲೆಬ್ರೇಟೆಡ್ ಚರಿತ್ರಕಾರ್ತಿ. ಥಾಪರ್ ಖ್ಯಾತಿ ಪಡೆದಿದ್ದು ಮುಖ್ಯವಾಗಿ ಅವರು ಪ್ರಾಚೀನ ಭಾರತದ ಚರಿತ್ರೆಗೆ ನೀಡಿದ ಹಲವು ವ್ಯಾಖ್ಯಾನಗಳಿಗಾಗಿ. ಅವರ ದಣಿವರಿಯದ ಯತ್ನವು ಅತಿಮುಖ್ಯವಾಗಿ ಚರಿತ್ರೆಯೆಂಬ ಅಧ್ಯಯನ ವಿಷಯದ ಸ್ಥಿತ್ಯಂತರಕ್ಕೆ ಕಾರಣವಾಯಿತು. ಅಂದರೆ ಭಾರತದಲ್ಲಿ

ಇಂಡಾಲಜಿಯ ಅವಸ್ಥೆಯಿಂದ ಚರಿತ್ರೆಯು ಕೊಡವಿಕೊಂಡು, ಸಮಾಜ ವಿಜ್ಞಾನಗಳ ನೆರೆ ಮತ್ತು ಸಹಾಯದಿಂದ ಸ್ವತಂತ್ರ ಸ್ಥಿತಿಯನ್ನು ಸಾಧಿಸಿದ್ದು ಇವರ ಅಧ್ಯಯನ ಮತ್ತು ಕೊಡುಗೆಯಿಂದಾಗಿ. ಇವರ ದಣಿವರಿಯದ ಅಧ್ಯಯನ ಮತ್ತು ಯತ್ನಗಳಿಂದಾಗಿ ಉಪಖಂಡದ ಚರಿತ್ರೆಯು ಹಲವು ಪ್ರಶ್ನೆ, ತನಿಖೆ ಮತ್ತು ವ್ಯಾಖ್ಯಾನಗಳನ್ನೂ ಕೂಡಾ ಪಡೆಯಿತು. ಇದು ಬರಿಯ ಅನುಭವಜನ್ಯತೆಯ ಶ್ರೀಮಂತಿಕೆಯನ್ನು ಮಾತ್ರ ಉಂಟುಮಾಡದೇ ಪ್ರಾಚೀನ ಭಾರತದ ಚರಿತ್ರೆಯ ಅಧ್ಯಯನವನ್ನು ಇತರ ಅನೇಕ ಸಮಾಜ ವಿಜ್ಞಾನ ಮತ್ತು ಮಾನವಿಕ ವಿಜ್ಞಾನಗಳಾದ ಸಮಾಜಶಾಸ್ತ್ರ, ಸಾಮಾಜಿಕ ಮತ್ತು ಸಾಂಸ್ಕೃತಿಕ ಮಾನವಶಾಸ್ತ್ರ, ಭೂಗೋಳಶಾಸ್ತ್ರ ಮತ್ತು ರಾಜ್ಯಶಾಸ್ತ್ರಗಳೊಂದಿಗೂ ಕೂಡ ಐಕ್ಯಗೊಳಿಸಿತು. ಇದರ ಪರಿಣಾಮವಾಗಿ ಪ್ರಾಚೀನ ಭಾರತದ ಚರಿತ್ರೆಯಲ್ಲಿ ವಂಶಗಳ ಕಥನದ ವಿವರಣೆ ಹಾಗೂ ಕಾಲಾನುಕ್ರಮಣಿಕೆ ಹಿಂದೆ ಸರಿದು ಗತದ ಬಗೆಗೆ ಒಂದು ರೀತಿಯ ವಿಶಿಷ್ಟವಾದ ಸಿಂಹಾವಲೋಕನವನ್ನು ಸಾಧಿಸುವ ಕ್ರಮದ ಒಂದು ಸ್ಥಿತ್ಯಂತರವು ಕಂಡುಬಂದಿತು. ಈ ಒಂದು ಪ್ರಯತ್ನದಲ್ಲಿ ಥಾಪರ್ ಮತ್ತೆ ಮತ್ತೆ ಇತಿಹಾಸ ಲೇಖನಶಾಸ್ತ್ರದ (ಹಿಸ್ಟೋರಿಯೋಗ್ರಫಿ) ಮಾದರಿಯಲ್ಲಿ ಆಗುತ್ತಿರುವ ಬದಲಾವಣೆ ಮತ್ತು ವಿಶ್ಲೇಷಣೆ ಮತ್ತು ಗತದ ಅಧ್ಯಯನದಲ್ಲಿ ಚರಿತ್ರಕಾರರ ಪ್ರಶ್ನೆಗಳ, ವೈಧಾನಿಕತೆಯ ಮತ್ತು ಮುಖಾಮುಖಿಯಲ್ಲುಂಟಾದ ಪಲ್ಲಟದ ಕುರಿತು ಎಚ್ಚರಿಸಿದರು. ಇಂತಹ ಎಲ್ಲಾ ಪ್ರಯತ್ನಗಳೂ ಕೂಡಾ ವರ್ತಮಾನದೊಂದಿಗೆ ಆತ್ಮೀಯ ನೆಲೆಯಲ್ಲಿ ಮಿಳಿತ ಗೊಂಡಿರುವುದೆಂದರು. ಈ ನೆಲೆಯಲ್ಲಿ ಥಾಪರ್ ನಡೆಸಿದ ಗತದ ನಿರ್ದಿಷ್ಟವಾದ ತನಿಖೆಯು, ಗತವು ಸಮಕಾಲೀನ ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯದ ಪರಿಸ್ಥಿತಿಯ ಜತೆಗೆ ಕಾರ್ಯನಿರ್ವಹಿಸುವ ಹಾಗೂ ಸಾಗುವ ಬಗೆಯನ್ನೂ ಕೂಡಾ ಸಮರ್ಪಕವಾಗಿ ವಿವರಿಸಿದರು.

ಪ್ರೊಫೆಸರ್ ಥಾಪರ್ ತಮ್ಮ ಪಿ.ಹೆಚ್.ಡಿ ಅನ್ನು ಲಂಡನ್ ಯುನಿವರ್ಸಿಟಿಯ 'ಸ್ಕೂಲ್ ಆಫ್ ಒರಿಯಂಟಲ್ ಅಂಡ್ ಆಫ್ರಿಕನ್ ಸ್ಟಡೀಸ್' (ಸೋಆಸ್) ನಿಂದ ಪ್ರೊಫೆಸರ್ 'ಎ.ಎಲ್.ಭಾಷಮ್' ಅವರ ಮಾರ್ಗದರ್ಶನದಲ್ಲಿ ಪಡೆದರು. ಮೌರ್ಯನ್ ಅವಧಿಗೆ ಸಂಬಂಧಿಸಿದ ಅವರ ಪಿ.ಹೆಚ್.ಡಿ ಪ್ರಬಂಧವು ತದನಂತರ *ಅಶೋಕ ಅಂಡ್ ದಿ ಡಿಕ್ಲೈನ್ ಆಫ್ ದಿ ಮೌರ್ಯಾಸ್* ಎನ್ನುವ ಪ್ರಸಿದ್ಧ ಪುಸ್ತಕದ ರೂಪದಲ್ಲಿ ಅಚ್ಚಾಯಿತು. ಈ ಕೃತಿಯಲ್ಲಿ ಥಾಪರ್, ಅಶೋಕ ಮತ್ತು ಮೌರ್ಯರ ಆಡಳಿತವನ್ನು, ಈ ಅವಧಿಯ ಪ್ರಾಥಮಿಕ ಆಕರಗಳ ವಿಮರ್ಶಾತ್ಮಕ ಓದಿನೊಂದಿಗೆ ಸಮಾಜೋ-ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಮತ್ತು ಭೌತಿಕ ಪರಿಸ್ಥಿತಿಯ(ಮಿಲಿಯೂ) ಹಿನ್ನೆಲೆಯೊಂದಿಗೆ ನೋಡಿ ಅಧ್ಯಯನಿಸಿದರು. ಈ ಕೃತಿ ಪ್ರಾಚೀನ ಭಾರತದ ಇತಿಹಾಸ ಲೇಖನಶಾಸ್ತ್ರದ ಮೇಲೆ ದೀರ್ಘತರವಾದ ಪ್ರಭಾವ ಮತ್ತು ಪರಿಣಾಮವನ್ನು ಉಂಟುಮಾಡಿತು. ಪ್ರೊಫೆಸರ್ ಥಾಪರ್ ಅವರು ಪ್ರಾಚೀನ ಭಾರತದ ಅಥವಾ ಆರಂಭಿಕ ಭಾರತದ ಸಾಮಾಜಿಕ ಇತಿಹಾಸದ ಬಗೆಗೆ ರಚಿಸಿದ ಬರಹರೂಪೀ ಯೋಗದಾನಗಳು ಅವರ ಅನೇಕ ಕೃತಿಗಳಲ್ಲಿ ವ್ಯಕ್ತವಾಗಿ ಹರಡಿಕೊಂಡಿವೆಯಾದರೂ ಕೂಡಾ ಅವುಗಳಲ್ಲಿ ಅತ್ಯಂತ ಗಮನಾರ್ಹವಾದುದೆಂದರೆ, *ಏನ್ಷಿಯಂಟ್ ಇಂಡಿಯನ್ ಸೋಶಿಯಲ್ ಹಿಸ್ಟ್ರಿ ಅಂಡ್ ಇಂಟರ್‌ಪ್ರಿಟಿಂಗ್ ಅರ್ಲಿ ಇಂಡಿಯಾ* ಕೃತಿ. ಸುಮಾರು 1980ರ ದಶಕದಿಂದ ಪ್ರೊಫೆಸರ್ ಥಾಪರ್ ಅವರು ಅರ್ಲಿ ಸ್ಟೇಟ್ ಅಥವಾ ಆರಂಭಿಕ ರಾಜ್ಯವ್ಯವಸ್ಥೆ ಬಗ್ಗೆ ನಡೆಸಿದ ದಣಿವರಿದ ಅಧ್ಯಯನ (*ಫ್ರಂ ಲೀನಿಯೇಜ್ ಟು ಸ್ಟೇಟ್, ದಿ ಮೌರ್ಯಾಸ್ ರಿವಿಸಿಟೆಡ್*) ಚಾರಿತ್ರಿಕ ಸಂಶೋಧನೆಯಲ್ಲಿ

ಹೊಸ ಸಂಶೋಧನೆಯ ಕ್ಷೇತ್ರಗಳನ್ನೇ ಹುಟ್ಟುಹಾಕಿತು. ಇಲ್ಲಿಯ ಅಧ್ಯಯನಗಳಲ್ಲಿ ಥಾಪರ್, ಪ್ರಾಚೀನ ಭಾರತದ ಸ್ಟೇಟ್ ಫಾರ್ಮೇಶನ್ ಬಗ್ಗೆ ಹೊಸ ಒಳನೋಟಗಳನ್ನು ನೀಡುತ್ತಾರೆ, ವಿಶೇಷವಾಗಿ ಸಂಕೀರ್ಣ ಸಮಾಜೋ-ರಾಜಕೀಯ ಮತ್ತು ಸೈದ್ಧಾಂತಿಕ ಮೂಲಾಂಶಗಳು ಅರ್ಲಿ ಇಂಡಿಯಾದ ಸ್ಟೇಟ್ ಫಾರ್ಮೇಶನ್ ಅನ್ನು ರೂಪಿಸಲು ಕಾರಣವಾದ ಸಂಗತಿಯ ಮೇಲೆ ವಿಶೇಷ ಬೆಳಕನ್ನು ಹರಿಸುವುದರೊಂದಿಗೆ. ಪ್ರೊಫೆಸರ್ ಥಾಪರ್ ಅವರ ಅತಿ ಪ್ರಮುಖ ಆಸಕ್ತಿ ಹುದುಗಿರುವುದು ಪ್ರಾಚೀನ ಭಾರತದ ಸಾಮಾಜಿಕ ಚರಿತ್ರೆಯಲ್ಲಿ. ಆದ್ದಾಗ್ಯೂ ಅವರು ವಿಪುಲವಾಗಿ ಆರ್ಥಿಕ ಚರಿತ್ರೆಯ ಮೇಲೆ ಕೂಡಾ ಬರವಣಿಗೆಯನ್ನು ಮಾಡಿದ್ದಾರೆ(ಅರಣ್ಯದ ಮೇಲೆ, ವೃತ್ತಿಪರ ಸಂಘಗಳ ಮೇಲೆ ಮತ್ತು ವ್ಯಾಪಾರದ ಮೇಲೆ). ಇತ್ತೀಚಿನ ದಶಕಗಳಲ್ಲಿ ಥಾಪರ್, ಸಾಂಸ್ಕೃತಿಕ ಚರಿತ್ರೆಯಲ್ಲಿ ತಮ್ಮ ಅದಮ್ಯ ಆಸಕ್ತಿಯನ್ನು ತೋರಿಸುತ್ತಿದ್ದಾರೆ, (ಇದು ಪೋಸ್ಟ್ ಕಲನಿಯಲ್ ಅಧ್ಯಯನ ಮತ್ತು ಪೋಸ್ಟ್ ಮಾಡರ್ನ್ ಅಧ್ಯಯನದಿಂದ ಪ್ರಣೀತವಾದ ಕಲ್ಚರಲ್ ಸ್ಟಡೀಸ್‌ಗಿಂತ ಭಿನ್ನ) ಮತ್ತದು ಸಾಬೀತಾಗುವುದು ಅವರ *ಶಾಕುಂತಲಾ* ಹಾಗೂ *ಸೋಮನಾಥ: ಮೆನೀ ವಾಯ್ಸಸ್ ಆಫ್ ಎ ಹಿಸ್ಟ್ರಿ* ಕೃತಿಗಳಿಂದ. ಅವರ ಆಸಕ್ತಿಯ ಇನ್ನೊಂದು ಕ್ಷೇತ್ರ ಇತಿಹಾಸ-ಪುರಾಣ ಸಂಪ್ರದಾಯದ ಅಧ್ಯಯನದ್ದು ಮತ್ತು ಅದೇ ಹೊತ್ತಿಗೇ ಚರಿತ್ರೆಯ ಆಧುನಿಕ ಶಿಸ್ತಿನ ಅಧ್ಯಯನ ಕೂಡಾ. ಅವರು ಅತ್ಯಂತ ಸಮರ್ಥವಾಗಿ ಭಾರತದ ಚರಿತ್ರೆಯ ಬಗೆಗಿನ ಯುರೋಪ್ ಕೇಂದ್ರಿತ ಪರಿಕಲ್ಪನೆಯಾದ, ಅತ್ಯಂತ ಕ್ಲಾಸಿಕ್ ಮಾದರಿಯೆಂಬಂತೆ ಕಂಡುಬರುವ ಭಾರತೀಯರ ಅ-ಚಾರಿತ್ರಿಕ ಪ್ರಜ್ಞೆಯನ್ನು ತಾತ್ವಿಕವಾಗಿ ವಿರೋಧಿಸಿದರು ಹಾಗೂ ಚಾಕ್ರಿಕ ಮತ್ತು ರೇಖೀಯ ದೃಷ್ಟಿಯ ಕಾಲದ ಪರಿಕಲ್ಪನೆಯನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸಿದರು. ಥಾಪರ್ ಅವರ ಕೃತಿಗಳಲ್ಲಿ ಅತ್ಯಂತ ಹೆಚ್ಚು ಓದಲ್ಪಟ್ಟ, *ಅರ್ಲಿ ಇಂಡಿಯಾ: ಫ್ರಂ ದಿ ಒರಿಜಿನ್ಸ್ ಟು ಎ.ಡಿ. 1300*, ಪ್ರಾಚೀನ ಭಾರತದ ಬಗೆಗಿನ ಒಂದು ವಿದ್ವತ್ ಪೂರ್ಣ ಕೃತಿಯಾಗಿದೆ. ಈ ಕೃತಿ ಇವರ ಈ ಮೊದಲಿನ ಕೃತಿಯಾದ, *ಹಿಸ್ಟ್ರಿ ಆಫ್ ಇಂಡಿಯಾ ವಾಲ್ಯುಮ್-1* ರ ವಿಸ್ತೃತ ಪರಿಷ್ಕೃತ ಆವೃತ್ತಿ. ನಂತರದ ಆವೃತ್ತಿಯಲ್ಲಿನ ಮಾರ್ಪಾಡುಗಳು, ವಿಸ್ತೃತ ವಿವರಣೆಗಳು ಮತ್ತು ಸೇರ್ಪಡೆಗಳು (ಥಾಪರ್ ಅವರು ಆಕರ್ಷಕ ಮತ್ತು ಸದಭಿರುಚಿಯಿಂದ ಹೇಳುವ ಹಾಗೆ ಆತ್ಮವೃತ್ತಾಂತದ ಹಾಗಿನ) ಅತ್ಯಂತ ಸ್ಪಷ್ಟವಾಗಿ ಅವರು ಹೊಸ ದತ್ತಾಂಶ-ಆಧಾರಗಳನ್ನು, ಹೊಸ ವ್ಯಾಖ್ಯಾನದ ಮಾದರಿಗಳನ್ನು ಮತ್ತು ನವೀನ ದೃಷ್ಟಿಕೋನಗಳನ್ನು ಗ್ರಹಿಸಿ ಗಳಿಸಲು ಉತ್ಸುಕರಾಗಿ ಕಾತರರಾದ ಬಗೆಯನ್ನು ತೋರುತ್ತದೆ. ಈ ನೆಲೆಯಲ್ಲಿ ಪ್ರೊಫೆಸರ್ ಥಾಪರ್, ಸರ್ವದಾ ಪ್ರಜ್ಞೀಯವಾಗಿರುವ ಮತ್ತು ತನ್ನ ನಿಲುವನ್ನು ಪರಿಷ್ಕಾರಕ್ಕೊಳಪಡಿಸಿಕೊಳ್ಳುವ ರೀತಿಯಲ್ಲಿ ಕಾಣಿಸುತ್ತಾರೆ. ಇದು ಚರಿತ್ರೆ ವಿಷಯದ ಬಗೆಗೆ ಅವರ ದೃಢ ಬದ್ಧತೆಯನ್ನು ಮತ್ತು ಚರಿತ್ರೆಕಾರ ಕೂಡಾ ಬದಲಾಗುತ್ತಾನೆ ಎನ್ನುವ ಸಂಗತಿಯ ಮೇಲೆ ಬೆಳಕು ಹರಿಸುತ್ತದೆ. ಏಕೆಂದರೆ, ಅದು ಚರಿತ್ರೆ ಎಂಬ ವಿಷಯದ ದ್ಯೋತಕ ಕೂಡಾ ಹೌದು. ಗತದ ಕೋಮುವಾದೀ ಮತ್ತು ಮೂಲಭೂತವಾದೀ ವ್ಯಾಖ್ಯಾನಗಳ ಬಗ್ಗೆ ಮತ್ತು ಅಷ್ಟೇನೂ ಜನಪ್ರಿಯವಲ್ಲದ ಅಶಿಸ್ತಿನ ವ್ಯಾಖ್ಯಾನಗಳ ಬಗ್ಗೆ ಪ್ರೊಫೆಸರ್ ಥಾಪರ್ ಸರ್ವದಾ ವಿಮರ್ಶೀಯ ನೆಲೆಯಲ್ಲಿ ಮುಖಾಮುಖಿಯಾಗುತ್ತಾ ಬಂದವರು. ಪ್ರೊಫೆಸರ್ ಥಾಪರ್ ಅವರಿಗೆ ದೇಶ ಮತ್ತು ವಿದೇಶದ ಅನೇಕ ಪ್ರಶಸ್ತಿ ಪುರಸ್ಕಾರಗಳು ಸಂದಿವೆ. 2005 ರಲ್ಲಿ ಚರಿತ್ರೆ ವಿಷಯದಲ್ಲಿ ಮಾಡಿದ ಜೀವಮಾನದ ಸಾಧನೆಗಾಗಿ ಅಮೇರಿಕಾದ 'ಲೈಬ್ರೆರಿ ಆಫ್ ಕಾಂಗ್ರೆಸ್' ಸಂಸ್ಥೆ 'ಕ್ಲುಗ್ ಪ್ರಶಸ್ತಿ'ಯನ್ನು ನೀಡಿದೆ. ಪ್ರೊಫೆಸರ್ ಥಾಪರ್ ಅವರು 'ಇಂಡಿಯನ್ ಹಿಸ್ಟ್ರಿ

ಕಾಂಗ್ರೆಸ್' ನ 1983ರ ಅಧಿವೇಶನದ ಸರ್ವಾಧ್ಯಕ್ಷರಾಗಿ(ಜನರಲ್ ಪ್ರೆಸಿಡೆಂಟ್) ಆಗಿ ಆಯ್ಕೆಯಾಗಿದ್ದಾರೆ. ಅವರು 'ಸ್ಕೂಲ್ ಆಫ್ ಒರಿಯಂಟಲ್ ಅಂಡ್ ಆಫ್ರಿಕನ್ ಸ್ಟಡೀಸ್'ನ 'ಹಾನರರಿ ಫೆಲೊ' ಮತ್ತು 'ಆಕ್ಸ್‌ಫರ್ಡ್ ಯುನಿವರ್ಸಿಟಿ'ಯ 'ಲೇಡಿ ಮಾರ್ಗರೇಟ್ ಹಾಲ್' ಫೆಲೋ ಆಗಿದ್ದಾರೆ.

ಈ ಸಂದರ್ಶನದಲ್ಲಿ ಪ್ರೊಫೆಸರ್ ಥಾಪರ್ ಸುದೀರ್ಘವಾಗಿ ಗತ-ಪ್ರತ್ಯೇಕಿತ ಮತ್ತು ಇತ್ತೀಚಿನ ಎಂಬ ವಿದ್ಯಮಾನವು ಹೇಗೆ ವರ್ತಮಾನದ ಜತೆ ಜೋಡಿತವಾಗಿದೆ ಎನ್ನುವುದನ್ನು ಚರ್ಚಿಸುತ್ತಾರೆ. ಇದಲ್ಲದೇ ಸಮಕಾಲೀನತೆ ಮತ್ತು ವರ್ತಮಾನ ಮತ್ತು ಪ್ರಸಕ್ತ ಸ್ಥಿತಿಗಳು ಗತದ ಅಧ್ಯಯನವನ್ನು ಹಾಗು ಅಧ್ಯಯನದಲ್ಲಿನ ಆಯ್ಕೆಯನ್ನು ನಿರ್ಧರಿಸುತ್ತದೆ ಮತ್ತು ರೂಪಿಸುತ್ತದೆ ಎನ್ನುವುದನ್ನು ಚರ್ಚಿಸುತ್ತಾರೆ. ಅವರ ಹೇಳಿಕೆಗಳು ಗತದ ಅಧ್ಯಯನದ ಸಂದರ್ಭದಲ್ಲಿ ಒಂದು ರೀತಿ ಹೆಚ್ಚಿನ ಎಚ್ಚರವನ್ನು ಮತ್ತು ಸಂವೇದನೆಯನ್ನು ಉಂಟುಮಾಡುತ್ತವೆ. ವಿಶೇಷವಾಗಿ ಚರಿತ್ರೆಯನ್ನು ಹೊರತುಪಡಿಸಿದ ಅನೇಕ ಅಧ್ಯಯನ ವಿಷಯಗಳು ಅಕಡಮಿಕ್ ಮತ್ತು ವೃತ್ತಿಪರ ನೆಲೆಗಳಿಂದ ಅಧ್ಯಯನಕ್ಕೊಳಪಡುವ ರೀತಿಯಲ್ಲಿಯೇ ಚರಿತ್ರೆ ಕೂಡಾ ಆಗಬೇಕು ಎನ್ನುವ ಅರಿವು ಕೂಡಾ ಹೌದು. ಥಾಪರ್ ಭಾರತದಲ್ಲಿ ಅಸ್ತಿತ್ವದಲ್ಲಿರುವ ಬಹುತ್ವದ ಸಂಪ್ರದಾಯಗಳನ್ನು ದಮನಿಸಿ, ಸಾಂಸ್ಕೃತಿಕ ರಾಷ್ಟ್ರವಾದದ ಹೆಸರಿನಲ್ಲಿ ಗತದ ಏಕರೂಪೀಕರಣವನ್ನು ನಡೆಸುವ ಪ್ರಯತ್ನದ ವಿರುದ್ಧ ಗಂಭೀರವಾಗಿ ತಕರಾರು ಎತ್ತುತ್ತಾರೆ. ಮೇಲಾಗಿ ಗತವನ್ನು ಅರ್ಥಮಾಡಿಕೊಳ್ಳುವ ಸಲುವಾಗಿ ಎತ್ತಬೇಕಾದ ಅನೇಕ ಪ್ರಶ್ನೆಗಳನ್ನು ಮತ್ತು ವರ್ತಮಾನವನ್ನು ಒಂದು ಸಮಗ್ರ ನೆಲೆಯಲ್ಲಿ ಅರ್ಥೈಸಿಕೊಳ್ಳುವ ಸಲುವಾಗಿ ಥಾಪರ್ ನಡೆಸುತ್ತಿರುವ ಸತತ ಪರಿಶ್ರಮ ಮತ್ತು ಪ್ರೇರಣೆಯ ರೂಪದಲ್ಲಿ ಕೂಡಾ ಈ ಸಂದರ್ಶನವನ್ನು ನೋಡಬಹುದು.

ರಣಬೀರ್ ಚಕ್ರವರ್ತಿ: ನಿಮ್ಮ ಸದ್ಯದ ಪುಸ್ತಕ *ದಿ ಪಾಸ್ಟ್ ಆಸ್ ಪ್ರೆಸೆಂಟ್* ಓದುತ್ತಿದ್ದರೆ ಭಾರತದಲ್ಲಿ ಚರಿತ್ರೆಯ ಸಾಮಾನ್ಯವಾದ ದೃಷ್ಟಿಯ ಬಗ್ಗೆ ಮತ್ತು ಚರಿತ್ರೆಯ ಅಧ್ಯಯನದ ಸ್ಥಿತಿಯ ಬಗ್ಗೆ ತುಸು ಕಳವಳವನ್ನು ವ್ಯಕ್ತಪಡಿಸಿದ ಹಾಗಿದೆ. ನೀವು ಆಶಾವಾದದ ಧ್ವನಿಯನ್ನು ವ್ಯಕ್ತಪಡಿಸಿದ ಹಾಗಿಲ್ಲ, ಅದರೆ ನಿರಾಶಾವಾದಿಯೂ ಆಗಿಲ್ಲ. ಆದರೆ ನೀವು ಸ್ಪಷ್ಟವಾಗಿ, ನಿರ್ಬಿಢೆಯಿಂದ ಅಭಿವ್ಯಕ್ತಿಸಿದ್ದೀರಿ. ಈ ವಿದ್ಯಮಾನದ ವಿವರಣೆ ಸಾಧ್ಯವೇ?

ನಿಮ್ಮ ಪ್ರಶ್ನೆ, ಭಾರತದಲ್ಲಿ ಚರಿತ್ರೆಯು ಮತ್ತು ಚರಿತ್ರೆಯ ಅಧ್ಯಯನವು ಕಳೆದ ಕೆಲವು ದಶಕಗಳಲ್ಲಿ ಅನುಭವಿಸಿದ ಸ್ಥಿತಿಯ ಬಗ್ಗೆ. ನಾನು ಹೇಳಿದ ಹಾಗೆ ಎರಡು ನೆಲೆಯಲ್ಲಿ ಚರಿತ್ರೆಯನ್ನು ಓದಲಾಗುತ್ತಿದೆ, ಅಧ್ಯಯನ ಮಾಡಲಾಗುತ್ತಿದೆ ಅಥವಾ ಕಥಿಸಲಾಗುತ್ತಿದೆ. ಒಂದನೆಯ ಹಂತ ಅಥವಾ ನೆಲೆ ಎಂದರೆ, ಅಕಡಮಿಕ್ ಚರಿತ್ರೆಕಾರರು ಓದಿ ಬರೆದು ಕಾಲೇಜ್ ಮತ್ತು ಯೂನಿವರ್ಸಿಟಿಗಳಲ್ಲಿ ನಡೆಸುತ್ತಿರುವ ಸಂವಾದದ ಸ್ವರೂಪದ್ದು. ಸುಮಾರು 50 ವರ್ಷಗಳ ಹಿಂದೆ ಬೋಧಿಸಲಾಗುತ್ತಿದ್ದ ಸ್ಥಿತಿಯನ್ನು ನೋಡುತ್ತಾ, ಆ ದಿನಗಳಲ್ಲಿ ಚರಿತ್ರೆ ಬರವಣಿಗೆಯ ದಿಕ್ಕು ದೆಸೆಗಳಲ್ಲಿ ನಾವು ಹೊಂದಿದ್ದ ಬಿಕ್ಕಟ್ಟು, ಹೋರಾಟಗಳನ್ನು ನೋಡುತ್ತಾ ಸಾಗಿದರೆ ಆ ರೀತಿಯ ದಿಕ್ಕು ದೆಸೆಗಳು ಮತ್ತು ಅವುಗಳ ಈಗಿನ ಸ್ವರೂಪ ಗಣನೀಯ ಬದಲಾವಣೆಗಳನ್ನು ಹೊಂದಿರುವುದನ್ನು ಕಾಣಬಹುದು. ಕಳೆದು ಹೋದ ದಿನಗಳ ಬಗ್ಗೆ ನನಗೆ ತೃಪ್ತಿ ಇದೆ. ಆದಾಗ್ಯೂ ಅವುಗಳು ಭಾರತದ ಎಲ್ಲಾ ಯುನಿವರ್ಸಿಟಿಗಳಲ್ಲಿ ನಡೆದಿದೆ ಎನ್ನಬಹುದಾದ ಬದಲಾವಣೆ ಏನೂ ಅಲ್ಲ. ಅನೇಕ

ಲೇಖನದಾದ್ಯಂತ ದಪ್ಪ ಅಕ್ಷರಗಳಲ್ಲಿರುವುದು ಸಂದರ್ಶಕರಾದ ರಣಬೀರ್ ಚಕ್ರವರ್ತಿಯವರ ಪ್ರತಿಕ್ರಿಯೆಗಳು ಅಥವಾ ಪ್ರಶ್ನೆಗಳು –ಸಂ.

ಬೋಧನಾ ಕೇಂದ್ರಗಳಲ್ಲಿ ಚರಿತ್ರೆಯ ಭೋಧನೆ ಮತ್ತು ಕಲಿಕೆ ಇನ್ನೂ ಆಶಾದಾಯಕವಾಗಿಲ್ಲ. ಇದರ ಹೊರತಾಗಿಯೂ ಇಂದು ಅನೇಕ ಜನ ಚರಿತ್ರಕಾರರು ಚರಿತ್ರೆಯನ್ನು ಒಂದು ಸೋಶಿಯಲ್ ಸೈನ್ಸ್ ಆಗಿ ಪರಿಗಣಿಸುತ್ತಾ ಅದರ ಅಕಡಮಿಕ್ ತತ್ವ ಮತ್ತು ತಳಪಾಯಗಳನ್ನು ಗಂಭೀರವಾಗಿ ಪರಿಗಣಿಸುತ್ತಿದ್ದಾರೆ. ಬಹುಶಃ ಇಂತಹ ನೆಲೆ ಮತ್ತು ನಿಲುವುಗಳು ಆಶಾದಾಯಕವಾಗಿವೆ ಮತ್ತು ಇದು ವ್ಯಾಪಿಸಿ ವಿಸ್ತರಿಸುತ್ತಿದೆ ಕೂಡಾ.

ಆದಾಗ್ಯೂ ಚರಿತ್ರೆ ಇನ್ನೊಂದು ನೆಲೆಯಲ್ಲಿ ಅಭಿವ್ಯಕ್ತವಾಗುತ್ತಿರುವ ಕ್ರಮ, ಅದು ನಾನು ಈ ಮೇಲೆ ಹೇಳಿದ ನೆಲೆಗಿಂತ ತೀರಾ ವಿರುದ್ಧವಾದುದೆಂದೇ ನನ್ನ ಮನೋಭಾವನೆ. ಅದು ಯಾವುದೆಂದರೆ, ಸಾಮಾನ್ಯ ನಾಗರಿಕರಿಗೆ ಪರಿಚಿತವಾಗಿರುವ ಜನಪ್ರಿಯವಾದ ಚರಿತ್ರೆಯ ಬಗೆ. ಇದು ಒಂದೋ ಶತಮಾನಗಳಷ್ಟು ಹಿಂದೆಯೇ ಕಾಲಭಾದಿತವಾದ ಚರಿತ್ರೆಯ ಬೋಧನ ಕ್ರಮದಿಂದಾಗಿ ನರಳುತ್ತಿದೆ. ಅಥವಾ ಅಂತಹ ಕ್ರಮ ಚರಿತ್ರೆಯೇ ಆಗಿರದ ಕ್ರಮದಿಂದಾಗಿ ಸೊರಗಿದೆ. ಇಲ್ಲಿ ಪದೇ ಪದೇ ಅರ್ಥ ಮತ್ತು ವಿವೇಚನಾರಹಿತ ಪ್ರಶ್ನೆಗಳನ್ನೇ ಕೇಳಲಾಗುತ್ತಿದೆ ಮತ್ತು ಚರಿತ್ರೆಯ ಬಗೆಗಿನ ಜ್ಞಾನದ ಕೊರತೆಯಿಂದಾಗಿ ಗತದ ಬಗೆಗೆ ಸರಳ ಮತ್ತು ಎಲ್ಲಾ ಬಗೆಯ ಸಾಮಾನ್ಯೀಕೃತ ಹೇಳಿಕೆಗಳನ್ನು ಇಲ್ಲಿ ಮಾಡಲಾಗುತ್ತಿದೆ. ಸಾರ್ವಜನಿಕ ವಲಯದಲ್ಲಿ ಈ ರೀತಿಯ ಚರಿತ್ರೆಯನ್ನು ವೃತ್ತಿಪರರಲ್ಲದ ಅಕಡಮಿಕ್ ಅಲ್ಲದ ಚರಿತ್ರೆಕಾರರು ಹಬ್ಬಿಸುತ್ತಿದ್ದಾರೆ. ಇದೇ ರೀತಿಯ ಆವೃತ್ತಿಯನ್ನು ಶಾಲೆ ಮತ್ತು ಕಾಲೇಜುಗಳಲ್ಲಿಯೂ ಕೂಡಾ ನಾವು ನೋಡಬಹುದಾಗಿದೆ. ನಾವು ಇಂದಿಗೂ ಕೂಡಾ ಚರಿತ್ರೆ ಬೋಧನೆ ಮತ್ತು ಅರ್ಥೈಸಿಕೊಳ್ಳುವಲ್ಲಿ ಅನೇಕ ಹಳೆಯ ವಿಧಾನಗಳನ್ನೇ ಬಳಸುತ್ತಿದ್ದೇವೆ. ಹೀಗಾಗಿ ದಿನಾಂಕಗಳು ಮತ್ತು ಘಟನೆಗಳು ಮತ್ತು ಕಂಠಸ್ಥ ಅಥವಾ ಸ್ಮರಣೆ ಮಾಡಿಕೊಳ್ಳಬೇಕಾದ ಮಾಹಿತಿಗಳ ಬಗ್ಗೆ ಹೆಚ್ಚು ಪ್ರಾಧಾನ್ಯತೆಯನ್ನು ನೀಡುತ್ತಿದ್ದೇವೆ. ಯಾರೋ ಹೇಳಿದ ಹಾಗೆ ಚರಿತ್ರೆಯ ತರಗತಿಯಲ್ಲಿ ನೀಡುವ ನೋಟ್ಸ್‌ಗಳನ್ನು ನೋಡುತ್ತಿದ್ದರೆ ಅವುಗಳು ಒಂದು ಕಡೆ ನಂಬರ್ ಮತ್ತು ಇನ್ನೊಂದು ಕಡೆ ಹೆಸರು ಇರುವ ಟೆಲಿಫೋನ್ ಡೈರೆಕ್ಟರಿಯ ಹಾಗೆ ಕಾಣಿಸುತ್ತವೆ.

'ದಿ ಹಿಸ್ಟೋರಿಕಲ್ ಮೆಥಡ್'

ತುಂಬಾ ದುಃಖಕರವಾದ ವಿಷಯವೇನಂದರೆ, ಜನರು ಇನ್ನೂ ಕೂಡ ಚರಿತ್ರೆಯನ್ನು ಗತದ ಬಗೆಗಿನ ಬರಿಯ ಮಾಹಿತಿ ಎಂದೇ ತಿಳಿದಿರುವುದು. ಇಂತಹ ಮನೋಭಾವ ಈಗೀಗ ಚರಿತ್ರೆಯ ಅಧ್ಯಯನದ ಸಂದರ್ಭದಲ್ಲಿ ತುಸು ಕಡಿಮೆಯಾಗುತ್ತಿದೆ. ಬರೀ ಗತವನ್ನು ಅರ್ಥ ಮಾಡಿಕೊಂಡು ವಿವರಿಸುವ ಸಂದರ್ಭದಲ್ಲಿ ನಾವು ಕೇವಲ ಮಾಹಿತಿಯನ್ನು ಗೊತ್ತಿರುವ ಆಧಾರಗಳಿಂದ ಮಾತ್ರ ಪಡೆಯುವುದಷ್ಟೇ ಅಲ್ಲ, ಬದಲಿಗೆ ಹೊಸ ಆಧಾರಗಳನ್ನು ಮತ್ತು ಪ್ರಕಾರಗಳನ್ನು ಕೂಲಂಕಷವಾಗಿ ಪರೀಕ್ಷಿಸಿ ಅವುಗಳ ವಿಶ್ವಾಸಾರ್ಹತೆಗಳನ್ನು ಸಾಧಿಸಿಕೊಳ್ಳಬೇಕು. ಈ ಎರಡು ಮುಖ್ಯವಾದ ಅಂಶಗಳು ಅಂದರೆ, ಒಂದು: ಮಾಹಿತಿಗೋಸ್ಕರ ಗತವನ್ನು ಹುಡುಕುವುದು. ನಂತರ ಗತದಲ್ಲಿ ಏನಾಯಿತು? ಎನ್ನುವುದನ್ನು ವಿವರಿಸುವ ಕ್ರಮವನ್ನೇ ನಾವು ಹಿಸ್ಟೋರಿಕಲ್ ಮೆಥಡ್ ಎಂದು ಕರೆಯಬಹುದು. ಇದನ್ನು ನಾವು ವಿದ್ಯಾರ್ಥಿಗಳಿದ್ದಾಗ ನಮಗೆ ಬೋಧಿಸಲಾಗುತ್ತಿತ್ತು, ಆದರೆ ಇಂದು ಇದು ಅತ್ಯಂತ ಮುಖ್ಯವಾಗಿದೆ.

ದುರದೃಷ್ಟವಶಾತ್, ಇಂದು ಈ ರೀತಿಯ ಮೆಥಡ್ ಅಥವಾ ವಿಧಾನವನ್ನು ವಿದ್ಯಾರ್ಥಿಗಳಿಗೆ ಹೇಗೆ ಬೋಧಿಸಬೇಕು? ಎನ್ನುವುದರ ಬಗ್ಗೆ ಸರಿಯಾಗಿ ಗಮನ

ಹರಿಸಲಾಗುತ್ತಿಲ್ಲ. ಅಂದರೆ, ಪ್ರೌಢ ಶಾಲೆ ಮಟ್ಟದಲ್ಲಿ ಬೋಧಿಸಬೇಕೇ? ಅಥವಾ ಪದವಿ ಮಟ್ಟದಲ್ಲಿ ಬೋಧಿಸಬೇಕೇ? ಎನ್ನುವುದರ ಬಗ್ಗೆ. ಈ ರೀತಿಯ ಮೆಥಡ್‌ನ ಗ್ರಹಿಕೆಯ ಸಂದರ್ಭದಲ್ಲಿ ಅತೀ ಮುಖ್ಯವಾದುದೇನೆಂದರೆ, ಮೊತ್ತ ಮೊದಲ ಹಂತದಲ್ಲಿ ದತ್ತಾಂಶ, ಮಾಹಿತಿ ಮತ್ತು ಸಾಕ್ಷ್ಯವನ್ನು ಸಂಗ್ರಹಿಸುವುದಾಗಿದೆ. ದ್ವಿತೀಯ ಹಂತದಲ್ಲಿ ಮಾಹಿತಿ ಮತ್ತು ದತ್ತಾಂಶಗಳ ವಿಶ್ವಾಸಾರ್ಹತೆಯನ್ನು ಖಚಿತಪಡಿಸಿಕೊಳ್ಳುವುದು. ಇಲ್ಲಿ ಅಥವಾ ಅಲ್ಲಿ ಅಥವಾ ಲಭ್ಯವಾದ ಮಾಹಿತಿಯನ್ನು ರಮ್ಯವಾದ ಮಾಹಿತಿಯೇ ? ಅಥವಾ ಆಕಸ್ಮಿಕವಾಗಿ ಲಭಿಸಿದ ಮಾಹಿತಿಯೇ ? ಎನ್ನುವುದರ ಬಗ್ಗೆ ಪ್ರಮಾಣೀಕರಿಸಿಕೊಳ್ಳುವುದು. ಮೂರನೇ ಹಂತದಲ್ಲಿ ವಿವಿಧ ಘಟನೆಗಳು ಘಟಿಸುವ ಮತ್ತು ಸ್ಥಿತವಾಗಿರುವ ಸಂದರ್ಭದಲ್ಲಿ ಅವುಗಳ ಕಾರ್ಯಕಾರಣ ಸಂಬಂಧಗಳನ್ನು ನೋಡುವುದು. 'ಎ' ಘಟನೆಯು, 'ಬಿ' ಫಲಿತಾಂಶವನ್ನು ಸೃಷ್ಟಿಸಿದೆಯೇ? ಆ ಎರಡು ಘಟನೆಗಳು ಒಂದೇ ಜಾಗದಲ್ಲಿ ಸಂಭವಿಸಿದ್ದಿದ್ದರೆ, ಅವುಗಳ ನಡುವೆ ಏನಾದರೂ ಸಂಬಂಧವೇರ್ಪಟ್ಟಿದ್ದಿರಬಹುದೇ ಸ್ವಲ್ಪ ಸಮಯದ ವಿಳಂಬದಲ್ಲಿ? ಹೀಗೆ ಈ ಕಾರ್ಯಕಾರಣ ಸಂಬಂಧದ ಅಂಶವು ಕಾರಣೀಯ ಮತ್ತು ತಾರ್ಕಿಕ ವಿಶ್ಲೇಷಣೆಯಲ್ಲಿ ಬಹುಮುಖ್ಯವಾದುದು. ಆದರೆ ಹೆಚ್ಚಿನ ಸಲ ವೃತ್ತಿಪರವಾಗಿ ಚರಿತ್ರೆಕಾರರೆಂದು ತರಬೇತಿ ಹೊಂದಿದ ಕೆಲವರು ಕೂಡಾ ನಂತರದ ಈ ಹಂತವನ್ನೂ ಪ್ರವೇಶಿಸುವುದಿಲ್ಲ. ಅದೇನೆಂದರೆ, ಪ್ರತಿಯೊಂದು ವಿಶ್ಲೇಷಣೆಯನ್ನು ಕೂಡಾ ದತ್ತಾಂಶಗಳ ವಿಮರ್ಶೀಯ ಮೌಲ್ಯ ಮಾಪನದ ಮೇಲೆ ನಡೆಸದಿರುವುದು. ಈ ನೆಲೆಯಲ್ಲಿ ಅದ್ಭುತ ರಮ್ಯತೆ ಅಥವಾ ಫ್ಯಾಂಟಸಿಯು ಚರಿತ್ರೆಯ ವಿಚಾರಣೆಯ ಲೆಕ್ಕಕ್ಕೆ ಹೆಚ್ಚೇನು ಸಿಗುವುದಿಲ್ಲ. ಹಾಗೂ ಅದು ಸಾಕಷ್ಟು ವ್ಯತ್ಯಾಸವನ್ನು ಕೂಡಾ ತರುವುದಿಲ್ಲ. ಈ ಕಾರಣಕ್ಕಾಗಿ, ಜನಪ್ರಿಯ ಚರಿತ್ರೆಯಲ್ಲಿ ಕಾರಣೀಯ ತಾರ್ಕಿಕ ವಿಶ್ಲೇಷಣೆಗಿಂತ ಫ್ಯಾಂಟಸಿ ಹೆಚ್ಚಿರುವುದು.

ಒಮ್ಮೆ ನಾವು ಈ ಹಂತಗಳನ್ನು ದಾಟಿದರೆ ನಂತರ ಚಾರಿತ್ರಿಕ ವ್ಯಾಖ್ಯಾನವೆಂದು ಕರೆಯಬಹುದಾದ ಅಥವಾ ಸಾಮಾನ್ಯೀಕರಣ ಅಥವಾ ಹೇಳಿಕೆಗಳನ್ನು ಮಾಡುವ ನೆಲೆಗೆ ಪ್ರವೇಶಿಸುತ್ತೇವೆ. ಆದ್ದರಿಂದ ಚಾರಿತ್ರಿಕ ಮಾಹಿತಿಯನ್ನು ತಥ್ಯ ಅಥವಾ ಫ್ಯಾಕ್ಟ್‌ಗಳ ಸಂಚಯವಾಗಿ ವಿಶ್ಲೇಷಿಸುವ ಮತ್ತು ತಾರ್ಕಿಕವಾಗಿ ನಿರ್ವಹಿಸುವ ಮತ್ತು ಸಂಸ್ಕರಿಸುವ ಪ್ರಕ್ರಿಯೆ ಚಾರಿತ್ರಿಕ ಸಂಶೋಧನೆಯಲ್ಲಿ ತೀರಾ ಇತ್ತೀಚಿನ ದಶಕಗಳ ಬೆಳವಣಿಗೆ ಎಂದೇ ಗುರುತಿಸಬಹುದು. ಇದು ಈ ಮೊದಲೇ ಇತ್ತಾದರೂ ಕೂಡಾ ಬರೀ ಉತ್ತಮ ಮತ್ತು ಬದ್ಧತೆ ಇದ್ದ ಚರಿತ್ರೆಕಾರರಿಗೆ ಮಾತ್ರ ಸೀಮಿತವಾಗಿತ್ತು. ಇಂದು ಇದು ಚರಿತ್ರೆಯ ಎಲ್ಲಾ ಅಭ್ಯಾಸಿಗಳಿಗೂ ಕೂಡಾ ಅತ್ಯಗತ್ಯವಾಗಿದೆ. ಇದು ಅಲ್ಲಿಂದ ಅತ್ಯಂತ ಅಪೇಕ್ಷಣೀಯವಾಗಿದೆಯಾದರೂ ಕೂಡಾ ಎಲ್ಲಾ ಅಭ್ಯಾಸಿಗಳೂ ಈ ಅರ್ಹತೆಯನ್ನು ಪಡೆಯುತ್ತಿಲ್ಲ.

ನೀವು, ಚಾರಿತ್ರಿಕ ಮಾಹಿತಿಯನ್ನು ಅರ್ಥೈಸಿಕೊಳ್ಳುವುದು ಸಂಕೀರ್ಣ ಶಿಸ್ತಿನ ಮಾಹಿತಿ ಸಂಗ್ರಹ ಮತ್ತು ವಿಶ್ಲೇಷಣೆಯ ಕ್ರಿಯೆಯ ಮೂಲಕ ಎನ್ನುವುದನ್ನು ಸೂಚಿಸಿದ್ದೀರಿ. ಇಂತಹ ಪ್ರಕ್ರಿಯೆ ಪ್ರಜ್ಞಾಪೂರ್ವಕ ವೃತ್ತಿಪರ ಆಯ್ಕೆಯೂ ಕೂಡಾ ಎಂದಿದ್ದೀರಿ. ಆದರೆ ಚರಿತ್ರೆಯನ್ನು ವೃತ್ತಿಪರವಲ್ಲದ, ಸಾರ್ವಜನಿಕವಾದ ಗತದ ಆಸಕ್ತಿಯ ಕ್ರಮದ ಮೂಲಕ ಗ್ರಹಿಸುವ ಮತ್ತು ಒಂದು ಸಂಕೀರ್ಣ ಪ್ರಕ್ರಿಯೆಗಳ ಮೂಲಕ ಮಾಹಿತಿಯನ್ನು ಸಂಗ್ರಹಿಸಿ ವೈಚಾರಿಕತೆಯ ಆಧಾರದ ಮೇಲೆ ವೈಧಾನಿಕ ವಿವರಣೆಯನ್ನು ನೀಡುವ ಚರಿತ್ರೆಕಾರನ ಗತದ ಅರ್ಥೈಸುವಿಕೆಯ ಕ್ರಮಗಳು ಸಂಪೂರ್ಣ ಭಿನ್ನವಾಗಿರುತ್ತದೆ.

ನಿಮ್ಮ ಗ್ರಹಿಕೆ ನಿಸ್ಸಂಶಯವಾಗಿ ಸರಿಯಾದುದು. ಇದು ಚರಿತ್ರೆಯ ಎಲ್ಲಾ ಉಲ್ಲೇಖ ಮತ್ತು ಆಯಾಮಗಳಿಗೂ ಕೂಡಾ ಅನ್ವಯಿಸುತ್ತದೆ. ಆದರೆ ಪ್ರಾಚೀನ ಭಾರತದ ಚರಿತ್ರೆಯ ಸಂದರ್ಭವು ಅತ್ಯಂತ ಸಂಕೀರ್ಣವಾದುದು. ವಿಶೇಷವಾಗಿ ಪ್ರಾಚೀನ ಭಾರತದ ಅತ್ಯಂತ ವ್ಯಾಪ್ತವಾದ ಉಲ್ಲೇಖಗಳನ್ನು ಮುಖಾಮುಖಿಯಾಗಬೇಕಾದ ಸಂದರ್ಭದಲ್ಲಿ. ಪ್ರಾಚೀನ ಭಾರತದ ಅಧ್ಯಯನದ ಸಂದರ್ಭ ಕೆಲವು ಡಝನ್ ಪುಸ್ತಕಗಳನ್ನು ಓದಿದರಷ್ಟೇ ಸಾಲದು. ಮತ್ತದು ಆ ವಿಷಯದ ಕುರಿತು ಅವರನ್ನು ವಿಷಯತಜ್ಞನನ್ನಾಗಿಸುವುದಿಲ್ಲ. ನಾವಿಲ್ಲಿಯ ಆಧಾರಗಳನ್ನು ಗುರುತಿಸಬೇಕು ಮತ್ತು ಅವುಗಳನ್ನು ವಿಶ್ಲೇಷಿಸಬೇಕು. ಆಧಾರಗಳನ್ನು ಗುರುತಿಸುತ್ತಾ ಆ ಕಾಲದ ಅವುಗಳ ಭಾಷಿಕ ಬಳಕೆಗಳನ್ನು ಕೂಡಾ ತಿಳಿಯಬೇಕು. ಉದಾ: ಮೌರ್ಯನ್ ರಾಜರ ಶಾಸನಗಳ ಭಾಷೆ ಪ್ರಾಕೃತವನ್ನು ತಿಳಿಯಬೇಕು ಮತ್ತು ಅದರ ಮೂಲಕ ವಿಶ್ಲೇಷಣೆಯನ್ನು ಮಾಡಬೇಕು. ಸಂಸ್ಕೃತದಲ್ಲಿ ರಚನೆಯಾಗಿರುವ ಕೌಟಿಲ್ಯನ ಅರ್ಥಶಾಸ್ತ್ರದ ರೀತಿಯ ಉಳಿದ ಪಠ್ಯಗಳನ್ನು ಕೂಡಾ ತಿಳಿಯಬೇಕು. ನಮಗೆ ಆರ್ಕಿಯಾಲಜಿಯ ಬಗ್ಗೆ ತಿಳಿದಿರಬೇಕು. ಈ ದಿನಗಳಲ್ಲಿ ಆರ್ಕಿಯಾಲಜಿಯು ತೀರಾ ಟೆಕ್ನಿಕಲ್ ಮತ್ತು ಅನೇಕ ವೈಜ್ಞಾನಿಕ ವಿಧಾನ ಮತ್ತು ಜ್ಞಾನಗಳ ಬಳಕೆಯ ಮೇಲೆ ಅವಲಂಬಿತವಾಗುತ್ತಿದೆಯಾದ ಕಾರಣ ಇದರ ಬಗ್ಗೆ ತಿಳಿವಿರಬೇಕು. ಈಗೀಗ ಆರ್ಕಿಯಾಲಜಿಕಲ್ ಸಂಶೋಧನೆಯಲ್ಲಿ ಹೆಚ್ಚೆಚ್ಚು ವಿಜ್ಞಾನ ಪ್ರವೇಶ ಪಡೆಯುತ್ತಿದೆಯಾದ ಕಾರಣ ಆರ್ಕಿಯಾಲಜಿಕಲ್ ಸಂಶೋಧನೆಯ ವರದಿಗಳನ್ನು ಅವುಗಳು ವಿಜ್ಞಾನದ ತರಬೇತಿ ಮತ್ತು ಪರಿಭಾಷೆಯುಕ್ತವಾದ ಕಾರಣ ಮತ್ತು ಅಂತಹ ತರಬೇತಿ ಅಗತ್ಯವಾಗಿರುವ ಕಾರಣ ನನಗೂ ಕೂಡಾ ಅವುಗಳನ್ನು ಸಂಪೂರ್ಣ ಓದಿ ಅರ್ಥೈಸಿಕೊಳ್ಳಲು ಕಷ್ಟವಾಗುತ್ತಿದೆ. ಇದಲ್ಲದೇ ಚರಿತ್ರೆ ಅಧ್ಯಯನಕ್ಕೆ ಭಾಷಾಶಾಸ್ತ್ರದ ಸಹಾಯ ಬೇಕು. ಚರಿತ್ರೆಕಾರ ಬಳಸುವ ಸೋರ್ಸ್ ಅಥವಾ ಆಧಾರದ ಭಾಷೆ ಯಾವುದು ಎಂದು ಗೊತ್ತಿದ್ದರಷ್ಟೇ ಸಾಲದು. ಭಾಷಾಶಾಸ್ತ್ರದ ಪ್ರಾಥಮಿಕ ನಿಯಮಗಳನ್ನು ಆತ ತಿಳಿಯಬೇಕಾಗುತ್ತದೆ. ವಿಶೇಷವಾಗಿ ಭಾಷೆಯಲ್ಲಿ ಸಂಭವಿಸುವ ಬದಲಾವಣೆಗಳು, ಸಂಭಾಷಣೆಯು ರಚಿತವಾಗುವ ಹಲವು ಸಾಧ್ಯತೆಗಳು, ವ್ಯಾಕರಣ ಮತ್ತು ಧ್ವನಿಮಾಶಾಸ್ತ್ರ(ಫೊನೆಟಿಕ್ಸ್)ದ ಅರಿವಿರಬೇಕು, ಇದಲ್ಲದೇ ಭಾಷೆಗಳು ಪ್ರತ್ಯೇಕಿತವಾಗುವ ಮತ್ತು ಸಂವಹನ ಸಾಧಿಸುವ ಕ್ರಮ ಮತ್ತು ಬಗೆಗಳ ಜ್ಞಾನ ಕೂಡಾ ಇರಬೇಕು.

ನಾನು ಸಮಕಾಲೀನ ಸಂದರ್ಭದಲ್ಲಿ ಹೆಚ್ಚು ಚರ್ಚಿತವಾಗುತ್ತಿರುವ ವಿಷಯವೊಂದರ ನಿದರ್ಶನವೊಂದನ್ನು ನೀಡುತ್ತೇನೆ. ನಾವು ವಿದ್ಯಾರ್ಥಿಗಳಾಗಿದ್ದಾಗ, ಋಗ್ವೇದದ ಭಾಷೆಯು ಇಂಡೋ –ಆರ್ಯನ್ ಮಾತ್ರವೆಂದು ಬೋಧಿಸಲಾಗುತ್ತಿತ್ತು. ಆದರೆ ಇಂದು ನೀವು ಅದೇ ಹೇಳಿಕೆಯನ್ನು ಹೇಳಿದರೆ ಬಹುತೇಕ ವೇದಿಕ್ ಸ್ಕಾಲರ್ಸ್ ಇದನ್ನು ಒಪ್ಪುವುದಿಲ್ಲ. ಏಕೆಂದರೆ, ಭಾಷಾಶಾಸ್ತ್ರದ ಸಾಧನಗಳ ಅನ್ವಯದಿಂದ, ಈಗ ದ್ರಾವಿಡ ಭಾಷೆಗಳ ಶಬ್ದ ಮತ್ತು ಅಂಶಗಳೂ ಕೂಡಾ ಋಗ್ವೇದದಲ್ಲಿ ಸೇರಿಕೊಂಡಿರುವುದನ್ನು ಕಂಡುಕೊಳ್ಳಲಾಗಿದೆ. ಇದು ಚರಿತ್ರೆಕಾರನ ಮೂಲಕ ಅವನು ಪರಿಗಣಿಸಿರುವ ಆಧಾರಗಳಲ್ಲಿ ಪರಿವರ್ತನೆಯ ಮತ್ತು ಪರಿವರ್ತನೀಯ ದೃಷ್ಟಿಯನ್ನು ತರಲು ಸಾಧ್ಯವಿದೆಯೇ? ಹೌದು, ಇದು ಸೋರ್ಸ್ ಅಥವಾ ಆಧಾರದ ಪರಿಕಲ್ಪನೆಯಲ್ಲಿ ಬದಲಾವಣೆಯನ್ನು ತರುತ್ತದೆ. ಏಕೆಂದರೆ, 'ಏಕಮಾತ್ರ ಭಾಷೆಯಲ್ಲಿರುವ ಮತ್ತು ಅದೊಂದೇ ಭಾಷೆಯನ್ನು ಬಳಸಿದ ಜನರ ಕೃತಿ ಒಂದಿದೆ' ಎಂದು ಹೇಳುವ ಸ್ಥಿತಿಯಲ್ಲಿ ಇಂದು ನಾವಿಲ್ಲ. ಈಗ ಚರಿತ್ರೆಕಾರನೂ ಹೇಳಬೇಕು ಏನಂದರೆ, 'ಆ ಕೃತಿಯ ಭಾಷೆಯಲ್ಲಿ ಬೇರೆ ಭಾಷೆಯ ಮತ್ತು ಭಾಷೀಯ ಲಕ್ಷಣಗಳು

ಇವೆ, ಈ ಭಾಷೆ ಆ ಭಾಷೆಗಿಂತ ಭಿನ್ನ ಎನ್ನಬೇಕಾಗುತ್ತದೆ ಮತ್ತು ಅವುಗಳು ಈ ಭಾಷೆಯೊಂದಿಗೆ ಸಂಲಗ್ನವಾಗಿಲ್ಲ ಎನ್ನಬೇಕಾಗುತ್ತದೆ ಮತ್ತು ದ್ರಾವಿಡಿಯನ್ ಭಾಷೆಯು ಇಂಡೋ ಆರ್ಯನ್ ಭಾಷೆಗಿಂತ ಭಿನ್ನ ಹಾಗು ಇದರರ್ಥ ಈ ಭಾಷೆ ಮತ್ತು ಉಳಿದ ಭಾಷೆಗಳನ್ನು ಮಾತನಾಡುವ ಜನರ ನಡುವೆ ಒಂದು ಸಂವಹನ ಸಾಧ್ಯವಾಗಿರಬೇಕು' ಎಂದು. ಇಲ್ಲಿ ಪುನಃ ದ್ವಿ-ಭಾಷೀಯ ಸಾಧ್ಯತೆಯನ್ನು ತರ್ಕಿಸಬಹುದು. ಅಥವಾ ಅದಕ್ಕೆ ಸಾಕ್ಷಿಗಳು ಸಿಗದಿರಲೂಬಹುದು ಕೂಡಾ. ಆದರೆ, ಒಂದಂತೂ ಸ್ಪಷ್ಟ. ಇಂತಹ ಅನುಭವ ಹಲವು ಭಾಷಿಕರು ಹತ್ತಿರ ಹತ್ತಿರ ನೆಲೆ ನಿಂತುದ್ದರ ಪರಿಣಾಮವೇ? ಎನ್ನುವುದರ ಊಹೆ. ಬಹುಶಃ ಇದು ಮತ್ತು ಇಂತಹ ಯೋಚನಾ ಕ್ರಮ ಋಗ್ವೇದವನ್ನು ಒಂದು ವಿಶಿಷ್ಟ ಚಾರಿತ್ರಿಕ ಸಂದರ್ಭಕ್ಕೆ ಒಯ್ಯುತ್ತದೆ. ಇಂತಹ ಚಾರಿತ್ರಿಕ ಸಂದರ್ಭ ಯಾವುದೋ ಒಂದೇ ಒಂದು ಸಂಸ್ಕೃತಿಯ ಸಂದರ್ಭವಾಗದೇ ಆ ಸಮಯದಲ್ಲಿ ಅಸ್ತಿತ್ವದಲ್ಲಿದ್ದ ಉಳಿದ ಸಂಸ್ಕೃತಿಗಳ ನಡುವಿನ ಒಂದು ಯಾಜಮಾನ್ಯೀಯ ಸಂಸ್ಕೃತಿಯ ಪ್ರತಿಫಲನವಾಗಿ ಋಗ್ವೇದ ಸಂಸ್ಕೃತಿಯನ್ನು ಕಾಣಲು ಸಾಧ್ಯವಾಗುತ್ತದೆ. ಹೀಗೆ ಚರಿತ್ರಕಾರ ಉಳಿದ ಸಂಸ್ಕೃತಿಗಳನ್ನು ಕೂಡಾ ಶೋಧಿಸಬೇಕಾಗುತ್ತದೆ.

ಈ ಅವಧಿಗೆ ಸಂಬಂಧಿಸಿದ ಅಧ್ಯಯನಗಳಿಗೆ ಸಂಬಂಧಿಸಿದಂತೆ ಅನೇಕ ವಿಧದ ಮತ್ತು ಕಳೆದ ಕೆಲವು ದಶಕಗಳವರೆಗೂ ಗೊತ್ತಿರದ ಆಧಾರಗಳನ್ನು ಪರಿಗಣಿಸಬೇಕಾಗಿದೆ. ಉದಾಹರಣೆಗೆ, ಋಗ್ವೇದ ಪ್ರದೇಶದಲ್ಲಿದ್ದ ನದಿಗಳ ಹರಿವಿನ ಬಗೆಗಿನ ಅಧ್ಯಯನ(ಹೈಡ್ರಾಲಜಿ) ದಿಂದ ಸರಸ್ವತೀ ನದಿ ವ್ಯಾಪಕ ಚರ್ಚೆಯನ್ನು ಪಡೆದಿದೆ. ಇದರ ಗುರುತಿಸುವಿಕೆ ಅಥವಾ ಚರಿತ್ರೆ ಸಮರ್ಪಕವಾಗಿ ಇನ್ನೂ ನಡೆದಿಲ್ಲ. ಇದೊಂದು ಮಾನ್ಸೂನ್ ಚೋದಿತ ನದಿಯೇ ? ಅಥವಾ ಹಿಮಗಲ್ಲು ಪೋಷಿತ ನದಿಯೇ ?, ಇದರ ನೀರನ್ನು ಯಮುನೆ ಮತ್ತು ಸಟ್ಲೇಜ್ ಆಕರ್ಷಿಸಿದ ಕಾರಣ ಇದು ಒಣಗಿತೇ? ಎಂಬ ಅನೇಕ ಪ್ರಶ್ನೆಗಳು ಇನ್ನೂ ಉತ್ತರವನ್ನು ಅನೇಕ ಆಧಾರಗಳ ಬೆಳಕಿನಿಂದ ಮತ್ತು ಜನೆಟಿಕ್ಸ್ ಮುಂತಾದ ವಿಜ್ಞಾನಗಳ ಸಹಾಯದಿಂದ ಕಂಡುಕೊಳ್ಳಬೇಕಷ್ಟೇ. ಇಲ್ಲಿಯ ಪ್ರದೇಶದಲ್ಲಿ ಯಾವಾಗಲೂ ವಲಸೆ ಒಂದು ಅನುಭವವಾಗಿತ್ತೇ ? ಅಥವಾ ಇಲ್ಲಿನ ಜನಸಮುದಾಯ ದಕ್ಷವಾಗಿ ನೆಲೆಗೊಂಡು ನೆಲೆಸಿದ್ದರೇ ? ಎನ್ನುವ ಪ್ರಶ್ನೆಗಳೂ ಕೂಡಾ ಉತ್ತರ ಪಡೆದುಕೊಳ್ಳಬೇಕಾಗಿವೆ.

ಇವುಗಳು ಸಾಕ್ಷ್ಯಗಳ ವಿವಾದಾತ್ಮಕ ಅಂಶ ಅಥವಾ ಮಗ್ಗಲುಗಳಾಗಿವೆ ಮತ್ತು ನಾನು ಅವುಗಳನ್ನು, ಚಾರಿತ್ರಿಕ ಪ್ರಶ್ನೆಗಳನ್ನು ಉಲ್ಲೇಖಿಸಿ ಉತ್ತರಿಸುವ ಸಂದರ್ಭದಲ್ಲಿ ಹೌದು ಅಥವಾ ಅಲ್ಲ ಎಂದು ಉತ್ತರಿಸಲಾಗದ ರೀತಿಯಲ್ಲೇ ಇವೆ. ಈ ಪ್ರಶ್ನೆಗಳನ್ನು ಸ್ಪಷ್ಟವಾಗಿ ಹೌದು ಅಥವಾ ಅಲ್ಲ ಎಂದು ಉತ್ತರಿಸುವುದು ಕಷ್ಟ. ಏಕೆಂದರೆ ಈ ಪ್ರಶ್ನೆಗಳ ಸುತ್ತ ಇರುವ ಸಾಕ್ಷ್ಯಗಳೂ ಕೂಡಾ ವೈವಿಧ್ಯ ಮತ್ತು ವಿವಾದಯುಕ್ತವಾಗಿರುವುದರಿಂದ (ಚರಿತ್ರೆಯಲ್ಲಿ ಅಬ್ಜೆಕ್ಟಿವ್ ಟೈಪ್ ಪ್ರಶ್ನೆಗಳಿಗೆ ಔಚಿತ್ಯವೇ ಇಲ್ಲ). ಚರಿತ್ರಕಾರರು ತಮ್ಮ ವಿವರಣೆಗಳಿಗೆ ತರ್ಕಗಳನ್ನು ಅವಲಂಬಿಸಬೇಕಷ್ಟೇ. ಸಾಕ್ಷ್ಯಗಳು ಮತ್ತು ಆಧಾರಗಳು ಬದಲಾಗುತ್ತಿದ್ದ ಹಾಗೆ ಚರಿತ್ರಕಾರನೂ ಕೂಡಾ ಬದಲಾಗಬೇಕಷ್ಟೇ. ಹತ್ತೊಂಬತ್ತನೇ ಶತಮಾನದಲ್ಲಿ ಮಾಡಿದ ತರ್ಕ ಮತ್ತು ವಾದಗಳನ್ನು ಇಪ್ಪತ್ತೊಂದನೇ ಶತಮಾನದಲ್ಲಿ ವಿಭಿನ್ನವಾಗಿ ಮಾಡಬೇಕಾಗುತ್ತದಷ್ಟೇ. ಚಾರಿತ್ರಿಕ ವಿವರಣೆಗಳು ಒಂದು ನಿಶ್ಚಿತ ಕಾಲ ಅಥವಾ ಅವಧಿಯಲ್ಲಿ ಇರುವ ಜ್ಞಾನವನ್ನು ಅವಲಂಬಿಸಿ ರೂಪುಗೊಂಡಿರುತ್ತವೆ. ಅಂತಹ ವಿವರಣೆಗಳನ್ನು, ಅವುಗಳು ಸೃಷ್ಟಿಯಾದ ಉದ್ದೇಶಕ್ಕೆ ಅನುಗುಣವಾಗಿ ಚಿತ್ರಿಸಲು ಕೂಡಾ ಸಾಧ್ಯವಾಗುತ್ತದೆ.

(ಮುಂದುವರೆಯುವುದು)

ಪುಸ್ತಕ ವಿಮರ್ಶೆ

ಲಕ್ಕುಂಡಿಯ ಬಸದಿಗಳು – ಒಂದು ಪರಿಪೂರ್ಣ ಕೃತಿ

❑ ಶಿವಕುಮಾರ್ ಪಾವಟೆ

#74, ಶ್ರೀಲಕ್ಷ್ಮಿ ನಿಲಯ, ವಿಶ್ವೇಶ್ವರಯ್ಯ ರಸ್ತೆ,
ಸುರಭಿ ಲೇಔಟ್, ಯಲಹಂಕ, ಬೆಂಗಳೂರು–560064.
shivakumarpavate36@gmail.com



ಲಕ್ಕುಂಡಿಯ ಬಸದಿಗಳು

ಲೇಖಕರು : ಡಾ. ಅಪ್ಪಣ್ಣ ಎನ್. ಹಂಜೆ

ಪ್ರಕಾಶಕರು: ವಿದ್ಯಾಶ್ರೀ ಪ್ರಕಾಶನ,
ಅಳಗವಾಡಿ–591317, ತಾ॥ ರಾಯಭಾಗ, ಜಿ॥ ಬೆಳಗಾವಿ

ವರ್ಷ : 2015   ಪುಟ : 218

ಬೆಲೆ : ರೂ. 150/–

ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ಲಕ್ಕುಂಡಿಗೆ (ಗದಗ ಜಿಲ್ಲೆ) ಪ್ರಮುಖ ಸ್ಥಾನವಿದೆ. ಪ್ರಾಗ್ಯೆತಿಹಾಸಿಕ ಕಾಲದಿಂದಲೂ ಈವತ್ತಿನವರೆಗೆ ಜನವಸತಿಯುಳ್ಳ ಸ್ಥಳವಾಗಿ ಅನೇಕ ಐತಿಹಾಸಿಕ ಏಳುಬೀಳುಗಳನ್ನು ಕಂಡ ತಿರುಳ್ಗನ್ನಡನಾಡಿನ ಪ್ರಮುಖ ಕೇಂದ್ರ ಲಕ್ಕುಂಡಿ. ಈ ಸ್ಥಳದ ಬಗ್ಗೆ ಸಂಶೋಧನಾತ್ಮಕವಾಗಿ, ಸಾಹಿತ್ಯಿಕವಾಗಿ ಸಮಗ್ರವಾಗಿ ಅಧ್ಯಯನ ನಡೆಸಿ ಹೊಸ ಹೊಳಹುಗಳೊಂದಿಗೆ ಸಂಶೋಧಕರಾದ ಅಪ್ಪಣ್ಣ ಎನ್. ಹಂಜೆ ಅವರು ಪ್ರಸ್ತುತ ಕೃತಿಯನ್ನು ಪ್ರಕಟಿಸಿದ್ದಾರೆ.

'ಶ್ರೀರಾಮರದತ್ತಿ'ಯೆಂದೇ ಶಾಸನಗಳಿಂದ ಹೊಗಳಿಸಿಕೊಂಡ ಲಕ್ಕುಂಡಿಯು ಕುಂತಳನಾಡಿನ ಬೆಳ್ವೊಲ ದೇಶದ ಅಗ್ರಹಾರ ಚೂಡಾಮಣಿಯಾಗಿ ಮತ್ತು ದಾನಚಿಂತಾಮಣಿ ಅತ್ತಿಮಬ್ಬೆಯ ಕಾರ್ಯಕ್ಷೇತ್ರ, ವಾಸಕ್ಷೇತ್ರವಾಗಿ ಧನ್ಯತೆ ಪಡೆದ ಪವಿತ್ರ ಸ್ಥಳ. ಬೌದ್ಧ, ಜೈನ, ಶೈವ, ವೈಷ್ಣವ ಸಂಸ್ಕೃತಿಗಳ ಕೇಂದ್ರಬಿಂದುವಾಗಿದ್ದ ಲಕ್ಕುಂಡಿಯು ಇತಿಹಾಸದಲ್ಲಿ ಭವ್ಯತೆಯನ್ನು ಮೆರೆದ ಕೀರ್ತಿಶಾಲಿ ಸ್ಥಳ. ಅದನ್ನೇ ಕ್ರಿ.ಶ. 1179ರ ಶಾಸನವು "ಸಕಳ ಧರ್ಮ ಕ್ಷೇತ್ರಮಪ್ಪ ಶ್ರೀಮದ್ಗ್ರಾಮ ಚಕ್ರವರ್ತ್ತಿ ಲೊಕ್ಕಿಗುಣ್ಡಿ" ಎಂದು ಬಣ್ಣಿಸಿವೆ.

ಪ್ರಸ್ತುತ ಕೃತಿಯು ಆರು ಅಧ್ಯಾಯಗಳನ್ನು ಹೊಂದಿದ್ದು ಕ್ರಮವಾಗಿ ಅಧ್ಯಯನದ ಹಿನ್ನೆಲೆ; ಲಕ್ಕುಂಡಿ ಪರಿಸರದ ಜೈನಧರ್ಮ; ಅತ್ತಿಮಬ್ಬೆಯ ಜೀವನ, ಕೊಡುಗೆ; ಲಕ್ಕುಂಡಿಯ ಬಸದಿಗಳು; ಬಸದಿಗಳ ನಾಶ ಮತ್ತು ರೂಪಾಂತರ; ಸಮಾರೋಪ ಎಂದು ಸಮಗ್ರವಾಗಿ

ವಿಶ್ಲೇಷಿಸಲಾಗಿದೆ. ಕೊನೆಗೆ ಹೆಚ್ಚಿನ ಅಧ್ಯಯನಕ್ಕಾಗಿ ನಾಲ್ಕು ಅನುಬಂಧಗಳನ್ನು ಕೊಡಲಾಗಿದೆ. ಕ್ರಮವಾಗಿ ಲಕ್ಕುಂಡಿಯ ಜೈನಶಾಸನಗಳು, ಲಕ್ಕುಂಡಿಯ ಬಸದಿಗಳು ಮತ್ತು ದಾನಚಿಂತಾಮಣಿ ಅತ್ತಿಮಬ್ಬೆಯ ಮನೆತನಕ್ಕೆ ಸಂಬಂಧಿಸಿದ ಇತರೆಡೆಯ ಶಾಸನಗಳು; ನಕ್ಷೆಗಳು; ಛಾಯಾಚಿತ್ರಗಳು ಎಂಬ ವಿವರವಾದ ಮಾಹಿತಿಯಿದೆ.

ಮೊದಲನೆಯ ಅಧ್ಯಾಯ ಅಧ್ಯಯನದ ಹಿನ್ನೆಲೆಯಲ್ಲಿ ಲಕ್ಕುಂಡಿಯ ಐತಿಹಾಸಿಕ ಮಹತ್ವ, ಅದರಲ್ಲೂ ಮುಖ್ಯವಾಗಿ ಲಕ್ಕುಂಡಿಯ ಪರಂಪರೆ ಮತ್ತು ಸ್ಥಳಪುರಾಣದ ಬಗ್ಗೆ ವಿವರಣೆ ಇದೆ. ಲಕ್ಕುಂಡಿ ಗ್ರಾಮನಾಮದ ವ್ಯುತ್ಪತ್ತಿಯ ಬಗ್ಗೆ ಲೇಖಕರು ಸೂಚಿಸಿರುವ 'ಲೊಕ್ಕಿ' ಗಿಡದ ಮೂಲಕ ಗ್ರಾಮನಾಮ ಬಂದಿರಬಹುದಾದ ಸಾಧ್ಯತೆಯು ಸಂಶೋಧಕನಿಗೆ ಇರಬೇಕಾದ ಸೂಕ್ಷ್ಮವಿವೇಚನೆಯನ್ನು ಎತ್ತಿ ತೋರಿಸುತ್ತದೆ.

ಎರಡನೆಯ ಅಧ್ಯಾಯವು ಲಕ್ಕುಂಡಿ ಪರಿಸರದ ಜೈನಧರ್ಮದ ಇತಿಹಾಸಕ್ಕೆ ಸಂಬಂಧ ಪಟ್ಟಿದೆ. ಲಕ್ಕುಂಡಿ ಪರಿಸರದಲ್ಲಿದ್ದ ಲಕ್ಷ್ಮೇಶ್ವರ (ಮೊದಲಿನ ಹೆಸರು ಪುಲಿಗೆರೆ), ಅಸುಂಡಿ, ಮುಳಗುಂದ, ನರೇಗಲ್, ಕೊಣ್ಣೂರು ಮುಂತಾದ ಪ್ರದೇಶಗಳಲ್ಲಿದ್ದ ಜೈನ ಬಸದಿಗಳು ಇತಿಹಾಸ, ವಾಸ್ತುಶಿಲ್ಪ ಮತ್ತು ಪ್ರಭಾವವನ್ನು ಲೇಖಕರು ಪ್ರಬುದ್ಧವಾಗಿ ವಿಶ್ಲೇಷಿಸಿದ್ದಾರೆ. ಕ್ರಿ.ಶ. 860ರಲ್ಲಿ ರಾಷ್ಟ್ರಕೂಟ ಅಮೋಘವರ್ಷನ ಕಾಲದಲ್ಲಿ ನಿರ್ಮಿಸಿದ್ದ ಕೊಣ್ಣೂರಿನ ಬಸದಿಯ ನಕ್ಷತ್ರಾಕಾರದ ತಲವಿನ್ಯಾಸವು ಅತ್ಯಂತ ಪ್ರಾಚೀನ ಉದಾಹರಣೆಯಾಗಿದೆ. ಇದು ಮುಂದೆ ಕಲ್ಯಾಣದ ಚಾಲುಕ್ಯರು, ಹೊಯ್ಸಳರ ಕಾಲದಲ್ಲಿ ವ್ಯಾಪಕವಾಗಿ ಬಳಕೆಗೆ ಬಂದಿತು. ಇದರೊಂದಿಗೆ ಲಕ್ಕುಂಡಿ ಪರಿಸರದಲ್ಲಿ ನಿರ್ಮಾಣವಾದ ಜೈನ ಬಸದಿಗಳು, ಅವುಗಳಿಗೆ ಸಂಬಂಧಪಟ್ಟ ಶಾಸನಗಳು, ಜೈನಮುನಿಗಳು, ಅವರ ವಿವಿಧ ಸಂಘ, ಗಣ, ಗಚ್ಛ, ಅನ್ವಯಗಳು, ಜೈನಕವಿಗಳು, ಬಸದಿಗಳ ಮೇಲೆ ಪರಮತೀಯರ ಆಕ್ರಮಣಗಳು, ರೂಪಾಂತರಗಳನ್ನು ಸಮಗ್ರ ಮಾಹಿತಿಯ ಮೂಲಕ ಲೇಖಕರು ವಿಶ್ಲೇಷಿಸಿದ್ದಾರೆ.

ಮೂರನೆಯ ಅಧ್ಯಾಯವು ದಾನಚಿಂತಾಮಣಿ ಅತ್ತಿಮಬ್ಬೆಯ ಜೀವನ ಮತ್ತು ಸಾಂಸ್ಕೃತಿಕ ಕೊಡುಗೆಗಳು ಬಗ್ಗೆ ಕೇಂದ್ರೀಕೃತವಾಗಿದೆ.

ಬಿಳಿಯರಳೆಯಂತೆ ಗಂಗಾ
ಜಳದಂತೆಸೆವಜಿತಸೇನಮುನಿಪತಿಯ ಗುಣಾ
ವಳಿಯಂತೆ ನೆಗಟ್ದಿ ಕೋಪಣಾ
ಚಲದಂತೆ ಪವಿತ್ರಮತ್ತಿಮಬ್ಬೆಯ ಚರಿತಂ

ಎಂದು ರನ್ನನಿಂದ ಸ್ತುತಿಸಿಕೊಂಡ ದಾನಚಿಂತಾಮಣಿ ಅತ್ತಿಮಬ್ಬೆಯ ಜೀವನ, ಸಾಧನೆ ಮತ್ತು ಸಾಂಸ್ಕೃತಿಕ ಕೊಡುಗೆಗಳು ಕನ್ನಡ ನಾಡಿನ ಇತಿಹಾಸದಲ್ಲಿಯೇ ಅಪರೂಪ ಮತ್ತು ಅಪ್ರತಿಮ ಇಂಥ ಪವಿತ್ರಾತ್ಮಳ ಜೀವನವು ಲಕ್ಕುಂಡಿಯೊಂದಿಗೆ ತಳಕು ಹಾಕಿಕೊಂಡಿರುವುದು ಇನ್ನೂ ವಿಶೇಷ. ಲಕ್ಕುಂಡಿಯಲ್ಲಿ ಇದ್ದ ಅತ್ತಿಮಬ್ಬೆಯ ಅರಮನೆಯ ಸ್ಥಳವನ್ನು ಲೇಖಕರು ಶಾಸನಾಧಾರಗಳಿಂದ ಮತ್ತು ಕ್ಷೇತ್ರಕಾರ್ಯ, ಪರಿಶೀಲನೆಯ ಮೂಲಕ ಗುರುತಿಸಿರುವುದು ಗಮನಾರ್ಹ ಕೊಡುಗೆಯಾಗಿದೆ. ಪತಿಯ ಮರಣದ ತರುವಾಯ ಅತ್ತಿಮಬ್ಬೆಯು ಸಿಂದೋಗಿಯನ್ನು ತೊರೆದು ಮಗನೊಂದಿಗೆ ಲಕ್ಕುಂಡಿಗೆ ಬಂದು ಅಲ್ಲಿ ಸಮಾಧಿ

ಮರಣ ಹೊಂದಿರುವುದು ಲಕ್ಕುಂಡಿಯ ಐತಿಹಾಸಿಕ ಮತ್ತು ಧಾರ್ಮಿಕ ಮಹತ್ವವನ್ನು ಹೆಚ್ಚಿಸಿದೆ. ಇದನ್ನು ಲೇಖಕರು ಸವಿವರವಾಗಿ ಶಾಸನಾಧಾರಗಳ ಮೂಲಕ ನಿರೂಪಿಸಿದ್ದಾರೆ. ಇದಲ್ಲದೆ ಅತ್ತಿಮಬ್ಬೆಯು ಬಂಕಾಪುರದ ಅಜಿತಸೇನಾಚಾರ್ಯರು ಮತ್ತು ಶ್ರವಣಬೆಳಗೊಳದ ಚಾವುಂಡರಾಯನ ಮೂಲಕ ಪರಿಚಯವಾದ ರನ್ನಕವಿಯನ್ನು ಕ್ರಿ.ಶ.986–987 ರಲ್ಲಿ ಲಕ್ಕುಂಡಿಗೆ ಕರೆಯಿಸಿಕೊಂಡು ಆತನಿಂದ ಕ್ರಿಶ 993ರಲ್ಲಿ 'ಅಜಿತ ಪುರಾಣ'ವನ್ನು ಬರೆಸಿದ್ದು ಲಕ್ಕುಂಡಿಯ ಇತಿಹಾಸದಲ್ಲಿ ಮೈಲುಗಲ್ಲು.

ನಾಲ್ಕನೆಯ ಅಧ್ಯಾಯವು ಲಕ್ಕುಂಡಿಯಲ್ಲಿನ ಜೈನಬಸದಿಗಳಿಗೆ ಸಂಬಂಧಪಟ್ಟಿದ್ದಾಗಿದೆ. ಇಲ್ಲಿಯ ಜೈನ ಶಾಸನಗಳಲ್ಲಿ ಬಲ್ಲೆಯ ಜೇಮಯ್ಯನ ಬಸದಿ, ಅತ್ತಿಮಬ್ಬೆಯ ಬಸದಿ, ಕಾಳಿಮಯ್ಯನ ಬಸದಿ, ವಸುಧೈಕ ಬಾಂಧವ ತ್ರಿಭುವನ ತಿಳಕ ಶಾಂತಿನಾಥ ಜಿನಾಲಯ, ಮೂಲಸಂಘ ಜಿನಾಲಯ, ಮಾಣಿಕ್ಯದೇವ ಚೈತ್ಯಗೃಹ, ನೋಂಪಿಯ ಬಸದಿ, ಕಾಳಿಕಾದೇವಿಯ ಬಸದಿ (ನೇಮಿನಾಥ ಬಸದಿ), ಕಮ್ಮಟ ಜಿನಾಲಯ (ಶಾಂತಿನಾಥ ಬಸದಿ). ತೋಂಟದ ಘಟಾಂತಿಕೆಯ ಬಸದಿಗಳ ಪ್ರಸ್ತಾಪಗಳಿವೆ. ಲೇಖಕರು ಲಕ್ಕುಂಡಿಗೆ ಸಂಬಂಧಪಟ್ಟ ಶಾಸನಗಳು ಮತ್ತು ಸಂಶೋಧಕರ ಕೃತಿಗಳನ್ನು ಆಧಾರವಾಗಿಟ್ಟುಕೊಂಡು ತಮ್ಮ ಕ್ಷೇತ್ರ ಕಾರ್ಯದ ಮೂಲಕ ಅನೇಕ ಹೊಸ ವಿಷಯಗಳನ್ನು ಬೆಳಕಿಗೆ ತಂದಿದ್ದಾರೆ. ಇದರಲ್ಲಿ ಅತ್ತಿಮಬ್ಬೆಯ ಬ್ರಹ್ಮಜಿನಾಲಯವನ್ನು ಗುರುತಿಸಿರುವುದು ಪ್ರಮುಖವಾಗಿದೆ. ಪ್ರಸ್ತುತ ಲಕ್ಕುಂಡಿಯಲ್ಲಿ ಬಲ್ಲೆಯ ಜೇಮಯ್ಯನ ಬಸದಿ ಮತ್ತು ಚಿಕ್ಕ ಬಸದಿ (ಅಜಿತನಾಥ ಬಸದಿ) ಮಾತ್ರ ಮೂಲ ವಾಸ್ತು ಸ್ವರೂಪದಲ್ಲಿ ಉಳಿದು ಬಂದಿವೆ. ಕಾಳಿಮಯ್ಯನ ಬಸದಿ (ಪಾರ್ಶ್ವನಾಥ ಬಸದಿ) ಮತ್ತು ಮಾಣಿಕ್ಯ ದೇವ ಚೈತ್ಯಗೃಹ ಕ್ರಮವಾಗಿ ನಾಗನಾಥೇಶ್ವರ ಮತ್ತು ನೀಲಕಂಠೇಶ್ವರ ದೇವಾಲಯಗಳಾಗಿ ರೂಪಾಂತರವಾಗಿವೆ. ಅತ್ತಿಮಬ್ಬೆಯ ಬಸದಿ (ಬ್ರಹ್ಮಜಿನಾಲಯ), ಕಾಳಿಕಾದೇವಿಯ ಬಸದಿ (ನೇಮಿನಾಥ ಬಸದಿ), ವಸುಧೈಕ ಬಾಂಧವ ತ್ರಿಭುವನ ತಿಳಕ ಶಾಂತಿನಾಥ ಬಸದಿ, ತೋಂಟದ ಘಟಾಂತಿಕೆಯ ಬಸದಿ, ಮೂಲ ಸಂಘ ಜಿನಾಲಯ, ನೋಂಪಿಯ ಬಸದಿ, ಕಮ್ಮಟ ಜಿನಾಲಯ (ಶಾಂತಿನಾಥ ಬಸದಿ), ಪಂಚಕೂಟ ಬಸದಿಗಳು, ಸಮೂಲನಾಶವಾಗಿವೆ. ಅತ್ತಿಮಬ್ಬೆಯ ಬಸದಿ (ಬ್ರಹ್ಮಜಿನಾಲಯ), ಕಾಳಿಕಾದೇವಿಯ ಬಸದಿ (ನೇಮಿನಾಥ ಬಸದಿ), ವಸುಧೈಕ ಬಾಂಧವ ತ್ರಿಭುವನ ತಿಳಕ ಶಾಂತಿನಾಥ ಬಸದಿಗಳ ತಲವಿನ್ಯಾಸಗಳು ಮತ್ತು ಅವಶೇಷಗಳು ಉಳಿದು ಬಂದಿವೆ. ಈ ಎಲ್ಲ ವಿವರಗಳನ್ನು ಆಮೂಲಾಗ್ರವಾಗಿ ಅಧ್ಯಯನ ಮಾಡಿ ಕ್ಷೇತ್ರ ಕಾರ್ಯದ ಮೂಲಕ ಈ ವಿಷಯಗಳನ್ನು ಬೆಳಕಿಗೆ ತಂದಿರುವುದರ ಹಿಂದಿರುವ ಲೇಖಕರ ಶ್ರಮ ಕೃತಿಯಲ್ಲಿ ವಿದಿತವಾಗುತ್ತದೆ.

ಐದನೆಯ ಅಧ್ಯಾಯವು ಲಕ್ಕುಂಡಿ ಪರಿಸರದ ಬಸದಿಗಳ ನಾಶ ಮತ್ತು ಸ್ವಮತೀಯರ ಸ್ಖಾಲಿತ್ಯದಿಂದ ಜೈನ ಸಂಸ್ಕೃತಿಯು ಯಾವ ರೀತಿ ಇಳಿಗಾಲವನ್ನು ಎದುರಿಸಿತು ಎಂಬುದನ್ನು ಲೇಖಕರು ಶಾಸನಗಳ ಮೂಲಕ ಸಾಧಾರವಾಗಿ ನಿರೂಪಿಸಿದ್ದಾರೆ. ಶೈವನಿಷ್ಠರಾಗಿದ್ದ ತಂಜಾವೂರಿನ ಚೋಳರಿಂದ ಆರಂಭಗೊಂಡ ಜೈನ ಬಸದಿಗಳ ಮೇಲಿನ ಆಕ್ರಮಣ, ಮುಂದೆ ಏರುಪರಸ, ಗೊಗ್ಗರಸರಂಥ ಶೈವನಿಷ್ಠರಿಂದ ಮುಂದುವರಿದು ಶೈವ, ವೀರಶೈವ, ವೈಷ್ಣವ, ಶ್ರೀವೈಷ್ಣವ, ಮುಸಲ್ಮಾನರ ದಾಳಿಗಳಿಂದ ಜೈನ ಸಂಸ್ಕೃತಿ ವಿನಾಶದಂಚಿಗೆ ತಲುಪಿತು. ಇವುಗಳಲ್ಲಿ ಅಣ್ಣಿಗೇರಿ, ತಾಳಿಕೋಟೆ, ಮುಳಗುಂದ, ಮೂಡಬಿದರೆ ಮತ್ತು

ಶ್ರವಣಬೆಳಗೊಳದ ಶಾಸನಗಳು ಆಗಿನ ಕಾಲದ ಸಂಕ್ರಮಣದ ಸ್ಥಿತಿಯನ್ನು ಸ್ವೈಜವಾಗಿ ಚಿತ್ರಿಸುತ್ತವೆ. ಲೇಖಕರು ಈ ಶಾಸನ ಆಧಾರಗಳನ್ನು ಮತ್ತು ಸಾಹಿತ್ಯ ಕೃತಿಗಳನ್ನು ಆಧಾರವಾಗಿಟ್ಟುಕೊಂಡು ಸಂಕ್ಷಿಪ್ತವಾಗಿ ಮತ್ತು ಸಮಗ್ರವಾಗಿ ಬಸದಿಗಳ ನಾಶ ಮತ್ತು ರೂಪಾಂತರವನ್ನು ಪರಿಣಾಮಕಾರಿಯಾಗಿ ವಿಶ್ಲೇಷಿಸಿದ್ದಾರೆ.

ಆರನೆಯ ಅಧ್ಯಾಯ ಸಮಾರೋಪದಲ್ಲಿ ಪ್ರಸ್ತುತ ಲಕ್ಕುಂಡಿಯ ಸ್ಥಿತಿಗತಿಗಳು, ಅಲ್ಲಿಯ ವಸ್ತು ಸಂಗ್ರಹಾಲಯ ಮತ್ತು ಅತ್ತಿಮಬ್ಬೆಯ ಕುರಿತಾದ ಚರ್ಚೆಗಳಿವೆ. ಬ್ರಹ್ಮ ಜಿನಾಲಯದ ಬಗೆಗಿನ ಸಂಶೋಧನೆಗೆ ಲೇಖಕರು ಹೊಸ ಸಾಧ್ಯತೆಯನ್ನು ತೆರೆದಿಟ್ಟಿದ್ದಾರೆ.

ಕೃತಿಯ ಕೊನೆಯಲ್ಲಿ ನಾಲ್ಕು ಅನುಬಂಧಗಳಿವೆ. ಮೊದಲನೆಯ ಅನುಬಂಧದಲ್ಲಿ ಲಕ್ಕುಂಡಿಯಲ್ಲಿ ದೊರೆತಿರುವ 25 ಜೈನ ಶಾಸನಗಳ ಪಠ್ಯ ಮತ್ತು ವಿವರಣೆಯಿದೆ. ಎರಡನೆಯ ಅನುಬಂಧವು ಲಕ್ಕುಂಡಿಯ ಬಸದಿಗಳು ಮತ್ತು ದಾನಚಿಂತಾಮಣಿ ಅತ್ತಿಮಬ್ಬೆಯ ಮನೆತನಕ್ಕೆ ಸಂಬಂಧಿಸಿದ ಇತರೆಡೆಯ ಶಾಸನಗಳ ಕುರಿತಾಗಿದ್ದು ಇದರಲ್ಲಿ ಒಂಭತ್ತು ಶಾಸನಗಳ ಪಠ್ಯ ಮತ್ತು ವಿವರಣೆಯಿದೆ. ನಾಲ್ಕನೆಯ ಅನುಬಂಧದಲ್ಲಿ ಲಕ್ಕುಂಡಿಗೆ ಸಂಬಂಧಪಟ್ಟ ನಕ್ಷೆಗಳು ಮತ್ತು ಐದನೆಯ ಅನುಬಂಧದಲ್ಲಿ ಛಾಯಾಚಿತ್ರಗಳಿವೆ.

ಹೀಗೆ ಶಿಸ್ತುಬದ್ಧ ಅಧ್ಯಯನ ಕ್ರಮದಿಂದ ಪ್ರಸ್ತುತ ಕೃತಿಯು ಸಂಶೋಧನ ಸಾಹಿತ್ಯದಲ್ಲಿ ವಿಶಿಷ್ಟವಾಗಿ ನಿಲ್ಲುತ್ತದೆ. ಪ್ರಾಚೀನ ಕಾಲದಲ್ಲಿ ಸುಪ್ರಸಿದ್ಧ ಜೈನಕೇಂದ್ರವೂ, ಅತ್ತಿಮಬ್ಬೆಯ ಕಾರ್ಯಕ್ಷೇತ್ರವೂ, ಅಗ್ರಹಾರವೂ ಆಗಿ ಶ್ರೀರಾಮರದತ್ತಿ ಎಂದು "ಖ್ಯಾತಿವೆತ್ತ ಇಂದ್ರನ ಅಮರಾವತಿಗಂ ಭೋಗಾವತಿಗಂ ಸಲೆ ಮೇಲಾಗಿರ್ಪುದು" ಎಂದು ಪ್ರಸಿದ್ಧವಾದ ಲೊಕ್ಕಿಗುಂಡಿ (ಲಕ್ಕುಂಡಿ) ಸ್ಥಳದ ಬಗ್ಗೆ ಅಷ್ಟೇ ಗಾಂಭೀರ್ಯದಿಂದ, ಶಿಸ್ತಿನಿಂದ, ತಲಸ್ಪರ್ಶಿ ಅಧ್ಯಯನದಿಂದ ಅಪಾರ ಪರಿಶ್ರಮ ಪಟ್ಟು ಸಂಪೂರ್ಣ ಮಾಹಿತಿಯನ್ನು ಕಲೆಹಾಕಿ ಲಕ್ಕುಂಡಿಯ ಇತಿಹಾಸವನ್ನು ಸಮಗ್ರವಾಗಿ ಓದುಗರ ಮುಂದೆ ಲೇಖಕರಾದ ಅಪ್ಪಣ್ಣ ಎನ್. ಹಂಜೆಯವರು ಇಟ್ಟಿದ್ದಾರೆ. ಲೇಖಕರ ವಿಷಯ ಮಂಡನೆಯಲ್ಲಿ ಎದ್ದು ಕಾಣುವ ಪ್ರಮುಖ ಗುಣಗಳೆಂದರೆ ಅವರ ತಾಳ್ಮೆ, ಪರಿಶ್ರಮ ಮತ್ತು ಅವಶ್ಯಕವಾದ ಸಂಪೂರ್ಣ ಮಾಹಿತಿ. ಸಂಶೋಧಕನಿಗೆ ಇರಬೇಕಾದ ಅನ್ವೇಷಕ ಗುಣ, ಸೂಕ್ಷ್ಮತೆ, ಕೂಲಂಕಷ ಪರಿಶೀಲನೆ, ಪ್ರಯೋಗಶೀಲತೆ ಇವು ಪ್ರಬುದ್ಧವಾಗಿ ಕೃತಿಯಲ್ಲಿ ಮೂಡಿ ಬಂದಿವೆ. ಲೇಖಕರು ಈಗಾಗಲೇ ರಾಯಬಾಗ ಪ್ರದೇಶದ, ಸವದತ್ತಿ ತಾಲ್ಲೂಕಿನ, ಶಿಗ್ಗಾವಿ, ಶ್ರವಣಬೆಳಗೊಳ, ಅರಟಾಳ, ಧಾರವಾಡ ಮತ್ತು ಬೀದರ್ ಪರಿಸರದ ಜೈನಸಂಸ್ಕೃತಿ, ವಾಸ್ತುಶಿಲ್ಪ, ಇತಿಹಾಸದ ಬಗ್ಗೆ ಕೃತಿರಚಿಸುವ ಮೂಲಕ ಸಂಶೋಧನ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ.

■

ಉಪಸರ್ಗ್ಗ : ಜೈನಧರ್ಮಾಧ್ಯಯನಕ್ಕೆ ನವಮಾರ್ಗ್ಗ

❑ ಎಸ್. ಗಂಗಾಂಬಿಕೆ ಗೋವರ್ಧನ
ಕನ್ನಡ ಉಪನ್ಯಾಸಕರು, ನಂ. ಕೆ.272, ಅರ್‍ಯಾಬಿಕ್ ಕಾಲೇಜು ಪೋಸ್ಟ್,
ವಿನೋಬ ನಗರ, ಕಾಡುಗೊಂಡನಹಳ್ಳಿ, ಬೆಂಗಳೂರು–560045
gangasgovardhan@gmail.com



ಉಪಸರ್ಗ್ಗ

ಲೇಖಕರು : **ರವಿಕುಮಾರ ಕೆ. ನವಲಗುಂದ**

ಪ್ರಕಾಶಕರು: ಭಗವಾನ್ ಶ್ರೀ 1008 ನೇಮಿನಾಥ
ದಿಗಂಬರ ಜೈನ ಮಂದಿರ ಕಮಿಟಿ (ರಿ.)
ಹಾವೇರಿ–581110

ವರ್ಷ : 2016 ಪುಟ : 138

ಬೆಲೆ : ರೂ. 150/–

2016ರ ಪ್ರಸಕ್ತ ವರ್ಷದಲ್ಲಿ, ಹೊರಬಂದಿರುವ ಶಾಸನ ಕ್ಷೇತ್ರದ ಅತ್ಯಂತ ಪ್ರಮುಖ ಕೃತಿಯೆಂದರೆ, ಹಾವೇರಿಯ ಭಗವಾನ್ ಶ್ರೀ 1008 ನೇಮಿನಾಥ ದಿಗಂಬರ ಜೈನ ಮಂದಿರ ಕಮಿಟಿಯವರು ಪ್ರಕಟಿಸಿರುವ ರವಿಕುಮಮಾರ ಕೆ. ನವಲಗುಂದ ಅವರ *ಉಪಸರ್ಗ್ಗ(ಹಾವೇರಿ ಜಿಲ್ಲೆ ಅಪ್ರಕಟಿತ ಜೈನ ಶಾಸನಗಳು)* ಎಂಬ ಕೃತಿ. ಈ ಕೃತಿ ಹಲವು ಬಗೆಗಳಲ್ಲಿ ನಿಜಕ್ಕೂ ಶಾಸನ ಸಂಕಲನಗಳ ಇತಿಹಾಸಕ್ಕೆ ಅತ್ಯುತ್ತಮವಾದ ಸೇರ್ಪಡೆಯಾಗಿದೆ. ಒಂದು ಶಾಸನವನ್ನು ಶೋಧಿಸುವುದು, ಅದು ಪ್ರಕಟಿತವೇ ಅಪ್ರಕಟಿತವೇ ಎಂದು ಕಂಡುಹಿಡಿಯುವುದು, ಅಪ್ರಕಟಿತವಾಗಿದ್ದರೆ ಅದರ ಪಾಠನಿಷ್ಕರಣೆಯನ್ನು ಮಾಡುವುದು ಎಂತಹ ಕಷ್ಟಸಾಧ್ಯವಾದ ಕೆಲಸ ಎಂದು ಬಲ್ಲವರಿಗೆ ಮಾತ್ರ ಈ ಸಂಕಲನದ ಮಹತ್ತ್ವ ಅರ್ಥವಾಗುವುದು. ಒಂದು ಜಿಲ್ಲೆಯಲ್ಲಿ ಜೈನ ಧರ್ಮವನ್ನು ಕುರಿತು ಒಬ್ಬ ಸಂಶೋಧಕನಿಂದ ಶೋಧಗೊಂಡು ಒಂದು ಕಡೆ ಇಷ್ಟೊಂದು ಸಂಖ್ಯೆಯ ಶಾಸನಗಳು ಸಂಕಲನಗೊಂಡಿರುವುದು ಶಾಸನ ಸಂಕಲನ ಕ್ಷೇತ್ರದಲ್ಲಿಯೇ ಅಪರೂಪದ ನಡೆಯಾಗಿದೆ. ಇದು ಸಂಕಲನಕಾರನ ಶಿಸ್ತು ಮತ್ತು ಅಧ್ಯಯನಕಾರನ ತಾಳ್ಮೆಯನ್ನು ನಮ್ಮ ಮುಂದಿಡುತ್ತದೆ. ಹಾವೇರಿ ಜಿಲ್ಲೆಯಲ್ಲಿ ರವಿಕುಮಾರರಿಂದ ಪ್ರಪ್ರಥಮವಾಗಿ ಶೋಧಗೊಂಡ 41 ಶಾಸನಗಳ ಪಾಠ, ಅದರ ಬಗೆಗಿನ ವಿಸ್ತೃತ ವಿವರಣೆ, ಬಹುತೇಕ ಎಲ್ಲ ಶಾಸನಗಳ ಛಾಯಾಚಿತ್ರಗಳು, ಒಂದೆಡೆ ಲಭ್ಯವಾಗಿರುವುದು ಈ ಸಂಪುಟದ ವಿಶೇಷತೆಯಾಗಿದೆ. ನಾಡೋಜ ಪ್ರೊ. ಹಂಪನಾ ಅವರ ಮುನ್ನುಡಿ ಹಾಗೂ ಪ್ರೊ. ಡಿ.ವಿ. ಪರಮಶಿವಮೂರ್ತಿಯವರ ಬೆನ್ನುಡಿಯನ್ನು ಹೊಂದಿರುವ ಈ ಪುಸ್ತಕವು ನಮ್ಮಕಾಲದ ಅತ್ಯಂತ ಮಹತ್ತ್ವದ ಶಾಸನ ಸಂಕಲನ ಎನ್ನುವುದರಲ್ಲಿ ಯಾವುದೇ ಸಂಶಯವಿಲ್ಲ.

"ತನ್ನ ಮೌಲಿಕ ಕ್ಷೇತ್ರಕಾರ್ಯ ಕಾಯಕದಲ್ಲಿ ತಲ್ಲೀನನಾಗಿ ಕಣ್ಣಿಗೆ ಅಂಜನ ಹಚ್ಚಿದಂತೆ ನೆಲದ ಮರೆಯ ನಿಧಾನವನ್ನು ಶೋಧಿಸುವ ಪರಿ ಬಲ್ಲಿದರ ಮೆಚ್ಚುಗೆ ಗಳಿಸಿದೆ. ಈ ತರುಣನನ್ನು ತಮಿಳುನಾಡಿನ ಮಧುರೈ ಕಾಮರಾಜ ವಿಶ್ವವಿದ್ಯಾಲಯದಿಂದ ಪ್ರಥಮ ಶ್ರೇಣಿಯಲ್ಲಿ ಸ್ನಾತಕೋತ್ತರ ಪದವಿ ಗಳಿಸಿದಂದಿನಿಂದ ನಾನು ಗಮನಿಸಿದ್ದೇನೆ. ಸಂಶೋಧಕ ಪ್ರವೃತ್ತಿಗೆ ಒಲಿದು ಕಲ್ಲಿನ ಬರೆಹಗಳ ಹುಡುಕಾಟ, ಅಲೆದಾಟಗಳಲ್ಲಿ ಒದಗುವ ಪರೀಷಹಗಳಿಗೆ ಜಗ್ಗದೆ ತನ್ನ ಶೋಧವನ್ನು ನೋಂಪಿಯಂತೆ ಮುಂದುವರಿಸುತ್ತಿರುವುದು ಶ್ಲಾಘನೀಯ" ಈ ಬಗೆಯ ವಿದ್ವತ್ ಮೆಚ್ಚುಗೆಯನ್ನು ನಾಡಿನ ಜೈನ ಅಧ್ಯಯನಗಳ ಆಚಾರ್ಯರೂ ನಾಡೋಜರೂ ಆದ ಹಂಪನಾ ಅವರಿಂದ ಪಡೆದುಕೊಂಡಿರುವುದು ಈ ಅಧ್ಯಯನಕಾರರ ಹಾಗೂ ಪ್ರಸ್ತುತ ಸಂಪುಟದ ವಿಶೇಷ ಗುರುತಾಗಿದೆ. ಹಾಗೆ ನೋಡಿದರೆ ಈ ಕೃತಿಗೆ ಹಂಪನಾರವರ ಮುನ್ನುಡಿಯು ಒಳ್ಳೆಯ ಪ್ರವೇಶವನ್ನು ಕೂಡ ಕಲ್ಪಿಸಿಕೊಟ್ಟಿದೆ.

ಹಾವೇರಿ ಜಿಲ್ಲೆಯ 80 ಜೈನಶಾಸನಗಳು ಈಗಾಗಲೇ ಪ್ರಕಟಗೊಂಡಿವೆ. ಪ್ರಸ್ತುತ ಜಿಲ್ಲೆಯ ರಾಣೆಬೆನ್ನೂರು, ಹಾನಗಲ್ಲು, ಹಿರೇಕೆರೂರು, ಸವಣೂರು, ಹಾವೇರಿ, ಬ್ಯಾಡಗೀ, ಶಿಗ್ಗಾವಿ, ಈ ಏಳೂ ತಾಲ್ಲೂಕುಗಳಲ್ಲಿ ಕ್ಷೇತ್ರಕಾರ್ಯ ಮಾಡಿ 41 ಅಪ್ರಕಟಿತ ಜೈನ ಶಾಸನಗಳನ್ನು ಕೃತಿಕಾರರು ಬೆಳಕಿಗೆ ತಂದಿದ್ದಾರೆ. ಇದರಿಂದ ಹಾವೇರಿ ಜಿಲ್ಲೆಯ ಒಟ್ಟು ಜೈನಶಾಸನಗಳ ಸಂಖ್ಯೆ 121 ಕ್ಕೆ ಏರಿದಂತಾಗಿದೆ. ಮಾತ್ರವಲ್ಲ ಜೈನಧರ್ಮದ ಅಧ್ಯಯನದ ಜ್ಞಾನವಲಯವು ವರ್ಧಿಸಲು ನೆರವಾದಂತಾಗಿದೆ. ಜೈನಧರ್ಮಕ್ಕೆ ಅಂಟಿಕೊಂಡೇ ಇರುವ ಮಹತ್ತ್ವದ ಆಯಾಮವಾದ ದಾನಕ್ಕೆ ಸಂಬಂಧಿಸಿದಂತೆ 4 ಶಾಸನಗಳಿದ್ದರೆ, ತೀರ್ಥಂಕರರ ಹಾಗೂ ಚೌವ್ವೀಸ್ ತೀರ್ಥಂಕರರ ಪ್ರತಿಮೆಗಳನ್ನು ಪ್ರತಿಷ್ಠಾಪಿಸಿದ ಸಂದರ್ಭದಲ್ಲಿ ಆಯಾ ಶಿಲ್ಪಗಳ ಪಾದದ ಬಳಿ ಉತ್ಕೀರ್ಣಿಸಿದ ಪಾದಪೀಠ ಶಾಸನಗಳು 6 ಇವೆ. ಉಳಿದ 31 ಶಾಸನಗಳು ನಿಸಿಧಿ ಶಾಸನಗಳಾಗಿವೆ. ಈ 31 ನಿಸಿಧಿ ಶಾಸನಗಳು ಒಂದಲ್ಲ ಒಂದು ರೀತಿಯಲ್ಲಿ ದೈಹಿಕ ತೊಂದರೆಗಳನ್ನು ಅನುಭವಿಸಿ ಕಠಿಣವಾದ ವ್ರತವನ್ನು ಆಚರಿಸಿ ತಪಸ್ಸಿನಿಂದ ಪ್ರಾಣತ್ಯಾಗ ಮಾಡಿದ, ಸಾವನ್ನು ಆಹ್ವಾನಿಸಿದವರ ಸ್ಮಾರಕಗಳಾಗಿವೆ.

ದೈಹಿಕ ತೊಂದರೆ, ಕಷ್ಟ ಎಂಬ ಅರ್ಥವನ್ನು ಹೊಂದಿರುವ 'ಉಪಸರ್ಗ್ಗ' ಪದವು ಆತ್ಮದ ಕಲ್ಯಾಣವನ್ನು ಸಾರುವ ಮತ್ತು ಅತ್ಯಂತ ವಿಶಾಲವಾದ ಅರ್ಥದಲ್ಲಿ ಸಾಧಕನೊಬ್ಬನ ಆತ್ಮೋನ್ನತಿಯ ಅತ್ಯುಚ್ಚ ಪಾರಿಭಾಷಿಕ ಪದವಾಗಿದೆ. ಇಂತ ಒಂದು ಆಧ್ಯಾತ್ಮಿಕ ಸ್ತರೋನ್ನತಿಯ ವಿಶಿಷ್ಟ ಪ್ರಭಾವಲಯವನ್ನು ಹೊಂದಿರುವ ಉಪಸರ್ಗ್ಗ ಪದವನ್ನು ಆತ್ಮಕಲ್ಯಾಣಕ್ಕಾಗಿ ಹಂಬಲಿಸಿ ಮತ್ತು ಅದರಲ್ಲಿ ಸಿದ್ಧಿವಡೆದು ನಿಸಿಧಿಯಾದವರಿಗೆ ಗೌರವ ಸಲ್ಲಿಸಲೇ ಇಟ್ಟಿರುವಂತಿದೆ. ಈ ಬಗ್ಗೆಯೇ ಈ ಕೃತಿಯಲ್ಲಿ ಅತಿಹೆಚ್ಚು ಶಾಸನಗಳು ಇರುವುದರಿಂದ ಈ ಹೊತ್ತಗೆಗೆ 'ಉಪಸರ್ಗ್ಗ' ಎಂದು ನಾಮಾಂಕಿತ ದಕ್ಕಿರುವುದು ಅತ್ಯಂತ ಔಚಿತ್ಯಪೂರ್ಣವಾಗಿದೆ. ಪ್ರಕೃತ ಕೃತಿಕಾರನ ಬಲವೂ ಬೆಂಬಲವೂ ಆಗಿರುವ ನಾಡಿನ ಹೆಸರಾಂತ ಶಾಸನತಜ್ಞರಾದ ಡಿ.ವಿ. ಪರಮಶಿವಮೂರ್ತಿಯವರು ಈ ಅಪರೂಪದ ಶೀರ್ಷಿಕೆಯನ್ನು ಹುಡುಕಿಕೊಟ್ಟಿದ್ದಾರೆ. ಜೊತೆಗೆ ಶ್ರೀಯುತರು ತಮ್ಮ ಪಿಎಚ್.ಡಿ ಅಧ್ಯಯನಾಕಾಂಕ್ಷಿಯಾದ ಶಿಷ್ಯನ ಪ್ರಸ್ತುತ ಕೃತಿಯ ತಲೆಬರಹವನ್ನು ತಾವೇ ಮುದ್ದಾಗಿ 11–12 ನೇ ಶತಮಾನದ ಲಿಪಿಯಲ್ಲಿ ವಿನ್ಯಾಸಗೊಳಿಸಿರುವುದು ಕೃತಿಯ ಮುಖಪುಟವು ಹೆಚ್ಚು ಸುಂದರವಾಗಿ ಕಾಣಲು ಸಹಕಾರಿಯಾಗಿರುವ ಸಂಗತಿಯನ್ನು ಇಲ್ಲಿಯೇ ಹೇಳಿಬಿಡುವುದು ಒಳಿತು. ಈ ರೀತಿಯ ವಿನ್ಯಾಸಕ್ಕೆ ಕಾರಣ ಈ ಸಂಕಲನದ ಬಹುತೇಕ ಶಾಸನಗಳು 11ರಿಂದ 12ನೆಯ ಶತಮಾನಕ್ಕೆ ಸೇರಿರುವುದೇ ಆಗಿದೆ.

ಕಾಲದ ದೃಷ್ಟಿಯಿಂದ ಕ್ರಿ.ಶ 1123 ರಿಂದ ಕ್ರಿ.ಶ 15–16ನೇ ಶತಮಾನದವರೆಗಿನ ಸರಿಸುಮಾರು 5 ಶತಮಾನಗಳ ಕಾಲಘಟ್ಟದ ಹಲವು ಸಾಂಸ್ಕೃತಿಕ ಅಂಶಗಳನ್ನು ಪ್ರಸ್ತುತ ಶಾಸನ ಸಂಪುಟವು ಒಡಲಲ್ಲಿರಿಸಿಕೊಂಡಿದೆ. ರಾಜಮನೆತನಗಳ ಆಳ್ವಿಕೆಯ ನೆಲೆಗಟ್ಟಿನಿಂದ ಹೇಳುವುದಾದರೆ, ಕಲ್ಯಾಣದ ಚಾಳುಕ್ಯರ ಆರನೆಯ ವಿಕ್ರಮಾದಿತ್ಯ, 2ನೆಯ ಜಗದೇಕಮಲ್ಲ, ಸೇವುಣ ಮನೆತನದ 2ನೇ ಸಿಂಹಣ, ರಾಮಚಂದ್ರ, ಹಾನಗಲ್ಲು ಕದಂಬರ ಮಲ್ಲದೇವ, ಕಲಚುರಿಯ ದೊರೆ 2ನೇ ಬಿಜ್ಜಳ, ವಿಜಯನಗರ ಸಾಮ್ರಾಜ್ಯದ 1ನೆ ಬುಕ್ಕರಾಯ, 2ನೇ ಹರಿಹರರ ಆಳ್ವಿಕೆಯ ಕಾಲಕ್ಕೆ ಸಂಬಂಧಿಸಿದ ಶಾಸನಗಳು ಇಲ್ಲಿ ವಿಶೇಷವಾಗಿವೆ. 39 ಶಾಸನಗಳು ಕನ್ನಡ ಭಾಷೆ ಮತ್ತು ಲಿಪಿಯಲ್ಲಿದ್ದರೆ ಉಳಿದೆರೆಡು ಶಾಸನಗಳಲ್ಲಿ ಸಂಸ್ಕೃತವು ಕ್ವಚಿತ್ತಾಗಿ ಬಳಕೆಯಾಗಿದೆ. ಕನ್ನಡ ಭಾಷೆಯೇ ಅಗಾಧವಾಗಿ ಬಳಕೆಯಾಗಿರುವುದು ಈ ಪ್ರದೇಶವು ತಿರುಳುಗನ್ನಡ ಪ್ರದೇಶ ಎಂಬ ಮಾತಿಗೆ ಪುಷ್ಟಿಯನ್ನು ಒದಗಿಸುತ್ತದೆ.

ರವಿಕುಮಾರ್ ಅವರು ಪ್ರತಿಶಾಸನದ ಆರಂಭದಲ್ಲಿ ಶಾಸನ ದೊರೆತ ಸ್ಥಳ, ಕಾಲ, ಪ್ರಕಾರ, ಭಾಷೆ–ಲಿಪಿ, ರಾಜ–ಮನೆತನ, ಇವುಗಳನ್ನು ನೀಡಿ ಈಗಾಗಲೇ ಈ ಶಾಸನಗಳಿಗೆ ಸಂಬಂಧಿಸಿದ ಸಾರಾಂಶರೂಪದ ಪುಟ್ಟ ವರದಿಗಳು ಎಲ್ಲಿಯಾದರೂ ಪ್ರಕಟವಾಗಿದ್ದರೆ ಆ ವರದಿಗಳ ಅಂದರೆ *Annual Report on South Indian Epigraphy, Jain heritage centres.com, Bangalore Mirror, Pune Mirror, Ahimsa Time, South Indian Inscriptions, Karnataka Inscriptions, ಧಾರವಾಡ ಜಿಲ್ಲೆಯ ಶಾಸನ ಸೂಚಿ* ಮೊದಲಾದ ಸಂಪುಟಗಳು ಹಾಗೂ ಪತ್ರಿಕೆಗಳಲ್ಲಿನ ಪುಟ್ಟ ವರದಿಗಳ ಮಾಹಿತಿಯನ್ನು ಸ್ಪಷ್ಟವಾಗಿ ನೀಡಿರುವುದು ಅವರ ಪ್ರಾಮಾಣಿಕತೆಯನ್ನು ಬಿಂಬಿಸುತ್ತದೆ. ಇದು ಅಭ್ಯಾಸಿಗಳ ಅಧ್ಯಯನಕ್ಕೆ ಇನ್ನಷ್ಟು ನೆರವಾಗುತ್ತದೆ.

ಪ್ರತಿಯೊಂದು ಶಾಸನವನ್ನು ಎಚ್ಚರಿಕೆಯಿಂದ ಓದಿ ಅದರ ಪಾಠವನ್ನು ನಿರ್ಧರಿಸಿರುವುದು, ಅಗತ್ಯವಾದೆಡೆ ಉಚಿತವಾದ ಊಹಾಪಾಠಗಳನ್ನು ಮಾಡಿರುವುದು ಲಕ್ಷಾರ್ಹ ಸಂಪಾದನಾ ವಿಧಾನವೇ ಸರಿ. ಶಾಸನಗಳಲ್ಲಿಯೇ ಯುಕ್ತ ಮಾಹಿತಿಯ ಅಸ್ಪಷ್ಟತೆ ಎದುರಾದಾಗ, ಈಗಾಗಲೇ ಪ್ರಕಟಗೊಂಡ ಶಾಸನಗಳ ನೆರವಿನಿಂದ ಅರ್ಥ, ಅನ್ವಯ ಮತ್ತು ವಿಶ್ಲೇಷಣೆಗಳನ್ನು ಮಾಡಿರುವುದನ್ನು ಗಮನಿಸಬಹುದು. ಉದಾಹರಣೆಗೆ ಹೊನ್ನತ್ತಿಯ ಶಾಸನ (ಸಂಖ್ಯೆ 01) ದಲ್ಲಿ ಅಲ್ಲಲ್ಲಿ ತ್ರುಟಿತಗೊಂಡ ಭಾಗಗಳಿವೆ. ಸೇವುಣ ವಂಶದ ಸಿಂಹಣದೇವನು ಆರನೇ ವಿಕ್ರಮಾದಿತ್ಯನ ಮಹಾಮಂಡಲೇಶ್ವರನಾಗಿ ಬನವಾಸಿ, ಪೊನ್ನವರ್ತಿಗಳನ್ನು ಆಳುತ್ತಿದ್ದ ವಿಚಾರ ಸದ್ಯದ ಶಾಸನದಲ್ಲಿದೆ. ಆದರೆ ಸಿಂಹಣದೇವನು "ಸೇವುಣ ದೇಶಮಂ ಪಳಿಯಣ್ಣ ನಾಲ್ಸಾಯಿರಮುಂ, ಉತ್ತಮ ಅನೇಕ ದೇಶಾಗ್ರಹಾರಗಳಂ, ಬನವಾಸೆ ನಾಡ ಬಳಿಯ ಅನಾದಿ ಅಗ್ರಹಾರವಾದ ಹೊನ್ನವರ್ತಿ" ಇವುಗಳನ್ನು ಆಳುತ್ತಿದ್ದನೆಂದು ಇದೇ ಊರಿನ ಇನ್ನೊಂದು ಶಾಸನದ ನೆರವಿನಿಂದ ದೃಢಪಡಿಸಿದ್ದಾರೆ. ಈ ಶಾಸನ ಶಿಲ್ಪವಿರುವ ಜಿನಬಿಂಬವನ್ನು ವಿರೂಪಗೊಳಿಸಿ ಶಿವಲಿಂಗವನ್ನು, ಮುನಿಯ ಶಿಲ್ಪವನ್ನು ಹಾಳುಮಾಡಿ ಭಕ್ತನ ಶಿಲ್ಪವನ್ನಾಗಿ ಮಾಡಲಾಗಿರುವ ವಿಕೃತ ಮನಸ್ಸಿನ ಛಾಯೆಯನ್ನು ರವಿಕುಮಾರ ಹೇಳಿರುವುದು, ಧಾರ್ಮಿಕ ಕಲಹಗಳ ದುಷ್ಪಪ್ರಭಾವ ಶಿಲ್ಪಗಳ ಮೇಲೂ ಆಗಿರುವುದಕ್ಕೆ ಉದಾಹರಣೆಯಾಗಿದೆ.

ಬರಿಯ ಶಾಸನಗಳಷ್ಟೇ ಅಲ್ಲದೆ ಆಯಾ ಶಾಸನ ಶಿಲ್ಪಗಳನ್ನು ತಾದಾತ್ಮ್ಯದಿಂದ ಅವಲೋಕಿಸಿ ಸ್ಥಳೀಯ ಸಾಂಸ್ಕೃತಿಕತೆಯನ್ನು ಬಗೆದು ತೋರುವಲ್ಲಿಯೂ ಕೃತಿಕಾರರು ಯಶಸ್ವಿಯಾಗಿದ್ದಾರೆ. ಉದಾಹರಣೆಗೆ ಹಿರೇಕೋಣತಿಯ ಶಾಸನದಲ್ಲಿ (ಶಾಸನ ಸಂಖ್ಯೆ 14) ಕಲ್ಯಾಣಕೀರ್ತಿಯೆಂಬ ಮುನಿಯ ಶಿಷ್ಯನಾದ ಬಮ್ಮಯ್ಯನು ಮುಡಿಪಿದ ವಿಚಾರವಿದ್ದರೆ, ಅದೇ ಶಾಸನದ ಶಿಲ್ಪದಲ್ಲಿ ಶಿಲ್ಪಿಯ ಅಚಾತುರ್ಯದಿಂದ ಬಮ್ಮಯ್ಯನು ಸ್ತ್ರೀರೂಪದಲ್ಲಿ ಕೆತ್ತಲ್ಪಟ್ಟಿರುವುದನ್ನು ಗಮನಿಸಿ, ಅದು ಬಮ್ಮಯ್ಯನದೇ ಶಿಲ್ಪ ಎಂದು ಖಚಿತಗೊಳಿಸಿದ್ದಾರೆ.

ಜಿನನಷ್ಟೇ ಘನವಾದ ಸ್ಥಾನವನ್ನು ಕಠೋರ ನಿಯಮಗಳನ್ನು ಅನುಸರಿಸಿದ ಮುನಿಯೂ ಪಡೆಯುತ್ತಾನೆ ಎಂಬುದಕ್ಕೆ ಹಿರೇಕೋಣತಿಯ (ಶಾಸನ ಸಂಖ್ಯೆ 15) ಇನ್ನೊಂದು ಶಾಸನಶಿಲ್ಪದಲ್ಲಿ ಶಿಲ್ಪಿಯು ಜಿನನಿಗೆ ಮತ್ತು ಕಲ್ಯಾಣಕೀರ್ತಿ ಭಟ್ಟಾರಕ ಮುನಿಗೆ ಸಮಾನವಾದ ಪೀಠಗಳನ್ನು ಹಾಕುವುದರ ಮೂಲಕ ಸಾರಿಹೇಳಿರುವುದನ್ನು ರವಿಕುಮಾರ ಗುರುತಿಸಿದ್ದಾರೆ.

ಹಿರೇ ಅಣಜಿಯ (ಶಾಸನ ಸಂಖ್ಯೆ 19) ಶಾಸನಶಿಲ್ಪದಲ್ಲಿ ಸಲ್ಲೇಖನ ವ್ರತದಾರಿಯ ಪಾರ್ಶ್ವದಲ್ಲಿ ಮಗುವೊಂದು ಕೈಮುಗಿದು ಕುಳಿತಿರುವ ಶಿಲ್ಪವು ಈ ಪ್ರದೇಶಗಳಲ್ಲಿ ಜೈನ ಧಾರ್ಮಿಕ ವಿಧಿವಿಧಾನಗಳು ಮಕ್ಕಳಿಗೆ ಬಾಲ್ಯದಿಂದಲೇ ಮನಸ್ಸಿಗೆ ನಿಲುಕಲಿ ಎಂಬ ಸದಾಶಯದಿಂದ ಮಕ್ಕಳು ಇಂತಹ ಕಾರ್ಯಗಳಲ್ಲಿ ಭಾಗಿಯಾಗಲಿ ಎಂಬುದನ್ನು ತಿಳಿಸುವ ಸಲುವಾಗಿ ಶಿಲ್ಪಿತವಾಗಿರುವುದನ್ನು ಗುರುತಿಸಿದ್ದಾರೆ. ನಿಸಿಧಿಗಳಲ್ಲಿ ಇದೊಂದು ಅಪರೂಪದ ಶಿಲ್ಪವೆಂಬುದು ಲೇಖಕರ ಚಿಂತನೆಯಾಗಿದೆ.

12ನೇ ಶತಮಾನದಲ್ಲಿ ನಡೆದ ಧಾರ್ಮಿಕ ಕಲಹದಲ್ಲಿ ಹಾಳಾದ ಜೈನಕೇಂದ್ರಗಳಲ್ಲಿ ಆಲದಗೆರೆಯೂ ಒಂದು. ಇಲ್ಲಿರುವ ಮಾಯಕ್ಕಳ ನಿಸಿಧಿಯ ಬಗ್ಗೆ ಪ್ರಸ್ತಾಪಿಸುತ್ತಾ ಈ ಶಿಲ್ಪದ ಕೆಳಗೆ ಒಂದು ಬಿಲ್ಲಿನಾಕೃತಿಯಿದ್ದು, ಬಹುಶಃ ಇವಳ ಗಂಡ ಯುದ್ಧದಲ್ಲಿ ಮಡಿದುದನ್ನು ಇದು ಸೂಚಿಸುತ್ತದೆ ಹಾಗೂ ಈ ಸಂದರ್ಭದಲ್ಲಿ ಮಾಯಕ್ಕ ಸಲ್ಲೇಖನ ವ್ರತವನ್ನು ಸ್ವೀಕರಿಸಿ ಸಮಾಧಿಯಾದಂತೆ ತೋರುತ್ತದೆ. ಎಂದಿದ್ದಾರೆ. ಈ ವಿಶ್ಲೇಷಣೆಯು ಮೇಲ್ನೋಟಕ್ಕೆ ದೂರಾನ್ವಯವೇನೋ ಎನಿಸಿದರೂ ಇಡೀ ಸಂಕಲನದಲ್ಲಿ ನಿಸಿಧಿಗೆ ಕಾರಣವನ್ನು ತಿಳಿಸುವ ಒಂದು ಶಾಸನವೂ ಇಲ್ಲದಿರುವಾಗ ಈ ಬಗೆಯ ಊಹೆ ತಪ್ಪಲ್ಲವೆನಿಸುತ್ತದೆ.

ನದಿಹರಳ ಹಳ್ಳಿಯ (ಶಾಸನ ಸಂಖ್ಯೆ 41) ಶಾಸನವಂತೂ ಸಾಂದವಂಶದ ಬಗ್ಗೆ, ಕೇತಗಾವುಂಡನ ಕೌಟುಂಬಿಕ ವಿವರಗಳ ಕುರಿತಂತೆ ಅಪೂರ್ವ ಮಾಹಿತಿಯ ಜೊತೆಗೆ ಸ್ಥಳೀಯ ರಾಜಕೀಯ ಸಂಗತಿಗಳನ್ನು ತಿಳಿಸುತ್ತದೆ. ಬನವಾಸಿ, ರಟ್ಟಹಳ್ಳಿ, ಗೊಟ್ಟಿಗೊಡಿಯ ವರ್ಣನೆಗಳು ಸಾಹಿತ್ಯಾಭ್ಯಾಸಿಗಳಿಗೆ ಬಹಳ ಮುಖ್ಯ ದಾಖಲೆಗಳಾಗಿವೆ.

ಇವೆಲ್ಲಕ್ಕೂ ಕಲಶವಿಟ್ಟಂತೆ ಕನ್ನಡ ನಾಡಿನ ಬಹುದೊಡ್ಡ ಜೈನಕೇಂದ್ರಗಳಲ್ಲಿ ಒಂದಾದ ಪರಲೂರು 13ನೆ ಶತಮಾನದವರೆಗೂ ಪ್ರಭಾವಶಾಲಿಯಾಗಿ ಮುಂದುವರಿದೆತ್ತೆಂಬುದನ್ನು ದೇವಗಿರಿಯ ಶಾಸನವು (ಶಾಸನ ಸಂಖ್ಯೆ 3) ತಿಳಿಸುತ್ತದೆ. ಚರಿತ್ರೆಯ ಹಲವು ಅಂಶಗಳನ್ನು ಗರ್ಭೀಕರಿಸಿಕೊಂಡಿರುವ ಈ ಶಾಸನ ಶೋಧವು ಕನ್ನಡ ನೆಲದ ಒಟ್ಟು ಸಾಂಸ್ಕೃತಿಕ ಅಧ್ಯಯನಕ್ಕೆ ವಿಶೇಷ ಸೇರ್ಪಡೆಯಾಗಿದೆ. ಮೂಲ ಸಂಘ, ಯಾಪನೀಯ ಸಂಘ, ದ್ರವಿಳ ಸಂಘ, ನಂದಿ ಸಂಘಗಳಲ್ಲಿ ದ್ರವಿಲ ಸಂಘ, ಮೂಲ ಸಂಘವನ್ನು ಉಲ್ಲೇಖಿಸುವ ಶಾಸನಗಳು, ಸೂರಸ್ತಗಣ, ಸೇನಗಣ, ದೇವಗಣ, ಬಳಗಾರಗಣಗಳು, ವಕ್ರಗಚ್ಛ, ಚಿತ್ರಕೂಟಾನ್ವಯ, ಪೂಜ್ಯಪಾದಾನ್ವಯ, ಕುಂದಕುಂದಾನ್ವಯ, ಲತಾನ್ವಯ ಇವುಗಳಿಗೆ

ಸೇರಿದ ಈ ಸಂಪುಟದ ಶಾಸನಗಳು ಒಟ್ಟಂದದಲ್ಲಿ ಜೈನಧರ್ಮದ ಅಧ್ಯಯನಕ್ಕೆ ವಿಶೇಷವಾಗಿ ಸಹಕಾರಿಯಾಗಿದೆ.

ಶಾಸನ ವಾಚಕರು ಎಷ್ಟು ಸೂಕ್ಷ್ಮವಾಗಿರಬೇಕು ಎಂಬುದಕ್ಕೆ ಒಳ್ಳೆಯ ಉದಾಹರಣೆಯಾಗಿ ಪ್ರಸ್ತುತ ಸಂಕಲನದಲ್ಲಿರುವ ಒಂದು ಶಾಸನವನ್ನು ದಾಖಲಿಸಲೇಬೇಕು. ರಾಣೆಬೆನ್ನೂರು ತಾಲ್ಲೂಕಿನ ನದಿಹರಳ ಹಳ್ಳಿಯ ಸೋಮೇಶ್ವರನ ದೇವಾಲಯದಲ್ಲಿರುವ (ಶಾಸನ ಸಂಖ್ಯೆ 41)ಶಾಸನವು ಈ ಹಿಂದೆ *ARSIE* 1934–35 ರ ಶಾಸನ ಸಂಖ್ಯೆ 58, ಧಾರವಾಡ ಜಿಲ್ಲಾ ಶಾಸನ ಸೂಚಿ(ನಂ 49, ಪುಟ 55)ಯಲ್ಲಿ ದಾಖಲಾಗಿ *South Indian Inscriptions* 18ನೆಯ ಸಂಪುಟದಲ್ಲಿ ತೃಟಿತವಾಗಿ ಪ್ರಕಟವಾಗಿತ್ತು. ಈ ಶಾಸನ ಪಾಠವನ್ನು ಗಮನಿಸಿದರೆ ಯಾವ ವಿಷಯವೂ ತಿಳಿದು ಬರುತ್ತಿರಲಿಲ್ಲ. ಒಂದು ವೇಳೆ ರವಿಕುಮಾರರ ಕಣ್ಣಿಗೆ ಮೂಲ ಶಾಸನ ಬೀಳದೆ ಹೋಗಿದ್ದರೆ ನಮಗೆ ಈ ಶಾಸನ ಪಾಠ ಸದ್ಯಕ್ಕೆ ಸಿಗುತ್ತಲೇ ಇರಲಿಲ್ಲ. 70 ಸಾಲಿನ ಕಲ್ಯಾಣ ಕಳಚೂರ್ಯರ 25–3–1168 ರ ಈ ಶಾಸನದಲ್ಲಿ ಒಂದೇ ಒಂದು ಅಕ್ಷರ ಕೂಡ ಈ ಹಿಂದೆ ಎಲ್ಲರೂ ತಿಳಿಸಿದ್ದಂತೆ ತ್ರುಟಿತವಾಗದೇ ಅತ್ಯಂತ ಸುಂದರವಾಗಿದೆ. (ಪುಸ್ತಕದ ಕೊನೆಯ ಪುಟದಲ್ಲಿರುವ ಛಾಯಾಚಿತ್ರವನ್ನು ಗಮನಿಸಿದರೆ ಇದು ನಮಗೆ ಮನದಟ್ಟಾಗುತ್ತದೆ) ಪರಿಷ್ಕೃತ ಪಾಠದಿಂದ ಅನೇಕ ವಿಷಯಗಳು ನಿಮಗೆ ಸಿಕ್ಕಿವೆ. ಇದು ಯಾವುದೇ ಪಾಠವನ್ನು ಮೂಲದೊಂದಿಗೆ ಹೋಲಿಸಿಯೇ ನೋಡಬೇಕೆಂಬ ಎಚ್ಚರವನ್ನು ಉಂಟುಮಾಡಿದೆ.

ಇನ್ನು ಈ ಸಂಪುಟದ ಇನ್ನೊಂದು ವಿಶೇಷತೆಯೆಂದರೆ, ಊರೊಂದರಲ್ಲಿ ಬಸದಿಯೇನಾದರೂ ಇತ್ತೇ ಇಲ್ಲವೇ ಎಂಬುದನ್ನು ಸಾಧಾರವಾಗಿ ನಿರೂಪಿಸುವಲ್ಲಿಯೂ ಗ್ರಂಥಕಾರನ ಜಾಣ್ಮೆ ಮತ್ತು ಶ್ರಮ ಕಂಡುಬರುತ್ತದೆ. ಸುಣಕಲ್ಲಬಿದರೆಯ ಶಾಸನದಲ್ಲಿ (ಶಾಸನ ಸಂಖ್ಯೆ 10) ಬೊಪ್ಪಿಸೆಟ್ಟಿಯು ಸನ್ಯಸನ ವಿಧಿಯಿಂದ ಮುಡುಪಿದ ವಿಷಯವಿದೆ. ಇವನ ನಿಸಧಿಯೇ ಈ ಊರಲ್ಲಿ ಬಸದಿಯೊಂದಿತ್ತು ಎಂಬುದಕ್ಕೆ ಸಾಕ್ಷಿಯಾಗಿರುವುದನ್ನು ಅವಲೋಕಿಸಿ ಸಂಶೋಧನೆಯನ್ನು, ಕ್ಷೇತ್ರಕಾರ್ಯವನ್ನು ಕೈಗೊಂಡು ಊರವರಲ್ಲಿ ವಿಚಾರಿಸಿದಾಗ ಆ ಊರಿನ ಈಶ್ವರ ದೇಗುಲದ ಹಿಂದಿನ ಜಾಗವನ್ನು ಬಸದಿ ಜಾಗ ಎಂದು ಈಗಲೂ ಕರೆಯುವುದನ್ನು ದಾಖಲಿಸಿದ್ದಾರೆ. ಇದಕ್ಕೆ ಪೂರಕವಾಗಿ ತೀರ್ಥಂಕರನ ಪಾದಪೀಠವೊಂದನ್ನು ಸಹ ಈ ಊರಲ್ಲಿ ಶೋಧಿಸಿ ಹೊರತೆಗೆದಿದ್ದಾರೆ.

ದೇವಗಿರಿಯ ಶಾಸನದಲ್ಲಿ (ಶಾಸನ ಸಂಖ್ಯೆ 3) "ಶ್ರೀಮನ್ಮಹಾಸಾಮನ್ತಃ ಕಲಿಯಮರಸರೂ ತಂತ್ರಪಾಳ ಬಾಚಂಣನುಂ ಸಮಸ್ತಪರಿಗ್ರಹಮುಂ ದೇವರ ಪೂಜೆಪುನಸ್ಕಾರಕ್ಕಂ ಬಾಳಚಂದ್ರ ಸಿದ್ಧಾನ್ತದೇವರ ಕಾಲಂ ಕರ್ಚಿ ಧಾರಾಪೂರ್ಬ್ಬಕ್ಕಂ ಮಾಡಿ ಬಿಟ್ಟ ಧರ್ಮ" ಎಂಬಲ್ಲಿ ಶಾಂತಿನಾಥ ಜಿನಾಲಯವನ್ನು ನಿರ್ಮಿಸಿದ ಕಲಿಯಮರಸನು ತಂತ್ರಪಾಳ ಬಾಚಣ್ಣನು ಮತ್ತಿತರರೊಡಗೂಡಿ ಅಪಾರವಾದ ದಾನದತ್ತಿಗಳನ್ನು ಬಾಳಚಂದ್ರ ಸಿದ್ಧಾಂತ ದೇವರಿಗೆ ನೀಡಿದನು ಎಂದೇ ಅರ್ಥವಾಗುತ್ತದೆ. ಆದರೆ ರವಿಕುಮಾರ್ ಅವರು ಬಾಳಚಂದ್ರ ಸಿದ್ಧಾಂತ ದೇವರ ಸಮ್ಮುಖದಲ್ಲಿ ದತ್ತಿನೀಡಲಾಯಿತು ಎಂದು ಹೇಳಿರುವುದು ದಾನವನ್ನು ಸ್ವೀಕರಿಸಿದವರು ಯಾರು ಎಂಬ ಗೊಂದಲವನ್ನು ಉಂಟು ಮಾಡುತ್ತದೆ. ಬರವಣಿಗೆಯ ಭರದಲ್ಲಿ ಹೀಗಾಗಿರಬಹುದು.

ಪ್ರಸ್ತುತ ಸಂಪುಟದ ಕೆಲವು ಶಾಸನಗಳಲ್ಲಿ ಪದ್ಯಗಳ ಪೂರ್ವದಲ್ಲಿ ಅವು ವೃತ್ತಗಳಲ್ಲಿರುವುದನ್ನು ಶಾಸನಪಾಠದಲ್ಲಿಯೇ ಸೂಚಿಸಲಾಗಿದೆ. ಶಾಸನಪಾಠದಲ್ಲಿ ಕೆಲವು ಛಂದೋಬಂಧಗಳ ಹೆಸರನ್ನು ಕೂಡ ಸೂಚಿಸಲಾಗಿದೆ. ಆದರೆ ಹಲವೆಡೆ ಈ ರೀತಿಯ ಉಲ್ಲೇಖಗಳಿಲ್ಲ. ಪದ್ಯದ ಸ್ವರೂಪ ಉಲ್ಲೇಖಗೊಳ್ಳದಿದ್ದರೂ ಸೂಕ್ಷ್ಮವಾಗಿ ನೋಡಿದಾಗ ಛಂದೋಬಂಧಗಳಿರುವುದು ತಿಳಿಯುತ್ತದೆ. ಉದಾಹರಣೆಗೆ(ಶಾಸನ ಸಂಖ್ಯೆ 18)

6. ಸ್ತೆಯಾದಳು ಮಂಗಳ ಮಹಾಶ್ರೀಶ್ರೀಶ್ರೀ ಪತಿಭಕ್ತೆ ಪರಮಜಿನ[ಮ]

7. [ಣಿ] ಗನತಯುಕ್ತೆ ಸಮಸ್ತಗುಣಗಳಂಕೃತೆ ತತ್ಸದಗತ್ರಿಯೆಂದೀಕ್ಷಿತ ವರ್ಣೆ

8. ಪುದಲ್ಲಿನ ಮಾರವ್ವೆಯನುತ್ತು !!

ಈ ಶಾಸನಪಾಠದಲ್ಲಿ ಪದ್ಯದ ಲಯಗತಿಯನ್ನು ಗಮನಿಸುತ್ತಾ ಹೋದರೆ ಕಂದಪದ್ಯದ ಸ್ವರೂಪ ಸಿದ್ಧವಾಗುತ್ತದೆ, ಹೇಗೆಂದರೆ–

ಪತಿಭಕ್ತೆ ಪರಮಜಿನ[ಮ][ಣಿ]
ಗ–ನತಯುಕ್ತೆ ಸಮಸ್ತ ಗುಣಗಳಂಕೃತೆ
ತತ್ಸದ ಗತ್ರೀಯೆಂದೀ
ಕ್ಷಿತ ವರ್ಣೆಪುದಲ್ಲಿನ ಮಾರವ್ವೆಯನೆತ್ತಂ

ಮೊದಲನೆಯ ಪಾದದ ಕೊನೆಯ ಗಣ, 2ನೆಯ ಪಾದದ ಮೊದಲ ಗಣವು ಅಶುದ್ಧವಾಗಿದೆ. ಉಳಿದಂತೆ 3ನೆಯ ಪಾದದಲ್ಲಿ 'ತ್ರಿ' ಎಂಬುದನ್ನು ತ್ರೀ ಎಂದೂ, 4ನೆಯ ಪಾದದ ಕೊನೆಯ ಗಣದಲ್ಲಿ 'ನುತ್ತು' ಎಂದಿರುವುದನ್ನು 'ನೆತ್ತಂ' ಎಂದೂ ತಿದ್ದಿಕೊಂಡು ಓದಿದರೆ ಅರ್ಥಕ್ಕೂ ಚ್ಯುತಿ ಬರದೆ ಛಂದೋಲಯದ ಮೂಲಕ ಇಲ್ಲಿ ಶುದ್ಧವಾದ ಕಂದಪದ್ಯವು ದೊರೆತು ಶಾಸನದ ಶುದ್ಧ ಪಾಠವನ್ನು ಕಂಡುಹಿಡಿಯುವಲ್ಲಿಯೂ ಸಹಕಾರಿಯಾಗುತ್ತದೆ. ಆದರೆ ಮೊದಲ 2 ಸಾಲುಗಳು ಶಾಸನಪಾಠದಲ್ಲಿಯೇ ದೋಷಪೂರ್ಣವಾಗಿರುವುದರಿಂದ ಸಂಪಾದಕರು ಇದಕ್ಕೆ ಹೊಣೆಯಲ್ಲ. ಆದರೆ ಛಂದಸ್ಸಿನ ದೃಷ್ಟಿಯಿಂದ ಪಾಠಪರಿಷ್ಕರಣೆಯು ಇನ್ನಷ್ಟು ಶುದ್ಧವಾಗುತ್ತದೆ ಎಂಬುದಷ್ಟೇ ನನ್ನ ಈ ಮಾತಿನ ಮೂಲ ಉದ್ದೇಶವಾಗಿದೆ.

ಒಟ್ಟಿನಲ್ಲಿ ಶ್ರಮಸಾಧ್ಯವಾದ ಕೆಲಸವನ್ನು ಯಶಸ್ವಿಯಾಗಿ ಮಾಡಿರುವುದು ಈ ಕೃತಿಯ ಹೆಗ್ಗಳಿಕೆಯಾಗಿದೆ. ಪುಸ್ತಕದ ಬೆನ್ನುಡಿಯಲ್ಲಿ ಡಿ.ವಿ. ಪರಮಶಿವಮೂರ್ತಿಯವರು ಹೇಳಿರುವಂತೆ "ಸಂಶೋಧನೆ ಕೈಗೊಂಡಾಗಿನಿಂದಲೂ ವಾರಕ್ಕೊಮ್ಮೆಯಾದರೂ ತಪ್ಪದೇ ಮಾಧ್ಯಮಗಳಲ್ಲಿ ಹೊಸ ಶಾಸನದ ಕುರಿತು ಸುದ್ದಿಯಾಗುತ್ತಿರುವ ಅಪರೂಪದ ಸಂಶೋಧಕರಾಗಿ ಬೆಳೆಯುತ್ತಿದ್ದಾರೆ. ಶಾಸನಗಳ ಮತ್ತು ಹಳೆಗನ್ನಡ ಅಧ್ಯಯನ ಕೈಗೊಳ್ಳುವವರ ಸಂಖ್ಯೆ ಇತ್ತೀಚೆಗೆ ತೀರಾ ವಿರಳವಾಗುತ್ತಿದೆ. ದೈಹಿಕ ಮತ್ತು ಮಾನಸಿಕ ಶ್ರಮ–ಶಿಸ್ತನ್ನು ಬೇಡುವ ಈ ಕ್ಷೇತ್ರಕ್ಕೆ ಯುವ ಮನಸುಗಳು ಪ್ರವೇಶವಾಗಬೇಕು" ಎಂಬ ಮಾತು ಅಕ್ಷರಶಃ ನಿಜವಾದ ಮಾತಾಗಿದೆ. ತಲಸ್ಪರ್ಶಿ ಅಧ್ಯಯನ ವಿಧಾನಗಳಿಂದ, ಸೊಗಸಾದ ಶಾಸನಶಿಲ್ಪಗಳಿಂದ, ಉತ್ಸಾಹಭರಿತ ನಿರೂಪಣೆಯಿಂದ, ಉಚಿತವಾದ ವಸ್ತುನಿಷ್ಠ ವಿಶ್ಲೇಷಣೆಯಿಂದ *ಉಪಸರ್ಗ* ಕೃತಿಯು ಜೈನಧರ್ಮ ಅಧ್ಯಯನವನ್ನು ಇನ್ನೂ ಹೊಸರೀತಿಯಿಂದಲೂ ಹೊಸಮಾಹಿತಿಗಳಿಂದಲೂ ನಿಚ್ಚಳಗೊಳಿಸುತ್ತದೆ ಎಂಬುದರಲ್ಲಿ ಸಂದೇಹವಿಲ್ಲ. ರವಿಕುಮಾರ, ಕೆ. ನವಲಗುಂದ ಅವರ ಈ ಸಾಹಸಕ್ಕೆ ಅಭಿನಂದನೆಗಳು. ■

ಆಕರ ವಿಭಾಗ

ಮಂಡ್ಯ ಜಿಲ್ಲೆ ಮತ್ತು ತಾಲ್ಲೂಕಿನ ಕೆ. ಗೌಡಗೆರೆ ಗ್ರಾಮದಲ್ಲಿನ ಜಗದೇವರಾಯನ ಅಪ್ರಕಟಿತ ಶಾಸನ

❑ ಎಸ್. ಕಾರ್ತಿಕ್
65, 3 ನೆಯ ಅಡ್ಡರಸ್ತೆ, ಶಿಕ್ಷಕರ ಬಡಾವಣೆ, 1 ನೆಯ ಹಂತ, ಕುಮಾರಸ್ವಾಮಿ ಬಡಾವಣೆ ಅಂಚೆ, ಬೆಂಗಳೂರು-560111
saigottan@gmail.com

ಕರ್ನಾಟಕ ರಾಜ್ಯದ ಮಂಡ್ಯ ಜಿಲ್ಲೆ ಮತ್ತು ತಾಲ್ಲೂಕಿಗೆ ಸೇರಿರುವ ಕೆ. ಗೌಡಗೆರೆ ಗ್ರಾಮದಲ್ಲಿ ಚನ್ನಪಟ್ಟಣದ ಪಾಳೆಯಗಾರರ ದೊರೆ ಜಗದೇವರಾಯನ ಕಾಲದ ಶಿಲಾಶಾಸನವೊಂದು ಲಭ್ಯವಾಗಿದೆ. ನಮ್ಮ ಗಮನಕ್ಕೆ ಬಂದಂತೆ ಈ ಶಾಸನವು ಇದುವರೆಗೂ ಅಪ್ರಕಟಿತವಾಗಿದೆ. ಈ ಶಾಸನವನ್ನು ಕೆ. ಗೌಡಗೆರೆ ಗ್ರಾಮದ ಮಾರಿಗುಡಿಯ ಮುಂದೆ ನಿಲ್ಲಿಸಲಾಗಿದೆ. 31 ಸಾಲುಗಳಿಂದ ಕೂಡಿರುವ ಈ ಶಾಸನವು ಕನ್ನಡ ಲಿಪಿ ಮತ್ತು ಕನ್ನಡ ಭಾಷೆಯಲ್ಲಿ ರಚಿತವಾಗಿದೆ. ಅಕ್ಷರಗಳು ಸುಂದರ ವಾಗಿದ್ದರೂ ಅನೇಕ ಕಡೆ ಕಂಡರಣೆ ಆಳವಾಗಿಲ್ಲದೆ ಇರುವುದರಿಂದ ಹಲವೆಡೆ ಲಿಪಿ ಅಸ್ಪಷ್ಟವಾಗಿದೆ ಹಾಗೂ ಕೆಲವೆಡೆ ಅಕ್ಷರ ಗಳು ತ್ರುಟಿತವಾಗಿವೆ {ಶಾಸನಪಾಠದೊಳಗೆ ಕಂಡುಬರುವ [*] ಈ ಚಿಹ್ನೆಯನ್ನು ಅಕ್ಷರಗಳು ಅಸ್ಪಷ್ಟವಾಗಿ ತೋರುತ್ತಿರುವೆಡೆ ಬಳಸಿದೆ}. ಶಾಸನಕ್ಕೆ ಸುಣ್ಣ/ತೈಲವರ್ಣ (Enamel paint) ಬಳಿದಿರುವ ಕಾರಣದಿಂದ ಪಡಿಯಚ್ಚು, ಛಾಯಾಚಿತ್ರಗಳು ಸ್ಪಷ್ಟವಾಗಿ ಮೂಡಿಬರುವುದಿಲ್ಲ. ಸ್ವಲ್ಪ ಸಾಹಸದಿಂದ ಪಾಠವನ್ನು ಓದಬೇಕಾಗುತ್ತದೆ. ಭಾಷೆ ಅಶುದ್ಧವಾಗಿದ್ದು ಆಡುನುಡಿಯ ಪ್ರಭಾವ ಎದ್ದು ಕಾಣುತ್ತದೆ. ಲಿಪಿಕಾರ ಸ್ಖಾಲಿತ್ಯಗಳು ಅಧಿಕವಾಗಿವೆ. ಭಾಷೆಯ ಅಶುದ್ಧತೆಯಿಂದಲೂ ಶಾಸನ ಸ್ವಲ್ಪಮಟ್ಟಿಗೆ ತ್ರುಟಿತವಾಗಿರುವುದರಿಂದಲೂ ಶಾಸನೋಕ್ತ ವಿಷಯದ ಬಗೆಗೆ ಸಮರ್ಪಕವಾಗಿ ತಿಳಿಯಲು ಸಾಧ್ಯವಾಗುತ್ತಿಲ್ಲ. ಇದರಲ್ಲಿ ಕಾಲವನ್ನು 'ಶಾಲಿವಾಹನ ಶಕವರುಷ 1523 ವರ್ತಮಾನವಾಗಿ ಸಂದು ಬಹ ಪ್ಲವ ಸಂವತ್ಸರದ ಚಯಿತ್ರ ಶುದ್ಧ 5{=ಪಂಚಮಿ} ಸ್ತಿರವಾರ

{=ಶನಿವಾರ}' ಎಂದು ಹೇಳಿದ್ದು ಇದು ಚಾಂದ್ರಮಾನ ಅಥವಾ ಜೂಲಿಯಸ್ ಪಂಚಾಂಗದಂತೆ ಕ್ರಿ.ಶ. 28-3-1601, ಶನಿವಾರಕ್ಕೆ ಸರಿಹೊಂದುತ್ತದೆ. ಲಿಪಿ ಸ್ವರೂಪವೂ ಈ ಕಾಲಕ್ಕೆ ಸರಿಹೊಂದುತ್ತದೆ.

ಜಗದೇವರಾಯ (ಈತ ಚನ್ನಪಟ್ಟಣ ಪಾಳೆಯಗಾರರ ದೊರೆ. ಈ ಪಾಳೆಯಗಾರರಲ್ಲಿ ಮೂರು ಜನ ಜಗದೇವರಾಯ ಹೆಸರಿನವರು ಕಂಡುಬರುತ್ತಾರೆ. ಈ ಶಾಸನೋಕ್ತ ಜಗದೇವರಾಯ ಈ ಮೂವರಲ್ಲಿ ಯಾರೆಂದು ಸ್ಪಷ್ಟವಾಗಿ ಹೇಳಲು ಸಾಧ್ಯವಿಲ್ಲ. ಶಾಸನದಲ್ಲಿ ಜಗದೇಯರಾಯ ಎಂಬ ರೂಪವಿದೆ) ಮತ್ತು ಮೊಡಣ ಸಾಹೇಬ ವೊಡೆಯರು (ಈತ ಯಾರೆಂದು ತಿಳಿದುಬರುವುದಿಲ್ಲ) ತಳಕಾಡ ವ್ಯಕ್ತಿಯೊಬ್ಬರಿಗೆ (ಹೆಸರು ತ್ರುಟಿತವಾಗಿದೆ) ನೀಡಿರುವ ನಾಟ್ಟುಕೊಡಗೆಯ ಶಿಲಾಶಾಸನ ಇದಾಗಿದೆ. ಕೋಡಂಬಲಿ ಹೆಸರಿನ ಗ್ರಾಮವನ್ನು ಬಿಡಿಸಿ (ಯಾರಿಂದ ಬಿಡಿಸಲಾಗಿದೆ ಎಂಬುದರ ವಿವರ ತಿಳಿಯದು) ನಾಡಗೌಡಿಕೆಗೆ ನೀಡಿ ಗಲುಡಿಗೆರೆ ಮತ್ತು ಕೆರೆಗೋಡು ಸ್ಥಳಗಳನ್ನು ಸರ್ವಸ್ವಾಮ್ಯವಾಗಿ ನೀಡಿರುವ ವಿವರ ಈ ಶಾಸನದಲ್ಲಿದೆ. ಶಾಸನದ ಕಲ್ಲನ್ನು ವಿಮೋಚನೆಯ ಕಲ್ಲು ಎಂದು ಕರೆದಿರುವುದು ಕುತೂಹಲವನ್ನು ಮೂಡಿಸುತ್ತದೆ. ಶಾಸನೋಕ್ತ ಗಲುಡಿಗೆರೆಯು ಪ್ರಕೃತ ಶಾಸನವಿರುವ ಗ್ರಾಮ ಕೆ. ಗೌಡಗೆರೆಯೇ ಬಹುಶಃ ಆಗಿರಬೇಕು. ಬಿ. ಗೌಡಗೆರೆ ಎಂಬ ಮತ್ತೊಂದು ಗ್ರಾಮವೂ ಮಂಡ್ಯ ತಾಲ್ಲೂಕಿನಲ್ಲಿದೆ. ಗಲುಡಿಗೆರೆ ಸ್ಥಳದ ಉಲ್ಲೇಖ ಮಂಡ್ಯ, ಬೆಂಗಳೂರು ಜಿಲ್ಲೆಯ ಅನೇಕ ಶಾಸನಗಳಲ್ಲಿದೆ. ಈ ಹೆಸರಿನ ಸುಮಾರು 10-13 ಗ್ರಾಮಗಳು ಇರುವುದು ಕಂಡುಬರುತ್ತದೆ. ಕೆರೆಗೋಡು ಎಂಬುದು ಕೂಡ ಮಂಡ್ಯ ಜಿಲ್ಲೆ, ತಾಲ್ಲೂಕಿನಲ್ಲಿರುವ ಗ್ರಾಮವೇ ಆಗಿದೆ. ಕೋಡಂಬಲಿ ಗ್ರಾಮವು ಇಂದಿನ ರಾಮನಗರ ಜಿಲ್ಲೆ ಚನ್ನಪಟ್ಟಣ ತಾಲ್ಲೂಕಿನಲ್ಲಿದೆ. ಇದರ ಉಲ್ಲೇಖ ಅನೇಕ ಶಾಸನಗಳಲ್ಲಿ ಕಂಡುಬರುತ್ತದೆ. ಎಲೆಊರು ಎನ್ನುವುದು ಇಂದಿನ ರಾಮನಗರ ಜಿಲ್ಲೆ, ಚನ್ನಪಟ್ಟಣ ತಾಲ್ಲೂಕಿನಲ್ಲಿರುವ ಯಲಿಯೂರು ಆಗಿರಬಹುದು. ಮಿಕ್ಕ ಸ್ಥಳಗಳ ಹೆಸರುಗಳು ಶಾಸನ ತ್ರುಟಿತವಾಗಿರುವುದರಿಂದ ಅಸ್ಪಷ್ಟ ವಾಗಿವೆ. ಗುರುತಿಸಲು ಸಾಧ್ಯವಾಗುತ್ತಿಲ್ಲ. ಶಾಸನಪಾಠವನ್ನು ಮತ್ತಷ್ಟು ಪರಿಷ್ಕರಿಸಲು ಸಾಧ್ಯವಾದರೆ ಹೆಚ್ಚಿನ ಮಾಹಿತಿಯನ್ನು ಪಡೆಯಬಹುದು.

ಪ್ರಕೃತ ಲೇಖನದಲ್ಲಿ ಶಾಸನಪಾಠದ ಪ್ರಕಟನೆಯನ್ನೇ ಮುಖ್ಯವಾಗಿರಿಸಿಕೊಳ್ಳಲಾಗಿದ್ದು ಯಾವುದೇ ಹೆಚ್ಚಿನ ವಿಶ್ಲೇಷಣೆಯನ್ನೂ ಮಾಡಲು ಹೋಗಿಲ್ಲ. ಈ ಶಾಸನವು ಚನ್ನಪಟ್ಟಣದ ಪಾಳೆಯಗಾರ ಜಗದೇವರಾಯನಿಗೆ ಸೇರಿದುದಾಗಿದ್ದು ಮಹತ್ತ್ವದ್ದಾಗಿದೆ. ಏಕೆಂದರೆ ಚನ್ನಪಟ್ಟಣದ ಪಾಳೆಯಗಾರರಿಗೆ ಸಂಬಂಧಿಸಿದ ಶಾಸನಗಳೇ ಹೆಚ್ಚು ದೊರೆತಿಲ್ಲ. ಇದುವರೆಗೂ ಸುಮಾರು 8 ಶಾಸನಗಳು (ಪ್ರಕೃತ ಶಾಸನವೂ ಸೇರಿ 9) ಮಾತ್ರ ದೊರೆತು ಪ್ರಕಟವಾಗಿವೆ. ಈ ಪಾಳೆಯಗಾರರ ಬಗೆಗೆ ಪ್ರಕಟವಾಗಿರುವ ಬರಹಗಳು ಗೊಂದಲಗಳಿಂದ ಕೂಡಿವೆ. ಶಾಸನಗಳು, ಸಾಹಿತ್ಯಕೃತಿಗಳು, ಕೈಫಿಯತ್ತುಗಳು ಇತ್ಯಾದಿ ಆಕರಗಳನ್ನು ನಿರ್ದಿಷ್ಟವಾಗಿ ಪರಿಶೀಲಿಸಿ ಪೂರ್ವಗ್ರಹರಹಿತವಾಗಿ ಚನ್ನಪಟ್ಟಣ ಪಾಳೆಯಗಾರರ ಇತಿಹಾಸವನ್ನು ಪುನಾರಚಿಸಬೇಕಾದ ಅಗತ್ಯವಿದೆ. ಇದು ಆದಷ್ಟು ಶೀಘ್ರವಾಗಿ ಆಗಬೇಕಾದ ಕೆಲಸವೆಂದು ಒತ್ತಿ ಹೇಳಬೇಕಾಗಿದೆ.

ಶಾಸನಪಾಠ

1 ಶುಭಮಸ್ತೂ। ಸ್ವಸ್ತಿಶ್ರೀ ವಿಜಯಾದ್ಭುದಯವಹ ಶಾಲಿವಾಹನ ಶಕವರುಷ 1523 ವರ್ತಮಾ
2 ನವಾಗಿ ಸಂದು ಬಹ ಪ್ಲವ ಸಂವತ್ಸರದ ಚಯಿತ್ರ ಶು 5 ಸ್ತಿರವಾರದಲೂ ಶ್ರೀಮದ್ರಾಜಾಧಿರಾಜ ....
3 ಶ್ರೀಜಗದೇಯರಾಯ ವೊಡೆಯರು ಮೊಡಣ ಸಾಹೇಬು ವೊಡೆಯರು ತಳಕಾಡ ನಂ. . . .
4 ಯತಿಗೆ ನಾಟ್ಟುಕೊಡಗೆಯ ಗ್ರಾಮಗಳ ಶಿಲಾಶಾಸನದ ಕ್ರಮವೆಂತೆಂದರೆ। ತಿರುವಲರಾಜವೊಡೆ[ಯ*]ರ
5 ಮನ ಮೇಲೆ ರಾಜಕಾರ್ಯ್ಯ[ವ*]ರು ತೊಡಗಲಾಗಿ ಆ ರಾಜಕಾರ್ಯ್ಯನಿಮಿತ್ಯವಾಗಿ ನೀಉ ನಿಂಮ ಕೈಯಿಂದ ಬಹಂ . . ಕ ...
6 ಪ್ಪ ಕೋಡಂಬಲಿಯನು ಕಟ್ಟಿಕೊಂಡು ಯಿರಲಾಗಿ ನಾಉ ನಿಮಗೆ ನಾಡಗೌಡಿಕೆಯನು [ಹ*]ಳಿ ಅ ಕೋಡಂ
7 ಬಲಿಯನು ಬಿಡಿಸಿಕೊಂಬುದಕ್ಕೆ ಸೆಲವಾಗಿ ನಾಉ ನಿಮಗೆ ನಿಂಮ್ಮ ಕ್ರಯವಾಗಿಗೂಡಿದ ಕೊಡಗೆಯಾಗಿ ನಿಮಗೆ
8 ಹಾಕಿಕೊಟ್ಟ ಗ್ರಾಮಗಳ ವಿವರ। ನಂಮ್ಮ ಆಮರನಾಯಕತನಕ್ಕೆ ಸಲ್ಲುವ ಇಗ್ಗಲಿಯ ಕೊಪ್ಪದ ಸ್ಥಳ
9 ದಲ್ಲಿ ಗಉಡಿಗೆಜಿಶಿಯ ಸ್ತಳ 1 ಕೆಜಿಶಿಗೋಡ ಸ್ಥಳ 1 ಉಭಯ ಸ್ಥಳ ಯೆರಡು 2।
10 ಅ ಯೆರಡು ಸ್ತಳಕ್ಕೆ ಸಲ್ಲುವ ಕಾಲುವಳಿ ಕಿ[ಳು*]ವಳಿ ಗದ್ದೆಬೆದ್ದಲು ಸುಂಕ ಸುವರ್ನಾದಾಯ
11 ಮುಂತಾದ ಯೇನು ಕೊಂಡು ಯಿದಕ್ಕೆ ಹೋದ। ಸಕಲ ರೂ[ಪ್ಯಾ]ದಾಯ ಸಕಲ ಭತ್ತಾದಾ
12 ಯ ಅ ವಿಮೋಚನ ಕಲ್ಲ ಸರ್ವಸ್ವಾಮ್ಯ ಸಹವಾಗಿ ಕೊಟ್ಟುದು ಗದ್ದೆ ಕೊಪ್ಪಸೀಮೆಲಿ ಚೆಂನ
13 ಪಟ್ಟಣದ ಸೀಮೆಯಲ್ಲಿ ನೆಟ್ಟ ಶಾಸನ ಕಲೂ ವೃತ್ತಿಯ ಸ್ತಳದಲ್ಲಿ ಚೆಂನಪಟ್ಟಣದ ಗ್ರಾಮ . .
14 ಸಾಉ ಗುಂದಾಪುರ। ಹಳಿಪುರ। . . . ವಾಗಿ . . . . . ಹಳಿ [ಹಲ*]
15 ಸಿಹಳಿ। ಸಿ[ಪೆ*]। . . . ನಾರಸಿಂಗಪಟ್ಟಣದ ನಿ[ರು*] . . . . . [ಎ*]
16 ಲೆಊರ ಸ್ತಳಕ್ಕೆ ಸಲ್ಲುವ . . ಮೊದಲ . . ಯೀ ಗ್ರಾಮ 15 . . . . . ಮಾಡಿಸಿ . .
17 ಕಳು . ಳಿ ಗದ್ದೆ ಬೆದ್ದಲು ತೋಟ ತುಡಿಕೆ ಸುಂಕ ಸುವರ್ನಾದಾಯ
18 ಮುಂತಾದ ಸಕಲ ಸುವರ್ನಾದಾಯ ಸಕಲ ಚರಾದಾಯ . . ಸರ್ವಸ್ವಾಮ್ಯವನು ನಾ
19 ಉ ನಿಮಗೆ ಶಿಲಾಸಾಸನದ ಕೊಡಗೆಯಾಗಿ ಕಲ್ಲಹಾಕಿಕೊಟ್ಟ [ಗ್ರಾಮ*] ಗ 2600 ವರಹದಲು . . .
20 ರ ಸ್ತಳ . . ಂದ ನಿಮಗೆ ಕೊಡಗೆಯಾಗಿ ಕೊಪ್ಪಸೀಮೆ ಉ[ಭ*]ಯ
21 ಗಳಿಗೆ ಯರಡು ಸಾವಿರದ ಅಜುನೂಜು ವರಹದ ಸೀಮೆಯನು ನಾಉ ನಿಮಗೆ ಶಿಲಾಸಾಸನದ
22 ಕೊಡಗೆಯಾಗಿ ಕಲ್ಲ ಹಾಕಿಸಿಕೊಟ್ಟು . . . .
23 ನಿ . . . ನಿಮಗೆ ಚೆಂನಪಟ್ಟಣದ ಸೀಮೆ ಕೊಪ್ಪದ ಸೀಮೆಯಲಿ ಕೊಡಗೆಯಾಗಿ ಕಲ್ಲ ಹಾಕಿ
24 ಕೊಟ್ಟ ಗ್ರಾಮ ಸೀಮೆಗಳಿಗೆ ತಪ್ಪದೆ ನಡಸಿಬಹೆಉ ಅಗ್ರಾಮಸೀಮೆಗಳಿಗೆ ಅ[ಷ್ಟ*]ನಿಧಿ ನಿ
25 ಕ್ಷೇ[ಪ] ಜಲ ಪಾಷಾಣ ಅಕ್ಷೀಣಿ ಆಗಾಮಿ ಸಿದ್ಧಸಾಧ್ಯಗಳೆಂಬ ಅಷ್ಟಭೋಗ ತೇಜಸ್ವಾಮ್ಯ
26 ವನು ಅಗುಮಾಡಿಕೊಂಡು [ಬಹಿ*] ಕೆಂದು ನಿಂಮ [ಪು*] . . . ತ . ಗೂಡಿದ ಕೊ
27 ಡಗೆಯಾಗಿ ನಿಂಮ ಪುತ್ರ ಪಉತ್ರ ಪರಂಪರೆಯಾಗಿ ಆ ಚಂದ್ರಾರ್ಕಸ್ಥಾಯಿಗ
28 ಳಾಗಿ ಸುಖದಲ್ಲೂ ಅನುಭವಿಸಿಬರುವಿರಿಯಾ[ಗಿ*] ಕೊಡಗೆಯಾಗಿ [ಎಲ್ಲೆ*]
29 ಕಲ್ಲ ಹಾಕಿಕೊಟ್ಟ ಗ್ರಾಮ ಸೀಮೆಗಳು ಮುಂದೆ ನೀಉ ಮಾಡುವ ಆಧಿಕ್ರಯದಾ
30 ನ ಪರಿವರ್ತನಕ್ಕೆ ಸಉಉದು ಯಂದು ಕೊಟ್ಟ ಕೊಡಗೆಯ ಗ್ರಾಮಗಳ
31 ಶಿಲಾಶಾಸನ। ಶುಭಮಸ್ತೂ। ರಿಪುಕ್ಷಯಮಸ್ತೂ। ಶ್ರೀ। ಶ್ರೀ।

■

ಸಾದರ ಸ್ವೀಕಾರ

- *ವಿಜಯನಗರದ ತುಲುವ ವೀರನರಸಿಂಹರಾಯ*
  ಅನುವಾದ: ಗುರುಮೂರ್ತಿ ಪೆಂಡಕೂರು,
  ಮೂಲ: ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು
  ವರ್ಷ: 2015, ಪುಟಗಳು: 138, ಬೆಲೆ: 150/-

- *Facts of Urbanisation*
  ಪ್ರಧಾನ ಸಂಪಾದಕರು: ಎಂ.ವಿ. ಶ್ರೀನಿವಾಸ್
  ಪ್ರಕಾಶಕರು: ಮನೋಜ್ ಪಬ್ಲಿಕೇಷನ್ಸ್, ಬೆಂಗಳೂರು,
  ವರ್ಷ: 2014, ಪುಟಗಳು: 172, ಬೆಲೆ: 100/-

- *ಪ್ರಾಚೀನ ಭಾರತದ ಇತಿಹಾಸ*
  ಅರ್ಚನಾ ಎಂ.ಎಸ್.
  ಪ್ರಕಾಶಕರು: ಚೈತ್ರ ಬುಕ್ ಹೌಸ್, ಬೆಂಗಳೂರು
  ವರ್ಷ: 2015, ಪುಟಗಳು: 340, ಬೆಲೆ: 235/-

■

ಸಾದರ ಸ್ವೀಕಾರ ಮತ್ತು ಕೃತಿ ವಿಮರ್ಶೆಗೆ ಪುಸ್ತಕ ಕಳುಹಿಸುವ ಲೇಖಕರು ಮತ್ತು ಪ್ರಕಾಶಕರಲ್ಲಿ ಮನವಿ

- ಸಾದರ ಸ್ವೀಕಾರ ಮತ್ತು ವಿಮರ್ಶೆಗೆ ಕಳುಹಿಸುವ ಕೃತಿಗಳು ಇತಿಹಾಸ, ಪುರಾತತ್ವ, ಸಂಸ್ಕೃತಿ, ಕಲೆ ಮತ್ತು ವಾಸ್ತುಶಿಲ್ಪ, ಶಾಸನ, ನಾಣ್ಯಶಾಸ್ತ್ರಗಳಿಗೆ ಸಂಬಂಧಿಸಿರಬೇಕು.
- ಕೃತಿಯ ಒಂದು ಪ್ರತಿ ಕಳುಹಿಸಿಕೊಟ್ಟಲ್ಲಿ ಸಾದರ ಸ್ವೀಕಾರಕ್ಕೆ ಎಂತಲು, ಎರಡು ಪ್ರತಿಗಳನ್ನು ಕಳುಹಿಸಿಕೊಟ್ಟಲ್ಲಿ ಸಾದರ ಸ್ವೀಕಾರ ಮತ್ತು ಕೃತಿ ವಿಮರ್ಶೆಗೆ ಎಂತಲೂ ಪರಿಗಣಿಸಲಾಗುವುದು.
- ಕೃತಿಗಳನ್ನು ವಿಮರ್ಶೆಗೆ ಆದ್ಯತಾನುಸಾರ ಪರಿಗಣಿಸಲಾಗುವುದು.

ಪ್ರತಿಗಳನ್ನು ಕಳುಹಿಸಿಕೊಡಬೇಕಾದ ವಿಳಾಸ:

ಸಂಪಾದಕರು, 'ಇತಿಹಾಸ ದರ್ಪಣ',
33/ಎ, ಐ.ಟಿ.ಐ ಕಾಲೇಜು ಹತ್ತಿರ, ಕೆಂಪೇಗೌಡನಗರ, ವಿಶ್ವನೀಡಂ-ಅಂಚೆ,
ಬೆಂಗಳೂರು-560091.
ಮೊ: 7829404063.

ಚಂದಾದಾರರಾಗ ಬಯಸುವಿರಾ?

'ಇತಿಹಾಸ ದರ್ಪಣ'ದ ಚಂದಾದಾರರಾಗ ಬಯಸುವವರು ನಿಮ್ಮ ಆಯ್ಕೆಯ ಚಂದಾ ಹಣವನ್ನು ಡಿ.ಡಿ /ಚೆಕ್/ ಎಂ.ಓ ಮೂಲಕ ಕೆಳಕಂಡ ವಿಳಾಸಕ್ಕೆ ಕಳುಹಿಸಿ ಕೊಡಬಹುದು.

– ಡಿ.ಡಿ ಕಳುಹಿಸಿಕೊಡುವವರು "EDITOR, ITIHASA DARPANA" ಹೆಸರಿಗೆ ಬೆಂಗಳೂರಿನಲ್ಲಿ ಸಂದಾಯವಾಗುವಂತೆ ಡಿ.ಡಿ.ಯನ್ನು ತೆಗೆಸಿ, ಅದನ್ನು ನಿಮ್ಮ ವಿಳಾಸವುಳ್ಳ ಪತ್ರದೊಂದಿಗೆ ನಮಗೆ ಕಳುಹಿಸಿ ಕೊಡಿ.

– ಚೆಕ್ ಕಳುಹಿಸಿಕೊಡುವವರು ಚೆಕ್ಕನ್ನು "EDITOR, ITIHASA DARPANA" ಹೆಸರಿಗೆ ಬರೆದು, ಚೆಕ್ಕಿನ ಮೇಲ್ಭಾಗದ ಎಡಮೂಲೆಯಲ್ಲಿ "ಅಕೌಂಟ್ ಪೇ" ಎಂದು ನಮೂದಿಸಿ, ನಿಮ್ಮ ವಿಳಾಸದ ಪತ್ರದೊಂದಿಗೆ ಕಳುಹಿಸಿ. **ಬೆಂಗಳೂರಿನ ಹೊರಗಡೆಯ ಚೆಕ್ಕುಗಳಾಗಿದ್ದಲ್ಲಿ ಬ್ಯಾಂಕಿನ ಸೇವಾಶುಲ್ಕ ೩೦/– ರೂ.ಗಳನ್ನು** ಚಂದಾ ಹಣದ ಮೊತ್ತದಲ್ಲಿ ಸೇರಿಸಿ ಕಳುಹಿಸಿ ಕೊಡಬೇಕು.

– ಎಂ.ಓ ಮಾಡುವವರು ನಿಮ್ಮ ವಿಳಾಸವನ್ನು ಎಂ.ಓ ಅರ್ಜಿಯ ಮೇಲ್ಭಾಗದಲ್ಲಿರುವ ಸಂದೇಶ ಎಂಬ ಸ್ಥಳದಲ್ಲಿ ತಪ್ಪದೇ ನಿಮ್ಮ ವಿಳಾಸ ಬರೆಯಿರಿ. ಇ.ಎಂ.ಓ ಮಾಡಿದ್ದಲ್ಲಿ ಎರಡುದಿನಗಳ ನಂತರ ಕರೆಮಾಡಿ ನಿಮ್ಮ ವಿಳಾಸವನ್ನು ನಮಗೆ ತಿಳಿಸಿ.

– ಇಲ್ಲವಾದಲ್ಲಿ ಬೆಂಗಳೂರಿನ ಚಾಮರಾಜಪೇಟೆಯ ಅಪೆಕ್ಸ್ ಬ್ಯಾಂಕಿನ ಪ್ರಧಾನ ಶಾಖೆಯಲ್ಲಿರುವ "EDITOR, ITIHASA DARPANA" ಹೆಸರಿನ ಚಾಲ್ತಿಖಾತೆ **ಸಂ: 101 882 ಕ್ಕೆ** ಚಂದಾಹಣವನ್ನು ನಿಮ್ಮ ಹೆಸರಿನಲ್ಲಿ ಜಮಾ ಮಾಡಿ, ಸ್ವೀಕೃತಿಯ ನಕಲನ್ನು, ನಿಮ್ಮ ವಿಳಾಸದ ಪತ್ರದೊಂದಿಗೆ ನಮಗೆ ಕಳುಹಿಸಿಕೊಡಿ.

ಚಂದಾ ವಿವರ

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) – ೩೦೦/– ರೂ.ಗಳು. (**ಶಾಲಾಕಾಲೇಜು ಮತ್ತು ಸಂಘ ಸಂಸ್ಥೆಗಳಿಗೆ – ೫೦೦/–ರೂ.ಗಳು**)
ದ್ವೈವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) – ೫೦೦/– ರೂ.ಗಳು. (**ಶಾಲಾಕಾಲೇಜು ಮತ್ತು ಸಂಘ ಸಂಸ್ಥೆಗಳಿಗೆ – ೯೦೦/–ರೂ.ಗಳು**).

ಚಂದಾ ಕಳುಹಿಸಿಕೊಡಬೇಕಾದ ವಿಳಾಸ:

ಸಂಪಾದಕರು, 'ಇತಿಹಾಸ ದರ್ಪಣ',
೩೩ ಎ, ಐ.ಟಿ.ಐ ಕಾಲೇಜು ಹತ್ತಿರ,
ಕೆಂಪೇಗೌಡನಗರ, ವಿಶ್ವನೀಡಂ – ಅಂಚೆ,
ಬೆಂಗಳೂರು–೫೬೦೦೯೧.
ಮೊ– ೭೮೨೯೪೦೪೦೬೩.

The Editor, 'Itihasa Darpana'
33 A, Near I.T.I College,
Kempegowda Nagara,
Vishwaneedam-Post,
Bengaluru- 560091.
Mob- 7829404063

ITIHASA DARPANA (Quarterly): A Peer Reviewed Journal of Historical Research in Kannada. Book-28, January-March: 2016. Pages: 104. Edited by: Rajesh H G. #33/A, Near I.T.I College, Kempegowda Nagara, Vishwaneedam-Post, Bengaluru-560091. Mob:7829404063. Email: itihasadarpana@gmail.com

ISSN 0232-1351

9 770232 135900 >

ಬೆಲೆ : ₹ 100/-